ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ




ಕೇನ್ ನಿವೃತ್ತಿ ನ್ಯೂಜಿಲೆಂಡ್‌ನ ಬ್ಯಾಟಿಂಗ್ ದಿಗ್ಗಜ ಕೇನ್ ವಿಲಿಯಮ್ಸನ್ ಅವರು 15 ವರ್ಷಗಳ ಅಂತರರಾಷ್ಟ್ರೀಯ ಕ್ರಿಕೆಟ್ ಜೀವನಕ್ಕೆ ಶುಕ್ರವಾರ ನಿವೃತ್ತಿ ಘೋಷಿಸಿದರು

ಸೆನ್ಸೆಕ್ಸ್ 75,527 | ನಿಫ್ಟಿ 23,622 | $/₹ 95.18 | ಚಿನ್ನ (Std. 10g) ₹1,53,000 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,56,400 (ಬೆಂಗಳೂರು)

ವೈದ್ಯಕೀಯ: ಈ ವರ್ಷ ಇಲ್ಲ ಶುಲ್ಕ ಹೆಚ್ಚಳ

ಪ್ರಜಾವಾಣಿ ವಾರ್ತೆ



ಶರಣಪ್ರಕಾಶ ಪಾಟೀಲ

ಬೆಂಗಳೂರು: ಈ ಶೈಕ್ಷಣಿಕ ವರ್ಷದಲ್ಲಿ ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಶುಲ್ಕವನ್ನು ಹೆಚ್ಚಳ ಮಾಡದಿರಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿಗಳ ಪ್ರತಿನಿಧಿಗಳ ಜತೆ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಶುಕ್ರವಾರ ಸಭೆ ನಡೆಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, 'ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ಪ್ರಶ್ನೆ ಪತ್ರಿಕೆ ಸೋರಿಕೆಯಾಗಿ, ಪರೀಕ್ಷೆ ಯನ್ನು ರದ್ದು ಮಾಡಿದ ಕಾರಣ ಅಭ್ಯರ್ಥಿಗಳು, ಅವರ ಪೋಷಕರು ಒತ್ತಡಕ್ಕೆ ಒಳಗಾಗಿದ್ದಾರೆ. ಮರುಪರೀಕ್ಷೆ ಬರೆದು ಕಾಲೇಜುಗಳಿಗೆ ಪ್ರವೇಶ ಪಡೆಯುವುದೇ ಅವರಿಗೆ ಸವಾಲಾಗಿದೆ. ಇಂತಹ ಸಮಯದಲ್ಲಿ ಶುಲ್ಕದ ಹೊರೆಯಾಗುವುದು ಬೇಡ ಎನ್ನುವ ಕಾರಣಕ್ಕೆ ಸಮ್ಮತಿಸಲಿಲ್ಲ. ದಂತ ವೈದ್ಯಕೀಯ ಕಾಲೇಜುಗಳ ಶುಲ್ಕ ಹೆಚ್ಚಳ ಬೇಡಿಕೆಯನ್ನೂ ತಿರಸ್ಕರಿಸ ಲಾಯಿತು' ಎಂದರು.

▶10

ಮತ್ತೆ ರಸಗೊಬ್ಬರ ಅಭಾವ

ಬಿತ್ತನೆ ಕಾರ್ಯ ಚುರುಕು ● ಬೇಡಿಕೆಯ ಶೇ 50ರಷ್ಟು ಮಾತ್ರ ಪೂರೈಸಿದ ಕೇಂದ್ರ

● ರಾಜೇಶ್ ರೈ ಚಟ್ಲ



ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗೆ ಅನ್ನದಾತರು ಸಜ್ಜಾಗಿರುವ ಹೊತ್ತಿಗೆ, ರಸಗೊಬ್ಬರ ಕೊರತೆ ಎದುರಾಗಿದೆ.

ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಜೂನ್‌ವರೆಗೆ ಸರಬರಾಜು ಆಗಬೇಕಾದ ರಸಗೊಬ್ಬರದಲ್ಲಿ ಶೇ 50ರಷ್ಟು ಮಾತ್ರ ಪೂರೈಕೆ ಆಗಿದೆ. ರಾಜ್ಯದ ಬೇಡಿಕೆಗೆ ಅನು ಗುಣವಾಗಿ ಯೂರಿಯಾ ಮತ್ತು ಡಿ.ಎ.ಪಿ. ಸರಬರಾಜು ಆಗದೇ ಇರುವುದ ರಿಂದ ಮುಂಗಾರು ಹಂಗಾಮಿ ನಲ್ಲಿ ರಸಗೊಬ್ಬರ ಗಳ ಕೊರತೆಯಾಗುವ ಸಾಧ್ಯತೆ ಇದೆ.

ಹೀಗಾಗಿ, ರಸಗೊಬ್ಬರ ಅಭಾವದ ಆತಂಕ ಉಂಟಾಗಿದೆ. ಮುಂಗಾರು ಹಂಗಾಮಿಗೆ ರಾಜ್ಯಕ್ಕೆ ವಿವಿಧ ಗ್ರೇಡ್‌ಗಳ ಒಟ್ಟು 30.05 ಲಕ್ಷ ಟನ್ ರಸಗೊಬ್ಬರ ಹಂಚಿಕೆ ಮಾಡಿದೆ. ಈ ಪೈಕಿ, ಏಪ್ರಿಲ್‌ನಿಂದ ಜೂನ್‌ವರೆಗೆ 14,80,281 ಟನ್ ಪೂರೈಕೆ ಆಗಬೇಕಿತ್ತು. ಜೂನ್ 8ರವರೆಗೆ ಕೇವಲ 7,90,624 ಟನ್ ಪೂರೈಕೆ ಆಗಿದೆ.

ಈ ಹಿಂದಿನ ಸಾಲಿಗೆ ಹೋಲಿಸಿದರೆ ಯೂರಿಯಾ ರಸಗೊಬ್ಬರದ ಆರಂಭಿಕ ಶಿಲ್ಕು ತುಂಬಾ ಕಡಿಮೆ ಇದೆ. 2023ರಲ್ಲಿ 3.91 ಲಕ್ಷ ಟನ್, 2024ರಲ್ಲಿ 5.41 ಲಕ್ಷ ಟನ್, 2025ರಲ್ಲಿ 3.46 ಲಕ್ಷ ಟನ್ ಆರಂಭಿಕ ಶಿಲ್ಕು ಇತ್ತು. ಆದರೆ, ಪ್ರಸಕ್ತ ಸಾಲಿನಲ್ಲಿ 2.80 ಲಕ್ಷ ಟನ್ ಮಾತ್ರ ಇದೆ. ಪ್ರಸಕ್ತ ಸಾಲಿಗೆ 11.10 ಲಕ್ಷ ಟನ್ ಯೂರಿಯಾ ಬೇಡಿಕೆ ಇದೆ. ಆದರೆ, ಏಪ್ರಿಲ್‌ನಿಂದ ಜೂನ್‌ವರೆಗೆ 4,67,500 ಟನ್ ಪೂರೈಕೆ ಆಗಬೇಕಿತ್ತು. 2,89,385 ಟನ್ ಮಾತ್ರ ಪೂರೈಕೆ ಆಗಿದೆ.

ಡಿ.ಎ.ಪಿ. ಕೂಡಾ 4 ಲಕ್ಷ ಬೇಡಿಕೆ ಇದೆ. ಏಪ್ರಿಲ್‌ನಿಂದ ಜೂನ್‌ವರೆಗೆ ಪೂರೈಕೆ ಆಗಬೇಕಿದ್ದ 2,44,970 ಟನ್‌ನಲ್ಲಿ 87,118 ಮಾತ್ರ ಪೂರೈಕೆ ಆಗಿದೆ.

▶12

ಬಿತ್ತನೆ ಪ್ರಗತಿ

84.10 ಲಕ್ಷ ಹೆಕ್ಟೇರ್ — ಪ್ರಸಕ್ತ ಸಾಲಿನ ಗುರಿ

9.59 ಲಕ್ಷ ಹೆಕ್ಟೇರ್ — ಸಾಧನೆ (ಜೂನ್ 10ರವರೆಗೆ)

2026–27ನೇ ಸಾಲಿನ ಮುಂಗಾರು ಹಂಗಾಮು
(ರಸಗೊಬ್ಬರ ಬೇಡಿಕೆ, ಹಂಚಿಕೆ, ಪೂರೈಕೆ –ಟನ್‌ಗಳಲ್ಲಿ)

ರಸಗೊಬ್ಬರ	ಬೇಡಿಕೆ (ಏಪ್ರಿಲ್–ಸೆಪ್ಟೆಂಬರ್)	ಆರಂಭಿಕ ಶುಲ್ಕ (2026 ಏಪ್ರಿಲ್ 1ಕ್ಕೆ)	ಕೇಂದ್ರದಿಂದ ಹಂಚಿಕೆ (ಏಪ್ರಿಲ್- ಜೂನ್)	ಪೂರೈಕೆ (ಜೂನ್ 10ರವರೆಗೆ)
ಡಿಎಪಿ	4 ಲಕ್ಷ	1,68,185	2,44,970	87,118
ಎಂಒಪಿ	2.12 ಲಕ್ಷ	76,925	1,13,450	52,077
ಕಾಂಪ್ಲೆಕ್ಸ್	11.88 ಲಕ್ಷ	5,88,513	6,00,720	3,44,233
ಯೂರಿಯಾ	11.10 ಲಕ್ಷ	2,80,157	4,67,500	2,89,385
ಎಸ್‌ಎಸ್‌ಪಿ	95 ಸಾವಿರ	40,301	53,641	17,811
ಒಟ್ಟು	30.05 ಲಕ್ಷ	11,54,081	14,80,281	7,90,624

ಯುದ್ಧ: ಇನ್ನಷ್ಟು ಕೊರತೆಯ ಆತಂಕ

ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ರಸಗೊಬ್ಬರ ಉತ್ಪಾದನೆಗೆ ಅಗತ್ಯವಾದ ಕಚ್ಚಾ ವಸ್ತುಗಳು ಮತ್ತು ರಸಗೊಬ್ಬರ ಆಮದಿನಲ್ಲಿ ಅಸ್ಥಿರತೆ ಉಂಟಾಗಿದೆ. 'ಭಾರತಕ್ಕೆ ಯುಎಇ, ಸೌದಿ ಅರೇಬಿಯಾ, ಬಹರೇನ್ ಮತ್ತು ರಷ್ಯಾದಿಂದ ರಸಗೊಬ್ಬರದ ಕಚ್ಚಾ ವಸ್ತು ಆಮದು ಮಾಡಿಕೊಳ್ಳಲಾಗುತ್ತದೆ. ಯುದ್ಧದ ಕಾರಣದಿಂದ ಕಚ್ಚಾವಸ್ತು ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಉತ್ಪಾದನೆ ಕುಸಿದರೆ, ಕೊರತೆಯಾಗುವ ಸಾಧ್ಯತೆ ಇದೆ' ಎಂದು ಕೃಷಿ ಇಲಾಖೆಯ ಮೂಲಗಳು ತಿಳಿಸಿವೆ.

ಮೀನಾಕ್ಷಿ ಅರ್ಜಿ ವಜಾ

ನವದೆಹಲಿ(ಪಿಟಿಐ): ರಾಜ್ಯಸಭೆಗೆ ಆಯ್ಕೆ ಬಯಸಿ ಸಲ್ಲಿಸಿದ್ದ ನಾಮಪತ್ರವನ್ನು ಚುನಾವಣಾ ಅಧಿಕಾರಿ ತಿರಸ್ಕರಿಸಿದ್ದನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕಿ ಮೀನಾಕ್ಷಿ ನಟರಾಜನ್ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ವಿವರ ▶11



ಚಿನಕುರುಳಿ ಪ್ರಕಾಶ್ ಶೆಟ್ಟಿ



ಶಾಂತಿ ಒಪ್ಪಂದ: ಮತ್ತೆ ಅನಿಶ್ಚಿತ



ಡೊನಾಲ್ಡ್ ಟ್ರಂಪ್

ದುಬೈ/ವಾಷಿಂಗ್ಟನ್/ಪ್ಯಾರಿಸ್/ಟೆಹರಾನ್ (ಪಿಟಿಐ/ಎಎಫ್‌ಪಿ): ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಕೊನೆಗಾಣಿಸುವ ಕುರಿತಂತೆ ಇರಾನ್ ಮುಂದಿಟ್ಟಿರುವ ಒಪ್ಪಂದದ ರೂಪವನ್ನು ಒಪ್ಪಲು ಸಾಧ್ಯ ಇಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಹರಿಹಾಯ್ದಿದ್ದಾರೆ.

ಇರಾನ್ ಈಗ ಮುಂದಿಟ್ಟಿರುವ ಒಪ್ಪಂದವು ಅದು ಈ ಮೊದಲು ಮಂಡಿಸಿದ್ದ ಪ್ರಸ್ತಾವಕ್ಕೆ ವ್ಯತಿರಿಕ್ತವಾಗಿದೆ ಎಂದು ಅವರು ಕಿಡಿಕಾರಿದ್ದಾರೆ.

ಇನ್ನೊಂದೆಡೆ, 'ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಯು ಶಾಂತಿ ಒಪ್ಪಂದವನ್ನು ಅಂತಿಮಗೊಳಿಸುವ ಹಂತವನ್ನು ತಲುಪಿರಲೇ ಇಲ್ಲ' ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಹೇಳಿದ್ದಾರೆ.

ಎರಡೂ ದೇಶಗಳು ತಮ್ಮ ಭಿನ್ನ ನಿಲುವುಗಳನ್ನು ಸ್ಪಷ್ಟವಾಗಿ ಹೇಳಿರುವ ಕಾರಣ ಶಾಂತಿ ಒಪ್ಪಂದದ ವಿಚಾರವಾಗಿ ಮತ್ತೆ ಅನಿಶ್ಚಿತತೆ ಮೂಡಿದೆ.

'ತನ್ನ ಅಣ್ವಸ್ತ್ರ ಕಾರ್ಯಕ್ರಮವನ್ನು ಕೈಬಿಡಬೇಕು ಎಂಬುದು ಅಮೆರಿಕದ ಒತ್ತಾಯವಾಗಿತ್ತು. ಇದಕ್ಕೆ ಇರಾನ್ ಸಮ್ಮತಿಸಿತ್ತು. ಆದರೆ, ಈಗ ಅದು ಮುಂದಿಟ್ಟಿರುವ ಪ್ರಸ್ತಾವವು ಇದಕ್ಕೆ ವ್ಯತಿರಿಕ್ತವಾಗಿದೆ' ಎಂದು ಟ್ರಂಪ್ ಅವರು ಸಾಮಾಜಿಕ ಜಾಲತಾಣ 'ಟ್ರೂತ್ ಸೋಷಿಯಲ್'ನಲ್ಲಿ ಬರೆದುಕೊಂಡಿದ್ದಾರೆ.

ಹೊರ್ಮುಜ್ ಜಲಸಂಧಿ ಮೇಲೆ ತನ್ನ ನಿಯಂತ್ರಣ ಅಬಾಧಿತವಾಗಿರಲಿದೆ. ಯುರೇನಿಯಂ ಸಮೃದ್ಧೀಕರಣಗೊಳಿಸುವುದು ತನ್ನ ಹಕ್ಕು ಎಂಬುದಾಗಿ ಇರಾನ್ ಹೇಳಿದೆ.

▶12

ಡೀಸೆಲ್: ದಿನಕ್ಕೆ 200 ಲೀಟರ್ ಮಿತಿ




ನವದೆಹಲಿ (ಪಿಟಿಐ): ಇಂಧನ ಅಕ್ರಮ ದಾಸ್ತಾನು ಮತ್ತು ಕಾಳಸಂತೆಯಲ್ಲಿ ಮಾರಾಟ ತಡೆಯಲು ಕೇಂದ್ರ ಸರ್ಕಾರವು ಪೆಟ್ರೋಲ್ ಬಂಕ್‌ಗಳಲ್ಲಿ ಡೀಸೆಲ್ ಖರೀದಿಗೆ ದಿನಕ್ಕೆ 200 ಲೀಟರ್ ಮಿತಿಯನ್ನು ನಿಗದಿಪಡಿಸಿದೆ. ಈ ಆದೇಶವು ಜೂನ್ 11ರಿಂದ 90 ದಿನಗಳವರೆಗೆ ಜಾರಿಯಲ್ಲಿರಲಿದ್ದು, ರಿಟೇಲ್ ಬಂಕ್‌ಗಳಿಂದ ವಾಣಿಜ್ಯ ಉದ್ದೇಶಕ್ಕಾಗಿ ಭಾರಿ ಪ್ರಮಾಣ ದಲ್ಲಿ ಇಂಧನ ಖರೀದಿಸುವುದನ್ನೂ ನಿರ್ಬಂಧಿಸಲಾಗಿದೆ.

ಕೈಗಾರಿಕೆ, ವಾಣಿಜ್ಯ ಮತ್ತು ಸಾಂಸ್ಥಿಕ ಬಳಕೆದಾರರು ಇನ್ನು ಮುಂದೆ ರಿಟೇಲ್ ಬಂಕ್‌ಗಳಿಂದ ಡೀಸೆಲ್ ಖರೀದಿಸಲು ಅವಕಾಶ ಇರುವುದಿಲ್ಲ. ವಾಣಿಜ್ಯ ಉದ್ದೇಶಕ್ಕೆ ನಿಗದಿಪಡಿಸಿದ ಮಾರಾಟ ಕೇಂದ್ರಗಳಿಂದಲೇ ಇಂಧನ ಖರೀದಿಸುವಂತೆ ಕೇಂದ್ರ ಪೆಟ್ರೋಲಿಯಂ ಮತ್ತು ಅನಿಲ ಸಚಿವಾಲಯವು ಸೂಚಿಸಿದೆ.

▶12





R.V. TOURS AND TRAVELS PVT. LTD.

KARNATAKA | TELANGANA | ANDHRA PRADESH | TAMILNADU

25 YEARS OF TRUST

PILGRIMAGE
SPECIAL TOUR PACKAGES




KASHI AYODHYA PRAYAGRAJ — 3N / 4D

FLIGHT PACKAGE Rs 27,999/-

LAND PACKAGE Rs 11,999/-

Breakfast & Dinner | AC Accommodation | AC Vehicle | Tour Guide



SHIRIDI TOUR PACKAGE — 2N / 3D

FLIGHT PACKAGE Rs 19,999/-

LAND PACKAGE Rs 8,999/-

Breakfast & Dinner | AC Accommodation | AC Vehicle | Tour Guide



HYDERABAD TOUR PACKAGE — 3N / 4D

LAND PACKAGE Rs 12,999/-

Breakfast & Dinner | AC Accommodation | AC Vehicle | Tour Guide

:: Domestic Tour Packages ::

Chardham, Amarnath, Mukthinath, Gujarat Madhyapradesh, Tamilnadu, Maharastra, Shimla & Manali, Srinagar & Kashmir & More...

:: International Tour Packages ::

Europe, Singapore & Malaysia, Srilanka, Vietnam & Cambodia, Bhutan, Bali, Bangkok & Pattaya & More...

JOB OPPORTUNITY — Qualification : Degree Role : Sales & Marketing Executive

Apply Now : operations.blr@rvtoursandtravels.com

Reach us

* For All Domestic Tour Package +5% GST Applicable * All Tour Packages Calculated Per Person

* For All International Tour Package +5% GST +2% TCS Applicable *T&C APPLY

9154225675 9100090938

9154225664 8712018312



R V Ramana
Founder & Chairman

Address : No. 313,Varsha Arcade, Next to sub-registar office, Ganganagar, Bellary road, Bengaluru.

‘ಸಂಚಾರ ಪೊಲೀಸರ ಕಾರ್ಯಕ್ಷಮತೆ ವೃದ್ಧಿ’

ಸಂಚಾರ ಪೊಲೀಸ್ ವಸ್ತು ಸಂಗ್ರಹಾಲಯ, ಅನುಭವ ಕೇಂದ್ರಕ್ಕೆ ಗೃಹ ಸಚಿವರ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಚಾರ ಸುರಕ್ಷತೆ, ಸಂಚಾರ ನಿಯಮಗಳ ಕಟ್ಟುನಿಟ್ಟಿನ ಜಾರಿ ಮತ್ತು ಸಂಚಾರ ಪೊಲೀಸರ ಕಾರ್ಯಕ್ಷಮತೆ ವೃದ್ಧಿಗೆ ಒತ್ತು ನೀಡುವ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಲಾಗುವುದು’ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಸಂಚಾರ ಪೊಲೀಸ್ ನಿರ್ವಹಣಾ ಕೇಂದ್ರಕ್ಕೆ ಶುಕ್ರವಾರ ಭೇಟಿ ನೀಡಿ ನಗರದ ಸಂಚಾರ ವ್ಯವಸ್ಥೆಯ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿದ ಬಳಿಕ ಅವರು ಮಾತನಾಡಿದರು.

‘ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಪರಿಣಾಮಕಾರಿಯಾಗಿ ಸಂಚಾರ ದಟ್ಟಣೆ ನಿರ್ವಹಣೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮತ್ತಷ್ಟು ಯೋಜನೆಗಳನ್ನು ರೂಪಿಸಲಾಗುವುದು’ ಎಂದು ಹೇಳಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಮ್, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಹಾಗೂ ಸಂಚಾರ ವಿಭಾಗಗಳ ಡಿಸಿಪಿಗಳು ಇದ್ದರು.

1.25 ಕೋಟಿ ನೋಂದಾಯಿತ ವಾಹನ

‘ಬೆಂಗಳೂರಿನಲ್ಲಿ ಜನಸಂಖ್ಯೆಯ ವಾರ್ಷಿಕ ಬೆಳವಣಿಗೆ ದರವು ಶೇ 3.7ರಷ್ಟಿದ್ದರೆ, ವಾಹನಸಂಖ್ಯೆಯ ಬೆಳವಣಿಗೆ ದರ ಶೇ 10ರಷ್ಟಿದೆ. ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಚಟುವಟಿಕೆಗಳ ಬೆಳವಣಿಗೆಯಲ್ಲಿ ಮುಂಚೂಣಿ ನಗರವಾಗಿರುವ ಬೆಂಗಳೂರು ಪರಿಣಾಮಕಾರಿ ಟ್ರಾಫಿಕ್ ನಿರ್ವಹಣಾ ವ್ಯವಸ್ಥೆಯನ್ನು ಹೊಂದಿದೆ. ನಾಲ್ಕು ವಿಭಾಗಗಳಲ್ಲಿ ಒಟ್ಟು 53 ಸಂಚಾರ ಪೊಲೀಸ್ ಠಾಣೆಗಳಿದ್ದು, ಅಂದಾಜು 1.25 ಕೋಟಿ ನೋಂದಾಯಿತ ವಾಹನಗಳಿವೆ’ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು.


‘ಸಂಚಾರ ಪೊಲೀಸ್ ವಸ್ತು ಸಂಗ್ರಹಾಲಯ ಹಾಗೂ ಅನುಭವ ಕೇಂದ್ರ’ಕ್ಕೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಶುಕ್ರವಾರ ಭೇಟಿ ನೀಡಿ ಪರಿಶೀಲಿಸಿದರು

ಶ್ರೀನಿವಾಸ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ

ಬೆಂಗಳೂರು: ಪುಲಕೇಶಿ ನಗರದ ಶಾಸಕ ಎ.ಸಿ.ಶ್ರೀನಿವಾಸ್ ಅವರಿಗೆ ಸಂಪುಟ ವಿಸ್ತರಣೆ ವೇಳೆ ಸಚಿವ ಸ್ಥಾನ ನೀಡುವಂತೆ ಭೋವಿ ಸಮುದಾಯದ ಮುಖಂಡರು ಒತ್ತಾಯಿಸಿದ್ದಾರೆ. ರಾಜ್ಯ ಭೋವಿ ಬಳಗದ ಅಧ್ಯಕ್ಷ ಲೋಕೇಶ್, ಕರ್ನಾಟಕ ಭೋವಿ ಸಮಿತಿ ಅಧ್ಯಕ್ಷ ಕೃಷ್ಣಪ್ಪ, ಚಿತ್ರದುರ್ಗ ಜಿಲ್ಲೆಯ ಭೋವಿ ಸಮಾಜದ ಮುಖಂಡ ಚಳ್ಳಕೆರೆ ಶ್ರೀನಿವಾಸ್, ಮಾಗಡಿ ತಾಲ್ಲೂಕು ಭೋವಿ ಸಂಘದ ಅಧ್ಯಕ್ಷ ಬಿ.ಟಿ.ವೆಂಕಟೇಶ್, ಬೆಂಗಳೂರು ದಕ್ಷಿಣ ಜಿಲ್ಲೆ ಭೋವಿ ಸಂಘದ ಅಧ್ಯಕ್ಷ ಕನಕರಾಜು ಅವರು ‘ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡಬೇಕು’ ಎಂದು ಆಗ್ರಹಿಸಿದ್ದಾರೆ.

14 ಎಕರೆ ಜಮೀನು ಸಿದ್ದಗಂಗಾ ಮಠಕ್ಕೆ: ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರಿನ ಸಿದ್ದಗಂಗಾ ಮಠದ ‘ದಾಸೋಹ ಪ್ರಸಾದ ವಿತರಣಾ ಕೇಂದ್ರ’ಕ್ಕೆ ಬೆಂಗಳೂರು ವ್ಯಾಪ್ತಿಯ ಕದರನಹಳ್ಳಿಯಲ್ಲಿ 14 ಎಕರೆ ಜಮೀನು ಮಂಜೂರು ಮಾಡಿದ್ದ ರಾಜ್ಯ ಸರ್ಕಾರದ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಮಂಜೂರಾತಿ ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಮಠದ ಆಡಳಿತಾಧಿಕಾರಿ ಎಸ್.ವಿಶ್ವನಾಥಯ್ಯ ಮತ್ತು ರಾಜ್ಯ ಕಂದಾಯ ಇಲಾಖೆ ಸಲ್ಲಿಸಿದ್ದ ರಿಟ್ ಮೇಲ್ಮನವಿಗಳನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ, ಈ ಕುರಿತಂತೆ, ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿ ನೀಡಿದ್ದ ಆದೇಶವನ್ನು ಸಮರ್ಥಿಸಿದೆ.



‘ಈ ಪ್ರಕರಣದಲ್ಲಿ ಸರ್ಕಾರದ ಅಮೂಲ್ಯ ಆಸ್ತಿಯನ್ನು ನುಂಗಲು ಕೆಲವು ಕಾಣದ ಕೈಗಳು ತೆರೆಮರೆಯಲ್ಲಿ ಕೆಲಸ ಮಾಡಿರುವುದು ಕಂಡು ಬರುತ್ತಿದೆ. ಅರ್ಜಿಯಲ್ಲಿನ ಪ್ರತಿವಾದಿಗಳು ಸಾಗುವಳಿ ಚೀಟಿಯ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುವುದು ಮತ್ತು ನಕಲಿ ಹಂಚಿಕೆ ದಾಖಲೆ ಹೊಂದಿರುವುದು ವೇದ್ಯವಾಗಿದೆ. ನ್ಯಾಯಾಲಯವನ್ನು ವಂಚಿಸುವ ಇಂತಹವರನ್ನು ಸುಲಭಕ್ಕೆ ಕೈಬಿಡಲು ಆಗುವುದಿಲ್ಲ. ಆದಾಗ್ಯೂ, ಪ್ರತಿವಾದಿಗಳು ಬಡವರಾಗಿರುವ ಕಾರಣ ಯಾವುದೇ ದಂಡ ಅಥವಾ ಕಠಿಣ ಕ್ರಮಕ್ಕೆ ಮುಂದಾಗಿಲ್ಲ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಮಠದ ಪರವಾಗಿ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ ವಾದ ಮಂಡಿಸಿದ್ದರು. ಹೈಕೋರ್ಟ್ ವಕೀಲೆ ಸಂಜೀವಿನಿ ಪಿ. ನಾವದಗಿ ವಕಾಲತ್ತು ವಹಿಸಿದ್ದರು.

ಪ್ರಕರಣವೇನು?: ತುಮಕೂರಿನ ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಸಿದ್ದಲಿಂಗ ಸ್ವಾಮೀಜಿ, ‘ದಾಸೋಹ ಪ್ರಸಾದ ವಿತರಣಾ ಕೇಂದ್ರ’ ನಿರ್ಮಿಸುವ ಉದ್ದೇಶಕ್ಕಾಗಿ ಸೂಕ್ತ ಜಮೀನು ಮಂಜೂರು ಮಾಡುವಂತೆ 2007ರ ಏಪ್ರಿಲ್ ಮತ್ತು 2008ರ ಜೂನ್‌ನಲ್ಲಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಈ ಮನವಿ ಪರಿಗಣಿಸಿದ್ದ ರಾಜ್ಯ ಕಂದಾಯ ಇಲಾಖೆಯು 2009ರ ಮೇನಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿ ಕದರನಹಳ್ಳಿಯ ಸರ್ವೆ ನಂಬರ್ 41ರಲ್ಲಿನ 14.25 ಎಕರೆ ಗೋಮಾಳ ಜಮೀನನ್ನು ಮಠಕ್ಕೆ ಮಂಜೂರು ಮಾಡಿ ಆದೇಶಿಸಿತ್ತು.

ಇದನ್ನು ಆಕ್ಷೇಪಿಸಿದ್ದ ಪ್ರತಿವಾದಿಗಳಾದ ಕದರನಹಳ್ಳಿಯ ಕೆ.ಎಸ್.ಮಂಜೇಶ್ ಬಿನ್ ಲೇಟ್ ಸೀತಾರಾಮಯ್ಯ ಸೇರಿದಂತೆ ಒಟ್ಟು ಐವರು, ‘ನಾವು ಆದಿ ಕರ್ನಾಟಕ ಪಂಗಡಕ್ಕೆ ಸೇರಿದವರು. ಮಠಕ್ಕೆ ಹಂಚಿಕೆ ಮಾಡಿರುವ ಜಮೀನಿಗೆ ಸಾಗುವಳಿ ಚೀಟಿ ಹೊಂದಿದ್ದೇವೆ. ಹಾಗಾಗಿ, ಸರ್ಕಾರ ಮಠಕ್ಕೆ ಜಮೀನು ಮಂಜೂರು ಮಾಡಿರುವ ಆದೇಶವನ್ನು ರದ್ದುಪಡಿಸಬೇಕು’ ಎಂದು ತಕರಾರು ಎತ್ತಿದ್ದರು.

ಈ ಪ್ರಕರಣ, ಕರ್ನಾಟಕ ಮೇಲ್ಮನವಿ ನ್ಯಾಯಮಂಡಳಿಯಲ್ಲಿ ಇತ್ಯರ್ಥಗೊಂಡಿತ್ತು ಮತ್ತು ನ್ಯಾಯಮಂಡಳಿ ಮಠದ ಪರವಾಗಿ ಆದೇಶ ಮಾಡಿತ್ತು. ಇದನ್ನು ಪ್ರಶ್ನಿಸಿ ಮಂಜೇಶ್ ಮತ್ತಿತರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ಕುರಿತಾದ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ 2025ರ ಜುಲೈನಲ್ಲಿ ನ್ಯಾಯಮಂಡಳಿ ಆದೇಶವನ್ನು ರದ್ದುಗೊಳಿಸಿ ಆದೇಶಿಸಿತ್ತು. ‘ವಿವಾದಿತ ಜಮೀನಿನಲ್ಲಿ ಮಂಜೇಶ್ ಸೇರಿದಂತೆ ಐವರು ಅರ್ಜಿದಾರರ ಹೆಸರನ್ನು ಕಂದಾಯ ದಾಖಲೆಗಳಲ್ಲಿ ತಕ್ಷಣವೇ ನಮೂದಿಸಬೇಕು’ ಎಂದು ಸ್ಥಳೀಯ ತಹಶೀಲ್ದಾರ್ ಅವರಿಗೆ ನಿರ್ದೇಶಿಸಿತ್ತು. ಇದನ್ನು ಪ್ರಶ್ನಿಸಿದ್ದ ಮಠ ಮತ್ತು ಸರ್ಕಾರ ವಿಭಾಗೀಯ ನ್ಯಾಯಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದವು.

ಜೆಡಿಎಸ್ ಶಾಸಕರ ಜತೆ ಎಚ್‌ಡಿಕೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಚುನಾವಣೆ ಹತ್ತಿರವಾಗುತ್ತಿರುವ ಹೊತ್ತಿನಲ್ಲಿಯೇ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಪಕ್ಷದ ಶಾಸಕರ ಜತೆಗೆ ಶುಕ್ರವಾರ ಸಭೆ ನಡೆಸಿದ್ದಾರೆ.

ಕುಮಾರಸ್ವಾಮಿ ಅವರ ಮನೆಯಲ್ಲಿ ಶುಕ್ರವಾರ ಸಂಜೆ ನಡೆದ ಸಭೆಯಲ್ಲಿ ಮೂವರು ಶಾಸಕರನ್ನು ಹೊರತುಪಡಿಸಿ ಉಳಿದವರೆಲ್ಲರೂ ಭಾಗಿಯಾಗಿದ್ದರು. ಜೆಡಿಎಸ್ ಶಾಸಕರಿಂದ ಅಡ್ಡ ಮತದಾನ ನಡೆಯುವ ಸಾಧ್ಯತೆ ಇಲ್ಲ. ಆದರೆ, ಎಲ್ಲ ಶಾಸಕರೂ ಎಚ್ಚರಿಕೆಯಿಂದ ಇರಬೇಕು ಎಂಬುದರ ಬಗ್ಗೆ ಸಭೆಯಲ್ಲಿ ಚರ್ಚೆಯಾಗಿದೆ ಎಂದು ಮೂಲಗಳು ತಿಳಿಸಿವೆ.

ಪಕ್ಷದ ಎಲ್ಲರೂ ಪಕ್ಷದೊಟ್ಟಿಗೇ ನಿಲ್ಲುತ್ತಾರೆಯೇ ಮತ್ತು ಮಿತ್ರಪಕ್ಷದ ಶಾಸಕರಲ್ಲಿ ಎಷ್ಟುಮಂದಿ ಮೈತ್ರಿಧರ್ಮಕ್ಕೆ ಬದ್ಧರಾಗಿರುತ್ತಾರೆ ಎಂಬುದು ಈ ಚುನಾವಣೆಯಿಂದ ಗೊತ್ತಾಗಲಿದೆ. ಆನಂತರ 2028ರ ವಿಧಾನಸಭಾ ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ.

‘ಆಡಳಿತಾರೂಢ ಕಾಂಗ್ರೆಸ್ ತನ್ನ ಶಾಸಕರನ್ನು ಈಗಾಗಲೇ ರೆಸಾರ್ಟ್‌ನಲ್ಲಿ ಕೂಡಿಹಾಕಲು ಆರಂಭಿಸಿದೆ. ಅಂತಹ ಸ್ಥಿತಿ ಜೆಡಿಎಸ್‌ಗೆ ಬಂದಿಲ್ಲ ಎಂದು ಕೆಲ ಶಾಸಕರು ಹೇಳಿದ್ದಾರೆ’ ಎಂದು ಗೊತ್ತಾಗಿದೆ.

499 ಎಕರೆ ಭೂಸ್ವಾಧೀನಕ್ಕೆ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ವಿರೋಧದ ನಡುವೆಯೂ ಬಿಡದಿ ಟೌನ್‌ಶಿಪ್‌ಗಾಗಿ ಮೊದಲ ಹಂತದಲ್ಲಿ 499 ಎಕರೆ ಭೂಸ್ವಾಧೀನಕ್ಕೆ ನಗರಾಭಿವೃದ್ಧಿ ಇಲಾಖೆಯು ಅಂತಿಮ ಅಧಿಸೂಚನೆ ಹೊರಡಿಸಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಹಾರೋಹಳ್ಳಿ ಮತ್ತು ಬಿಡದಿ ಹೋಬಳಿಗಳ ವ್ಯಾಪ್ತಿಯಲ್ಲಿ ಬಿಡದಿ ಟೌನ್‌ಶಿಪ್ ತಲೆಎತ್ತಲಿದೆ. ಅಂದಾಜು ₹20,000 ಕೋಟಿ ಮೊತ್ತದ ಈ ಯೋಜನೆಗೆ ಒಟ್ಟು 7,400 ಎಕರೆ ಭೂಸ್ವಾಧೀನಕ್ಕೆ ಸರ್ಕಾರವು ಯೋಜಿಸಿದೆ.

ಮೊದಲ ಹಂತದ ಭಾಗವಾಗಿ ಬಿಡದಿ ಹೋಬಳಿಯ ಕೆಂಪಯ್ಯನಪಾಳ್ಯದ 367 ಎಕರೆ, ಮಂಡಲಹಳ್ಳಿಯ 70 ಎಕರೆ ಮತ್ತು ಹಾರೋಹಳ್ಳಿ ವ್ಯಾಪ್ತಿಯ ವಡೇರಹಳ್ಳಿಯ 61 ಎಕರೆ ಜಮೀನುಗಳ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭೂಸ್ವಾಧೀನ ಅಧಿಕಾರಿಗೆ, ಭೂಸ್ವಾಧೀನದ ಅಧಿಕಾರವನ್ನು ನೀಡಲಾಗಿದೆ.

ಟೌನ್‌ಶಿಪ್‌ಗಾಗಿ ಗುರುತಿಸಲಾಗಿರುವ ಹಳ್ಳಿಗಳ ರೈತರಲ್ಲಿ ಕೆಲವರು 470 ದಿನಗಳಿಂದ ಯೋಜನೆ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಯೋಜನೆಯು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಮಧ್ಯೆ ಜಟಾಪಟಿಗೆ ಕಾರಣವಾಗಿದೆ.

ಕುಮಾರಸ್ವಾಮಿ ಮತ್ತು ಜೆಡಿಎಸ್ ರೈತರ ಪ್ರತಿಭಟನೆಯನ್ನು ಬೆಂಬಲಿಸುತ್ತಿದ್ದರೆ, ‘ಪ್ರತಿಭಟನೆ ನಡೆಸುತ್ತಿರುವವರು ರೈತರಲ್ಲ’ ಎಂಬುದು ಶಿವಕುಮಾರ್ ಅವರ ಪ್ರತಿಪಾದನೆ. ರೈತರ ಪರವಾಗಿ ಜೆಡಿಎಸ್ ಪ್ರತಿಭಟನಾ ಮೆರವಣಿಗೆ, ಸಮಾವೇಶಗಳನ್ನು ಆಯೋಜಿಸಿತ್ತು. ಬಿಜೆಪಿಯ ಕೆಲ ನಾಯಕರೂ ರೈತರ ಪ್ರತಿಭಟನೆಗೆ ಬೆಂಬಲ ಸೂಚಿಸಿದ್ದರು.

ರೈತರ ಅಹವಾಲು ಕೇಳದ ಸರ್ಕಾರ: ಎಚ್‌ಡಿಕೆ

‘ಸರ್ಕಾರ ಅಂತಿಮ ಅಧಿಸೂಚನೆ ಹೊರಡಿಸಿರುವುದು ಸರಿಯಲ್ಲ. 470 ದಿನಗಳಿಂದ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಅವರ ಅಹವಾಲನ್ನು ಕೇಳದೆಯೇ ಸರ್ಕಾರ ಭೂಸ್ವಾಧೀನಕ್ಕೆ ಮುಂದಾಗಿರುವುದು ಅಹಂಕಾರದ ಪರಮಾವಧಿ’ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರೈತರ ಫಲವತ್ತಾದ ಜಮೀನುಗಳನ್ನು ಕಸಿದುಕೊಂಡು ಸರ್ಕಾರವು ರಿಯಲ್ ಎಸ್ಟೇಟ್ ದಂಧೆ ಮಾಡಲು ಹೊರಟಿದೆ. ರೈತಮಂದಿಯೇ ಮತಹಾಕಿ ಗೆಲ್ಲಿಸಿದ ಜನಪ್ರತಿನಿಧಿಗಳೂ ಸರ್ಕಾರದ ಈ ದಂಧೆಯಲ್ಲಿ ಭಾಗಿಯಾಗಿರುವುದು ದುರಂತ’ ಎಂದರು.

‘ದಾಖಲೆ ಬಿಡುಗಡೆ ಮಾಡುವೆ’: ‘ಘನತ್ಯಾಜ್ಯ ವಿಲೇವಾರಿಗೆ ₹39,000 ಕೋಟಿ ಮೊತ್ತದ ಬೃಹತ್ ಟೆಂಡರ್ ಕರೆದಿರುವುದೇ ಅಕ್ರಮ. ಇಲ್ಲಿ ಏನೆಲ್ಲಾ ಅಕ್ರಮವಾಗಿದೆ, ಯಾರೆಲ್ಲಾ ಭಾಗಿಯಾಗಿದ್ದಾರೆ ಎಂಬುದರ ದಾಖಲೆಯನ್ನು ಶೀಘ್ರವೇ ರಾಜ್ಯದ ಜನರ ಮುಂದೆ ಇರಿಸುತ್ತೇನೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಅಧ್ಯಕ್ಷರು, ಸದಸ್ಯರ ನೇಮಕಾತಿ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿ ಮಾಡುವಾಗ ನಿಯಮ ಪಾಲಿಸಿಲ್ಲ. ಕೂಡಲೇ ಈ ನೇಮಕಾತಿ ರದ್ದುಪಡಿಸಬೇಕು’ ಎಂದು ದಲಿತ ಸಂಘಗಳ ಒಕ್ಕೂಟ ಆಗ್ರಹಿಸಿದೆ.

‘ಆಯೋಗದ ಅಧ್ಯಕ್ಷ ಸಂತೋಷ್ ಕುಮಾರ್ ಉದ್ಯಮಿಯಾಗಿದ್ದು, ಸದಸ್ಯರಾದ ಸತ್ಯನಾರಾಯಣ ಶೆಟ್ಟಿ ಹಾಗೂ ಜಗನ್ನಾಥ ಹಲಮಡಗಿ ಶಿಕ್ಷಣ ಸಂಸ್ಥೆಗಳ ಮಾಲೀಕರಾಗಿದ್ದಾರೆ. ಮೂವರಿಗೂ ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಅನುಭವ ಇಲ್ಲ. ಆಯೋಗದ ತಿದ್ದುಪಡಿ ನಿಯಮದ ಪ್ರಕಾರ, ಈ ಹುದ್ದೆಗಳಿಗೆ ಹತ್ತು ವರ್ಷಗಳ ಕ್ಷೇತ್ರಾನುಭವ ಕಡ್ಡಾಯ. ಆರು ಸದಸ್ಯರನ್ನು ನೇಮಿಸಬೇಕು. ಆದರೆ, ಸರ್ಕಾರ ಮೂವರು ಸದಸ್ಯರನ್ನು ಮಾತ್ರ ನೇಮಿಸಿದೆ’ ಎಂದು ಕರ್ನಾಟಕ ನಾಗರಿಕ ಹಕ್ಕುಗಳ ಜಾಗೃತಿ ಸಮಿತಿ ಅಧ್ಯಕ್ಷ ಕೇಶವ ಮೂರ್ತಿ ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಆಯ್ಕೆ ಪ್ರಕ್ರಿಯೆಯಲ್ಲಿ ಭ್ರಷ್ಟಾಚಾರ ನಡೆದಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಒತ್ತಡಕ್ಕೆ ಮಣಿದು ಅನರ್ಹರನ್ನು ನೇಮಿಸಲಾಗಿದೆ. ಅಧ್ಯಕ್ಷ, ಸದಸ್ಯರ ನೇಮಕಾತಿ ಆದೇಶ ರದ್ದುಪಡಿಸಿ, ಅರ್ಹರನ್ನು ನೇಮಿಸಬೇಕು. ಆರೋಪ ಎದುರಿಸುತ್ತಿರುವ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಬೇಕು. ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ರಾಜ್ಯವ್ಯಾಪಿ ಹೋರಾಟ ನಡೆಸಲಾಗುವುದು’ ಎಂದು ಎಚ್ಚರಿಸಿದರು.

‘ದಲಿತ, ಆದಿವಾಸಿ ಮಕ್ಕಳು ಅಪೌಷ್ಟಿಕತೆ, ಬಾಲ ಕಾರ್ಮಿಕ ಪದ್ಧತಿಯಿಂದ ನರಳುತ್ತಿದ್ದಾರೆ. ಮಕ್ಕಳ ಹಕ್ಕುಗಳ ರಕ್ಷಣೆಗೆ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ನ್ಯಾಯಾಲಯದ ಮೊರೆ ಹೋಗುತ್ತೇವೆ’ ಎಂದು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎನ್. ವೆಂಕಟಸ್ವಾಮಿ ಎಚ್ಚರಿಸಿದರು.

ಗೋಷ್ಠಿಯಲ್ಲಿ ಮುಖಂಡರಾದ ಕೆ.ವಿ. ಬಾಲಕೃಷ್ಣ, ಮಂಜುನಾಥ, ಸೋಮಶೇಖರ್ ಎಚ್.ಸಿ, ಬಸವರಾಜು ಉಪಸ್ಥಿತರಿದ್ದರು.

15ಕ್ಕೆ ಕಾರ್ಯಸೂಚಿ ಬಿಡುಗಡೆ

ಬೆಂಗಳೂರು: ಆಮ್ ಆದ್ಮಿ ಪಕ್ಷವು ‘ಬೆಂಗಳೂರು ಉಳಿಸಿ’ ಎಂಬ ಹಸಿರು ಕಾರ್ಯಸೂಚಿಯನ್ನು ಜೂನ್ 15ರಂದು ಬಿಡುಗಡೆ ಮಾಡಲಿದೆ.

ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಪೃಥ್ವಿ ರೆಡ್ಡಿ, ಕೇಂದ್ರ ಸಂಘಟನಾ ಉಸ್ತುವಾರಿ ಋತುರಾಜ್ ಗೋವಿಂದ್, ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಹಾಗೂ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ ಅವರು ಹಸಿರು ಕಾರ್ಯಸೂಚಿಯ ಪ್ರಮುಖ ಅಂಶಗಳನ್ನು ತಿಳಿಸಲಿದ್ದಾರೆ ಎಂದು ಪಕ್ಷದ ಮಾಧ್ಯಮ ಸಂಚಾಲಕ ಜಗದೀಶ್ ವಿ. ಸದಂ ತಿಳಿಸಿದ್ದಾರೆ.

‘ಕನಿಷ್ಠ ವೇತನ: ಕೇಂದ್ರವೂ ಪರಿಷ್ಕರಿಸಲಿ’

ಬೆಂಗಳೂರು: ‘ಕಾರ್ಮಿಕರಿಗೆ ರಾಜ್ಯ ಸರ್ಕಾರವು ಕನಿಷ್ಠ ವೇತನ ಪರಿಷ್ಕರಣೆ ಮಾಡಿದೆ. ಆದರೆ, ಕೇಂದ್ರ ಸರ್ಕಾರವು 9 ವರ್ಷಗಳಿಂದ ವೇತನ ಪರಿಷ್ಕರಿಸಿಲ್ಲ. ಕೂಡಲೇ ಕಾರ್ಮಿಕರ ವೇತನ ಹೆಚ್ಚಳ ಮಾಡಬೇಕು’ ಎಂದು ಸರ್ಕಾರಿ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಕಾಯಂಯೇತರ ಕಾರ್ಮಿಕರ ಜಂಟಿ ಫೋರಂ ಆಗ್ರಹಿಸಿದೆ.

ಏರುತ್ತಿರುವ ಬೆಲೆಗಳು, ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ, ಕಾರ್ಮಿಕ ವರ್ಗಗಳ ಕುಟುಂಬಗಳ ದೈನಂದಿನ ಹೋರಾಟಗಳನ್ನು ನೋಡಿದರೆ ಪರಿಷ್ಕರಣೆ ತುರ್ತಾಗಿ ಆಗಬೇಕು. ನಿಯಮ ಪ್ರಕಾರ, ಐದು ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕು. ಕೇಂದ್ರ ಸರ್ಕಾರವು 2017ರಲ್ಲಿ ಪರಿಷ್ಕರಣೆ ನಡೆಸಿತ್ತು. ಆ ನಂತರ 2022ರ ಜನವರಿ 20ಕ್ಕೆ ಪರಿಷ್ಕರಣೆ ಮಾಡಬೇಕಿತ್ತು ಎಂದು ಫೋರಂ ಸಂಚಾಲಕ ವಿಜಯ ಕುಮಾರ್ ತಿಳಿಸಿದ್ದಾರೆ.

ಪರಿಷ್ಕರಣೆ ನಡೆಸಲು ಕಾರ್ಮಿಕ ಒಕ್ಕೂಟಗಳು ಆಗ್ರಹಿಸಿ, ನ್ಯಾಯಾಲಯದ ಮೆಟ್ಟಿಲೇರಿದರೂ ಪ್ರಯೋಜನವಾಗಿಲ್ಲ. ನ್ಯಾಯಾಲಯವು ನಿರ್ದೇಶನ ನೀಡಿದ್ದರೂ ಕೇಂದ್ರ ಸರ್ಕಾರ ನಿರ್ಲಕ್ಷಿಸಿದೆ. 2022ರಿಂದಲೇ ಜಾರಿಗೆ ಬರುವಂತೆ ಕನಿಷ್ಠ ವೇತನವನ್ನು ತಕ್ಷಣ ಪರಿಷ್ಕರಿಸಬೇಕು. ಕಾರ್ಮಿಕರ ಮೇಲೆ ಹೇರಲಾಗುವ ಬಲವಂತದ ದುಡಿಮೆಯನ್ನು ಕೊನೆಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ವ್ಯಂಗ್ಯಚಿತ್ರ ಪ್ರದರ್ಶನ ಇಂದಿನಿಂದ



ಬೆಂಗಳೂರಿನ ಕಲಾವಿದ ಸುಭಾಷ್ ಚಂದ್ರ ಗೌಡ ಅವರ ಬಹುಮಾನಿತ ವ್ಯಂಗ್ಯಚಿತ್ರ

ಬೆಂಗಳೂರು: ವ್ಯಂಗ್ಯಚಿತ್ರ ಕಲಾವಿದೆ ಮಾಯಾ ಕಾಮತ್ ಸ್ಮರಣಾರ್ಥ ಏರ್ಪಡಿಸಿದ್ದ ಅಂತರರಾಷ್ಟ್ರೀಯ ವ್ಯಂಗ್ಯಚಿತ್ರ ಸ್ಪರ್ಧೆ–2026ರಲ್ಲಿ ಆಯ್ಕೆಯಾದ 150 ವಿದೇಶಿ ವ್ಯಂಗ್ಯಚಿತ್ರಗಳ ಪ್ರದರ್ಶನವು ಜೂನ್ 13ರಿಂದ 27ರವರೆಗೂ ನಗರದ ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿಯಲ್ಲಿ ನಡೆಯಲಿದೆ.

‘ಲಿಂಗ ಸಮಾನತೆ–ಮಹಿಳಾ ಹಕ್ಕುಗಳು’ ಆಶಯದ ಅಡಿ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಬೆಳಿಗ್ಗೆ 10ರಿಂದ ಸಂಜೆ 6ಗಂಟೆವರೆಗೂ ವ್ಯಂಗ್ಯಚಿತ್ರಗಳನ್ನು ವೀಕ್ಷಿಸಲು ಅವಕಾಶವಿದೆ. ಭಾನುವಾರ ಪ್ರದರ್ಶನವಿರುವುದಿಲ್ಲ ಎಂದು ಭಾರತೀಯ ವ್ಯಂಗ್ಯ ಚಿತ್ರಕಾರರ ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ವಿ.ಜಿ.ನರೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜುಲೈ 22ರಂದು ಪಿಂಚಣಿ ಅದಾಲತ್

ಬೆಂಗಳೂರು: ನಗರದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಅವರ ಕಚೇರಿಯಲ್ಲಿ ಜುಲೈ 22ರಂದು ಕರ್ನಾಟಕ ವೃತ್ತ ಮಟ್ಟದ ಪಿಂಚಣಿ ಅದಾಲತ್ ನಡೆಯಲಿದೆ. ಕುಂದುಕೊರತೆಗಳು ಇದ್ದಲ್ಲಿ, ಜುಲೈ 3ರ ಒಳಗೆ ಸಹಾಯಕ ಲೆಕ್ಕಾಧಿಕಾರಿಗಳು, ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್, ಕರ್ನಾಟಕ ಅಂಚೆ ವೃತ್ತ, ಬೆಂಗಳೂರು–560001–ಅಂಚೆ ಇಲ್ಲವೇ ಇಮೇಲ್–accts.ka@indiapost.co.in ಸಲ್ಲಿಸಬೇಕು.

‘ಚಕ್ರ–3’ ಬಸ್ ಸಂಚಾರ 15ಕ್ಕೆ ಆರಂಭ

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಬಿಎಂಟಿಸಿ) ಜಿಗಣಿ ಎಪಿಸಿ ಸರ್ಕಲ್‌ನಿಂದ ಹೊರಟು ಮರಳಿ ಅಲ್ಲಿಗೇ ಬರುವ ವೃತ್ತ ಮಾರ್ಗ ‘ಚಕ್ರ–3’ ಅನ್ನು ಪರಿಚಯಿಸುತ್ತಿದ್ದು, ಜೂನ್ 15ರಿಂದ ಬಸ್ ಸಂಚರಿಸಲಿದೆ. ಬಿಎಂಟಿಸಿ ಬಸ್ ಜಿಗಣಿ ಎಪಿಸಿ ಸರ್ಕಲ್‌ನಿಂದ ಆರಂಭವಾಗಿ ಹಾರಗದ್ದೆ, ಇಂಡ್ಲವಾಡಿ ಕ್ರಾಸ್, ಆನೇಕಲ್, ಕರ್ಪೂರ ಗೇಟ್, ಚಂದಾಪುರ, ರೂಪೇಶ್ ಹೋಟೆಲ್ ಮಾರ್ಗವಾಗಿ ಜಿಗಣಿ ಎಪಿಸಿ ಸರ್ಕಲ್‌ಗೆ ಬರಲಿದೆ. ಪ್ರತಿದಿನ 28 ಸುತ್ತುವಳಿಗಳು ಇರಲಿದ್ದು, ಬೆಳಿಗ್ಗೆ 6ಕ್ಕೆ ಮೊದಲ ಟ್ರಿಪ್, ರಾತ್ರಿ 7.10ಕ್ಕೆ ಕೊನೇ ಟ್ರಿಪ್ ಇರಲಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಶಸ್ತ್ರಚಿಕಿತ್ಸಾ ಕೇಂದ್ರ ಸ್ಥಾಪನೆಗೆ ಒಡಂಬಡಿಕೆ

ಬೆಂಗಳೂರು: ನರರೋಗ ಶಸ್ತ್ರಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ತರಬೇತಿ ಹಾಗೂ ಉತ್ಕೃಷ್ಟತಾ ಕೇಂದ್ರ ಸ್ಥಾಪನೆಗೆ ಇಲ್ಲಿನ ಕೃಷ್ಣ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಜತೆಗೆ ಜರ್ಮನಿಯ ಬ್ರೈನ್‌ಲ್ಯಾಬ್ ಒಡಂಬಡಿಕೆ ಮಾಡಿಕೊಂಡಿದೆ.

ನಗರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಎರಡೂ ಸಂಸ್ಥೆಗಳ ಪ್ರತಿನಿಧಿಗಳು ಒಡಂಬಡಿಕೆಗೆ ಸಹಿ ಹಾಕಿದರು. ಈ ವೇಳೆ ಮಾತನಾಡಿದ ಬ್ರೈನ್‌ಲ್ಯಾಬ್‌ನ ಅಧ್ಯಕ್ಷ ವಿನಿಸಿಯಸ್ ಡೆಸ್ಲೊಯ್ ಮ್ಯಾಸಿಯಲ್, ‘ನಿಖರವಾದ ಮಿದುಳಿನ ಶಸ್ತ್ರಚಿಕಿತ್ಸೆ ನಡೆಸುವುದು, ಶಸ್ತ್ರಚಿಕಿತ್ಸೆಯ ತರಬೇತಿ ಹೆಚ್ಚಿಸುವುದು, ಸುಧಾರಿತ ಶಸ್ತ್ರಚಿಕಿತ್ಸಾ ಶಿಕ್ಷಣವನ್ನು ಬೆಂಬಲಿಸುವುದು ಈ ಕೇಂದ್ರದ ಉದ್ದೇಶವಾಗಿದೆ. ಶಸ್ತ್ರಚಿಕಿತ್ಸಾ ಪ್ರಕ್ರಿಯೆಯನ್ನು ವೇಗಗೊಳಿಸಲು ಈ ಒಡಂಬಡಿಕೆ ಸಹಕಾರಿಯಾಗಲಿದೆ’ ಎಂದು ಹೇಳಿದರು.

ಕೃಷ್ಣ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಮುಖ್ಯಸ್ಥ ಡಾ.ಆರ್. ಚಿನ್ನದೊರೈ, ‘ನೂತನ ಕೇಂದ್ರದಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಶಸ್ತ್ರಚಿಕಿತ್ಸೆ ಬಗ್ಗೆ ತರಬೇತಿ ನೀಡಲಾಗುತ್ತದೆ’ ಎಂದರು.

ಸೂರ್ಯೋದಯ: 5:53 ಸೂರ್ಯಾಸ್ತ: 6:46 ಚಂದ್ರೋದಯ: ರಾ. 2:49 ಚಂದ್ರಾಸ್ತ: ಮ. 3:53 | ಶುಕ್ರವಾರದ ಉಷ್ಣಾಂಶ : ಗರಿಷ್ಠ 30° ಕನಿಷ್ಠ 21°
ಶನಿವಾರದ ಉಷ್ಣಾಂಶ 30° ಗರಿಷ್ಠ 21° ಕನಿಷ್ಠ | ಭಾನುವಾರ 30° : 21° | ಸೋಮವಾರ 30° : 21° | ಮಂಗಳವಾರ 30° : 21°
ಶನಿವಾರ ● ಜೂನ್ 13, 2026
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆ ಆಗುವ ಸಾಧ್ಯತೆ ಇದೆ

ಭೀತಿ ಹುಟ್ಟಿಸಿ ಆಭರಣ ದೋಚಿದ ಇಬ್ಬರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಪತ್ತು ಎದುರಾಗಲಿದೆ' ಎಂದು ಹೇಳಿ ಪೂಜೆಯ ನೆಪದಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಆಭರಣ ದೋಚಿ ಪರಾರಿ ಆಗಿರುವ ಮಹಿಳೆ ಸೇರಿ ಇಬ್ಬರ ವಿರುದ್ಧ ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂಬೇಡ್ಕರ್ ನಗರ ನಿವಾಸಿ ಮೋಯಿನ್ ಪಾಷಾ ನೀಡಿದ ದೂರಿನ ಮೇಲೆ ನವೀದಾ ಸುಲ್ತಾನಾ ಹಾಗೂ ಫರ್ವೇಜ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಮೋಯಿನ್ ಪಾಷಾ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಮೋಯಿನ್ ಅವರ ಸಹೋದರ ಮೊಹಮ್ಮದ್ ಮತೀನ್ ಅವರನ್ನು ಆಸ್ಪತ್ರೆಯೊಂದರಲ್ಲಿ ಭೇಟಿ ಮಾಡಿದ್ದ ನವೀದಾ ಸುಲ್ತಾನಾ, 'ಇವನಿಗೆ ಆಪತ್ತಿದೆ. ನಿಮ್ಮ ಮನೆಯಲ್ಲಿ ಪೂಜೆ ಮಾಡಿಸದಿದ್ದರೆ 10 ದಿನದೊಳಗೆ ಸಾಯುತ್ತಾನೆ' ಎಂದು ಭೀತಿ ಹುಟ್ಟಿಸಿದ್ದರು. ಹೆದರಿದ್ದ ಮೋಯಿನ್ ತಾಯಿ, ಮೇ 25ರಂದು ನವೀದಾ ಹಾಗೂ ಫರ್ವೇಜ್ ಅವರನ್ನು ಮನೆಗೆ ಕರೆಸಿಕೊಂಡು ಪೂಜೆ ಮಾಡಿಸಿದ್ದರು' ಎಂದು ಪೊಲೀಸರು ಹೇಳಿದರು.

'ಪೂಜೆ ವೇಳೆ ಆರೋಪಿಗಳ ಸೂಚನೆಯ ಮೇರೆಗೆ ಮನೆಯಲ್ಲಿದ್ದ 35 ಗ್ರಾಂ ಆಭರಣ ತಂದಿಡಲಾಗಿತ್ತು. ಬಟ್ಟೆಯಲ್ಲಿ ಚಿನ್ನವಿಟ್ಟು ಗಂಟು ಹಾಕಿ 90 ದಿನಗಳ ಕಾಲ ಕಬ್ಬಿಣದ ಪೆಟ್ಟಿಗೆ ತೆಗೆಯದಂತೆ ಆರೋಪಿಗಳು ತಾಕೀತು ಮಾಡಿದ್ದರು. ಮುಂಜಾನೆ ಆರೋಪಿಗಳು ದೂರುದಾರರ ಮನೆಯಿಂದ ತೆರಳಿದ್ದರು' ಎಂದು ಪೊಲೀಸರು ಹೇಳಿದರು.

ಆರೋಪಿಗಳ ರಹಸ್ಯ ಬಯಲು: 'ಕೆಲವು ದಿನಗಳ ಬಳಿಕ ಮೋಯಿನ್‌ಗೆ ನವೀದಾ, ಕರೆ ಮಾಡಿ ₹60 ಸಾವಿರ ಸಾಲ ನೀಡುವಂತೆ ಕೇಳಿದ್ದರು. 'ತನ್ನ ಬಳಿ ಹಣ ಇಲ್ಲ' ಎಂದು ಮೋಯಿನ್ ಹೇಳಿದ್ದರು. ಆಗ ಆರೋಪಿ ನಿಂದಿಸಿದ್ದರು. ಆರೋಪಿಯ ವರ್ತನೆಯಿಂದ ಅನುಮಾನಗೊಂಡ ಮೋಯಿನ್ ಪೆಟ್ಟಿಗೆ ತೆರೆದು ಪರಿಶೀಲಿಸಿದರು. ಚಿನ್ನ ಇರಲಿಲ್ಲ. ಆಗ, ಆರೋಪಿಗಳ ಕೃತ್ಯ ಬಯಲಾಗಿತ್ತು' ಎಂದು ಮೂಲಗಳು ಹೇಳಿವೆ.

ಕರ್ನಾಟಕ ಸರ್ಕಾರ

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

3ನೇ ಮಹಡಿ, "ಕಂದಾಯ ಭವನ", ಬಿ.ಎಂ.ರಸ್ತೆ, ರಾಮನಗರ-562159, ಇ-ಮೇಲ್: gbbscpagmail.com

ಸಂಖ್ಯೆ: ಜಿಬಿಡಿಎ/ಎಡಿಎಂ/03/2026-27 **ದಿನಾಂಕ : 12.06.2026**

ಸಾರ್ವಜನಿಕ ಪ್ರಕಟಣೆ

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ-2 ಹೋಬಳಿಯ ಕೆಂಪಯ್ಯನಪಾಳ್ಯ ಮತ್ತು ಮಂಡಲಹಳ್ಳಿ ಹಾಗೂ ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿಯ ವಡೇರಹಳ್ಳಿ (ಭಾಗಶಃ) ಗ್ರಾಮಗಳ ಅಂತಿಮ ಅಧಿಸೂಚನೆಯನ್ನು ರಾಜ್ಯ ಪತ್ರದಲ್ಲಿ ಈ ಕೆಳಕಂಡಂತೆ ಪ್ರಕಟಿಸಲಾಗಿರುತ್ತದೆ.

ಕ್ರ.ಸಂ.	ಗ್ರಾಮದ ಹೆಸರು	ಅಧಿಸೂಚನೆಯ ಸಂಖ್ಯೆ & ದಿನಾಂಕ	ವಿಶೇಷ ರಾಜ್ಯಪತ್ರ ಸಂಖ್ಯೆ & ದಿನಾಂಕ
1	ಕೆಂಪಯ್ಯನಪಾಳ್ಯ	ನಅಇ 137 ಬಿಎಂಆರ್ 2026 (ಇ) ದಿನಾಂಕ:10.06.2026	ಭಾಗ-III ನಂ.442 11.06.2026
2	ಮಂಡಲಹಳ್ಳಿ	ನಅಇ 219 ಬಿಎಂಆರ್ 2026 (ಇ) ದಿನಾಂಕ:10.06.2026	ಭಾಗ-III ನಂ.444 11.06.2026
3	ವಡೇರಹಳ್ಳಿ ಭಾಗಶಃ	ನಅಇ 218 ಬಿಎಂಆರ್ 2026 (ಇ) ದಿನಾಂಕ:10.06.2026	ಭಾಗ-III ನಂ.443 11.06.2026

ಮುಂದುವರೆದು, ಕೆಂಪಯ್ಯನಪಾಳ್ಯ, ವಡೇರಹಳ್ಳಿ (ಭಾಗಶಃ) ಮತ್ತು ಮಂಡಲಹಳ್ಳಿ ಗ್ರಾಮಗಳ ಅಂತಿಮ ಅಧಿಸೂಚನೆಯನ್ನು ಟೈಮ್ಸ್ ಆಫ್ ಇಂಡಿಯಾ ಮತ್ತು ವಿಜಯ ಕರ್ನಾಟಕ ದಿನಪತ್ರಿಕೆಗಳಲ್ಲಿ ದಿನಾಂಕ:13.06.2026 ರಂದು ಪ್ರಕಟಿಸಲಾಗಿದ್ದು, ಸದರಿ ಅಧಿಸೂಚನೆಯಲ್ಲಿ ನಮೂದಾಗಿರುವ ಯಾವುದೇ ಸ್ವತ್ತಿನ ಮೇಲೆ ಇರಬಹುದಾದಂತಹ ಹಕ್ಕು ಬಾಧ್ಯತೆಯ ಬಗ್ಗೆ ತಮಗೆ ವೈಯಕ್ತಿಕ ಹಿತಾಸಕ್ತಿಗಳಿದ್ದಲ್ಲಿ, ದಿನಾಂಕ:12.07.2026 ರೊಳಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು-01 & 02, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಖುದ್ದಾಗಿ/ಬರಹದ ಮೂಲಕ/ವಕೀಲರ ಮೂಲಕವಾಗಲೀ ಸೂಕ್ತ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು. ದಿನಾಂಕ:12.07.2026 ರ ನಂತರ ಯಾವುದೇ ಹಿತಾಸಕ್ತಿಯುಳ್ಳ ಕೋರಿಕೆಗಳು/ಅರ್ಜಿಗಳು/ಆಕ್ಷೇಪಣೆಗಳನ್ನು ಸಲ್ಲಿಸಿದ್ದಲ್ಲಿ, ಅದನ್ನು ಮಾನ್ಯ ಮಾಡಲಾಗುವುದಿಲ್ಲವೆಂದು ತಿಳಿಯಪಡಿಸಿದೆ.

ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ-01

ವಾ.ಸಾ.ಸಂ.ಇ/ವಾಪ್ರ/1150/ಆಕಾರ್/2026-27

ಸಹಿ/- ವಿಶೇಷ ಭೂಸ್ವಾಧೀನಾಧಿಕಾರಿ-02

ಈಶಾನ್ಯ ರೈಲ್ವೆ

ತಿದ್ದುಪಡಿ-1

ವಿಷಯ:- ಈಶಾನ್ಯ ರೈಲ್ವೆಯ ಆನರಿಹಾರ್ ಜಂಕ್ಷನ್ (ಎಆರ್‌ಜೆ) - ವಾರಾಣಸಿ ಸಿಟಿ (ಬಿಸಿವೈ) ಮತ್ತು ಬನಾರಸ್ (ಬಿಎನ್‌ಆರ್‌ಎಸ್) - ಪ್ರಯಾಗರಾಜ್ ರಾಮಬಾಗ್ (ಪಿಆರ್‌ಆರ್‌ಬಿ) ಸೆಕ್ಷನ್‌ಗಳ ಪಕ್ಕದಲ್ಲಿನ ನಿಲ್ದಾಣಗಳಲ್ಲಿ ಕಂಟಿನ್ಯೂಯಸ್ ಟ್ರ್ಯಾಕ್ ಸರ್ಕ್ಯೂಟಿಂಗ್‌ಗಾಗಿ ಮಲ್ಟಿ ಸೆಕ್ಷನ್ ಡಿಜಿಟಲ್ ಆಕ್ಸೆಲ್ ಕೌಂಟರ್ಸ್ (ಎಂಎಸ್‌ಡಿಎಸಿ) ಬಳಸಿಕೊಂಡು ಆಟೋಮ್ಯಾಟಿಕ್ ಬ್ಲಾಕ್ ಸಿಗ್ನಲ್ಲಿಂಗ್ ಸಮೀಕ್ಷೆ, ವಿನ್ಯಾಸ, ಪೂರೈಕೆ, ಅಳವಡಿಕೆ, ಪರೀಕ್ಷೆ ಮತ್ತು ಕಮಿಷನಿಂಗ್ ಕಾಮಗಾರಿ ಜೊತೆಗೆ 4X48 ಒಎಫ್‌ಸಿ ಕಾಮಗಾರಿ ಹಾಗೂ ವಾರಾಣಸಿ ಡಿವಿಜನ್‌ನ ಸಾರನಾಥ (ಎಸ್‌ಆರ್‌ಎನ್‌ಟಿ), ಕಡಿಪುರ (ಕೆಡಿಕ್ಯೂ) ಮತ್ತು ರಾಜವಾರಿ (ಆರ್‌ಜೆಐ) ನಿಲ್ದಾಣಗಳಲ್ಲಿನ ಇಐ (ಇಂಡೋರ್) ಕಾಮಗಾರಿಗಳು. ಉಲ್ಲೇಖ: ಟೆಂಡರ್ ನಂ. ಎನ್‌ಇಆರ್_ಎಸ್‌ಎನ್‌ಟಿ_ಪ್ರಾಜ_ ಬಿಎಸ್‌ಬಿ_02_2026 ದಿ 22.05.2026 ರಂದು 16:44 ಗಂಟೆ.

ಸದರಿ ವಿಷಯದ ಟೆಂಡರ್‌ಗೆ ಸಂಬಂಧಿಸಿದಂತೆ, ಈ ಮೂಲಕ ಕೆಳಕಂಡ 1 ತಿದ್ದುಪಡಿ ಹೊರಡಿಸಲಾಗಿದ್ದು, ಮೇಲ್ಕಂಡ ಟೆಂಡರ್‌ಗೆ ಪ್ರತಿಯಾಗಿ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು 02.07.2026ರ ಬದಲಾಗಿ 21.07.2026 ರಂದು 12:00 ಗಂಟೆವರೆಗೆ ವಿಸ್ತರಿಸಲಾಗಿದೆ. 21.07.2026 ರಂದು 12:30 ಗಂಟೆಗೆ ಟೆಂಡರ್ ತೆರೆಯಲಾಗುತ್ತದೆ. ಇನ್ನಿತರ ಯಾವುದೇ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಡೆ. ಸಿಎಸ್‌ಟಿಇ/ಪ್ರಾಜೆಕ್ಟ್ ವಾರಾಣಸಿ

CPRO/Sig-54

ಚಾವಣಿ ಮತ್ತು ಮೆಟ್ಟಿಲುಗಳ ಮೇಲೆ ಪ್ರಯಾಣಿಸದಿರಿ

ಸಾರ್ವಜನಿಕ ಪ್ರಕಟಣೆ

ನಾವು ನಮ್ಮ ಕಕ್ಷಿದಾರರ ಪರವಾಗಿ ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ ('ಕೆವಿವಿಎಸ್') ಎಂಬ ಹೆಸರಿನ ಶೀರ್ಷಿಕೆಯುನ್ನು ಪರಿಶೀಲಿಸುತ್ತಿದ್ದೇವೆ ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960 ರ ಅಡಿಯಲ್ಲಿ ನೋಂದಾಯಿಸಲಾದ ಈ ಸೊಸೈಟಿಯು ಆಸ್ತಿ/ಪುರಸಭೆ ಸಂಖ್ಯೆ 18/1, ಕಲ್ಯಾಣ ಸಮುಚ್ಚಯ, 2ನೇ ಮಹಡಿ, 6ನೇ ಕ್ರಾಸ್, ಗಾಂಧಿನಗರ, ಬೆಂಗಳೂರು 560 009 ನಲ್ಲಿ ನೋಂದಾಯಿತ ವಿಳಾಸವನ್ನು ಹೊಂದಿದೆ. ಖಾಲಿ ಮತ್ತು ಫ್ರೀಹೋಲ್ಡ್ ಭೂಮಿಯ ಎಲ್ಲಾ ಭಾಗಗಳು ಇಲ್ಲಿ ಕೆಳಗೆ ಬರೆಯಲಾದ ಷೆಡ್ಯೂಲ್‌ನಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾಗಿದೆ ('ಹೇಳಿದ ಭೂಮಿ' ಎಂದು ಉಲ್ಲೇಖಿಸಲಾಗಿದೆ), ಅವರು ಸ್ಪಷ್ಟ ಮತ್ತು ಮಾರುಕಟ್ಟೆ ಮಾಡಬಹುದಾದ ಶೀರ್ಷಿಕೆಯನ್ನು ಹೊಂದಿರುವ, ಯಾವುದೇ ಹೊರೆಗಳಿಂದ ಮುಕ್ತವಾಗಿರುವ (ಶಾಮರಾವ್ ವಿಠಲ ಕೋ-ಅಪರೇಟಿವ್ ಬ್ಯಾಂಕ್, ನಾಗರಭಾವಿ ಪರವಾಗಿ ರಚಿಸಲಾದ ಸಮಾನ ಅಡಮಾನವನ್ನು ಹೊರತುಪಡಿಸಿ), ನಿಬರ್ಂಧಗಳು, ಹಕ್ಕುಗಳು, ಮೊಕದ್ದಮೆಗಳು, ಮೂರನೇ ವ್ಯಕ್ತಿಯ ಹಕ್ಕುಗಳು ಇತ್ಯಾದಿಗಳಿಂದ ಮುಕ್ತವಾಗಿವೆ ಮತ್ತು ಅವರು ಸದರಿ ಭೂಮಿಗೆ ಸಂಬಂಧಿಸಿದಂತೆ ದೀರ್ಘಾವಧಿಯ ಗುತ್ತಿಗೆ ಹಕ್ಕುಗಳನ್ನು ಗ್ಲೋಬಲ್ ಬಿಜ್‌ಪ್ರೋಪ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ನೀಡಲು ಬಯಸುತ್ತಾರೆ.

ಯಾವುದೇ ಮಾರಾಟ, ವರ್ಗಾವಣೆ, ವಿನಿಮಯ, ಕ್ರಯದ ಕರಾರು, ತಿಳುವಳಿಕೆ ಪತ್ರ, ಜಂಟಿ ಅಭಿವೃದ್ಧಿ, ಜಂಟಿ ಉದ್ಯಮ, ಗುತ್ತಿಗೆ, ಉಪ-ಗುತ್ತಿಗೆ, ನಿಯೋಜನೆ, ಅಡಮಾನ, ಶುಲ್ಕ, ಹಕ್ಕುದಾರಿಕೆ, ಉಯಿಲು, ಉತ್ತರಾಧಿಕಾರ, ದಾನ, ವಿನ್ಯಾಸ, ನಿರ್ವಹಣೆ, ದಾರಿಯ ಹಕ್ಕು, ಸರಾಗಗೊಳಿಸುವಿಕೆ(ಗಳು), ಟ್ರಸ್ಟ್, ಉತ್ತರಾಧಿಕಾರ, ಬಾಡಿಗೆ, ಉಪ-ಬಾಡಿಗೆ, ರಜೆ ಮತ್ತು ಪರವಾನಗಿ, ಆರೈಕೆದಾರರ ಆಧಾರ, ಉದ್ಯೋಗ, FSI, ಸ್ವಾಧೀನ, ಕುಟುಂಬ ವ್ಯವಸ್ಥೆ/ಇತ್ಯರ್ಥ, ಲಿಸ್-ಪೆಂಡೆನ್ಸ್‌ಗಳು ಲಗತ್ತು, ಒಪ್ಪಂದಗಳು/ಒಪ್ಪಂದಗಳು, ಅಭಿವೃದ್ಧಿ ಹಕ್ಕುಗಳು ಮತ್ತು/ಅಥವಾ ಸಾಗಣೆ, ಪರವಾನಗಿ, ಯಾವುದೇ ಮೊಕದ್ದಮೆಯಲ್ಲಿ ಅಥವಾ ಯಾವುದೇ ಇತರ ಹಕ್ಕು ಅಥವಾ ಆಸಕ್ತಿ, ಮೊಕದ್ದಮೆ, ಪ್ರಶಸ್ತಿ, ತೀರ್ಪು ಅಥವಾ ಯಾವುದೇ ನ್ಯಾಯಾಲಯ ಅಥವಾ ನ್ಯಾಯಮಂಡಳಿಯ ಆದೇಶ ಅಥವಾ ಯಾವುದೇ ರೀತಿಯ ಆದೇಶವನ್ನು ನೀಡಿದರೆ ಅಥವಾ ಸದರಿ ಭೂಮಿ ಅಥವಾ ಅದರ ಯಾವುದೇ ಭಾಗಕ್ಕೆ ಅಥವಾ ಅದರ ಮೇಲೆ, ಮತ್ತು/ಅಥವಾ ಸದರಿ ಭೂಮಿ ಅಥವಾ ಅದರ ಯಾವುದೇ ಭಾಗಕ್ಕೆ ಅಥವಾ ಅದರ ಮೇಲೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಅಥವಾ KVVR ತಮ್ಮೊಂದಿಗೆ ಠೇವಣಿ ಇಟ್ಟಿರುವ ಸದರಿ ಭೂಮಿಗೆ ಸಂಬಂಧಿಸಿದ ಯಾವುದೇ ಶೀರ್ಷಿಕೆ ದಾಖಲೆಗಳನ್ನು ಹೊಂದಿರುವ ಮತ್ತು/ಅಥವಾ ಹೊಂದಿರುವ ಆಧಾರದ ಮೇಲೆ ಅಥವಾ ಈ ಮೂಲಕ ಕರೆಯಲಾದ ಯಾವುದೇ ರೀತಿಯಲ್ಲಿ, ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 14 (ಹದಿನಾಲ್ಕು) ದಿನಗಳ ಅವಧಿಯೊಳಗೆ ಕೆಳಗೆ ಸಹಿ ಮಾಡಿದವರಿಗೆ ಲಿಖಿತವಾಗಿ ತಿಳಿಸಲು ಕರೆ ನೀಡಲಾಗಿದೆ. ಅಂತಹ ಹಕ್ಕುಗಳನ್ನು ಸಲ್ಲಿಸಿದ ಆಧಾರದ ಮೇಲೆ ಎಲ್ಲಾ ದಾಖಲೆಗಳ ಪ್ರತಿಗಳೊಂದಿಗೆ, ಅಂತಹ ಯಾವುದೇ ಅಪಾದಿತ ಹಕ್ಕು, ಶೀರ್ಷಿಕೆ, ಪ್ರಯೋಜನ, ಆಸಕ್ತಿ, ಪಾಲು, ಹಕ್ಕು, ಅಕ್ಷೇಪಣೆ ಮತ್ತು/ಅಥವಾ ಬೇಡಿಕೆ, ಯಾವುದಾದರೂ ಇದ್ದರೆ, ಅವುಗಳನ್ನು ಮನ್ನಾ ಮಾಡಲಾಗಿದೆ/ಕೈಬಿಡಲಾಗಿದೆ ಮತ್ತು ಬದ್ಧವಾಗಿಲ್ಲ ಎಂದು ಪರಿಗಣಿಸಲಾಗುತ್ತದೆ.

ಮೇಲಿನ ಷೆಡ್ಯೂಲ್ ಅನ್ನು ಉಲ್ಲೇಖಿಸಲಾಗಿದೆ
(ಹೇಳಿದ ಭೂಮಿಯ ವಿವರಣೆ)

ಬೆಂಗಳೂರು 560 009, ಗಾಂಧಿನಗರ, ಶೇಷಾದ್ರಿ ರಸ್ತೆಯ ಅಸ್ತಿ/ಪುರಸಭೆ ಸಂಖ್ಯೆ 18 ಮತ್ತು 18/2 ಇ-ಪಿಐಡಿ ಸಂಖ್ಯೆ 1606194719 ಹೊಂದಿರುವ 6,895.7 ಚದರ ಮೀಟರ್ (74,225 ಚದರ ಅಡಿಗಳಿಗೆ ಸಮ) ಇದಕ್ಕೆ ಚೆಕ್ಕುಬಂದಿ,

ಪೂರ್ವಕ್ಕೆ ಅಥವಾ ಕಡೆಗೆ :- ಪುರಸಭೆ/ಆಸ್ತಿ ಸಂಖ್ಯೆ 17 (ಖಾಸಗಿ ಆಸ್ತಿ)
ಪಶ್ಚಿಮಕ್ಕೆ ಅಥವಾ ಕಡೆಗೆ :- 5ನೇ ಮುಖ್ಯ ರಸ್ತೆ, ಗಾಂಧಿನಗರ
ಉತ್ತರಕ್ಕೆ ಅಥವಾ ಕಡೆಗೆ :- ಶೇಷಾದ್ರಿ ರಸ್ತೆ
ದಕ್ಷಿಣಕ್ಕೆ ಅಥವಾ ಕಡೆಗೆ :- ಪುರಸಭೆ/ಅಸ್ತಿ ಸಂಖ್ಯೆ 18/1 ರ ಸ್ವತ್ತು

ದಿನಾಂಕ : 13/6/2026

M/s. Economic Laws Practice
(ವಕೀಲರು ಮತ್ತು ಸಾಲಿಸಿಟರ್‌ಗಳು)
Sd/-ಹೀನಾ ಛೇಡ್ಡಾ ಪಾಲುದಾರರು
ಇ-ಮೇಲ್ : heenachheda@elp-in.com


ಮೂವರು ಪೊಲೀಸರ ಅಮಾನತು


ಆರು ವರ್ಷದ ಮಗು ಕೊಲೆ ಪ್ರಕರಣ: ಇಲಾಖಾ ತನಿಖೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಗೋಡಿಯ ಸೀಗೇಹಳ್ಳಿ ವಿಲ್ಲಾದಲ್ಲಿ ಮಾರ್ಚ್ 24ರಂದು ನಡೆದಿದ್ದ ಪಿ.ವೆನ್ನೆಲ್ಲಾ (6) ಎಂಬ ಮಗುವಿನ ಕೊಲೆ ಪ್ರಕರಣದ ತನಿಖೆಯಲ್ಲಿ ಕರ್ತವ್ಯ ಲೋಪ ಎಸಗಿರುವ ಮೂವರು ಪೊಲೀಸರನ್ನು ಅಮಾನತು ಮಾಡಿ ಇಲಾಖಾ ತನಿಖೆಗೆ ಆದೇಶಿಸಲಾಗಿದೆ.

ಕಾಡುಗೋಡಿ ಪೊಲೀಸ್ ಠಾಣೆಯ ಹಿಂದಿನ ಇನ್‌ಸ್ಪೆಕ್ಟರ್ ರಂಗಸ್ವಾಮಿ, ಈಗಿನ ಪಿಎಸ್‌ಐ ನಿಂಗರಾಜು ಹಾಗೂ ಕಾನ್‌ಸ್ಟೆಬಲ್ (ಠಾಣಾ ಬರಹಗಾರ) ಹಾಲೇಶ್ ನಾಯ್ಕ್ ಅವರನ್ನು ಅಮಾನತು ಮಾಡಿ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಶುಕ್ರವಾರ ಆದೇಶಿಸಿದ್ದಾರೆ. ರಂಗಸ್ವಾಮಿ ಪ್ರಸ್ತುತ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ.


ರಂಗಸ್ವಾಮಿ


ನಿಂಗರಾಜ್

'ಮಗುವನ್ನು ಉಸಿರುಗಟ್ಟಿಸಿ ಸಾಯಿಸಲಾಗಿದೆ' ಎಂಬ ಉಲ್ಲೇಖ ಮರಣೋತ್ತರ ಪರೀಕ್ಷೆಯ ವರದಿಯಲ್ಲಿದ್ದರೂ ಕೊಲೆ ಪ್ರಕರಣ ದಾಖಲಿಸದೇ, ಆರೋಪಿಗಳನ್ನು ಬಂಧಿಸದೇ ನಿರ್ಲಕ್ಷ್ಯ ತೋರಿದ್ದರು ಎಂಬ ಆರೋಪ ಪೊಲೀಸರ ಮೇಲಿದೆ.

'ಕರ್ತವ್ಯ ಲೋಪದ ಹಿಂದೆ ಅಧಿಕಾರಿಗಳ ಉದ್ದೇಶ ಏನು ಎನ್ನುವುದನ್ನು ಪತ್ತೆ ಹಚ್ಚಲಾಗುತ್ತಿದೆ. ತನಿಖಾ ಲೋಪಗಳ ಬಗ್ಗೆ ಇಲಾಖೆಯಿಂದ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ' ಎಂದು ಸೀಮಾಂತ್‌ಕುಮಾರ್ ಸಿಂಗ್ ತಿಳಿಸಿದರು.

ಮಗುವಿನ ತಾಯಿ ಪ್ರಿಯಾಂಕಾ ಹಾಗೂ ಅವರ ಪ್ರಿಯಕರ ಜಿ.ಮೋಹನ್ ಅವರನ್ನು ಬಂಧಿಸಲಾಗಿದೆ.

ದಾವಣಗೆರೆಯ ಪ್ರವೀಣ್ ಹಾಗೂ ಬೆಂಗಳೂರಿನ ಪ್ರಿಯಾಂಕಾ ಅವರು 2007ರಲ್ಲಿ ಮದುವೆ ಆಗಿದ್ದರು. ಈ ದಂಪತಿಗೆ 17 ವರ್ಷ ಹಾಗೂ 6 ವರ್ಷದ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಕೆಲವು ತಿಂಗಳ ಹಿಂದೆ ಪ್ರಿಯಾಂಕಾ ಕಾಲೇಜು ಗೆಳೆಯ ಮೋಹನ್ ಅವರನ್ನು ಭೇಟಿ ಆಗಿದ್ದರು. ಇಬ್ಬರೂ ಮತ್ತೆ ಹತ್ತಿರವಾಗಿ ಸುತ್ತಾಟ ನಡೆಸುತ್ತಿದ್ದರು. ಈ ವಿಷಯ ಪತಿ ಪ್ರವೀಣ್‌ಗೆ ಗೊತ್ತಾಗಿ ಪ್ರಶ್ನಿಸಿದ್ದರು. ಮನೆಯಲ್ಲೂ ಇದೇ ವಿಚಾರಕ್ಕೆ ಪ್ರತಿನಿತ್ಯ ಗಲಾಟೆ ನಡೆಯುತ್ತಿತ್ತು. ಬಳಿಕ ಪತಿಗೆ ವಿಚ್ಛೇದನ ನೀಡಿದ್ದ ಪ್ರಿಯಾಂಕಾ, ಕಾಡುಗೋಡಿಯ ಪ್ರಿಯಕರನ ವಿಲ್ಲಾಕ್ಕೆ ತೆರಳಿದ್ದರು. ಕಿರಿಯ ಮಗಳನ್ನೂ ಕರೆದೊಯ್ದಿದ್ದರು.

ಮಾರ್ಚ್ 24ರಂದು ಪ್ರಿಯಾಂಕಾ ಜನ್ಮದಿನವಿತ್ತು. ಕೋಲಾರ ಬಳಿಯ ಕಾಫಿ ಡೇಗೆ ಪ್ರಿಯಾಂಕಾ ಹಾಗೂ ಜಿ.ಮೋಹನ್ ತೆರಳಿದ್ದರು. ಮಗುವನ್ನೂ ಜೊತೆಯಲ್ಲಿ ಕರೆದೊಯ್ದಿದ್ದರು. ಅಂದೇ ರಾತ್ರಿ ಮಗು ಮೃತಪಟ್ಟಿತ್ತು.

'ಕಾರಿನಲ್ಲಿ ಎ.ಸಿ ಹಾಕಿ ಮಲಗಿಸಿದ್ದೆ. ರಾತ್ರಿ ಮನೆಗೆ ಹೋದಾಗ ಮಗು ಚೆನ್ನಾಗಿಯೇ ಇತ್ತು. ಆದರೆ, ಬೆಳಿಗ್ಗೆ ನೋಡುವಷ್ಟರಲ್ಲಿ ಮೃತಪಟ್ಟಿತ್ತು' ಎಂದು ಪ್ರಿಯಾಂಕಾ ಕಥೆ ಕಟ್ಟಿದ್ದರು. ಅನುಮಾನಗೊಂಡು ಮಗುವಿನ ತಂದೆ ಪ್ರವೀಣ್ ಮಗಳ ಮೃತದೇಹದ ಮರಣೋತ್ತರ ಪರೀಕ್ಷೆ ಮಾಡಿಸಿದ್ದರು. ಆ ವರದಿಯಲ್ಲಿ ಮಗುವನ್ನು ಉಸಿರುಗಟ್ಟಿಸಿ ಕೊಲೆಮಾಡಿರುವುದು ಪತ್ತೆ ಆಗಿತ್ತು.

ತನಿಖಾಧಿಕಾರಿ ಬದಲು

ಪ್ರಕರಣದ ತನಿಖೆಗೆ ಎಸಿಪಿ ದರ್ಜೆಯ ಅಧಿಕಾರಿಗೆ ಜೂನ್ 2ರಂದು ಸೂಚಿಸಲಾಗಿತ್ತು. ಅಧಿಕಾರಿಗಳು ಕರ್ತವ್ಯಲೋಪ ಎಸಗಿದ್ದಾರೆ ಎಂಬ ವರದಿ ಆಧರಿಸಿ ಮೂವರನ್ನು ಅಮಾನತು ಮಾಡಲಾಗಿದೆ. ಮಗುವಿನ ಕೊಲೆ ಪ್ರಕರಣದ ತನಿಖೆಗೆ ಬೇರೆ ಅಧಿಕಾರಿಯನ್ನು ನೇಮಿಸಲಾಗಿದೆ

ಸೀಮಾಂತ್ ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ಗಂಭೀರ ಲೋಪ

ಏಪ್ರಿಲ್ 4ರಂದೇ ಮರಣೋತ್ತರ ಪರೀಕ್ಷೆಯ ವರದಿ ಬಂದಿತ್ತು. 'ಉಸಿರುಗಟ್ಟಿಸಿ ಸಾವು' ಎಂಬುದು ದೃಢಪಟ್ಟ ತಕ್ಷಣವೇ ಅಧಿಕಾರಿಗಳು ಅದನ್ನು 'ಅನುಮಾನಾಸ್ಪದ ಸಾವು' ಎಂದು ಪರಿಗಣಿಸಿ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಬೇಕಾಗಿತ್ತು. ಆದರೆ, ಕಾನೂನುಬಾಹಿರವಾಗಿ ಈ ಪ್ರಕರಣವನ್ನು 'ಯುಡಿಆರ್' ವ್ಯಾಪ್ತಿಯಲ್ಲೇ ಇಟ್ಟುಕೊಂಡು, ತಮ್ಮ ಹಂತದಲ್ಲೇ ವಿಳಂಬ ಧೋರಣೆ ಅನುಸರಿಸಿದ್ದಾರೆ. ಇದು ಗಂಭೀರ ಕರ್ತವ್ಯ ಲೋಪ.

ಪ್ರಿಯಾಂಕ್ ಖರ್ಗೆ, ಗೃಹ ಸಚಿವ

ಪ್ರಕರಣ ಮುಚ್ಚಿಹಾಕಲು ಯತ್ನ

ಆರೋಪಿಗಳಿಂದ ಹಣ ಪಡೆದು ಪ್ರಕರಣವನ್ನು ಮುಚ್ಚಿಹಾಕಲು ಮೂವರು ಪೊಲೀಸರು ಯತ್ನಿಸಿರುವ ಆರೋಪ ಇದೆ. ಆ ಕುರಿತೂ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ತನಿಖಾ ತಂಡಕ್ಕೆ ಸೂಚನೆ ನೀಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪ್ರಿಯಕರನ ಕೃತ್ಯ' ಎಂದ ಪ್ರಿಯಾಂಕಾ


ಪ್ರಿಯಾಂಕಾ ಹಾಗೂ ಜಿ.ಮೋಹನ್

ಆರೋಪಿ ಪ್ರಿಯಾಂಕಾ ಅವರನ್ನು ಪೊಲೀಸರು, ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಬಂಧಿಸಿ ಹೆಚ್ಚಿನ ವಿಚಾರಣೆಗಾಗಿ ಐದು ದಿನ ಕಸ್ಟಡಿಗೆ ಪಡೆದಿದ್ದಾರೆ. ವಿಚಾರಣೆ ವೇಳೆ ಆರೋಪಿಯು ಕೆಲವು ಅಚ್ಚರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂಬುದು ಗೊತ್ತಾಗಿದೆ.

'ಮಗುವಿನ ಸಾವಿನಲ್ಲಿ ನನ್ನ ಪಾತ್ರವಿಲ್ಲ' ಎಂದು ಪ್ರಿಯಾಂಕಾ ಹೇಳಿಕೆ ನೀಡಿದ್ದಾರೆ. ಆದರೆ, ಸಾಕ್ಷ್ಯ ನಾಶಪಡಿಸಲು ಮಗುವಿನ ಮೃತದೇಹಕ್ಕೆ ಸ್ನಾನ ಮಾಡಿಸಿರುವುದು ಸೇರಿದಂತೆ ಹಲವು ರೀತಿಯ ಸಂಚು ರೂಪಿಸಿರುವುದು ತನಿಖೆ ವೇಳೆ ಕಂಡುಬಂದಿದೆ. ಅದಕ್ಕೆ ಪುರಾವೆಗಳೂ ಸಿಕ್ಕಿವೆ ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

'ನನ್ನ ಮಗು ಅಂದು ರಾತ್ರಿ ಮಲಗಿತ್ತು. ಬೆಳಿಗ್ಗೆ ಎದ್ದು ನೋಡಿದಾಗ ಸತ್ತು ಹೋಗಿತ್ತು. ಸಹಜ ಸಾವೇ ಆಗಿರಬಹುದು ಎಂದು ಭಾವಿಸಿದ್ದೆ. ಮಗುವನ್ನು ಪ್ರಿಯಕರ ಜಿ.ಮೋಹನ್ ತಂದುಕೊಟ್ಟ. ನಾನು ಕೇವಲ ಮಲಗಿಸಿದ್ದೆ. ನನ್ನ ತಪ್ಪು ಇಲ್ಲ. ಏನಾದರೂ ಆಗಿದ್ದರೆ ಅವನೇ ಮಾಡಿರಬೇಕು' ಎಂದು ವಿಚಾರಣೆ ವೇಳೆ ಪ್ರಿಯಾಂಕಾ ಹೇಳಿಕೆ ನೀಡಿದ್ದಾರೆ ಎಂಬುದು ಗೊತ್ತಾಗಿದೆ.

ಮೊಬೈಲ್ ಬಳಸಿಲ್ಲ; ಹಣ ಡ್ರಾ ಮಾಡಿಲ್ಲ: 'ಮರಣೋತ್ತರ ಪರೀಕ್ಷೆಯ ವರದಿ ಬರುತ್ತಿದ್ದಂತೆಯೇ ನಿರೀಕ್ಷಣಾ ಜಾಮೀನು ಕೋರಿ ಆರೋಪಿಗಳು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ತಿರಸ್ಕೃತಗೊಂಡ ಬಳಿಕ ಇಬ್ಬರೂ ತಲೆಮರೆಸಿಕೊಂಡಿದ್ದರು. ಪ್ರಿಯಾಂಕಾ ಮೈಸೂರಿನ ಸ್ನೇಹಿತನ ನೆರವು ಪಡೆದು ಎರಡು ದಿನ ಅಲ್ಲಿಯೇ ವಾಸ್ತವ್ಯ ಮಾಡಿದ್ದರು. ನಂತರ, ಸಕಲೇಶಪುರದ ರೆಸಾರ್ಟ್‌ಗೆ ವಾಸ್ತವ್ಯ ಬದಲಾಯಿಸಿದ್ದರು. ಪೊಲೀಸರಿಗೆ ಸಿಕ್ಕಿ ಬೀಳುವ ಭಯದಲ್ಲಿ ಎಲ್ಲಿಯೂ ಮೊಬೈಲ್ ಹಾಗೂ ಎಟಿಎಂ ಬಳಸಿರಲಿಲ್ಲ. ಕೆಲವು ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಪೊಲೀಸರ ಮೇಲಿನ ಆರೋಪ

- ಕೃತ್ಯ ನಡೆದ ಸ್ಥಳವನ್ನು ತಕ್ಷಣವೇ ಪರಿಶೀಲನೆ ನಡೆಸಿಲ್ಲ
- ಮೃತ ಮಗುವಿನ ಮರಣೋತ್ತರ ಪರೀಕ್ಷೆ ನಡೆಸುವಲ್ಲಿ ವಿಳಂಬ
- ಮಗು ಯಾವ ಸ್ಥಳದಲ್ಲಿ ಮೃತಪಟ್ಟಿದೆ ಎಂಬ ಮಾಹಿತಿ ಸಂಗ್ರಹಿಸುವಲ್ಲೂ ಲೋಪ
- ಮರಣೋತ್ತರ ಪರೀಕ್ಷೆ ವರದಿ ಬಂದ ನಂತರವೂ ಎರಡು ತಿಂಗಳ ಕಾಲ ಎಫ್‌ಐಆರ್ ದಾಖಲಿಸಿಲ್ಲ
- ಮಗು ಉಸಿರುಗಟ್ಟಿ ಮಗು ಮೃತಪಟ್ಟಿದೆ ಎಂಬ ಸ್ಪಷ್ಟ ಮಾಹಿತಿ ಇದ್ದರೂ ಅದನ್ನು ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷ್ಯ ತೋರಿರುವುದು
- ವಿಲ್ಲಾಕ್ಕೆ ಭೇಟಿ ನೀಡಿ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯಾವಳಿ ಸಂಗ್ರಹಿಸಿಲ್ಲ. ದೃಶ್ಯಾವಳಿ ಅಳಿಸಿ ಹೋಗಿ, ಸಾಕ್ಷ್ಯನಾಶವಾಗಿದೆ
- ಮಗುವಿನ ತಂದೆ ನೀಡಿದ್ದ ದೂರನ್ನು ಪೊಲೀಸರು ಗಂಭೀರವಾಗಿ ಪರಿಗಣಿಸದೇ ನಿರ್ಲಕ್ಷ್ಯ ಮಾಡಿರುವುದು

ಪ್ರದೀಪ್ ಈಶ್ವರ್ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಚಿಕ್ಕಬಳ್ಳಾಪುರ ಕ್ಷೇತ್ರದ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಹಾಗೂ ಅವರ ಬೆಂಬಲಿಗರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ, ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರಿಗೆ ದೂರು ಸಲ್ಲಿಸಿದ್ದಾರೆ.

'ನರೇಂದ್ರ ಮೋದಿ ಅವರನ್ನು ಬೆಂಬಲಿಸುವ ದೇಶದ ನಾಗರಿಕರನ್ನು 'ದೇಶದ್ರೋಹಿಗಳು' ಎಂದು ಕರೆದಿರುವುದು ಖಂಡನೀಯ ಹಾಗೂ ಕಾನೂನುಬಾಹಿರ. ಇದು ದ್ವೇಷ, ಸಂಘರ್ಷ ಮತ್ತು ವಿಭಜನೆಯ ವಾತಾವರಣ ಸೃಷ್ಟಿಸುವ ಪ್ರಯತ್ನವಾಗಿದೆ. ಅವರ ವಿರುದ್ಧ ತಕ್ಷಣವೇ ಎಫ್‌ಐಆರ್ ದಾಖಲಿಸಿ, ಕಾನೂನು ಕ್ರಮ ತೆಗೆದುಕೊಳ್ಳಬೇಕು' ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ಕಾಮಗಾರಿಗಳಿಗೆ ಬಿಡ್‌ಗಳನ್ನು ಆಹ್ವಾನಿಸಿದೆ:

I. ಅ.ಇಂ(ವಿ)/ಪ್ರ(ಕಾ)ವೃತ್ತ-ದಕ್ಷಿಣ/ಕಾ.ನಿ.ಇಂ(ವಿ)/ಕಿ.ಇಂ(ವಿ)-1/ಕ-393(7)/2026-27/1203-05 ದಿನಾಂಕ: 10.06.2026

ವಿ. ಸಂಖ್ಯೆ: ಕವಿಪ್ರನಿನಿ/ಅ.ಇಂ/ಪ್ರ(ಕಾ)/ವೃತ್ತ-ದಕ್ಷಿಣ/ಕಾ.ನಿ.ಇಂ(ವಿ)/ಸ.ಕಾ.ಇಂ(1)/ಕಿ.ಇಂ-1/26-27/ಇ.ಪಿ.ಆರ್-05 ದಿನಾಂಕ: 01.06.2026 ರ ಅನ್ವಯ 400 ಕೆ.ವಿ ಹೂಡಿ ಮತ್ತು 220/66/11 ಕೆ.ವಿ ಹೆಚ್.ಎ.ಎಲ್ ಉಪಕೇಂದ್ರಗಳಿಗೆ 48v, 300AH PLCC Battery Set ಪೂರೈಕೆ, ಪರೀಕ್ಷೆ, ನಿರ್ಮಾಣ ಮತ್ತು ಕಾರ್ಯಾರಂಭಗೊಳಿಸುವುದು.

II. ಅಇಂ(ವಿ)/ಪ್ರ(ಕಾ)ವೃತ್ತ-ದಕ್ಷಿಣ/ಇಇ(ಓ)/ಎಇಇ-2/ಎಫ್-310(12)/26-27/1216-17 ದಿನಾಂಕ: 11.06.2026

ವಿ. ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾಇಂ-2/25-26/ಇಪಿಆರ್-27/ಕರೆ-02, ದಿನಾಂಕ: 31.03.2026 ರ ಅನ್ವಯ ಭಾಗಶಃ ಟರ್ನ್‌ಕೀ ಮತ್ತು ಶೇಕಡವಾರು ಆಧಾರದ ಮೇಲೆ 66/11kV RBI Layout ಉಪಕೇಂದ್ರದಲ್ಲಿ ಬ್ಯಾಂಕ್-2A ಫೀಡರ್‌ಗಳನ್ನು ಸಂಪರ್ಕಿಸಲು ಹೆಚ್ಚುವರಿ 11ಕೆವಿ Bank ಮತ್ತು Bus Coupler ಒದಗಿಸುವುದು, ಎಲ್ಲಾ ಸರಿ ಹೊಂದುವ ಸಾಮಗ್ರಿಗಳ/ ಪರಿಕರಗಳ ಸರಬರಾಜು (Switch gear ಹೊರತುಪಡಿಸಿ) ಸ್ಥಾಪನೆ (ಸಿವಿಲ್ ಕೆಲಸಗಳನ್ನು ಒಳಗೊಂಡಂತೆ), ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವುದು.

III. ಅಇಂ(ವಿ)/ಪ್ರ(ಕಾ)ವೃತ್ತ-ದಕ್ಷಿಣ/ಇಇ(ಓ)/ಎಇಇ-2/25-26/1214-15 ದಿನಾಂಕ: 11.06.2026

ವಿ. ಸಂಖ್ಯೆ: ಕವಿಪ್ರನಿನಿ/ಅಇಂವಿ/ಪ್ರ(ಕಾ)/ವೃತ್ತ(ದ)/ಕಾನಿಇಂ(ಕ)/ಸಕಾನಿಇಂ-2/25-26/ಇಪಿಆರ್-18/ಕರೆ-12 ದಿನಾಂಕ: 20.11.2025 ರ ಅನ್ವಯ ಸಂಪೂರ್ಣ ಟರ್ನ್ ಕೀ ಆಧಾರದ ಮೇಲೆ 220/66/11ಕೆವಿ ಸೋಮನಹಳ್ಳಿ ಸ್ವೀಕರಣಾ ಕೇಂದ್ರದಲ್ಲಿ ಹಳೆಯದಾದ ನ್ಯೂಮ್ಯಾಟಿಕ್ ಮಾದರಿಯ 66ಕೆವಿ 31.5ಕೆಎ, ಎಸ್‌ಎಫ್ 6 ಬ್ರೇಕರ್‌ಗಳನ್ನು ಸ್ಪ್ರಿಂಗ್ ಮೆಕಾನಿಸಂ 40/50ಕೆಎ ಮಾದರಿಗಳಿಗೆ ಬದಲಾಯಿಸುವುದು ಸೇರಿದಂತೆ ಎಲ್ಲಾ ಸರಿಹೊಂದುವ ಸಾಮಗ್ರಿಗಳು/ಉಪಕರಣಗಳ ಸರಬರಾಜು ಮತ್ತು ಸ್ಥಾಪನೆ (ಸಿವಿಲ್ ಕಾಮಗಾರಿಗಳು ಸೇರಿದಂತೆ) ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

IV. ಅಇಂ(ವಿ)/ಪ್ರ(ಕಾ)ವೃತ್ತ-ದಕ್ಷಿಣ/ಇಇ(ಓ)/ಎಇಇ-2/26-27/ಎಫ್-310(06)/1218-19 ದಿನಾಂಕ: 11.06.2026

ವಿ. ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ಕಾ)/ದಕ್ಷಿಣ ವೃತ್ತ/ಕಾನಿಇಂ(ಕ)/ಸಕಾನಿಇಂ-2/25-26/ಇಪಿಆರ್-19/ಕರೆ-4, ದಿನಾಂಕ: 28.11.2025ರ ಅನ್ವಯ ಸಂಪೂರ್ಣ ಟರ್ನ್ ಕೀ ಆಧಾರದ ಮೇಲೆ ಬೆಂಗಳೂರಿನ ಸೋಮನಹಳ್ಳಿ ಕಾರ್ಯಾಚರಣೆ ವಿಭಾಗದಲ್ಲಿ ಡಿ.ಜಿ. ಸೆಟ್‌ನ ಸರಬರಾಜು, ಅಳವಡಿಕೆ, ಪರೀಕ್ಷೆ ಮತ್ತು ಚಾಲನೆ 58.5kVA ಸಾಮರ್ಥ್ಯದ ಡೀಸೆಲ್ ಜನರೇಟರ್ ಸೆಟ್ 415V, 0.8pf, (ಪವರ್ ಫ್ಯಾಕ್ಟರ್ ನಲ್ಲಿ) ಬೇಸ್ ಫ್ರೇಮ್‌ನ ಮೇಲೆ ಅಳವಡಿಸಲ್ಪಟ್ಟಿದ್ದು, ಅಂತರ್ ನಿರ್ಮಿತ ಇಂಧನ ಟ್ಯಾಂಕ್ ಮತ್ತು ಬ್ಯಾಟರಿಯೊಂದಿಗೆ (1 No. 12V) ಹಾಗೂ ಮಾನವ ಕೈಚಾಲಿತ ನಿಯಂತ್ರಣ ಫಲಕ (ಕಂಟ್ರೋಲ್ ಪ್ಯಾನೆಲ್) ಮತ್ತು ಧ್ವನಿನಿರೋಧಕ ಎನ್‌ಕ್ಲೋಸರ್ ಸಹಿತವಾಗಿ, NAL ಅನುಮೋದಿತ 58.5kVA ಸಾಮರ್ಥ್ಯದ DG set AMF ಫಲಕದೊಂದಿಗೆ, ನಿರ್ದಿಷ್ಟತೆಗಳ ಪ್ರಕಾರ 220/66/11ಕೆವಿ ಸ್ವೀಕರಣಾ ಕೇಂದ್ರದಲ್ಲಿ ಅಳವಡಿಸುವುದು.

V. ಅಇಂ(ವಿ)/ಪ್ರ(ಕಾ)ವೃತ್ತ-ದಕ್ಷಿಣ/ಇಇ(ಓ)/ಎಇಇ-2/ಎಫ್-310(5)/26-27/1220-21 ದಿನಾಂಕ: 11.06.2026

ವಿ. ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ಕಾ)/ದ-ವೃತ್ತ/ಕಾನಿಇಂ(ಕ)/ಸಕಾಇಂ-2/25-26/ಇಪಿಆರ್-13/ಕರೆ-2 ದಿನಾಂಕ: 04.09.2025 ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಹೆಚ್‌ಎಸ್‌ಆರ್ ವಿಭಾಗದಲ್ಲಿನ 220/66/11 ಕೆ.ವಿ ಕೋರಮಂಗಲ ಜಿ.ಐ.ಎಸ್ ಮತ್ತು 66/11 ಕೆ.ವಿ ಆಡುಗೋಡಿ ಉಪಕೇಂದ್ರಗಳಲ್ಲಿ 11 ಕೆವಿ ಹೊಸ ಸಿ & ಆರ್ ಪ್ಯಾನಲ್ ಅಳವಡಿಸುವುದು.

VI. ಅಇಂ(ವಿ)/ಪ್ರ(ಕಾ)ವೃತ್ತ-ದಕ್ಷಿಣ/ಇಇ(ಓ)/ಎಇಇ-2/2026-27/1212-13 ದಿನಾಂಕ: 11.06.2026

ವಿ. ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ನಿ)/ವೃತ್ತ-ದಕ್ಷಿಣ/ಕಾನಿಇಂ(ಕ)/ಸಕಾಇಂ-1&4/2024-25/ಇಪಿಆರ್-65 ರಿಂದ 70 ಮತ್ತು 72 ರಿಂದ 80/ ಕರೆ-7 ದಿನಾಂಕ:07.01.2025 ರ ಅನ್ವಯ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಬೆಂಗಳೂರಿನ ಪ್ರಸರಣ (ಕಾರ್ಯಾಚರಣೆ) ವೃತ್ತ-ದಕ್ಷಿಣದ ಸೋಮನಹಳ್ಳಿ ಟಿಎಲ್‌ಎಮ್ ಉಪವಿಭಾಗದ ವ್ಯಾಪ್ತಿಯಲ್ಲಿ...

1) ಹಾಲಿ ಇರುವ 230 ಕೆವಿ ಯರಂಡನಹಳ್ಳಿ-ಹೊಸೂರು ಪ್ರಸರಣ ವಿದ್ಯುತ್ ಮಾರ್ಗದ ಟಿವಿಎಸ್ ಮುಖ್ಯ ರಸ್ತೆ ದಾಸನಪುರದಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 46 ಮತ್ತು 47ರ ನಡುವೆ ಡಿಡಿ+0 ಗದಗ-ಬಾಗಲಕೋಟೆ ವಿನ್ಯಾಸದ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವುದು.

2) ಹಾಲಿ ಇರುವ 220 ಕೆವಿ ಸೋಮನಹಳ್ಳಿ-ಖೋಡೇಸ್ ಪ್ರಸರಣ ವಿದ್ಯುತ್ ಮಾರ್ಗದ ಬಿಎಂಟಿಸಿ ಬಸ್ ನಿಲ್ದಾಣ ಜಂಬೂಸವಾರಿ ದಿಣ್ಣೆಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 1 ಮತ್ತು 3ರ ನಡುವೆ 220ಕೆವಿ ಎಂಡಿ+6 ಮೈಲಸಂದ್ರ ವಿನ್ಯಾಸದ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವುದು.

3) ಹಾಲಿ ಇರುವ 66 ಕೆವಿ ಸೋಮನಹಳ್ಳಿ-ಜಿಗಣಿ-2 ಜೋಡಿ ಪ್ರಸರಣ ವಿದ್ಯುತ್ ಮಾರ್ಗದ ಕಲ್ಕರೆ ಅರಣ್ಯ ವ್ಯಾಪ್ತಿಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 96, 97 ಮತ್ತು 98ರ ನಡುವೆ ಒಂದು ಸಂಖ್ಯೆಯ 110ಕೆವಿ ಡಿಡಿ+0 ಎನ್‌ಬಿಟಿ, ಕೆಪಿಟಿಸಿಎಲ್ ವಿನ್ಯಾಸ 110ಕೆವಿ ಡಿಡಿ+6 ಎನ್‌ಬಿಟಿ, ಕೆಪಿಟಿಸಿಎಲ್ ವಿನ್ಯಾಸ ವಿದ್ಯುತ್ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವುದು.

4) ಹಾಲಿ ಇರುವ 230 ಕೆವಿ ಯರಂಡನಹಳ್ಳಿ-ಹೊಸೂರು ಪ್ರಸರಣ ವಿದ್ಯುತ್ ಮಾರ್ಗದ ಮಾಚನಹಳ್ಳಿಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 34ಮತ್ತು 35ರ ನಡುವೆ ಡಿಡಿ+0 ಗದಗ-ಬಾಗಲಕೋಟೆ ವಿನ್ಯಾಸದ ವಿದ್ಯುತ್ ಗೋಪುರವನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವುದು.

5) ಹಾಲಿ ಇರುವ 66 ಕೆವಿ ಸುಬ್ರಮಣ್ಯಪುರ-ರೆಮ್ಕೋ-2 ಜೋಡಿ ಪ್ರಸರಣ ವಿದ್ಯುತ್ ಮಾರ್ಗದ ಗ್ಯಾಸ್ ಗೋಡೌನ್ ರಸ್ತೆಯ ಅರೆಹಳ್ಳಿ ವ್ಯಾಪ್ತಿಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 7 ಮತ್ತು 8 ರ ನಡುವೆ ಒಂದು ಸಂಖ್ಯೆಯ 66ಕೆವಿ ಡಿಡಿ+3 ಎನ್‌ಬಿಟಿ, ಕೆಪಿಟಿಸಿಎಲ್ ವಿನ್ಯಾಸ ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವುದು.

6)ಹಾಲಿ ಇರುವ 66 ಕೆವಿ ಸುಬ್ರಮಣ್ಯಪುರ-ರೆಮ್ಕೋ-2 ಜೋಡಿ ಪ್ರಸರಣ ವಿದ್ಯುತ್ ಮಾರ್ಗದ ಗ್ಯಾಸ್ ಗೋಡೌನ್ ರಸ್ತೆಯ ಅರೆಹಳ್ಳಿ ವ್ಯಾಪ್ತಿಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ: 10 ಮತ್ತು 11ರ ನಡುವೆ ಒಂದು ಸಂಖ್ಯೆಯ 66ಕೆವಿ ಡಿಡಿ+6 ಎನ್‌ಬಿಟಿ, ಕೆಪಿಟಿಸಿಎಲ್ ವಿನ್ಯಾಸ ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವುದು.

7) ಹಾಲಿ ಇರುವ 66 ಕೆವಿ ಸೋಮನಹಳ್ಳಿ-ಸುಬ್ರಮಣ್ಯಪುರ-1 ಪ್ರಸರಣ ವಿದ್ಯುತ್ ಮಾರ್ಗದ ಬಾಲಾಜಿ ಲೇಔಟ್ ಪಾರ್ಕ್, ರಘುವನಹಳ್ಳಿ ಮತ್ತು ಬಲಮುರಿ ಗಣೇಶ ದೇವಸ್ಥಾನದ ಹತ್ತಿರ ಮಂಜುನಾಥನಗರ ವ್ಯಾಪ್ತಿಯಲ್ಲಿರುವ 66ಕೆವಿ ಡಿಡಿ+3 ಎನ್‌ಬಿಟಿ, ಕೆಪಿಟಿಸಿಎಲ್ ವಿನ್ಯಾಸ ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವುದು.

8) ಹಾಲಿ ಇರುವ 220 ಕೆವಿ ಸೋಮನಹಳ್ಳಿ-ಶೋಭಾಡ್ರೀಮ್ಸ್ ಮತ್ತು ಸೋಮನಹಳ್ಳಿ-ಮೈಲಸಂದ್ರ-1 ಜೋಡಿ ಪ್ರಸರಣ ವಿದ್ಯುತ್ ಮಾರ್ಗದ ಪಿಲ್ಲಗನಹಳ್ಳಿಯಲ್ಲಿರುವ ವಿದ್ಯುತ್ ಗೋಪುರ ಸಂಖ್ಯೆ 34 & 35 ನಡುವೆ 66ಕೆವಿ ಡಿಬಿ/ಡಿಇ+6 220ಕೆವಿ ಎನ್‌ಬಿಟಿ, ಕೆಪಿಟಿಸಿಎಲ್ ಎನ್‌ಆರ್‌ಎಸ್-ಲಗ್ಗೆರೆ ವಿನ್ಯಾಸದ ವಿದ್ಯುತ್ ಗೋಪುರ ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವುದು.

ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಗೆ ಹೈಪರ್‌ಲಿಂಕ್ 'E Procurement KPTCL' ನಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ **15.06.2026** ರಂದು ಅಥವಾ ತದನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/- ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ) ವೃತ್ತ-ದಕ್ಷಿಣ, ನೆಲ ಮಹಡಿ, ಕ.ವಿ.ಪ್ರ.ನಿ.ನಿ.
ಕಛೇರಿ ಸಂಕೀರ್ಣ, ಆನಂದರಾವ್ ವೃತ್ತ, ಬೆಂಗಳೂರು-09.

ತುಮಕೂರು ಮಹಾನಗರ ಪಾಲಿಕೆ, ತುಮಕೂರು

ವೆಬ್‌ಸೈಟ್ : www.tumkurucity.mrc.gov.in
ಇಮೇಲ್: ka.tumkuru.cc@gmail.com,
ಕಚೇರಿದೂರವಾಣಿ : 2272200, ಸಹಾಯವಾಣಿ : 9449872599

ಸಂಖ್ಯೆ:ತುಮಪಾ/ತಾಂಶಾ/ಸಿವಿಲ್ ಶಾಖೆ/ಸಿಆರ್/05/2026-27 ದಿನಾಂಕ: 09-06-2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ, ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ **ಮಹಾನಗರಪಾಲಿಕೆ ನಿಧಿಯಲ್ಲಿ** ಕಾಮಗಾರಿಗಳನ್ನು ಕೈಗೊಳ್ಳಲು ಕೆಪಿಪಿಪಿ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಲು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು,

ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.

1.	ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ:	**ದಿನಾಂಕ: 09-06-2026 ರಿಂದ ದಿನಾಂಕ: 15-06-2026 ರವರೆಗೆ**
2.	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:	**ದಿನಾಂಕ:16-06-2026 ರಂದು ಸಾಯಂಕಾಲ 5.30 ಗಂಟೆವರೆಗೆ**
3.	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:	**17-06-2026 ಸಾಯಂಕಾಲ 4.35 ಗಂಟೆಗೆ**

ದಿನಾಂಕಗಳು ಮುಂದೂಡಿಕೆ / ಯಾವುದೇ ತಿದ್ದುಪಡಿಗಳು ಇದ್ದಲ್ಲಿ ಕೇವಲ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು.

ಸಹಿ/-
ಕಾರ್ಯಪಾಲಕ ಅಭಿಯಂತರರು
ಮಹಾನಗರ ಪಾಲಿಕೆ ತುಮಕೂರು,
ತುಮಕೂರು.

DIPR/TUM/RO-45/26-27/Oysters

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು-560 020

ಸಂ.: ಬೆಂಅಪ್ರಾ/ನಯೋಸ/CLU-304/25-26/846/2026-27 ದಿನಾಂಕ: 12.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಾಣಿಜ್ಯ** ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎನ್.ಬಿ.ಸುರೇಶ್ ಮತ್ತು ಇತರರು ನಾಗದಾಸನಹಳ್ಳಿ ರಾಜಾನುಕುಂಟೆ (ಪೋಸ್ಟ್) ಬೆಂಗಳೂರು ಉತ್ತರ ತಾಲ್ಲೂಕು ಬೆಂಗಳೂರು-560064	ಯಲಹಂಕ	ಯಲಹಂಕ	ನಾಗದಾಸನ ಹಳ್ಳಿ	6/1	3ಎ-33ಗುಂ	ವ್ಯವಸಾಯ	ವಾಣಿಜ್ಯ
					6/2	1ಎ-15ಗುಂ		
					ಒಟ್ಟು	5ಎ-08ಗುಂ		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಾಣಿಜ್ಯ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಈ ಜಾಗದಲ್ಲಿ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನುಗಳಲ್ಲಿ ಅಭಿವೃದ್ಧಿಪಡಿಸಿದ ಕಟ್ಟಡಗಳಿಂದ ಹಲವಾರು ಜನರಿಗೆ ಉದ್ಯೋಗ ದೊರಕುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ'** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸಪ್: 94831 66622 (24 x 7). @BDAOfficialGoK

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ, ರೂಂ ನಂ. 09, ನೆಲ ಮಹಡಿ,
ಅನೆಕ್ಸ್ ಕಟ್ಟಡ-3, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಛೇರಿ ಆವರಣ,
ಎನ್.ಆರ್. ಚೌಕ, ಬೆಂಗಳೂರು - 560002.

ಸಂಖ್ಯೆ:ಬೆಂಕೇನಪಾ/ಕಾಅ/ಟಿಇಸಿ/ಟೆಂಡರ್/04/2025-26/ಕರೆ-2 ದಿನಾಂಕ: 12-06-2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) - (ಅಲ್ಪಾವಧಿ)
(ದ್ವಿ-ಲಕೋಟೆ ಪದ್ಧತಿ) (ಜಿಒಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ, ಬೆಂಕೇನಪಾ, ಬೆಂಗಳೂರು ಇವರು ಈ ಕೆಳಕಂಡ ಕೆಲಸಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1	ಕೃಷ್ಣರಾಜೇಂದ್ರ ರಸ್ತೆಯ ಕಿಮ್ಸ್ ಮೆಡಿಕಲ್ ಕಾಲೇಜ್ ಜಂಕ್ಷನ್ ಹತ್ತಿರ ವಾಣಿಜ್ಯ ಜಾಹೀರಾತು ಹಕ್ಕುಗಳ ಅಡಿಯಲ್ಲಿ ಡೈನಾಮಿಕ್ ಅವಧಿ ಮಾದರಿಯ ಆಧಾರದ ಮೇಲೆ ಪಿಪಿಪಿ ಮಾದರಿ ಅಡಿಯಲ್ಲಿ, ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (ಡಿಬಿಎಫ್‌ಒಟಿ) ಮೇಲೆ ಸ್ಕೈವಾಕ್ ನಿರ್ಮಾಣ ಮಾಡುವುದು. **(ಸಾಮಾನ್ಯ ವರ್ಗಕ್ಕೆ) - (ಬೆಂಕೇನಪಾ/2025-26/ಎಸ್‌ಇ0108/ಕರೆ-2) - ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ): 5.00 (ರೂ. 1.00 ಲಕ್ಷ ಇ-ಪಾವತಿ ಮೂಲಕ ಮತ್ತು ಬಾಕಿ ರೂ. 4.00 ಲಕ್ಷ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದಂತೆ).**
2	ಕೃಷ್ಣರಾಜೇಂದ್ರ ರಸ್ತೆ ಮತ್ತು ಲಾಲ್‌ಬಾಗ್ ಫೋರ್ಟ್ ರಸ್ತೆಯ (ಸಂಯೋಜಿತ) ಶಿವಶಂಕರ ಸರ್ಕಲ್ ಹತ್ತಿರ ವಾಣಿಜ್ಯ ಜಾಹೀರಾತು ಹಕ್ಕುಗಳ ಅಡಿಯಲ್ಲಿ ಡೈನಾಮಿಕ್ ಅವಧಿ ಮಾದರಿಯ ಆಧಾರದ ಮೇಲೆ ಪಿಪಿಪಿ ಮಾದರಿ ಅಡಿಯಲ್ಲಿ, ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (ಡಿಬಿಎಫ್‌ಒಟಿ) ಮೇಲೆ ಸ್ಕೈವಾಕ್ ನಿರ್ಮಾಣ ಮಾಡುವುದು. **(ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ ಮೀಸಲಿರಿಸಿದೆ) - (ಬೆಂಕೇನಪಾ/2025-26/ಎಸ್‌ಇ0110/ಕರೆ-2) - ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ): 5.00 (ರೂ. 1.00 ಲಕ್ಷ ಇ-ಪಾವತಿ ಮೂಲಕ ಮತ್ತು ಬಾಕಿ ರೂ. 4.00 ಲಕ್ಷ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದಂತೆ).**
3	ಕೆಂಪೇಗೌಡ ರಸ್ತೆ (ಕೆ.ಜಿ. ರಸ್ತೆ, ಅರಮನೆ ರಸ್ತೆ, ಅಂಚೆ ಕಛೇರಿ ರಸ್ತೆ ಮತ್ತು ಅವೆನ್ಯೂ ರಸ್ತೆಯೊಂದಿಗೆ ಸಂಯೋಜಿಸಲಾಗಿದೆ) (ಸಂಯೋಜಿತ) ಮೈಸೂರು ಬ್ಯಾಂಕ್ ಜಂಕ್ಷನ್ ಹತ್ತಿರ ವಾಣಿಜ್ಯ ಜಾಹೀರಾತು ಹಕ್ಕುಗಳ ಅಡಿಯಲ್ಲಿ ಡೈನಾಮಿಕ್ ಅವಧಿ ಮಾದರಿಯ ಆಧಾರದ ಮೇಲೆ ಪಿಪಿಪಿ ಮಾದರಿ ಅಡಿಯಲ್ಲಿ, ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (ಡಿಬಿಎಫ್‌ಒಟಿ) ಮೇಲೆ ಸ್ಕೈವಾಕ್ ನಿರ್ಮಾಣ ಮಾಡುವುದು. **(ಸಾಮಾನ್ಯ ವರ್ಗಕ್ಕೆ) - (ಬೆಂಕೇನಪಾ/2025-26/ಎಸ್‌ಇ0112/ಕರೆ-2) - ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ): 5.00 (ರೂ. 1.00 ಲಕ್ಷ ಇ-ಪಾವತಿ ಮೂಲಕ ಮತ್ತು ಬಾಕಿ ರೂ. 4.00 ಲಕ್ಷ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದಂತೆ).**

ಟೆಂಡರ್ ವೇಳಾಪಟ್ಟಿ: 1) ಆರ್‌ಎಫ್‌ಪಿ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ದಿನಾಂಕ: **15-06-2026 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. **2)** ಟೆಂಡರ್ ವಿಚಾರಣೆಗಳಿಗಾಗಿ ಕೊನೆಯ ದಿನಾಂಕ: **19-06-2026 ರಂದು 15.00 ಗಂಟೆವರೆಗೆ ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **20-06-2026 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರ ಕಛೇರಿ, ಬೆಂಗಳೂರು ಕೇಂದ್ರ ನಗರ ಪಾಲಿಕೆ, ವಲಯ-2, ರೂಂ ನಂ. 405, 4ನೇ ಮಹಡಿ, ಅನೆಕ್ಸ್ ಕಟ್ಟಡ-3, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಕಛೇರಿ ಆವರಣ, ಎನ್.ಆರ್. ಚೌಕ, ಬೆಂಗಳೂರು - 560002** ಇಲ್ಲಿ ನಡೆಯುವುದು. 4) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: **23-06-2026 ರಂದು 17.00 ಗಂಟೆವರೆಗೆ.** 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **25-06-2026 ರಂದು 11.00 ಗಂಟೆಗೆ.** 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ, ಬೆಂಕೇನಪಾ.

ಅನ್ನಭಾಗ್ಯದ ಅಕ್ಕಿ ಖಾಸಗಿಯವರಿಗೆ

ಲೋಕಾಯುಕ್ತ ದಾಳಿ: ಗೋದಾಮಿಗೆ ಸಾಗಿಸಿದ್ದ ನೂರಾರು ಕ್ವಿಂಟಲ್ ಅಕ್ಕಿ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಭಾಗಗಳಲ್ಲಿ ಇರುವ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಮತ್ತು ಖಾಸಗಿ ಗೋದಾಮುಗಳ ಮೇಲೆ ದಾಳಿ ಮಾಡಿದ್ದ ಲೋಕಾಯುಕ್ತರು ಹಾಗೂ ಲೋಕಾಯುಕ್ತ ಪೊಲೀಸ್ ತಂಡವು ಅನ್ನಭಾಗ್ಯ ಯೋಜನೆಯ ಸುಮಾರು 6 ಟನ್ ಅಕ್ಕಿ ಮತ್ತು 4 ಟನ್ ರಾಗಿಯನ್ನು ಅಕ್ರಮವಾಗಿ ಖಾಸಗಿಯವರಿಗೆ ಮಾರಾಟ ಮಾಡಿರುವುದನ್ನು ಪತ್ತೆ ಮಾಡಿದೆ.

ಜತೆಗೆ ನಿಗಮದ ಗೋದಾಮುಗಳಿಂದ ಅಕ್ರಮವಾಗಿ ಸಾಗಿಸಲು ಟ್ರಕ್‌ಗಳಿಗೆ ತುಂಬಿಸಲಾಗಿದ್ದ 450 ಚೀಲ ಅಕ್ಕಿಯನ್ನು ಪತ್ತೆ ಮಾಡಲಾಗಿದೆ.

ಲೋಕಾಯುಕ್ತ ಸಂಸ್ಥೆಗೆ ಬಂದಿದ್ದ ಹಲವು ದೂರುಗಳ ಆಧಾರದಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದರು. ಅದರಂತೆ ಲೋಕಾಯುಕ್ತರು, ಉಪ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಕೆ.ಎನ್.ಫಣೀಂದ್ರ, ಬಿ.ವೀರಪ್ಪ ಮತ್ತು ಲೋಕಾಯುಕ್ತ ಪೊಲೀಸ್ ತಂಡಗಳು ನಗರದ 27 ಸ್ಥಳಗಳಲ್ಲಿ ಶುಕ್ರವಾರ ದಾಳಿ ನಡೆಸಿದ್ದವು.

ನಿಗಮದ 22 ಗೋದಾಮುಗಳು, 4 ಕಿರು ಗೋದಾಮು ಮತ್ತು ಸಗಟು ಅಂಗಡಿಗಳು ಹಾಗೂ ಖಾಸಗಿ ಗೋದಾಮುವೊಂದರ ಮೇಲೆ ದಾಳಿ ನಡೆಸಲಾಗಿತ್ತು.

ತುಮಕೂರು ರಸ್ತೆಯ ದಾಸನಪುರ ಹೋಬಳಿ ವ್ಯಾಪ್ತಿಯ ಅನ್ನಪೂರ್ಣೇಶ್ವರಿ ಬಡಾವಣೆಯಲ್ಲಿ ಸುಬ್ಬರಾಜು ಎಂಬುವವರು ಗೋದಾಮು ಹೊಂದಿದ್ದಾರೆ. ಈ ಗೋದಾಮಿನಲ್ಲಿ ಅನ್ನಭಾಗ್ಯ ಯೋಜನೆಯ 11 ಟನ್ ಅಕ್ಕಿ ಮತ್ತು ರಾಗಿ, ಅನ್ನಭಾಗ್ಯ ಯೋಜನೆಯ ಲಾಂಛನ ಇರುವ 35,000 ಚೀಲಗಳು ಇವೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಈ ಗೋದಾಮಿನಲ್ಲಿ ಪಡಿತರ ಅಕ್ಕಿಯನ್ನು ಪಾಲಿಶ್ ಮಾಡಿ, ಬೇರೆ ಚೀಲಗಳಿಗೆ ತುಂಬಿಸುವ ಕಿರು ಘಟಕವನ್ನೂ ನಡೆಸಲಾಗುತ್ತಿದ್ದು, ಅಷ್ಟೂ ಪಡಿತರವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ನಿಗಮದ ಯಾವ ಗೋದಾಮಿನಿಂದ ಇಲ್ಲಿಗೆ ಅಕ್ಕಿಯನ್ನು ಸಾಗಿಸಲಾಗಿದೆ ಎಂಬುದರ ತನಿಖೆ ನಡೆಸಲು ಲೋಕಾಯುಕ್ತರು ಸೂಚಿಸಿದ್ದಾರೆ.

ನಗರದ ಯಶವಂತಪುರ ಯಾರ್ಡ್‌ನ ವಿಜಯನಗರ–1 ಗೋದಾಮಿನ ಹೊರಗೆ ಒಂದು ಟ್ರಕ್ ಪತ್ತೆಯಾಗಿದ್ದು, ಅದರಲ್ಲಿ ಅಕ್ರಮವಾಗಿ 240 ಚೀಲ ಅಕ್ಕಿಯನ್ನು ತುಂಬಿಸಲಾಗಿತ್ತು. ಆ ಅಕ್ಕಿಗೆ ಯಾವುದೇ ಬಿಲ್ ಸೃಜಿಸಿರಲಿಲ್ಲ. ಇದೇ ಯಾರ್ಡ್‌ನ ಎನ್‌ಜಿಜಿ–1 ಗೋದಾಮಿನ ಮುಂದೆಯೇ ಒಂದು ಟ್ರಕ್ ಇದ್ದು, ಅದರಲ್ಲೂ ಅಕ್ರಮವಾಗಿ 200 ಚೀಲ ಅಕ್ಕಿಯನ್ನು ತುಂಬಿಸಲಾಗಿತ್ತು. ಬಿಲ್ ಸೃಜಿಸದೇ ಅಕ್ಕಿಯನ್ನು ಸಾಗಿಸಲು ಯತ್ನಿಸಲಾಗಿತ್ತು ಎಂದು ಪ್ರಕಟಣೆ ವಿವರಿಸಿದೆ.

ಎರಡೂ ಪ್ರಕರಣದಲ್ಲಿ ಸಿಬ್ಬಂದಿಯು ಕೆಲ ನ್ಯಾಯಬೆಲೆ ಅಂಗಡಿಗಳಿಗೆ ಸಾಗಣೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದರು. ಸ್ವತಃ ಲೋಕಾಯುಕ್ತರು ನ್ಯಾಯಬೆಲೆ ಅಂಗಡಿಗಳಿಗೆ ಕರೆ ಮಾಡಿ, ಸಿಬ್ಬಂದಿ ಸುಳ್ಳು ಮಾಹಿತಿ ನೀಡಿದ್ದಾರೆ ಎಂಬುದನ್ನು ಖಚಿತಪಡಿಸಿಕೊಂಡರು. ಆ ನಂತರ ಟ್ರಕ್ ಮತ್ತು ಅವುಗಳಲ್ಲಿ ಇದ್ದ ಅಕ್ಕಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದು ತನಿಖೆಗೆ ಆದೇಶಿಸಲಾಗಿದೆ ಎಂದು ಮಾಹಿತಿ ನೀಡಿದೆ.

ಪಡಿತರದ ಅಕ್ಕಿ ಮತ್ತು ರಾಗಿ ನಿರ್ವಹಣೆಯಲ್ಲಿ ನಿಗಮದ 22 ಗೋದಾಮುಗಳಲ್ಲೂ ಕೆಲ ಲೋಪಗಳು ಆಗಿರುವುದನ್ನು ದಾಳಿ ವೇಳೆ ತಂಡಗಳು ಪತ್ತೆ ಮಾಡಿವೆ.

ಗೋದಾಮಿನಲ್ಲಿ ಸಿಸಿಟಿವಿ ಕ್ಯಾಮೆರಾಗಳು ಇಲ್ಲ, ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡಿಲ್ಲ, ಸಿಬ್ಬಂದಿಯು ನಗದುವಹಿ ಮತ್ತು ಚಲನವಲನ ವಹಿ ನಿರ್ವಹಣೆ ಮಾಡಿಲ್ಲ, ಅಕ್ಕಿ ಚೀಲಗಳ ಲೆಕ್ಕವನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲ. ಸ್ಥಳದಲ್ಲಿದ್ದ ಸಿಬ್ಬಂದಿ ಈ ಬಗ್ಗೆ ವಿವರಣೆ ನೀಡಿಲ್ಲ. ಪಡಿತರ ಸಾಗಣೆಗೆ ಬಳಸುವ ಟ್ರಕ್‌ಗಳ ಯೋಗ್ಯತಾ ಪ್ರಮಾಣಪತ್ರ (ಎಫ್‌ಸಿ) ಇಲ್ಲದಿರುವುದು, ನೋಂದಣಿ ಫಲಕ ಸರಿಯಾಗಿ ಇಲ್ಲದಿರುವುದು, ಟೆಂಡರ್ ವೇಳೆ ಉಲ್ಲೇಖಿಸದ ಟ್ರಕ್‌ಗಳನ್ನು ಬಳಸುತ್ತಿರುವುದು ಪತ್ತೆಯಾಗಿದೆ. ಈ ಎಲ್ಲದರ ಕುರಿತು ತನಿಖೆ ನಡೆಸುವಂತೆ ಲೋಕಾಯುಕ್ತರು ಸೂಚಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಖಾಸಗಿ ಗೋದಾಮಿನಲ್ಲಿದ್ದ ಅಕ್ಕಿ ಚೀಲಕ್ಕೆ ತುಂಬಿಸುವ ಸಿಲೋ ಮತ್ತು ತೂಕದ ಯಂತ್ರ

ಲೆಕ್ಕವಿಲ್ಲದ 860 ಚೀಲ ಅಕ್ಕಿ

ಉಪ ಲೋಕಾಯುಕ್ತ ಬಿ.ವೀರಪ್ಪ ನೇತೃತ್ವದ ತಂಡವು ನಗರದ ಶಾಂತಿನಗರದದಲ್ಲಿರುವ ನಿಗಮದ ಗೋದಾಮಿನ ಮೇಲೆ ದಾಳಿ ನಡೆಸಿತ್ತು. ಈ ವೇಳೆ ಗೋದಾಮಿನಲ್ಲಿ 1,130 ಚೀಲದಷ್ಟು ಅಕ್ಕಿ ದಾಸ್ತಾನು ಇತ್ತು. ಆದರೆ, ಗೋದಾಮಿನ ದಾಖಲೆಪತ್ರಗಳ ಪ್ರಕಾರ, ಜೂನ್ 11ರ ಗುರುವಾರ 600 ಚೀಲಗಳು ಬಂದಿದ್ದವು ಮತ್ತು ಅವುಗಳಲ್ಲಿ 330 ಚೀಲಗಳನ್ನು ಸರಬರಾಜು ಮಾಡಲಾಗಿತ್ತು. 270 ಚೀಲಗಳಷ್ಟೇ ಇರಬೇಕಿತ್ತು. ದಾಖಲೆಯೇ ಇಲ್ಲದ 860 ಚೀಲಗಳು ಇರುವುದು ಪತ್ತೆಯಾಗಿದೆ. ಈ ಬಗ್ಗೆ ಸಿಬ್ಬಂದಿ ಯಾವುದೇ ವಿವರಣೆ ನೀಡಿಲ್ಲ. ಈ ಕುರಿತು ತನಿಖೆಗೆ ಆದೇಶಿಸಲಾಗಿದೆ.

ಕಲಾಕೃತಿಗಳಲ್ಲಿ 'ಸ್ವಾಭಿಮಾನ ಭಾರತ' ದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸ್ಕಾರ ಭಾರತೀ ಕರ್ನಾಟಕ ದಕ್ಷಿಣ ಪ್ರಾಂತವು 'ಸ್ವಾಭಿಮಾನ ಭಾರತ' ಮತ್ತು 'ಸಂವಿಧಾನ 75' ಶೀರ್ಷಿಕೆಯಡಿ ಬಸವನಗುಡಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಹಮ್ಮಿಕೊಂಡಿರುವ ಕಲಾ ಪ್ರದರ್ಶನಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ಸಂವಿಧಾನ ಹಾಗೂ ಸ್ವಾಭಿಮಾನ ಭಾರತದ ಆಶಯ ಸಾರುವ 75 ಕಲಾಕೃತಿಗಳನ್ನು ಈ ಪ್ರದರ್ಶನ ಒಳಗೊಂಡಿದೆ. ಆಯ್ದ 75 ಕಲಾವಿದರು ಈ ಕಲಾಕೃತಿಗಳನ್ನು ರಚಿಸಿದ್ದಾರೆ. ಪ್ರವೇಶ ದ್ವಾರದಲ್ಲಿಯೇ ನವ ಭಾರತವನ್ನು ಪ್ರತಿನಿಧಿಸುವ ಕಲಾಕೃತಿಯನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ವಾಮನ್ ಪೈ ಅವರು ರಚಿಸಿರುವ ಕಲಾಕೃತಿ ಇದಾಗಿದೆ. ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಸೇರಿ ಇತ್ತೀಚಿನ ಬೆಳವಣಿಗೆಯನ್ನು ಆಧರಿಸಿ ಶುಭಶ್ರೀ ರೌತ್ರೆ ಕಲಾಕೃತಿ ರಚಿಸಿದ್ದಾರೆ.

ಈ ಪ್ರದರ್ಶನವನ್ನು ಉದ್ಘಾಟಿಸಿದ ಕೇಂದ್ರ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಚಿ.ಸು. ಕೃಷ್ಣ ಸೆಟ್ಟಿ, ಕಲಾವಿದ ಚಂದ್ರನಾಥ ಆಚಾರ್ಯ ಅವರು ಕಲಾ ಪ್ರದರ್ಶನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಸಂಸ್ಕಾರ ಭಾರತೀ ಕಾರ್ಯವನ್ನು ಶ್ಲಾಘಿಸಿದರು. ಸಂಸ್ಕಾರ ಭಾರತೀ ಕರ್ನಾಟಕ ದಕ್ಷಿಣದ ಪ್ರಾಂತಾಧ್ಯಕ್ಷ ಸುಚೇಂದ್ರ ಪ್ರಸಾದ್, ಸಂಸ್ಕಾರ ಭಾರತೀ ದೃಶ್ಯಕಲಾ ವಿಭಾಗದ ಸಂಯೋಜಕ ಗಣಪತಿ ಎಸ್. ಹೆಗಡೆ ಉಪಸ್ಥಿತರಿದ್ದರು.

ಕಲಾ ಪ್ರದರ್ಶನವು ಇದೇ 17ರವರೆಗೆ ನಡೆಯಲಿದ್ದು, ಬೆಳಿಗ್ಗೆ 10.30ರಿಂದ ಸಂಜೆ 6 ಗಂಟೆವರೆಗೆ ಸಾರ್ವಜನಿಕರಿಗೆ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ.



ಕಲಾಕೃತಿಗಳನ್ನು ಕಲಾಸಕ್ತರು ಕಣ್ತುಂಬಿಕೊಂಡರು ಪ್ರಜಾವಾಣಿ ಚಿತ್ರ

'ರಸಗೊಬ್ಬರ: ರೈತರ ಸುಲಿಗೆ ತಡೆಯಿರಿ'

ಬೆಂಗಳೂರು: ರಾಜ್ಯದಾದ್ಯಂತ ರಸಗೊಬ್ಬರ ಪೂರೈಕೆಯಲ್ಲಿ ನಡೆಯುತ್ತಿರುವ ಅಕ್ರಮಗಳು ಹಾಗೂ ರೈತರ ಸುಲಿಗೆ ಮಾಡುವುದನ್ನು ತಡೆಯಬೇಕು ಎಂದು ಕೆಆರ್‌ಎಸ್ ಪಕ್ಷ ಆಗ್ರಹಿಸಿದೆ.

ಪಕ್ಷದ ಗೌರವಾಧ್ಯಕ್ಷ ರವಿ ಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ ಕಾರ್ಯಕರ್ತರು ಕೃಷಿ ಆಯುಕ್ತರನ್ನು ಭೇಟಿ ಮಾಡಿ ಈ ಬಗ್ಗೆ ಮನವಿ ಸಲ್ಲಿಸಿದರು.

ಎನ್‌ಬಿಎಸ್ ನಿಯಮಾವಳಿಗಳ ಪ್ರಕಾರ ರಸಗೊಬ್ಬರ ಕಂಪನಿಗಳು ಡೀಲರ್‌ಗಳಿಗೆ ಕಡ್ಡಾಯವಾಗಿ 'ಡೋರ್ ಡೆಲಿವರಿ' ವ್ಯವಸ್ಥೆ ಕಲ್ಪಿಸಬೇಕು. ಸಬ್ಸಿಡಿಯಲ್ಲಿ ನೀಡುವ ರಸಗೊಬ್ಬರದ ಜೊತೆಗೆ 'ಲಿಂಕ್ ಪ್ರಾಡಕ್ಟ್'ಗಳನ್ನು ಬಲವಂತವಾಗಿ ಮಾರಾಟ ಮಾಡುವ ಪದ್ಧತಿಯನ್ನು ತಕ್ಷಣವೇ ನಿಲ್ಲಿಸಬೇಕು. ಎಂದು ಒತ್ತಾಯಿಸಿದರು.

ಪಕ್ಷದ ಕಾರ್ಯಾಧ್ಯಕ್ಷ ರಘು ಜಾಣಗೆರೆ, ಪ್ರಧಾನ ಕಾರ್ಯದರ್ಶಿ ರಘುಪತಿ ಭಟ್ ಉಪಸ್ಥಿತರಿದ್ದರು.

ವಿನ್ಯಾಸ ಬದಲಿಸುವುದು ಯಾರೂ ಒಪ್ಪದ ವಿಚಾರ: ಸುರೇಶ್ ಕುಮಾರ್

'ಕುಮಾರ ಕೃಪಾ ಒಡೆಯಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಮಾರ ಕೃಪಾಕ್ಕೆ ಅದರದೇ ಆದ ಇತಿಹಾಸವಿದೆ. ಪೂರ್ವ ದಿಕ್ಕಿಗೆ ಬಾಗಿಲಿದೆ ಎಂಬ ಕಾರಣಕ್ಕೆ ಅದನ್ನು ಆಯ್ಕೆ ಮಾಡಿಕೊಳ್ಳುವುದು, ಬೇಕಾದಂತೆ ಒಡೆಯುವುದು, ವಿನ್ಯಾಸ ಬದಲಿಸುವುದು ಯಾರೂ ಒಪ್ಪದ ಮತ್ತು ಸಹಿಸದ ವಿಚಾರ' ಎಂದು ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಹೇಳಿದ್ದಾರೆ.



ಎಸ್.ಸುರೇಶ್ ಕುಮಾರ್

'ಪ್ರಜಾವಾಣಿ' ವರದಿ ಉಲ್ಲೇಖಿಸಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, ಮುಖ್ಯಮಂತ್ರಿಗೆ ಕಾಯಂ ಗೃಹ ಕಚೇರಿ 'ಕೃಷ್ಣಾ' ಇರುವಂತೆ, ಯಾವುದಾದರೂ ಸರ್ಕಾರಿ ಬಂಗಲೆಯನ್ನು ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಎಂದು ಘೋಷಿಸಿಬಿಡಿ. ಪ್ರತಿ ಸಲ ಹೊಸ ಮುಖ್ಯಮಂತ್ರಿ ಬಂದಾಗ, ಅವರ ನಿವಾಸಕ್ಕೆ ಅನಗತ್ಯವಾಗಿ ವೆಚ್ಚ ಮಾಡುವುದು ಬೇಡ' ಎಂದು ಹೇಳಿದ್ದಾರೆ.

'ಕುಮಾರ ಕೃಪಾವನ್ನು ಮುಖ್ಯಮಂತ್ರಿಗಳ ಕಚೇರಿಯನ್ನಾಗಿ ಮಾಡುವುದು ನಿಜಕ್ಕೂ ಬ್ರ್ಯಾಂಡ್ ಬೆಂಗಳೂರಿಗೆ ಅಪಚಾರ' ಎಂದು ಸುರೇಶ್ ಕುಮಾರ್ ಟೀಕಿಸಿದ್ದಾರೆ.

> **ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 160 ವರ್ಷಗಳ ಪಾರಂಪರಿಕ ಕಟ್ಟಡವನ್ನು ಕಚೇರಿಗಾಗಿ ಬದಲಾವಣೆ ಮಾಡಲು ಮುಂದಾಗಿದ್ದಾರೆ. ಮುಂದೆ ವಿಧಾನಸೌಧವನ್ನೂ ಕೆಡವಬಹುದೇನೋ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

'ಕುಮಾರಕೃಪಾ ಉಳಿಸೋದು ನಿಮ್ಮ ಕೈಯಲ್ಲಿದೆ'

'ಕುಮಾರ ಕೃಪಾ ಅತಿಥಿಗೃಹ ಉಳಿಸುವುದು ನಿಮ್ಮ ಕೈಯಲ್ಲಿ ಇದೆ. ಈಗ ನೀವು ವಾಸ್ತವ್ಯ ಹೂಡಿರುವ 'ಕಾವೇರಿ'ಯನ್ನು ಬಿಟ್ಟು ಈ ಹಿಂದೆ ತಾವು ವಾಸವಿದ್ದ ಗಾಂಧಿ ಭವನದ ರಸ್ತೆಯಲ್ಲಿರುವ ಸರ್ಕಾರಿ ನಿವಾಸಕ್ಕೆ ಹೋದರೆ, ಈಗ ಅಲ್ಲಿ ವಾಸವಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ 'ಕಾವೇರಿ'ಗೆ ಬರಬಹುದು' ಎಂದು ಬಿಜೆಪಿ ವಕ್ತಾರ ಪ್ರಕಾಶ್ ಶೇಷರಾಘವಾಚಾರ್ ಅವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

'ನೀವು ವಾಸ್ತವ್ಯವನ್ನು ಬದಲಿಸುವುದರಿಂದ ಅನೇಕ ಸಮಸ್ಯೆಗಳು ಬಗೆಹರಿಯುತ್ತವೆ ಹಾಗೂ ಕುಮಾರ ಕೃಪಾ ಅತಿಥಿ ಗೃಹದಲ್ಲಿ ಬದಲಾವಣೆ ಮಾಡುವ ವೆಚ್ಚವೂ ಉಳಿಯುತ್ತದೆ' ಎಂದು ಹೇಳಿದ್ದಾರೆ.



ಪ್ರಕಾಶ್ ಶೇಷ ರಾಘವಾಚಾರ್

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-86/849/2026–27 (E-236754) ದಿನಾಂಕ: 12.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಎಂ. ಪೂರ್ಣಿಮ ಮತ್ತು ಇತರರು	ಬೆಂಗಳೂರು ಪೂರ್ವ	ಬಿದರಹಳ್ಳಿ	ಕಾಡು ಸೊಣ್ಣಪ್ಪನಹಳ್ಳಿ	46/11	0–08.08	ವ್ಯವಸಾಯ	ವಾಣಿಜ್ಯ
2					46/12	0–06		
3					47/3	1–05.02		

ಷರಾ: ಈ ಜಮೀನುಗಳಲ್ಲಿ ವಾಣಿಜ್ಯ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ವಾಣಿಜ್ಯ ಸೇವೆ ಲಭ್ಯವಾಗುತ್ತದೆ. ವಾಣಿಜ್ಯ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ವಾಣಿಜ್ಯ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ಅರ್ಜಿದಾರರು ತಿಳಿಸುತ್ತಾ, 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ಉಪಯೋಗಕ್ಕೆ" ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ. ಸಹಾಯವಾಣಿ/ವಾಟ್ಸ್‌ಪ್: 9483166622 (24x7).

@BDAOfficialGok

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ದಕ್ಷಿಣದಲ್ಲಿ ಆರು ಟೋಯಿಂಗ್ ವಾಹನ

10 ಜಲಾವೃತ ಪ್ರದೇಶಗಳ ಮೇಲೆ ನಿಗಾಕ್ಕೆ ಆಯುಕ್ತರ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನಗಳ ಅಡ್ಡಾದಿಡ್ಡಿ ನಿಲುಗಡೆಯಿಂದ ಸಂಚಾರಕ್ಕೆ ತೊಂದರೆ ಆಗುವುದನ್ನು ತಡೆಯಲು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಆರು ಟೋಯಿಂಗ್ ವಾಹನಗಳನ್ನು ಸಂಚಾರ ವಿಭಾಗದ ಪೊಲೀಸರಿಗೆ ನೀಡಲಾಗಿದೆ ಎಂದು ಆಯುಕ್ತ ಕೆ.ಎನ್.ರಮೇಶ್ ತಿಳಿಸಿದರು.

ಸಂಚಾರ ವಿಭಾಗದ ಪೊಲೀಸರು ಹಾಗೂ ಪಾಲಿಕೆ ಅಧಿಕಾರಿಗಳ ಸಭೆಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಅನಧಿಕೃತವಾಗಿ ನಿಲುಗಡೆ ಮಾಡಿರುವ ವಾಹನಗಳನ್ನು ಟೋಯಿಂಗ್ ಮಾಡಬೇಕು. ಜಯನಗರಕ್ಕೆ ಮೂರು ಹಾಗೂ ಬಿಟಿಎಂ ಲೇಔಟ್, ಬೊಮ್ಮನಹಳ್ಳಿ ಮತ್ತು ಬೆಳ್ಳಂದೂರು ಭಾಗಕ್ಕೆ ಮೂರು ವಾಹನಗಳನ್ನು ನೀಡಲಾಗಿದೆ. ಟೋಯಿಂಗ್ ಮಾಡಿದ ವಾಹನಗಳ ನಿಲುಗಡೆಗಾಗಿ ಮಲ್ಲಸಂದ್ರ ಮೈದಾನ ಹಾಗೂ ಎಜಿಎಸ್ ಲೇಔಟ್ ಮೈದಾನವನ್ನು ಬಳಸಿಕೊಳ್ಳಬೇಕು' ಎಂದು ಸೂಚಿಸಿದರು.

ಹುಳಿಮಾವು ಕೆರೆ ಜಂಕ್ಷನ್, ಸಾಗರ್ ಜಂಕ್ಷನ್‌ನಿಂದ ಸಾಗರ್ ಆಸ್ಪತ್ರೆ, ಎಚ್.ಎಸ್.ಆರ್ ಲೇಔಟ್ 14ನೇ ಮುಖ್ಯರಸ್ತೆ, ಸೋನಿ ವರ್ಲ್ಡ್ ಜಂಕ್ಷನ್, ಹೊರವರ್ತುಲ ರಸ್ತೆ, ಎಚ್.ಎಸ್.ಆರ್ ಲೇಔಟ್ 5ನೇ ಮುಖ್ಯ ರಸ್ತೆ, ಶ್ರೀರಂಗಂ ಜಂಕ್ಷನ್, ಬೆಳ್ಳಂದೂರು - ಇಬ್ಬಲೂರು ಜಂಕ್ಷನ್, ವಿಪ್ರೊ ಜಂಕ್ಷನ್ - ಸರ್ಜಾಪುರ ರಸ್ತೆ, ರೂಪೇನ ಅಗ್ರಹಾರ, ಮಡಿವಾಳ ಅಯ್ಯಪ್ಪ ಜಂಕ್ಷನ್‌ಗಳಲ್ಲಿ ಮಳೆ ನೀರು ನಿಂತು ಸಮಸ್ಯೆಯಾಗುತ್ತಿರುವ ಬಗ್ಗೆ ಸಂಚಾರ ಪೊಲೀಸರು ವರದಿ ನೀಡಿದ್ದಾರೆ. ಈ ಬಗ್ಗೆ ಪಾಲಿಕೆ ಎಂಜಿನಿಯರ್‌ಗಳು ಗಮನಹರಿಸಿ, ಕ್ರಮ ಕೈಗೊಳ್ಳಬೇಕು ಎಂದರು.

ಬನ್ನೇರುಘಟ್ಟ ಮುಖ್ಯರಸ್ತೆಯ ನೈಸ್ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ಮೈಸೂರು ರಸ್ತೆಯ ನೈಸ್ ಜಂಕ್ಷನ್ ಮಾದರಿಯಲ್ಲಿ ಬನ್ನೇರುಘಟ್ಟ ಮುಖ್ಯರಸ್ತೆಯ ನೈಸ್ ಜಂಕ್ಷನ್‌ನಲ್ಲಿ ಲೂಪ್ ವ್ಯವಸ್ಥೆ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಪ್ರವಾಹ ಪರಿಸ್ಥಿತಿ: ಸೂಚನೆ



ಮಳೆಗಾಲದಲ್ಲಿ ಪ್ರವಾಹ ಭೀತಿ ಎದುರಿಸುತ್ತಿರುವ ಅರೆಕೆರೆ ಕೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ 'ಪ್ರವಾಹ ಪರಿಸ್ಥಿತಿ' ಉದ್ಭವಿಸದಂತೆ ಎಚ್ಚರಿಕೆ ವಹಿಸಲು ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ (ಎಫ್‌ಇಸಿಸಿ) ವಿಭಾಗದ ವಿಶೇಷ ಆಯುಕ್ತೆ ಸುಷಮಾ ಗೋಡಬೋಲೆ ಅವರು ಅಧಿಕಾರಿಗಳಿಗೆ ಸೂಚಿಸಿದರು. ರಸ್ತೆ ಹಾಗೂ ರಾಜಕಾಲುವೆ ಕಾಮಗಾರಿಗಳಿಗೆ ಅಡ್ಡಿಯಾಗಿರುವ ಆಪ್ಟಿಕಲ್ ಫೈಬರ್ ಕೇಬಲ್ ಮತ್ತು ಬೆಸ್ಕಾಂನ ವಿದ್ಯುತ್ ತಂತಿಗಳನ್ನು ತಕ್ಷಣವೇ ಬೇರೆಡೆಗೆ ಸ್ಥಳಾಂತರಿಸಬೇಕು ಎಂದರು.

ಹುಳಿಮಾವು ಕೆರೆಗೆ ಕೊಳಚೆ ನೀರು ಸೇರುತ್ತಿರುವ ಕುರಿತು ದೂರು ನೀಡಿದ ಸಾರ್ವಜನಿಕರು, 2022ರಿಂದ ನಡೆಯುತ್ತಿರುವ ಕೆರೆ ಅಭಿವೃದ್ಧಿ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ ಎಂದು ವಿಶೇಷ ಆಯುಕ್ತರ ಗಮನಕ್ಕೆ ತಂದರು.

'ಜಲಮಂಡಳಿಯವರು ಕೊಳಚೆ ನೀರು ಶುದ್ಧೀಕರಣ ಘಟಕ ಕಾಮಗಾರಿಯನ್ನು ಚುರುಕುಗೊಳಿಸಿ, ಯಾವುದೇ ಕಾರಣಕ್ಕೂ ಕೆರೆಗೆ ಕೊಳಚೆ ನೀರು ಸೇರದಂತೆ ತಡೆ ನಿರ್ಮಿಸಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.



ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ಶುಕ್ರವಾರ ನಡೆದ ಜಾಥಾದಲ್ಲಿ ಎಚ್.ಎನ್. ಗೋಪಾಲಕೃಷ್ಣ, ಸಲ್ಮಾ ಕೆ. ಫಾಹಿಮ್, ಮಿಚಿಕೊ ಮಿಯಾಮೊಟೊ, ಟಿ.ಎಂ. ಶಾಹಿದ್, ವಿದ್ಯಾರ್ಥಿಗಳು ಭಾಗವಹಿಸಿದ್ದರು

ಬಾಲಕಾರ್ಮಿಕ ಪದ್ಧತಿ: ಜಾಗೃತಿ ಜಾಥಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ನಗರದಲ್ಲಿ ಶುಕ್ರವಾರ ಜಾಥಾ ನಡೆಯಿತು.

ಕಾರ್ಮಿಕ ಇಲಾಖೆ, ಕರ್ನಾಟಕ ರಾಜ್ಯ ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನಾ ಯೋಜನಾ ಸೊಸೈಟಿ ಆಯೋಜಿಸಿದ್ದ ಜಾಥಾದಲ್ಲಿ ಸಾವಿರಾರು ಮಂದಿ ಭಾಗವಹಿಸಿದರು.

ಕಾರ್ಮಿಕ ಆಯುಕ್ತ ಎಚ್. ಎನ್. ಗೋಪಾಲಕೃಷ್ಣ, ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಸಲ್ಮಾ ಕೆ.ಫಾಹಿಮ್, ನವದೆಹಲಿಯಲ್ಲಿರುವ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ನಿರ್ದೇಶಕಿ ಮಿಚಿಕೊ ಮಿಯಾಮೊಟೊ, ಕನಿಷ್ಠ ವೇತನ ಸಲಹಾ ಮಂಡಳಿ ಅಧ್ಯಕ್ಷ ಟಿ.ಎಂ.ಶಾಹಿದ್ ಅವರು ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಜಾಥಾಕ್ಕೆ ಚಾಲನೆ ನೀಡಿದರು.

ಬಾಲ ಕಾರ್ಮಿಕ ಮುಕ್ತ ಸಮಾಜ ನಿರ್ಮಾಣ ಮಾಡಲು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಆ ನಂತರ ಜಾಥಾ ಮೂಲಕ ಜಾಗೃತಿ ಮೂಡಿಸಲಾಯಿತು. ಕಲಾವಿದರು ಬೀದಿ ನಾಟಕದ ಮೂಲಕ ಅರಿವು ಮೂಡಿಸಿದರು.

ಜಾಗೃತಿ ಮೂಡಿಸುವುದು, ಸಂಕಷ್ಟದಲ್ಲಿರುವ ಮಕ್ಕಳನ್ನು ರಕ್ಷಿಸುವ ಉದ್ದೇಶದಿಂದ ಹಮ್ಮಿಕೊಂಡಿದ್ದ ಜಾಥಾದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು, ಸರ್ಕಾರೇತರ ಸಂಸ್ಥೆಗಳ ಪದಾಧಿಕಾರಿಗಳು, ಸರ್ಕಾರಿ ಅಧಿಕಾರಿಗಳು, ನೌಕರರು ಪಾಲ್ಗೊಂಡರು.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂರವಾಣಿ/ಫ್ಯಾಕ್ಸ್ : 080–2793 4470 / 2793 5412 ಇ–ಮೇಲ್: hosakote.pa@gmail.com URL : www.hosakote.tpa.gov.in

ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ/12/2026–27 ದಿನಾಂಕ: 12.06.2026

ಸಾರ್ವಜನಿಕ ಪ್ರಕಟಣೆ

ವಿಷಯ : ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬೊಮ್ಮೇನಹಳ್ಳಿ ಗ್ರಾಮದ ಸ.ನಂ. 161 ರಲ್ಲಿನ 02 ಎಕರೆ 09 ಗುಂಟೆ ಮತ್ತು ಸ.ನಂ. 180 ರಲ್ಲಿನ 01 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಶೈಕ್ಷಣಿಕ ಉದ್ದೇಶದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ : ಅರ್ಜಿದಾರರಾದ ಶ್ರೀಮತಿ ರೀನಾ ಶಶಿಧರ್ ಮತ್ತು ಶ್ರೀಮತಿ ರಕ್ಷ ಕೋಥ ನಿತಿನ್ ಇವರುಗಳ ಮನವಿ ಪತ್ರ ದಿನಾಂಕ: 11.05.2026.

***

ವಿಷಯಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಜಮೀನುಗಳು ಕೈಗಾರಿಕಾ ಉದ್ದೇಶಕ್ಕೆ ಭೂ ಪರಿವರ್ತನೆಯಾದ ಹಾಗೂ ಅನುಮೋದಿತ ಮಹಾಯೋಜನೆಯಂತೆ ವಸತಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪಡೆಯಲಾಗಿರುತ್ತದೆ. ಸದರಿ ಜಮೀನುಗಳನ್ನು ಅರ್ಜಿದಾರರು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾದ ಜಮೀನುಗಳನ್ನು ಶೈಕ್ಷಣಿಕ ಉದ್ದೇಶದ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಬೊಮ್ಮೇನಹಳ್ಳಿ ಗ್ರಾಮದ ಸ.ನಂ. ಗಳ ವಿವರ

ಕ್ರ.ಸಂ.	ಮಾಲೀಕರುಗಳ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ
1.	ಶ್ರೀಮತಿ ರೀನಾ ಶಶಿಧರ್	161	02–09
2.	ಶ್ರೀಮತಿ ರಕ್ಷ ಕೋಥಾ ನಿಥಿನ್	180	01–15

ಹಾಗಾಗಿ, ಪ್ರಸ್ತಾಪಿತ ಜಮೀನುಗಳಲ್ಲಿ ಶೈಕ್ಷಣಿಕ ಉದ್ದೇಶದ ಅಭಿವೃದ್ಧಿ ಯೋಜನಾ ನಕ್ಷೆ ಹಾಗೂ ಕಟ್ಟಡ ನಕ್ಷೆಗಳಿಗೆ ಅನುಮೋದನೆ ನೀಡಿದಲ್ಲಿ, ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ/ಇತರರಿಗೆ/ಪರಿಸರಕ್ಕೆ ಉಂಟಾಗಬಹುದಾದ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

ವಾ.ಸಾ.ಸಂ.ಇ/ವಾಪ್ರ/1146/ಆಕಾರ್/2026–27

ನಗರದಲ್ಲಿ ಇಂದು

ಹಾಸ್ಯ ಕಾರ್ಯಕ್ರಮ: ಭಾಗವಹಿಸುವವರು: ಅಣಕು ರಾಮನಾಥ, ವೈ.ವಿ. ಗುಂಡೂರಾವ್, ಶ್ರೀಪತಿ ಮಂಜನಬೈಲ್, ಶ್ರೀವಿದ್ಯಾ, ಸನ್ಮಾನಿತರು: ಎ.ಆರ್. ಗೋವಿಂದಸ್ವಾಮಿ, ಅತಿಥಿ: ಬಿ.ಪಿ.ಕುಮಾರಸ್ವಾಮಿ, ಅಧ್ಯಕ್ಷತೆ: ಎಸ್.ಗಿರೀಶ್, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ವಿದ್ಯುತ್ ಮಂಡಳಿ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

ವಾರ್ಷಿಕೋತ್ಸವ, ವಿಶ್ವ ಪರಿಸರ ದಿನಾಚರಣೆ ಹಾಗೂ ಪರಿಸರ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಶಿವಾನಂದ ತಗಡೂರು, ಅಧ್ಯಕ್ಷತೆ: ಸೋಮಶೇಖರ ಗಾಂಧಿ, ಅತಿಥಿಗಳು: ಗಣೇಶ್ ರಾವ್ ಕೇಸರ್ಕರ್, ಎಸ್. ಮನೋಜ್ ಕುಮಾರ್, ಎಂ.ಎಸ್. ರಾಮಕೃಷ್ಣಪ್ಪ, ಎಚ್.ಆರ್. ಮಂಜುನಾಥ ರೆಡ್ಡಿ, ಆಯೋಜನೆ: ಪರಿಸರ ಸ್ನೇಹಿ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಳಿಗ್ಗೆ 10

ಮಾಯಾ ಕಾಮತ್ ಸ್ಮರಣಾರ್ಥ ಅಂತರರಾಷ್ಟ್ರೀಯ ವ್ಯಂಗ್ಯಚಿತ್ರ ಸ್ಪರ್ಧೆಯ ಬಹುಮಾನ ವಿತರಣೆ ಹಾಗೂ ಬಾರ್ಟನ್ ಪ್ರಶಸ್ತಿ ವಿತರಣೆ ಸಮಾರಂಭ: ಅತಿಥಿ: ಬಾಲನ್ ನಂಬಿಯಾರ್, ಸಿ.ಎಸ್. ಲಕ್ಷ್ಮಿ, ಸಂದೀಪ್ ಅಧ್ವರ್ಯು, ಅಮರನಾಥ್ ಕಾಮತ್, ಭರತ್ ಮೆಹ್ತಾ, ಪ್ರಶಸ್ತಿ ಪುರಸ್ಕೃತರು: ಸುಭಾನಿ, ಆಯೋಜನೆ: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಸ್ಥಳ: ದಿ ಪ್ರೆಸಿಡೆಂಟ್ ಹೋಟೆಲ್, ರೈಲ್ವೆ ಸಮಾನಾಂತರ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಳಿಗ್ಗೆ 10.30



'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನ
ರಚನೆ: ಎಚ್. ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ತಂಡ: ವಿಶ್ವಪಥ ಕಲಾ ಸಂಗಮ ಹವ್ಯಾಸಿ ರಂಗತಂಡ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 7

'ಸರಗು' ನಾಟಕ ಪ್ರದರ್ಶನ: ರಚನೆ: ಮಾರುತೇಶ ಕಸಾಪುರ, ನಿರ್ದೇಶನ: ಸವಿತಾ ಬೈರಪ್ಪ, ತಂಡ: ಆಯಾಮ, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾಮಿಂಗ್ ಆರ್ಟ್ಸ್, ಕೋಣನಕುಂಟೆ, ಬೆಳಿಗ್ಗೆ 11 ಮತ್ತು ಸಂಜೆ 5

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ 'ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು' ವಿಶೇಷ ಕಲಾ ಪ್ರದರ್ಶನ: ಆಯೋಜನೆ: 'ಸೀಗಲ್' ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಸಂಶೋಧನೆ, ಕೈಗಾರಿಕೆ, ನವೋದ್ಯಮ ಮತ್ತು ಉದ್ಯಮಶೀಲತೆ ಕುರಿತ ಸಮಾವೇಶ: ಉದ್ಘಾಟನೆ: ಜಿತೇಂದ್ರ ಸಿಂಗ್, ಆಯೋಜನೆ: ಸಿಎಸ್‌ಐಆರ್–ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರೀಸ್, ಸ್ಥಳ: ವಿಎಂ ಘಾಟಗೆ ಕನ್ವೆನ್ಷನ್ ಸೆಂಟರ್, ಎಚ್‌ಎಎಲ್ ವಿಮಾನ ನಿಲ್ದಾಣ ರಸ್ತೆ, ಮಧ್ಯಾಹ್ನ 2.15

ಯುವ ಸಂಗೀತೋತ್ಸವ: ವೀಣಾ ವಾದನ: ಜ್ಯೋತ್ಸ್ನಾ ಹೆಬ್ಬಾರ್, ಮೃದಂಗ: ಸುಧನ್ವ ಆರ್., ಖಂಜೀರ: ಸಮರ್ಥ ರಘುನಂದನ್, ದ್ವಿತೀಯ ಸಂಗೀತ ಕಛೇರಿ: ಗಾಯನ: ದತ್ತಪ್ರಸಾದ್ ಅವಧೂತ್, ಪಿಟೀಲು: ಪ್ರಣವಿ ಗುರುಪ್ರಸನ್ನ, ಮೃದಂಗ: ಅಜಯ್ ಆದಿತ್ಯ, ಖಂಜೀರ: ಕಾರ್ತಿಕ್ ಪ್ರಣವ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ. ಆರ್.ರಸ್ತೆ, ಸಂಜೆ 5.15

26ನೇ ವರ್ಷದ ಪ್ರವಚನ ವಾಹಿನಿ: ಶಾಸ್ತ್ರೀಯ ಸಂಗೀತ: ದೀಪಾ ಶ್ರೀನಿವಾಸ್, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

'ಸಿಲಪ್ಪತಿಕಾರಂ' ನಾಟಕ ಪ್ರದರ್ಶನ, ತಂಡ: ತ್ರಿಪುಡಿ ಆರ್ಟ್ ಸೆಂಟರ್, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಮಧ್ಯಾಹ್ನ 3.30 ಹಾಗೂ ಸಂಜೆ 7.30

ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ ಪ್ರದಾನ: ಎಸ್.ಜಿ. ಸಿದ್ಧರಾಮಯ್ಯ, ಅತಿಥಿ: ವೂಡೇ ಪಿ. ಕೃಷ್ಣ, ಎಂ. ತಿಮ್ಮಯ್ಯ, ಅಧ್ಯಕ್ಷತೆ: ದ್ವಾರನಕುಂಟೆ ಪಾತಣ್ಣ, ಉಪಸ್ಥಿತಿ: ಆರ್. ಸುನಂದಮ್ಮ, ಎಚ್.ಆರ್. ಸುಜಾತಾ, ಆಯೋಜನೆ: ಸ್ವಾಭಿಮಾನಿ ಕರ್ನಾಟಕ ವೇದಿಕೆ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಸಂಜೆ 5

ಊಂಜಲ್ ಸಂಗೀತೋತ್ಸವ: ಗಾಯನ: ವಾರುಣಿ ಪಿ. ರಾವ್, ಪಿಟೀಲು: ಎಸ್. ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16 ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

'ಸಿಂಡ್ರೆಲಾ' ನಾಟಕ ಪ್ರದರ್ಶನ: ತಂಡ: ಬೆಂಗಳೂರು ಪ್ರಭಾತ ಕಲಾವಿದರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಸಂಜೆ 7

ಶಸ್ತ್ರಚಿಕಿತ್ಸಕರ ದಿನ: ಅತಿಥಿ: ಜಿ. ಬಸವರಾಜ, ಸನ್ಮಾನಿತರು: ಡಾ.ಜಿ.ಕೆ. ವೆಂಕಟೇಶ್, ಡಾ.ಡಿ. ಆರ್ ಶೇಖರ್, ಉಪನ್ಯಾಸ: ಡಾ.ಪಿ. ರಘುರಾಮ್, ಆಯೋಜನೆ: ಸರ್ಜಿಕಲ್ ಸೊಸೈಟಿ ಆಫ್ ಬೆಂಗಳೂರು, ಸ್ಥಳ: ಕ್ಯಾಪಿಟಲ್ ಹೋಟೆಲ್, ಸಂಜೆ 7

ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಎನಿವರ ಬ್ಯೂಟಿ ಸೀಕ್ರೆಟ್?



ಆರಾಧನಾ ಭಟ್, ಚಿತ್ರನಟಿ

ನನ್ನ ಚರ್ಮ ಮತ್ತು ಕೂದಲು ನಳನಳಿಸುತ್ತಿದ್ದರೆ ಅದಕ್ಕೆ ನನ್ನಮ್ಮ ಮತ್ತು ಅಪ್ಪನ ವಂಶವಾಹಿ ಕಾರಣ. ಬಾಹ್ಯ ಆರೈಕೆಗಿಂತಲೂ ಇಂಥ ಸಂಗತಿ ಬಹಳ ಮುಖ್ಯವಾಗುತ್ತದೆ. ಚಿಕ್ಕವಯಸ್ಸಿನಿಂದಲೂ ಹಾಲು, ತುಪ್ಪ, ಮೊಸರನ್ನು ಹೆಚ್ಚು ಸೇವನೆ ಮಾಡಿದ್ದರಿಂದಲೂ ನನ್ನ ಚರ್ಮ ಹೊಳಪಿನಿಂದ ಕೂಡಿದೆ. ಇನ್ನು ಒತ್ತಡಮುಕ್ತವಾಗಿ ಇರುವುದು ಬಹಳ ಮುಖ್ಯ. ಮಾನಸಿಕವಾಗಿ ಒತ್ತಡದಿಂದ ಇದ್ದರೆ ಚರ್ಮ ಬೇಗನೆ ಕಳೆಗುಂದುತ್ತದೆ, ಕೂದಲಿನ ಅಂದ ಕೆಡುತ್ತದೆ.

ನೀರನ್ನು ಹೆಚ್ಚಾಗಿ ಕುಡಿಯುತ್ತೇನೆ. ಚರ್ಮದ ಆರೋಗ್ಯ ಉತ್ತಮವಾಗಿರಲು ಗುಣಮಟ್ಟದ ಸನ್‌ಸ್ಕ್ರೀನ್, ಮಾಯಿಶ್ಚರೈಸರ್ ಮುಖ್ಯ. ಹಾಗಾಗಿ, ಒಳ್ಳೆಯ ಉತ್ಪನ್ನವನ್ನು ಆಯ್ಕೆ ಮಾಡಲು ಪ್ರಯೋಗಗಳನ್ನು ಮಾಡುತ್ತಿರುತ್ತೇನೆ. ಚರ್ಮ ಮತ್ತು ಕೂದಲಿನ ಆರೈಕೆ ಸರಿಯಾಗಿ ಮಾಡಿಕೊಂಡರೆ ಮುಂದೆ ಇದಕ್ಕಾಗಿ ದುಬಾರಿ ಬೆಲೆ ತೆರಬೇಕಾಗಿ ಬರದು. ಕೂದಲಿನ ಬುಡದಲ್ಲಿ ರಕ್ತದ ಹರಿವು ಸರಾಗವಾಗಿದ್ದರೆ ಕೂದಲಿನ ಬೆಳವಣಿಗೆಗೆ ಸಹಾಯವಾಗುತ್ತದೆ. ಸಲ್ಫೇಟ್ ಹಾಗೂ ಇತರ ರಾಸಾಯನಿಕಮುಕ್ತ ಶ್ಯಾಂಪೂಗಳನ್ನು ಬಳಸುತ್ತೇನೆ. ಈರುಳ್ಳಿ ರಸ, ಕರಿಬೇವು ಹಾಕಿದ ಕೊಬ್ಬರಿಎಣ್ಣೆಯನ್ನು ಆಗಾಗ ಹಚ್ಚುತ್ತೇನೆ. ಅಗಸೆ ಬೀಜವನ್ನು ಕುದಿಸಿ ಬಂದ ಲೋಳೆ, ಬೆಂಡೆಕಾಯಿ ಕುದಿಸಿ ಬಂದ ಲೋಳೆ ಅಥವಾ ದಾಸವಾಳದ ಲೋಳೆಯನ್ನು ಕೂದಲಿನ ಬುಡದಿಂದ ತುದಿಯವರೆಗೆ ಹಚ್ಚುತ್ತೇನೆ.

ಮುಖದ ಚರ್ಮದ ಹೊಳಪಿಗೆ ಹಾಲಿನ ಕೆನೆಗೆ ಅರಸಿನವನ್ನು ಸೇರಿಸಿ ಹಚ್ಚಿಕೊಳ್ಳುತ್ತೇನೆ. ಇದು ಬಿಟ್ಟರೆ ಮೊಸರು, ಮೂರು ಹನಿ ಜೇನಿಗೆ ಬಾಳೆಹಣ್ಣನ್ನು ನುರಿದು ಮಿಶ್ರ ಮಾಡುತ್ತೇನೆ. ಈ ಮಿಶ್ರಣವನ್ನು ಕತ್ತರಿಸಿದ ಕಿತ್ತಳೆ ಹಣ್ಣಿನ ಮೇಲೆ ಹಾಕಿ ಮುಖಕ್ಕೆ ಸ್ಕ್ರಬ್ ಮಾಡುತ್ತೇನೆ. ಇದು ಚರ್ಮವನ್ನು ತೇವಾಂಶದಿಂದ ಇಡಲು ನೆರವಾಗುತ್ತದೆ. ಅತಿಯಾದ ಕ್ರೀಂ ಹಾಗೂ ಶ್ಯಾಂಪೂಗಳ ಬಳಕೆಯಿಂದ ಚರ್ಮ ಮತ್ತು ಕೂದಲಿನ ಆರೋಗ್ಯಕ್ಕೆ ಹಾನಿಯಾಗುತ್ತದೆ. ಹಾಗಾಗಿ, ಎಚ್ಚರಿಕೆಯಿಂದ ಬಳಸುವುದು ಒಳಿತು.


ನಾನು ಆಹಾರಪ್ರಿಯೆ. ಚೆನ್ನಾಗಿ ಉಂಡು ತಿಂದು ಇರುತ್ತೇನೆ. ನಿತ್ಯ ಜಿಮ್‌ಗೆ ಹೋಗಲು ಆಗುವುದಿಲ್ಲ. ಹಾಗಾಗಿ, ದಿನಕ್ಕೆ 10 ಸಾವಿರ ಹೆಜ್ಜೆಯಷ್ಟು ವಾಕ್ ಮಾಡುತ್ತೇನೆ. ದೇಹದ ಆಕಾರ ಉತ್ತಮವಾಗಿರಲು ಹೆಚ್ಚಿನ ಪೌಷ್ಟಿಕಾಂಶ ಇರುವ ಆಹಾರಗಳನ್ನು ಸೇವಿಸಬೇಕು. ಹಸಿರು ತರಕಾರಿ, ನಾರಿನಾಂಶ ಇರುವ ತರಕಾರಿಗಳನ್ನು ಹೆಚ್ಚು ಬಳಸುತ್ತೇನೆ. ಮೊದಲಿನಿಂದಲೂ ನನಗೆ ಬಗೆಬಗೆ ತರಕಾರಿಗಳೆಂದರೆ ಇಷ್ಟ. ಏನೇ ತಿಂದರೂ ಅದನ್ನು ಕರಗಿಸುವ ವಯಸ್ಸಿದು. ಹಾಗಾಗಿ, ತಿನ್ನುವುದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ.

ನನ್ನ ಪ್ರಕಾರ, ಸೌಂದರ್ಯವೆಂದರೆ 'ನಾವು ನಾವಾಗಿರುವುದು'. ಎಲ್ಲರೂ ಒಂದೊಂದು ದೃಷ್ಟಿಯಲ್ಲಿ ಚೆನ್ನಾಗಿಯೇ ಕಾಣುತ್ತಾರೆ. ನಮ್ಮಲ್ಲಿ ಏನಿದೆಯೋ ಅದಕ್ಕೆ ಮಹತ್ವ ನೀಡುತ್ತಾ ಕೃತಜ್ಞತೆ ತೋರಿಸುವುದು ಹಾಗೂ ಆರೋಗ್ಯದಿಂದ ಇರುವುದು ಕೂಡ ಸೌಂದರ್ಯವೇ.

ಫೇಕ್ ಸಂಬಂಧ? ಫ್ಯಾಕ್ಟ್ ಚೆಕ್ ಮಾಡಿ!

ನೀವು ನಕಲಿ ಅಥವಾ ಫೇಕ್ ಸಂಬಂಧದಲ್ಲಿ ಸಿಲುಕಿರಬಹುದೆಂಬ ಅನುಮಾನ ಕಾಡುತ್ತಿದೆಯೇ? ಬನ್ನಿ, ಫ್ಯಾಕ್ಟ್ ಚೆಕ್ ಮಾಡುವುದು ಹೇಗೆ ತಿಳಿದುಕೊಳ್ಳಿ, ಆ ಸಂಬಂಧ ಅಸಲಿಯೋ ನಕಲಿಯೋ ಎಂಬುದನ್ನು ಕಂಡುಕೊಳ್ಳಿ.

- ಅಕ್ಷರದಾಮ್ಲೆ



ಸಾಧಾರಣವಾಗಿ ಜನರಿಗೆ ಸಮಸ್ಯೆಗಳಾಗುವುದು ಅವರ ಸಂಬಂಧಗಳಲ್ಲಿ! ಕಲಹ, ಒಡಕು, ಸಂದಿಗ್ಧ... ಹೀಗೆ ಸಂಬಂಧಗಳಲ್ಲಿ ಹಲವಾರು ಸಮಸ್ಯೆಗಳು ಬರುತ್ತಲೇ ಇರುತ್ತವೆ. ಸಂಬಂಧಗಳನ್ನು ಹೇಗೆ ಬಲಪಡಿಸಬೇಕು, ಹೇಗೆ ಚೆನ್ನಾಗಿ ಇಟ್ಟುಕೊಳ್ಳಬೇಕು ಎಂಬ ಕುರಿತು ಅನಾದಿ ಕಾಲದಿಂದಲೂ ಅನೇಕ ವ್ಯಾಖ್ಯಾನಗಳು ಬಂದಿವೆ. ಮದುವೆಯ ಶಾಸ್ತ್ರದ ಸಂದರ್ಭದಲ್ಲೂ ಹಿರಿಯರು ಮತ್ತು ಅರ್ಚಕರು ಶಾಸ್ತ್ರಾಧಾರಿತವಾದ ಒಂದಿಷ್ಟು ಕಿವಿಮಾತುಗಳನ್ನು ಹೇಳುವುದೂ ಉಂಟು.

ಸಾಮಾನ್ಯವಾಗಿ ಸಂಬಂಧಗಳು ಹುಳಿ ಆದಾಗ, ಎಲ್ಲರೂ ಮೊದಲು ಬೊಟ್ಟು ಮಾಡಿ ತೋರಿಸುವುದು ಏನೆಂದರೆ, 'ಈಗೋ' ಅಥವಾ 'ಅಹಂಭಾವ'ವನ್ನು. ತಾನೇನೂ ಕಡಿಮೆ ಇಲ್ಲ ಎಂಬ ಮನೋಭಾವ ಸಂಗಾತಿಗಳಿಬ್ಬರಿಗೂ ಇದ್ದಾಗ, ಯಾರೂ ಬಗ್ಗಲು ತಯಾರಿರುವುದಿಲ್ಲ. ಆದರೆ ಸಂಬಂಧ ಅಂದಮೇಲೆ, ಕೊಡು- ಕೊಳ್ಳುವಿಕೆ ನಡೆಯಲೇಬೇಕಲ್ಲವೆ? ಈ ಕೊಡು-ಕೊಳ್ಳುವಿಕೆಯ ಹಿಂದೆ ಯಾವುದೇ ರೀತಿಯ ನಿರೀಕ್ಷೆಗಳು ಇರಬಾರದಾದರೂ ಎಷ್ಟೋ ಬಾರಿ ಅಂತಹ ನಿರೀಕ್ಷೆಗಳೇ ಇನ್ನೊಂದಷ್ಟು ಸಮಸ್ಯೆಗಳಿಗೆ ಕಾರಣವಾಗುತ್ತವೆ. ಸಂಬಂಧಗಳನ್ನು ಬಂಧನದಿಂದ ಮುಕ್ತಗೊಳಿಸಿ, ಸಹಬಾಳ್ವೆಯ ಕಡೆಗೆ ತೆಗೆದುಕೊಂಡು ಹೋಗುವುದು ಒಂದು ದೊಡ್ಡ ಪ್ರಕ್ರಿಯೆ. ಅದೇ ಒಂದು ಮಹತ್ತರವಾದ ಕೆಲಸ. ಆದರೆ, ಇವೆಲ್ಲವುಗಳ ಹೊರತಾಗಿ ಸಂಬಂಧಗಳಲ್ಲಿ ಉದ್ಭವವಾಗಿರುವ ಒಂದು ಹೊಸ ಸಮಸ್ಯೆ ಎಂದರೆ, ಫೇಕ್ ಅಥವಾ ನಕಲಿ ಸಂಬಂಧ!

ಒಂದು ಸಂಬಂಧವನ್ನು ಫೇಕ್ ಎಂದು ಗುರುತಿಸುವುದು ಹೇಗೆ? ಉತ್ತರಿಸಲು ಸ್ವಲ್ಪ ಕಷ್ಟವಾದರೂ, ಈಗಿನ ಕಾಲಕ್ಕೆ ಬಹಳ ಸಮಂಜಸವಾದ ಪ್ರಶ್ನೆ ಇದು.

ಸಂಬಂಧಗಳು ಅಂದರೆ ಯಾವ ರೀತಿಯವು ಎಂಬುದನ್ನು ವ್ಯಾಖ್ಯಾನಿಸುವುದು ಮುಖ್ಯ! ಅವು ಪ್ರೀತಿಯ ಸಂಬಂಧಗಳೋ ಸ್ನೇಹ ಸಂಬಂಧಗಳೋ ಅಥವಾ ವ್ಯಾವಹಾರಿಕ ಸಂಬಂಧಗಳೋ... ಹೀಗೆ, ಸಂಬಂಧಗಳಿಗೆ ಹಲವು ಮುಖಗಳಿವೆ.

ಪ್ರೇಮ ಮತ್ತು ಸ್ನೇಹ ಸಂಬಂಧಗಳ ಬಗ್ಗೆ ಮಾತನಾಡುವುದಾದರೆ, ಹಿಂದಿನ ಕಾಲದಂತೆ ಈಗಲೂ, ಕಾಲೇಜಿನ ಸ್ನೇಹಿತರು ಮುಂದೆ ಸ್ನೇಹಿತರಾಗಿ ಅಥವಾ ಪ್ರೇಮಿಗಳಾಗಿ ಸಂಬಂಧಗಳನ್ನು ಮುಂದುವರಿಸುತ್ತಿದ್ದಾರೆ. ಅಕ್ಕಪಕ್ಕದ ಮನೆಯವರ ಮಧ್ಯದಲ್ಲಿ ಪ್ರೇಮ ಸಂಬಂಧ ಅಥವಾ ಉತ್ತಮ ಸ್ನೇಹ ಸಂಬಂಧ ಬೆಳೆಯುವುದಿದೆ. ಜೊತೆಗೆ ಕೆಲಸ ಮಾಡುವ ವ್ಯಕ್ತಿಗಳ ನಡುವೆಯೂ ಉತ್ತಮ ಬಾಂಧವ್ಯ ಮೂಡುತ್ತದೆ.

ಈಗಿನ ಕಾಲದಲ್ಲಂತೂ ಸಂಬಂಧಗಳನ್ನು ಬೆಳೆಸಲು ಹಲವಾರು ಮಾರ್ಗಗಳಿವೆ. ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಸ್ನ್ಯಾಪ್‌ಚ್ಯಾಟ್... ಹೀಗೆ, ಅನೇಕ ವೇದಿಕೆಗಳ ಮೂಲಕ ಪರಿಚಯವಾಗಿ, ಅದು ಸ್ನೇಹಕ್ಕೆ ತಿರುಗಿ, ಇನ್ನೂ ಹೆಚ್ಚಿನ ಗಾಢವಾದ ಸಂಬಂಧವಾಗಿ ಬೆಳೆಯುತ್ತದೆ. ಇನ್ನೊಂದಷ್ಟು ಜನ ಡೇಟಿಂಗ್ ಆ್ಯಪ್‌ಗಳ ಮೂಲಕ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತಾರೆ.

ಮತ್ತೊಂದಷ್ಟು ಜನ ಮ್ಯಾಟ್ರಿಮೋನಿಯಲ್ ಜಾಲತಾಣಗಳ ಮೂಲಕ ಪರಿಚಯವಾಗಿ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತಾರೆ.

ಹೀಗೆ, ಸಂಬಂಧಗಳನ್ನು ಬೆಳೆಸುವುದಕ್ಕೆ ದಾರಿಗಳು ಹೆಚ್ಚಾದ ಹಾಗೆಯೇ, ಅನೇಕರು ಅದನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಮಾತ್ರವಲ್ಲ, ಜೀವನದಲ್ಲಿ ಆಕರ್ಷಣೆಗಳಿಗೆ ಬೇರೆ ಬೇರೆ ರೀತಿಯ ಅವಕಾಶಗಳು ಸಿಕ್ಕಿರುವಾಗ, ಮನಸ್ಸಿನ ಚಂಚಲತೆ ಹೆಚ್ಚಿದೆ. ಮಾತ್ರವಲ್ಲ, ಸಂಬಂಧಗಳಲ್ಲಿ ಇರಬಹುದಾದಂತಹ ಗಟ್ಟಿತನ, ಬಾಂಧವ್ಯ ಕಳೆದು ಹೋಗಿದೆ.

ಯಾವುದೇ ರೀತಿಯ ಸಂಬಂಧ ಇರಲಿ, ಅದು ಫೇಕ್ ಆಗಿರಬಹುದೇ ಎಂಬುದನ್ನು ತಿಳಿದುಕೊಳ್ಳಲು ಒಂದಷ್ಟು ವಿಚಾರಗಳನ್ನು ಗಮನಿಸಿಕೊಳ್ಳಿ:

ಬೇಕು ನಿಷ್ಠೆ ಕಾಯುವ ತಾಳ್ಮೆ

ಸಂಬಂಧವನ್ನು ಒಳ್ಳೆಯ ರೀತಿಯಲ್ಲಿ ಬೆಳೆಸುವುದಕ್ಕೆ ಬಹಳ ಸಮಯ ಬೇಕು. ಮಾತ್ರವಲ್ಲ, ಅದರ ಹಿಂದೆ ನಿಷ್ಠೆ, ಪ್ರಯತ್ನ ಮತ್ತು ಪರಿಶ್ರಮವೂ ಇರಬೇಕು. ಆದರೆ, ಎಷ್ಟೋ ಬಾರಿ ಒಬ್ಬ ವ್ಯಕ್ತಿಯು ಸಂಗಾತಿಯೊಂದಿಗೆ ಮನಸಾರೆ ಸಂಬಂಧವನ್ನು ಬೆಳೆಸಿದಾಗ, ಆ ಸಂಗಾತಿಯು ಸಂಬಂಧದಲ್ಲಿ ಫೇಕ್ ಆಗಿ ಇದ್ದರು ಎಂದು ತಿಳಿದರೆ, ಅದು ಆ ವ್ಯಕ್ತಿಗೆ ಬಹಳ ದೊಡ್ಡ ಆಘಾತವನ್ನೇ ಉಂಟುಮಾಡುತ್ತದೆ.

ಸಂಬಂಧ ಎನ್ನುವುದು 'ಬಂಧ' ಆಗಬೇಕೇ ವಿನಾ 'ಬಂಧನ' ಅಲ್ಲ

1 ಹೇಳುವುದು ಒಂದು, ಮಾಡುವುದು ಇನ್ನೊಂದು: ನಿಮ್ಮ ಬಗ್ಗೆ ಬಹಳ ಕಾಳಜಿ ಇರುವವರಂತೆ ಮಾತನಾಡುತ್ತಾರೆ. ನಿಮ್ಮ ಬಗ್ಗೆ ಒಲವು, ಅಭಿಮಾನ ಮತ್ತು ಗೌರವ ಇರುವವರಂತೆ ನಡೆದುಕೊಳ್ಳುತ್ತಾರೆ. ಆದರೆ, ನಿಜವಾಗಿ ಅಗತ್ಯವಿದ್ದಾಗ, ಪ್ರತಿ ಬಾರಿಯೂ ಏನೋ ಕಾರಣ ಹೇಳಿ ನುಣುಚಿಕೊಳ್ಳುತ್ತಾರೆ. ಆಮೇಲೆ ಎಲ್ಲಾ ಸಮಸ್ಯೆಗಳು ಪರಿಹಾರವಾದವು ಎಂದಾದ ಮೇಲೆ, ಮತ್ತೆ ನಿಮ್ಮ ಬಳಿ ಬಂದು, ಏನೂ ಆಗಿಯೇ ಇಲ್ಲವೇನೋ ಎಂಬಂತೆ ವ್ಯವಹರಿಸುತ್ತಾರೆ.

2 ಜೀವನದ ಬಗ್ಗೆ ಗೋಪ್ಯತೆ: ನಿಮ್ಮ ಜೊತೆಗೆ ಇದ್ದಾಗ ನೀವೇ ಅವರ ಜೀವನದ ಪ್ರಮುಖ ವ್ಯಕ್ತಿ ಎಂಬಂತೆ ನಡೆದುಕೊಳ್ಳುತ್ತಾರೆ. ಆದರೆ ಅವರ ಜೀವನದಲ್ಲಿ ಬೇರೆ ಯಾರಿದ್ದಾರೆ, ಏನು ನಡೆಯುತ್ತಿದೆ ಎಂಬುದನ್ನು ಗೋಪ್ಯವಾಗಿ ಇಡುತ್ತಾರೆ. ಅವರ ಇತರ ಸ್ನೇಹಿತರನ್ನು ಭೇಟಿ ಮಾಡಿಸುವುದಿಲ್ಲ ಅಥವಾ ಅವರ ದೈನಂದಿನ ಆಗುಹೋಗುಗಳ ಬಗ್ಗೆ ಒಂದಷ್ಟು ಹಾರಿಕೆಯ ಮಾತನ್ನಾಡುತ್ತಾರೆ. ಅವರ ಫೋನ್‌ಗೆ ಬರುವ ಕರೆಗಳು ಅಥವಾ ಸಂದೇಶಗಳ ಬಗ್ಗೆ ಬಹಳ ಜಾಗರೂಕರಾಗಿ ಇರುತ್ತಾರೆ. ಎಂದಿಗೂ ನಿಮ್ಮ ಮುಂದೆ ಫೋನ್‌ನಲ್ಲಿ ಮುಕ್ತವಾಗಿ ಮಾತನಾಡುವುದಿಲ್ಲ. ಎಲ್ಲೋ ಆಚೆ ಹೋಗಿ ಮಾತನಾಡುತ್ತಾರೆ. ಇಲ್ಲವಾದರೆ, ಫೋನನ್ನು ಸೈಲೆಂಟ್ ಅಥವಾ ಫ್ಲೈಟ್ ಮೋಡ್‌ನಲ್ಲಿ ಇಡುತ್ತಾರೆ. ಇದು, ಅವರಿಗೆ ನಿಮ್ಮ ಬಗ್ಗೆ ಇರುವ ಬದ್ಧತೆ ಎಂದು ಆರಂಭದಲ್ಲಿ ಅನ್ನಿಸಿದರೂ, ಅದನ್ನು ಸಂಶಯಾಸ್ಪದ ನಡೆಯಾಗಿಯೇ ನೋಡುವುದು ಒಳಿತು. ಯಾಕೆಂದರೆ, ನಿಮ್ಮ ಜೊತೆ ಇದ್ದಾಗ, ಇತರ ವ್ಯಕ್ತಿಗಳ ಕರೆ ಅಥವಾ ಸಂದೇಶ ಬಂದು ಅವರ ನಿಜ ಬಣ್ಣ ಎಲ್ಲಾದರೂ ನಿಮಗೆ ಗೊತ್ತಾಗಿಬಿಟ್ಟರೆ ಎಂಬ ಅಂಜಿಕೆ ಅವರಲ್ಲಿರುತ್ತದೆ. ಮಾತ್ರವಲ್ಲ, ಅಂತಹವರು ಶೌಚಾಲಯಕ್ಕೆ ಹೋಗುವಾಗಲೂ ಫೋನನ್ನು ತಪ್ಪದೇ ತೆಗೆದುಕೊಂಡು ಹೋಗುತ್ತಾರೆ.

ಸಂಬಂಧಗಳನ್ನು ಬಂಧನದಿಂದ ಮುಕ್ತಗೊಳಿಸಿ ಸಹಬಾಳ್ವೆಯ ಕಡೆಗೆ ತೆಗೆದುಕೊಂಡು ಹೋಗುವುದು ಒಂದು ಮಹತ್ತರವಾದ ಕೆಲಸ

3 ಹಸಿ ಸುಳ್ಳುಗಳನ್ನು ಹೇಳುತ್ತಾರೆ: ಯಾಕೆ ಹಸಿ ಸುಳ್ಳುಗಳು ಎಂದು ಹೇಳುತ್ತೇವೆ ಎಂದರೆ, ಇಂತಹವರು ಹೇಳುವ ಸುಳ್ಳುಗಳು ನಿಮಗೆ ಸುಳ್ಳು ಎಂದು ತಿಳಿಯುವ ಹಾಗೆಯೇ ಇರುತ್ತವೆ. ಆದರೂ, ಅವು ಸತ್ಯವೆಂದು ನಂಬುವಂತೆ ಸಾಧಿಸುತ್ತಾರೆ.

4 ಗ್ಯಾಸ್‌ಲೈಟಿಂಗ್ ಮಾಡುವುದು ಹೆಚ್ಚು: ಫೇಕ್ ಸಂಬಂಧಗಳಲ್ಲಿ ಉಳಿಯಬೇಕೆನ್ನುವವರು, ಗ್ಯಾಸ್‌ಲೈಟಿಂಗ್ ಮಾಡುತ್ತಾರೆ. ಅಂದರೆ, ಯಾವುದೋ ಒಂದು ವಿಚಾರವನ್ನು ಎಷ್ಟು ವಿಶ್ವಾಸದಿಂದ ನೀವು ಹಾಗೆ ಹೇಳಿದ್ದಿರಿ ಎಂದು ಬಣ್ಣಿಸುತ್ತಾರೆಂದರೆ, ನಿಮಗೇ ಬಹುಶಃ ನೀವು ಹಾಗೆ ಹೇಳಿದ್ದಿರ ಬಹುದೇನೋ ಎಂಬಂತೆ ತೋರಬೇಕು; ಆ ರೀತಿಯಲ್ಲಿ ಮಾತನಾಡುತ್ತಾರೆ. ಸತ್ಯವಾದ ವಿಚಾರಗಳನ್ನು ಒಂದಷ್ಟು ತಿರುಚಿ ಹಾಕುತ್ತಾರೆ.

5 ಆತಂಕ ಅಥವಾ ಗೊಂದಲ ಸೃಷ್ಟಿಸುತ್ತಲೇ ಇರುತ್ತಾರೆ: ಫೇಕ್ ಸಂಬಂಧಗಳನ್ನು ಇಟ್ಟುಕೊಂಡಿರುವವರು, ಸಾಮಾನ್ಯವಾಗಿ ಇನ್ನೊಬ್ಬ ವ್ಯಕ್ತಿಗೆ ಯಾವತ್ತೂ ಆತಂಕ ಅಥವಾ ಗೊಂದಲವನ್ನು ಉಂಟುಮಾಡುತ್ತಲೇ ಇರುತ್ತಾರೆ. ಸ್ಥಿರ ಅಥವಾ ಸುಭದ್ರತೆಯ ಭಾವವನ್ನು ಬೆಳೆಸಿಕೊಳ್ಳುವುದಕ್ಕೆ ಬಿಡುವುದೇ ಇಲ್ಲ. ಆಗಾಗ ಜಗಳಕ್ಕೆ ಯಾವುದಾದರೂ ಕಾರಣವನ್ನು ಹುಡುಕುವುದು, ಅಸಮಾಧಾನ ತೋರುವುದು ಅಥವಾ ಇನ್ನೇನಾದರೂ ಸಮಸ್ಯೆಗಳನ್ನು ಸೃಷ್ಟಿಸುವಂತಹ ಹೊಸ ಹೊಸ ಸವಾಲುಗಳನ್ನು ಒಡ್ಡುತ್ತಲೇ ಇರುತ್ತಾರೆ. ತನ್ಮೂಲಕ, ಯಾರ ಜೊತೆ ಸಂಬಂಧದಲ್ಲಿ ಇದ್ದಾರೋ ಅಂತಹವರ ಮೇಲೆ ಬೆರಳು ತೋರಿಸುವುದಕ್ಕೆ ಆಗಾಗ ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತಲೇ ಇರುತ್ತಾರೆ.

ಇನ್ನೂ ಒಂದಷ್ಟು ವಿಧಾನಗಳಿಂದ ಫೇಕ್ ಸಂಬಂಧಗಳ ಬಗ್ಗೆ ತಿಳಿದುಕೊಳ್ಳಬಹುದು. ಆದರೂ ಬಹುಮುಖ್ಯವಾಗಿ ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ನಿಮಗೆ ವ್ಯಕ್ತಿಗಳು ಫೇಕ್ ಆಗಿ ನಿಮ್ಮ ಜೊತೆ ಇದ್ದಾರೋ ಅಥವಾ ಸಂಬಂಧವನ್ನು ಗಂಭೀರವಾಗಿ ಪರಿಗಣಿಸಿದ್ದಾರೋ ಎಂಬುದು ವಿಧಿತವಾಗುತ್ತದೆ.

ಈ ಮೇಲಿನ ಯಾವುದೇ ಲಕ್ಷಣಗಳು ಕಂಡುಬಂದಲ್ಲಿ ಆರಂಭದಲ್ಲೇ ಮುನ್ನೆಚ್ಚರಿಕೆ ವಹಿಸುವುದು ಒಳಿತು. ಇಲ್ಲದಿದ್ದರೆ, ಆಮೇಲೆ ಅದೇ ದೊಡ್ಡದಾಗಿ ಬೆಳೆದು, ಕೊನೆಗೆ ಅಂತಹ ಸಂಬಂಧದಲ್ಲಿ ಇರುವುದಕ್ಕೂ ಆಗದೆ, ಹೊರಗೆ ಬರಲೂ ಸಾಧ್ಯವಾಗದೆ ವಿಲವಿಲ ಒದ್ದಾಡುವ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇರುತ್ತದೆ.

ಯಾವುದೇ ಸಂಬಂಧವಾಗಲಿ, ಕಾಳಜಿ ವಹಿಸಿ, ಬೆಳೆಸಿ ಮತ್ತು ಮುನ್ನಡೆಸಿ.

ಗರ್ಭಿಣಿ ಮತ್ತು ಮಲಬದ್ಧತೆ



ಸ್ಪಂದನ
ಡಾ. ವೀಣಾ ಎಸ್. ಭಟ್

- **ನಾನೀಗ ಐದು ತಿಂಗಳ ಗರ್ಭಿಣಿ. ಮಲವಿಸರ್ಜನೆ ಮಾಡುವಾಗ ಕಷ್ಟವಾಗುತ್ತಿದೆ. ವೈದ್ಯರು ಥೈರಾಯ್ಡ್ ಪರೀಕ್ಷೆ ಮಾಡಿಸಿ, ಮಾತ್ರೆ ಬರೆದುಕೊಟ್ಟಿದ್ದಾರೆ. ಇದನ್ನು ತೆಗೆದುಕೊಂಡರೂ ನಿತ್ಯ ಮಲವಿಸರ್ಜನೆ ಮಾಡುವಾಗ ಕಷ್ಟವಾಗುತ್ತದೆ. ಏನು ಮಾಡಲಿ?**

ದಾಕ್ಷಾಯಿಣಿ, ಸಾಗರ

ಗರ್ಭಿಣಿಯರಲ್ಲಿ ಶೇ 30ರಿಂದ 40ರಷ್ಟು ಮಂದಿಗೆ ಮಲಬದ್ಧತೆ ಸಮಸ್ಯೆ ಉಂಟಾಗಬಹುದು. ಗರ್ಭ ಧರಿಸಿದಾಗ ಶರೀರದಲ್ಲಿ ಪ್ರೊಜೆಸ್ಟಿರಾನ್ ಹಾರ್ಮೋನಿನ ಸ್ರವಿಸುವಿಕೆ ಹೆಚ್ಚಿರುತ್ತದೆ. ಇದರಿಂದ ಕರುಳಿನ ಚಲನೆ ನಿಧಾನವಾಗುತ್ತದೆ. ಹೀಗಾಗಿ, ಮಲವಿಸರ್ಜನೆ ಕಷ್ಟ ಎನಿಸುತ್ತದೆ. ಸಾಮಾನ್ಯವಾಗಿ ಗರ್ಭಿಣಿಯರಿಗೆ ರಕ್ತಹೀನತೆಯಾಗದಂತೆ ಕಬ್ಬಿಣಾಂಶದ ಮಾತ್ರೆಗಳನ್ನು ನೀಡಲಾಗುತ್ತದೆ. ಇದರಿಂದಲೂ ಮಲಬದ್ಧತೆ ಉಂಟಾಗಬಹುದು. ಕೆಲವರಲ್ಲಿ ವಾಂತಿ, ಭೇದಿಯಂತಹ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಇನ್ನು ಮಗು ಗರ್ಭಕೋಶದಲ್ಲಿ ಬೆಳೆದಂತೆ ಗರ್ಭಕೋಶವು ದೊಡ್ಡದಾಗಿ ಕರುಳಿನ ಮೇಲೆ ಒತ್ತಡ ಬೀರುತ್ತದೆ. ಆಗ ಕರುಳಿನ ಚಲನೆಯಲ್ಲಿ ವ್ಯತ್ಯಾಸ ಉಂಟಾಗಿಯೂ ಮಲಬದ್ಧತೆ ಆಗುತ್ತದೆ.

ಮಲಬದ್ಧತೆ ಸಮಸ್ಯೆ ದೀರ್ಘಾವಧಿಯಲ್ಲಿ ಇದ್ದರೆ ಮೂಲವ್ಯಾಧಿಯಂತಹ ಸಮಸ್ಯೆ ಬರಬಹುದು. ಮಲವಿಸರ್ಜನೆ ಸಂದರ್ಭದಲ್ಲಿ ರಕ್ತಸ್ರಾವ ಉಂಟಾಗಿ ರಕ್ತಹೀನತೆ ಆಗಬಹುದು. ಮಲಬದ್ಧತೆ ಆಗದಂತೆ ಕನಿಷ್ಠ ಮೂರರಿಂದ ಮೂರೂವರೆ ಲೀಟರ್ ನೀರನ್ನು ಕಡ್ಡಾಯವಾಗಿ ಕುಡಿಯಿರಿ. ಕನಿಷ್ಠ 30 ಗ್ರಾಂನಷ್ಟು ನಾರಿನಾಂಶವುಳ್ಳ ಆಹಾರ ನಿಮ್ಮ ತಟ್ಟೆಯಲ್ಲಿ ಇರುವಂತೆ ನೋಡಿಕೊಳ್ಳಿ. ಹಸಿರುಸೊಪ್ಪು, ತರಕಾರಿ ಮತ್ತು ಹಣ್ಣುಗಳನ್ನು ಪ್ರತಿದಿನವೂ ಸೇವಿಸಿದರೆ ಮಲಬದ್ಧತೆ ಆಗುವುದಿಲ್ಲ. ಕಬ್ಬಿಣಾಂಶದ ಮಾತ್ರೆಗಳಿಂದ ಈ ಸಮಸ್ಯೆ ಆಗುತ್ತಿದ್ದಲ್ಲಿ ಆ ಮಾತ್ರೆಯ ಜೊತೆಗೆ 'ಡಾಕ್ಯುಸೆಟ್ ಸೋಡಿಯಂ' ಅನ್ನುವ ಅಂಶ ಜತೆಗಿದ್ದರೆ, ಆಗ ಮಲವಿಸರ್ಜನೆ ಸಮರ್ಪಕವಾಗಿ ಆಗುತ್ತದೆ. ಈ ಬಗ್ಗೆ ನಿಮ್ಮ ವೈದ್ಯರ ಬಳಿ ವಿಚಾರಿಸಿ.

ಊಟ ಮತ್ತು ತಿಂಡಿಯ ನಂತರ ತಕ್ಷಣ ವಿಶ್ರಾಂತಿ ಪಡೆಯದೆ ಕನಿಷ್ಠ 10ರಿಂದ 15 ನಿಮಿಷ ನಿಧಾನವಾಗಿ ವಾಕ್ ಮಾಡಿ. ಗರ್ಭಿಣಿಯಾಗುವುದು ಕಾಯಿಲೆಯಲ್ಲ. ಅದು ಸಹಜ ಕ್ರಿಯೆ. ಹಾಗಾಗಿ, ಮನೆಗೆಲಸದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಿ. ಇನ್ನೊಮ್ಮೆ ಥೈರಾಯ್ಡ್ ಪರೀಕ್ಷೆ ಮಾಡಿಸಿಕೊಂಡು, ತೆಗೆದುಕೊಳ್ಳುತ್ತಿರುವ ಮಾತ್ರೆಯ ಪ್ರಮಾಣ ಸರಿ ಇದೆಯೇ ಎಂದು ಪರಿಶೀಲಿಸಿಕೊಳ್ಳಿ. ಕೆಲವೊಮ್ಮೆ ಥೈರಾಯ್ಡ್ ಗ್ರಂಥಿಯಲ್ಲಿ ಆಗುವ ಏರುಪೇರಿನಿಂದಲೂ ಮಲಬದ್ಧತೆ ಉಂಟಾಗುತ್ತದೆ.

ಬೆಳಿಗ್ಗೆ ಮತ್ತು ರಾತ್ರಿ ಹೊತ್ತು ಒಂದು ಲೋಟ ಬಿಸಿನೀರಿಗೆ ಎರಡು ಚಮಚ ಇಸಾಬ್‌ಗೋಲ್ ಪುಡಿಯನ್ನು ಹಾಕಿ ಪ್ರತಿನಿತ್ಯ ಸೇವಿಸಿ. ಗರ್ಭಿಣಿಯಾಗಿದ್ದಾಗ ಈ ಔಷಧ ಸೇವಿಸುವುದು ಸುರಕ್ಷಿತ. ಹಾಗೆಂದು ಹರಳೆಣ್ಣೆಯಂತಹ ಪ್ರಚೋದನಕಾರಿ ಭೇದಿಕಾರಕಗಳನ್ನು ಸೇವಿಸಬೇಡಿ. ತಜ್ಞ ವೈದ್ಯರ ಸಲಹೆ ಇಲ್ಲದೆ ಯಾವುದೇ ಔಷಧವನ್ನು ತೆಗೆದುಕೊಳ್ಳುವುದು ಸರಿಯಲ್ಲ.

ಅಮ್ಮ ಹೇಳ್ತಾಳೆ



ಮನೆಯಲ್ಲಿ ಅಡುಗೆಗೆಂದು ಮಾಡಿಕೊಂಡ ಟೊಮ್ಯಾಟೊ ಪ್ಯೂರಿ ಉಳಿದಿದೆಯೇ ಅಥವಾ ಟೊಮ್ಯಾಟೊ ಹಣ್ಣು ಹೆಚ್ಚಾಗಿದೆಯೇ? ಹಾಗಿದ್ದರೆ ಅದು ವೇಸ್ಟ್ ಆಗದಂತೆ ಹೆಚ್ಚು ದಿನ ಬಳಸಲು ಹೀಗೆ ಮಾಡು: ಟೊಮ್ಯಾಟೊವನ್ನು ಮಿಕ್ಸಿಗೆ ಹಾಕಿ ಪ್ಯೂರಿ ಮಾಡಿಕೊಳ್ಳಬೇಕು ಅಥವಾ ಪ್ಯೂರಿಯಾಗಿದ್ದರೆ ನೇರವಾಗಿ ಆ ರಸವನ್ನು ಐಸ್‌ಕ್ಯೂಬ್ ಟ್ರೇಗೆ ಹಾಕಿ ಫ್ರೀಜರ್‌ನಲ್ಲಿ ಇಡಬೇಕು. ಅದು ಗಟ್ಟಿಯಾದ ಬಳಿಕ, ಅಡುಗೆಗೆ ಟೊಮ್ಯಾಟೊ ಬದಲಿಗೆ ನೇರವಾಗಿ ಈ ಕ್ಯೂಬ್‌ಗಳನ್ನೇ ಬಳಸಬಹುದು.

ವ್ಹಾವ್, ಯಮ್ಮಿ... ಮಿಲ್ಕ್‌ಶೇಕ್

- ವೇದಾವತಿ ಎಚ್.ಎಸ್.

ಮಿಲ್ಕ್‌ಶೇಕ್ ಯಾರಿಗೆ ತಾನೇ ಇಷ್ಟವಿಲ್ಲ? ಆರೋಗ್ಯಕ್ಕೆ ಪೂರಕವಾದ ಬಗೆಬಗೆಯ ಮಿಲ್ಕ್‌ಶೇಕ್‌ಗಳನ್ನು ಸುಲಭವಾಗಿ ಮನೆಯಲ್ಲೇ ಮಾಡಿ ಸವಿಯಬಹುದು. ಹೇಗೆಂದು ನೋಡೋಣ ಬನ್ನಿ.

ರಸಾಸ್ವಾದ

ಡ್ರೈಫ್ರೂಟ್ಸ್ ಮತ್ತು ಚಾಕೊಲೇಟ್ ಮಿಲ್ಕ್‌ಶೇಕ್



ಬೇಕಾಗುವ ಸಾಮಗ್ರಿ: ಬಾದಾಮಿ 10, ಗೋಡಂಬಿ 10, ಒಣದ್ರಾಕ್ಷಿ 1 ಟೇಬಲ್ ಚಮಚ, ಡೈರಿಮಿಲ್ಕ್ ಚಾಕೊಲೇಟ್ ಚಿಕ್ಕದು 1, ತಣ್ಣನೆ ಹಾಲು 1 ಕಪ್, ಅಲಂಕರಿಸಲು ಚಾಕೊಲೇಟ್ ಪುಡಿ.

ತಯಾರಿಸುವ ವಿಧಾನ: ಬಾದಾಮಿ, ಗೋಡಂಬಿ, ಒಣದ್ರಾಕ್ಷಿ ಮತ್ತು ಚಾಕೊಲೇಟ್ ಅನ್ನು ಒಂದು ಬಟ್ಟಲಿಗೆ ಹಾಕಿ, ಹಾಲನ್ನು ಸೇರಿಸಿ ಒಂದು ಗಂಟೆ ನೆನೆಸಿಡಿ. ಬಳಿಕ ನುಣ್ಣಗೆ ರುಬ್ಬಿಕೊಂಡು ಸರ್ವಿಂಗ್ ಗ್ಲಾಸಿಗೆ ಹಾಕಿ, ಚಾಕೊಲೇಟ್ ಪುಡಿಯಿಂದ ಅಲಂಕರಿಸಿ ಸವಿಯಿರಿ.

ಶೇಂಗಾ ಮಿಲ್ಕ್‌ಶೇಕ್



ಬೇಕಾಗುವ ಸಾಮಗ್ರಿ: ಹುರಿದು ಸಿಪ್ಪೆ ಬಿಡಿಸಿದ ಶೇಂಗಾ 1/4 ಕಪ್, ಪೀನಟ್ ಬಟರ್ 1 ಟೇಬಲ್ ಚಮಚ, ಬೀಜರಹಿತ ಖರ್ಜೂರ 8, ತಣ್ಣಗಿನ ಹಾಲು 1 ಕಪ್, ಐಸ್‌ಕ್ಯೂಬ್ ಸ್ವಲ್ಪ.

ತಯಾರಿಸುವ ವಿಧಾನ: ಮಿಕ್ಸಿ ಜಾರಿಗೆ ಶೇಂಗಾ ಹಾಕಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಬಳಿಕ ಪೀನಟ್ ಬಟರ್, ಖರ್ಜೂರ, ಹಾಲು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಸರ್ವಿಂಗ್ ಗ್ಲಾಸಿಗೆ ಐಸ್‌ಕ್ಯೂಬ್ ಹಾಕಿ, ತಯಾರಿಸಿದ ಮಿಲ್ಕ್ ಶೇಕ್ ಸೇರಿಸಿ. ಕೊನೆಯಲ್ಲಿ ಶೇಂಗಾ ಪುಡಿಯನ್ನು ಹಾಕಿ ಅಲಂಕರಿಸಿ ಸವಿಯಿರಿ.


ವೆನಿಲ್ಲಾ ಮಿಲ್ಕ್‌ಶೇಕ್



ಬೇಕಾಗುವ ಸಾಮಗ್ರಿ: ಸಕ್ಕರೆ 2 ಟೇಬಲ್ ಚಮಚ, ತಣ್ಣನೆ ಹಾಲು 1 ಕಪ್, ವೆನಿಲ್ಲಾ ಎಸೆನ್ಸ್ 2 ಹನಿ, ಅಲಂಕರಿಸಲು ಚಕ್ಕೆ ಪುಡಿ ಸ್ವಲ್ಪ.

ತಯಾರಿಸುವ ವಿಧಾನ: ಮಿಕ್ಸಿ ಜಾರಿಗೆ ಸಕ್ಕರೆ ಹಾಕಿ ಪುಡಿ ಮಾಡಿಕೊಳ್ಳಿ. ಬಳಿಕ ಹಾಲು, ವೆನಿಲ್ಲಾ ಎಸೆನ್ಸ್ ಹಾಕಿ ಎರಡು ಸುತ್ತು ತಿರುಗಿಸಿ. ನಂತರ ಸರ್ವಿಂಗ್ ಗ್ಲಾಸಿಗೆ ಹಾಕಿ ಚಕ್ಕೆ ಪುಡಿಯಿಂದ ಅಲಂಕರಿಸಿ ಸವಿಯಿರಿ.

ಖರ್ಜೂರ ಮಿಲ್ಕ್‌ಶೇಕ್



ಬೇಕಾಗುವ ಸಾಮಗ್ರಿ: ಬೀಜರಹಿತ ಖರ್ಜೂರ 1/2 ಕಪ್, ಏಲಕ್ಕಿಪುಡಿ 1/4 ಟೀ ಚಮಚ, ತಣ್ಣಗಿನ ಹಾಲು 1 ಕಪ್, ಜೇನುತುಪ್ಪ 1 ಟೇಬಲ್ ಚಮಚ, ಐಸ್‌ಕ್ಯೂಬ್ ಸ್ವಲ್ಪ.

ತಯಾರಿಸುವ ವಿಧಾನ: ಖರ್ಜೂರವನ್ನು ಚಿಕ್ಕದಾಗಿ ಕತ್ತರಿಸಿಕೊಂಡು ಮಿಕ್ಸಿ ಜಾರಿಗೆ ಹಾಕಿ. ಜೊತೆಗೆ ಹಾಲು, ಜೇನುತುಪ್ಪ ಮತ್ತು ಏಲಕ್ಕಿ ಪುಡಿ ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಸರ್ವಿಂಗ್ ಗ್ಲಾಸಿಗೆ ಐಸ್‌ಕ್ಯೂಬ್ ಹಾಕಿ, ತಯಾರಿಸಿಕೊಂಡ ಮಿಲ್ಕ್‌ಶೇಕ್ ಸೇರಿಸಿ ಸವಿಯಿರಿ.

ಉಚಿತ ಬಸ್ ಪಾಸ್ ಜತೆ ವಿಮೆ

ಸರ್ಕಾರಿ ಬಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಪ್ರಯಾಣ • ಮಾರ್ಗಸೂಚಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ವಿತರಿಸುವ ಯೋಜನೆಗೆ ಸಂಬಂಧಿಸಿದಂತೆ ಸಾರಿಗೆ ಇಲಾಖೆ ಮಾರ್ಗಸೂಚಿ ಪ್ರಕಟಿಸಿದೆ. ಅಕ್ಕಪಕ್ಕದ ರಾಜ್ಯಗಳಲ್ಲಿ ವಿದ್ಯಾಭ್ಯಾಸ ಮಾಡುವವರಿಗೂ ಈ ಸೌಲಭ್ಯ ದೊರೆಯಲಿದೆ. ಬಸ್ ಪಾಸ್ ಹೊಂದಿರುವ ವಿದ್ಯಾರ್ಥಿಗಳಿಗೆ ಅಪಘಾತ ವಿಮಾ ಸೌಲಭ್ಯವೂ ಸಿಗಲಿದೆ.

ಬಸ್‌ಪಾಸ್ ಪಡೆದು ಓಡಾಡುವ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು ₹5 ವಿಮಾ ಕಂತನ್ನು ಸರ್ಕಾರವೇ ಪಾವತಿಸಲಿದೆ. ಪ್ರತಿ ಪಾಸ್‌ಗೆ ತಲಾ ₹100 ಸಂಸ್ಕರಣಾ ಶುಲ್ಕವನ್ನು ಸರ್ಕಾರವೇ ನಿಗಮಗಳಿಗೆ ನೀಡಲಿದೆ. ಈ ಅಪಘಾತ ಪರಿಹಾರ ನಿಧಿ ಮತ್ತು ಸಂಸ್ಕರಣೆಗೆ ತಗಲುವ ಸುಮಾರು ₹15 ಕೋಟಿಯನ್ನು ನಾಲ್ಕು ಸಾರಿಗೆ ನಿಗಮಗಳಿಗೆ ಸರ್ಕಾರ ಪಾವತಿ ಮಾಡಲಿದೆ.

ರಾಜ್ಯದಲ್ಲಿ ವಾಸವಿದ್ದು, ನೆರೆ ರಾಜ್ಯಗಳಲ್ಲಿರುವ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತ್ತು ನೆರೆ ರಾಜ್ಯಗಳಲ್ಲಿ (ರಾಜ್ಯದ ಗಡಿಭಾಗಗಳಲ್ಲಿ) ವಾಸವಿದ್ದು, ರಾಜ್ಯದೊಳಗಿರುವ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳೂ ಈ ಉಚಿತ ಬಸ್ ಪಾಸ್ ಬಳಸಿಕೊಳ್ಳಲು ಅವಕಾಶ ನೀಡಲಾಗಿದೆ.

ಈಗಾಗಲೇ ವಿತರಿಸಲಾಗಿರುವ ಬಸ್‌ಪಾಸ್‌ಗಳನ್ನು ಬಳಸಿಯೂ ವಿದ್ಯಾರ್ಥಿಗಳು ಪ್ರಯಾಣಿಸಬಹುದು.

ಅಂಕಿ ಅಂಶ

₹286.08 ಕೋಟಿ
ಉಚಿತ ಬಸ್‌ಪಾಸ್ ವಿತರಣೆಗೆ ಆಗುವ ವಾರ್ಷಿಕ ವೆಚ್ಚ

19,792
ನಾಲ್ಕು ಸಾರಿಗೆ ಸಂಸ್ಥೆಗಳಿಂದ ಶುಲ್ಕ ಪಾವತಿಸಿ ಬಸ್‌ಪಾಸ್ ಪಡೆದ ವಿದ್ಯಾರ್ಥಿಗಳು

₹15 ಕೋಟಿ
ಅಪಘಾತ ಪರಿಹಾರ ನಿಧಿ ಮತ್ತು ಪಾಸ್ ಸಂಸ್ಕರಣೆಗೆ ತಗಲುವ ವೆಚ್ಚ



ಪ್ರಾಥಮಿಕ ಶಾಲೆಯಿಂದ ಸ್ನಾತಕೋತ್ತರ ಪದವಿ, ವೃತ್ತಿಪರ ಕೋರ್ಸ್ ಓದುತ್ತಿರುವ ರಾಜ್ಯದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಯೋಜನೆಯಿಂದ ಅನುಕೂಲವಾಗಲಿದೆ

ಬೈರತಿ ಸುರೇಶ್, ಸಾರಿಗೆ ಸಚಿವ

123 ವಿತರಣಾ ಕೌಂಟರ್

ಉಚಿತ ಬಸ್‌ಪಾಸ್‌ಗೆ https://sevasindhuservices.karnataka.gov.in/buspassservices/ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಕೆಎಸ್‌ಆರ್‌ಟಿಸಿ ವ್ಯಾಪ್ತಿಯಲ್ಲಿ 123 ಪಾಸ್ ವಿತರಣಾ ಕೌಂಟರ್‌ಗಳನ್ನು ತೆರೆಯಾಗಿದೆ. ಅದರ ವಿವರಗಳನ್ನು ನಿಗಮದ ವೆಬ್‌ಸೈಟ್‌ನಲ್ಲಿ (https://ksrtc.karnataka.gov.in/student pass) ಒದಗಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಅದಕ್ಕಾಗಿ ಪಾವತಿಸಿರುವ ಹಣವನ್ನು 15 ದಿನಗಳೊಳಗಾಗಿ ವಿದ್ಯಾರ್ಥಿಗಳಿಗೆ ಮರುಪಾವತಿ ಮಾಡಲಾಗುವುದು. ರಸ್ತೆ ಸಾರಿಗೆ ನಿಗಮಗಳು ಮತ್ತು ಸಂಸ್ಥೆಗಳು ವಿದ್ಯಾರ್ಥಿಗಳ ಉಚಿತ ಪಾಸ್ ವಿತರಣೆಗೆ ಸಂಬಂಧಿಸಿದಂತೆ ಹಾಲಿ ಇರುವ ನಿಯಮಗಳನ್ನು ಅನುಸರಿಸಲಾಗುತ್ತದೆ. ವಿದ್ಯಾರ್ಥಿ ಪಾಸ್‌ಗಾಗಿ ಶೈಕ್ಷಣಿಕ ವಿದ್ಯಾಭ್ಯಾಸದ ಅರ್ಹತಾ ಮಾನದಂಡಗಳು, ದೂರದ ಮಿತಿ, ಪಾಸ್‌ನ ಕಾಲಾವಧಿಯಂತಹ ನಿಬಂಧನೆಗಳು ಅನ್ವಯವಾಗಲಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ), ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕೆಕೆಆರ್‌ಟಿಸಿ), ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಎನ್‌ಡಬ್ಲ್ಯುಆರ್‌ಟಿಸಿ) ಮತ್ತು ಬೆಂಗಳೂರು ಮಹಾನಗರ ಸಾರಿಗೆ ನಿಗಮದ (ಬಿಎಂಟಿಸಿ) ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಲು ವಿದ್ಯಾರ್ಥಿಗಳು ರಾಜ್ಯ ಸರ್ಕಾರದ ಸೇವಾ ಸಿಂಧು ಪೋರ್ಟಲ್‌ನಲ್ಲಿ ಎಲ್ಲಿಂದ ಬೇಕಾದರೂ ಆನ್‌ಲೈನ್ ಮೂಲಕ ಪೂರಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಪರಿಹಾರ ವಿಳಂಬ: ನಾಲೆ ಕಚೇರಿ ಜಪ್ತಿ

ಕೆ.ಆರ್.ಪೇಟೆ (ಮಂಡ್ಯ): ತಾಲ್ಲೂಕಿನ ಹೊಸಹೊಳಲು ಮೇಲ್ಗಾಲುವೆ ನಿರ್ಮಾಣಕ್ಕೆ ಜಮೀನು ಕಳೆದುಕೊಂಡ 40 ರೈತರಿಗೆ ಭೂ ಪರಿಹಾರ ನೀಡಲು ವಿಳಂಬ ಮಾಡಿದ ಹೇಮಾವತಿ ಯೋಜನೆಯ ಹೇಮಾವತಿ ಎಡದಂಡೆ ನಾಲೆ ಕಚೇರಿ–3 (ಎಚ್.ಎಲ್.ಬಿ.ಸಿ) ಅನ್ನು ಮಂಡ್ಯ ಜಿಲ್ಲಾ ಮತ್ತು ಕೆ.ಆರ್.ಪೇಟೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಕೋರ್ಟ್ ಸಿಬ್ಬಂದಿ ಹಾಗೂ ವಕೀಲರ ಸಮ್ಮುಖದಲ್ಲಿ ಶುಕ್ರವಾರ ಜಪ್ತಿ ಮಾಡಲಾಯಿತು.

ಕೋರ್ಟ್ ಆದೇಶದಂತೆ ನಂ.3 ಕಚೇರಿಯಲ್ಲಿರುವ ಸಾಮಗ್ರಿಗಳಾದ ಕಂಪ್ಯೂಟರ್, ಪ್ರಿಂಟರ್, ಟೇಬಲ್, ಚೇರ್ ಸೇರಿದಂತೆ ಎಲ್ಲಾ ಪೀಠೋಪಕರಣಗಳನ್ನು ವಶಕ್ಕೆ ಪಡೆಯಲಾಯಿತು.

ಯೋಜನೆಗಾಗಿ ಕೆ.ಆರ್.ಪೇಟೆ ತಾಲ್ಲೂಕಿನ 40ಕ್ಕೂ ಹೆಚ್ಚು ರೈತರ ಫಲವತ್ತಾದ ಜಮೀನನ್ನು ವಶಪಡಿಸಿಕೊಳ್ಳಲಾಗಿತ್ತು. ಕಾನೂನು ಪ್ರಕಾರ ನಿಗದಿತ ಅವಧಿಯಲ್ಲಿ ಭೂ ಪರಿಹಾರ ಪಾವತಿಯಾಗಬೇಕಿದ್ದರೂ, ವರ್ಷಗಳು ಕಳೆದರೂ ಹೇಮಾವತಿ ಇಲಾಖೆ ಪರಿಹಾರ ನೀಡಿಲ್ಲ ಎಂದು ರೈತರು ನ್ಯಾಯಾಲಯದ ಮೊರೆ ಹೋಗಿದ್ದರು.

‘ಮೊಕದ್ದಮೆಯಿಂದ ವೃತ್ತಿಜೀವನಕ್ಕೆ ಹಾನಿ’

ರೋಹಿಣಿ– ರೂಪಾ ನಡುವಿನ ಮಾನನಷ್ಟ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಮತ್ತು ಐಪಿಎಸ್ ಅಧಿಕಾರಿ ಡಿ. ರೂಪಾ ಮೌದ್ಗಿಲ್ ನಡುವೆ ದೀರ್ಘಕಾಲದಿಂದ ನಡೆಯುತ್ತಿರುವ ಮಾನನಷ್ಟ ಮೊಕದ್ದಮೆ ವಿವಾದವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಮಧ್ಯಸ್ಥಿಕೆಗೆ ಉಲ್ಲೇಖಿಸಿದೆ.

ಇಬ್ಬರೂ ಅಧಿಕಾರಿಗಳು ನಿರಂತರ ಮೊಕದ್ದಮೆ ಹೂಡುವ ಮೂಲಕ ಪರಸ್ಪರರ ವೃತ್ತಿಜೀವನಕ್ಕೆ ಹಾನಿ ಮಾಡಿಕೊಳ್ಳುತ್ತಿದ್ದಾರೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಮತ್ತು ನ್ಯಾಯಮೂರ್ತಿ ಸಂಜೀವ್ ಸಚ್‌ದೇವ ಅವರಿದ್ದ ಪೀಠವು, ನ್ಯಾಯಾಲಯದ ಸುದೀರ್ಘ ವಿಚಾರಣೆಯ ಬದಲು ಮಧ್ಯಸ್ಥಿಕೆಯ ಮೂಲಕ ವಿವಾದ ಪರಿಹರಿಸಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿತು.

ಇಬ್ಬರು ಅಧಿಕಾರಿಗಳ ನಡುವಿನ ವಿವಾದ ಇತ್ಯರ್ಥಕ್ಕೆ ಅನುಕೂಲವಾಗುವಂತೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕುರಿಯನ್ ಜೋಸೆಫ್



ರೋಹಿಣಿ ಸಿಂಧೂರಿ



ರೂಪಾ ಮೌದ್ಗಿಲ್

ಅವರನ್ನು ಮಧ್ಯಸ್ಥಿಕೆದಾರರನ್ನಾಗಿ ನ್ಯಾಯಪೀಠ ನೇಮಿಸಿತು.

ಕಕ್ಷಿದಾರರು ನ್ಯಾಯಮೂರ್ತಿ ಕುರಿಯನ್ ಜೋಸೆಫ್ ಅವರ ಮುಂದೆ ಹಾಜರಾಗಬೇಕು. ಮಧ್ಯಂತರ ಪರಿಹಾರವಾಗಿ ಇಬ್ಬರೂ ಕಕ್ಷಿದಾರರ ನಡುವಿನ ಪ್ರಕರಣಗಳ ಮುಂದಿನ ವಿಚಾರಣೆಗೆ ತಡೆ ನೀಡಲಾಗುವುದು ಎಂದು ನ್ಯಾಯಪೀಠ ಆದೇಶಿಸಿತು.

ಪ್ರಕರಣವೇನು?: ‘ರೂಪಾ ಮೌದ್ಗಿಲ್ ತಮ್ಮ ಫೇಸ್ ಬುಕ್ ಖಾತೆಯಲ್ಲಿ ನನ್ನ ವಿರುದ್ಧ 2023ರ ಫೆಬ್ರುವರಿ 18 ಮತ್ತು 19ರಂದು ಕೀಳು ಅಭಿರುಚಿಯಿಂದ ಕೂಡಿದ ಆರೋಪ ಮಾಡಿದ್ದಾರೆ. ವಿದ್ಯುನ್ಮಾನ ಮಾಧ್ಯಮಗಳಲ್ಲೂ ಹೇಳಿಕೆ ನೀಡಿದ್ದಾರೆ. ಆ ಆರೋಪಗಳು ನನ್ನ ವ್ಯಕ್ತಿತ್ವಕ್ಕೆ ಧಕ್ಕೆ ಉಂಟು ಮಾಡುವಂತಿವೆ. ನನ್ನ ತೇಜೋವಧೆ ಮಾಡುವ ದುರದ್ದೇಶದಿಂದಲೇ ಈ ಕೃತ್ಯ ಎಸಗಲಾಗಿದೆ. ಇದು ನನ್ನ ಖಾಸಗಿ, ಸಾಮಾಜಿಕ ಮತ್ತು ವೃತ್ತಿ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರಿದ್ದು, ಮಾನಸಿಕ ಯಾತನೆ ಉಂಟು ಮಾಡಿದೆ’ ಎಂದು ಆರೋಪಿಸಿ ರೋಹಿಣಿ ಸಿಂಧೂರಿ ಮಾರ್ಚ್ 3ರಂದು ವಿಚಾರಣಾ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

‘ಮಾನಹಾನಿ ಮತ್ತು ಮಾನಸಿಕ ಯಾತನೆ ಉಂಟು ಮಾಡಿರುವುದಕ್ಕಾಗಿ ರೂಪಾ ಅವರಿಂದ ₹1 ಕೋಟಿ ಮೊತ್ತವನ್ನು ಪರಿಹಾರ ರೂಪವಾಗಿ ಕೊಡಿಸಿಕೊಡಬೇಕು. ಅವರ ವಿರುದ್ಧ ಸೂಕ್ತ ದಂಡನೀಯ ಕ್ರಮ ಕೈಗೊಳ್ಳಬೇಕು’ ಎಂದು ಕೋರಿದ್ದರು. ದೂರು ಪರಿಗಣಿಸಿದ್ದ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ರೂಪಾ ವಿರುದ್ಧ ಕ್ರಿಮಿನಲ್ ಮಾನನಷ್ಟ ಪ್ರಕರಣ ದಾಖಲಿಸಲು ಮಾರ್ಚ್ 24ರಂದು ಆದೇಶಿಸಿತ್ತು. ಈ ಆದೇಶ ಮತ್ತು ಖಾಸಗಿ ದೂರನ್ನು ರದ್ದುಪಡಿಸಬೇಕು ಎಂದು ಕೋರಿ ರೂಪಾ ಅವರು 2023ರ ಮೇ 31ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು. ಅವರ ಅರ್ಜಿಯನ್ನು ಹೈಕೋರ್ಟ್ ವಜಾ ಮಾಡಿತ್ತು. ಬಳಿಕ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಅಹಿಂದ, ಮಾದಿಗ ಸಮುದಾಯದ ಪ್ರಶ್ನಾತೀತ ಧ್ವನಿ

ಧೀಮಂತ ನಾಯಕ ಆರ್.ಬಿ. ತಿಮ್ಮಾಪೂರ



ಕರ್ನಾಟಕ ರಾಜಕಾರಣದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿರುವ ಆರ್.ಬಿ.ತಿಮ್ಮಾಪೂರ ಅವರು ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ ಮತ್ತು ಮುಂಬೈ ಕರ್ನಾಟಕ ಭಾಗದ ಅಹಿಂದ ಮತ್ತು ಮಾದಿಗ ಸಮುದಾಯದ ಬಲಿಷ್ಠ ನಾಯಕರು. ಕಾಂಗ್ರೆಸ್ ಪಕ್ಷದಲ್ಲಿ 40 ವರ್ಷಗಳ ದೀರ್ಘ ಮತ್ತು ನಿಷ್ಠಾವಂತ ರಾಜಕೀಯ ಅನುಭವವುಳ್ಳ ಅವರ ಹಿರಿತನವು ಪಕ್ಷದ ಸಂಘಟನೆಗೆ ಅಮೂಲ್ಯ ಆಸ್ತಿಯಾಗಿದೆ.

‘ಡಿ.ಕೆ. ಶಿವಕುಮಾರ್ ಅವರ ಸಚಿವ ಸಂಪುಟದ ಮುಂಬರುವ ವಿಸ್ತರಣೆಯಲ್ಲಿ ಅವರಿಗೆ ಸಚಿವ ಸ್ಥಾನ ನೀಡುವುದು ಪ್ರಾದೇಶಿಕ ಸಮತೋಲನ ಮತ್ತು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಅಗತ್ಯ’ ಎಂಬುದು ತಿಮ್ಮಾಪೂರ ಬೆಂಬಲಿಗರ ಅಭಿಪ್ರಾಯ.

ಮಾದಿಗ ಸಮುದಾಯಕ್ಕೆ ಐತಿಹಾಸಿಕ ನ್ಯಾಯ: ಎಸ್.ಎಂ. ಕೃಷ್ಣ ಅವರ ಸರ್ಕಾರದ ಅವಧಿಯಲ್ಲಿ ಹುನಗುಂದ ಉಪಚುನಾವಣೆ ವೇಳೆ ಮಾದಿಗ ಸಮಾಜಕ್ಕೆ ಮೀಸಲಾತಿಯಲ್ಲಿ ಘೋರ ಅನ್ಯಾಯವಾಗಿದೆಯೆಂದು ಇಡೀ ಸಮುದಾಯ ಬಂಡೆದ್ದಿತ್ತು. ಆ ಕಠಿಣ ಪರಿಸ್ಥಿತಿಯಲ್ಲಿ ಧೈರ್ಯದಿಂದ ಮುನ್ನಡೆದ ತಿಮ್ಮಾಪೂರ ಅವರು, ಅಂದಿನ ಮುಖ್ಯಮಂತ್ರಿ ಮೇಲೆ ಒತ್ತಡ ಹೇರಿ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾದರು. ಮಾದಿಗ ಸಮಾಜಕ್ಕೆ ಸಾಂತ್ವನ ಹೇಳಲು ಮತ್ತು ನ್ಯಾಯ ಒದಗಿಸಲು ನಿವೃತ್ತ ನ್ಯಾಯಮೂರ್ತಿ ಸದಾಶಿವ ಅವರ ನೇತೃತ್ವದಲ್ಲಿ 'ಸದಾಶಿವ ಆಯೋಗ' ರಚನೆಗೆ ಕಾರಣಕರ್ತರಾಗಿ, ಇಡೀ ಸಮುದಾಯಕ್ಕೆ ಐತಿಹಾಸಿಕ ನ್ಯಾಯ ಒದಗಿಸಿಕೊಟ್ಟರು.

ಸುದೀರ್ಘ ರಾಜಕೀಯ ಪಯಣ ಮತ್ತು ಮುತ್ಸದ್ಧಿತನ: ತಿಮ್ಮಾಪೂರ ಅವರು ರಾಜ್ಯದ ಹಲವು ಮುಖ್ಯಮಂತ್ರಿಗಳ ಸಚಿವ ಸಂಪುಟದಲ್ಲಿ ಹಾಗೂ ವಿವಿಧ ಜವಾಬ್ದಾರಿಗಳಲ್ಲಿ ಯಶಸ್ವಿಯಾಗಿ ಸೇವೆ ಸಲ್ಲಿಸಿದ ಅನುಭವವಿದೆ. ಮಾಜಿ ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲ, ಎಸ್. ಬಂಗಾರಪ್ಪ ಮತ್ತು ವೀರಪ್ಪ ಮೊಯಿಲಿ ಅವರ ಅವಧಿಯಲ್ಲಿ ಕೆ.ಎಚ್.ಡಿ.ಸಿ ಅಧ್ಯಕ್ಷರಾಗಿ ಸೇವೆ. ಎಸ್.ಎಂ. ಕೃಷ್ಣ ಅವರ ಸಂಪುಟದಲ್ಲಿ ಹಾಗೂ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರ ಸಂಪುಟದಲ್ಲೂ ಸಚಿವರಾಗಿ ಕಾರ್ಯನಿರ್ವಹಣೆ. ಸಿದ್ದರಾಮಯ್ಯನವರ ಸರ್ಕಾರದಲ್ಲಿ ಎರಡು ಬಾರಿ ಸಂಪುಟ ದರ್ಜೆ ಸಚಿವರಾಗಿ ಸೇವೆ ಸಲ್ಲಿಸಿದರು.

ಕಾಂಗ್ರೆಸ್ ಭವಿಷ್ಯಕ್ಕೆ ಅನಿವಾರ್ಯ

‘ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಜಯಭೇರಿ ಬಾರಿಸಬೇಕಾದರೆ ಮಾದಿಗ ಸಮುದಾಯವನ್ನು ಗಟ್ಟಿಯಾಗಿ ಉಳಿಸಿಕೊಳ್ಳಬೇಕು. ತಿಮ್ಮಾಪೂರ ಅವರಿಗೆ ಸಚಿವ ಸ್ಥಾನ ನೀಡದಿದ್ದರೆ ಇಡೀ ಮಾದಿಗ ಸಮುದಾಯಕ್ಕೆ ಅನ್ಯಾಯ ಆಗುತ್ತದೆ. ಇದು ಪಕ್ಷಕ್ಕೆ ರಾಜಕೀಯ ಹಿನ್ನಡೆ ತರಬಹುದು. ಆರ್.ಬಿ. ತಿಮ್ಮಾಪೂರ ಅವರಿಗೆ ಸಚಿವ ಸ್ಥಾನ ನೀಡುವುದು ಕೇವಲ ಒಬ್ಬ ನಾಯಕನಿಗೆ ನೀಡುವ ಗೌರವವಲ್ಲ. ಇದು ಇಡೀ ಕಿತ್ತೂರು ಕರ್ನಾಟಕದ ಪ್ರಾದೇಶಿಕ ಹಿತಾಸಕ್ತಿ, ಅಹಿಂದ ವರ್ಗಗಳ ಸ್ವಾಭಿಮಾನ ಮತ್ತು ಕಾಂಗ್ರೆಸ್ ಪಕ್ಷದ ಭವಿಷ್ಯದ ಭದ್ರತೆಗೆ ಹೈಕಮಾಂಡ್ ಇಡಬೇಕಾದ ಅತ್ಯಂತ ತಾರ್ಕಿಕ ಹಾಗೂ ಅನಿವಾರ್ಯ ಹೆಜ್ಜೆಯಾಗಿದೆ’ ಎಂದು ತಿಮ್ಮಾಪೂರ ಬೆಂಬಲಿಗರು ಹೇಳುತ್ತಾರೆ.

ರೈತರ ಹಿತ ಪ್ರಥಮ ಆದ್ಯತೆ: ಸಚಿವರಾಗಿ ಮುಧೋಳ, ಬಾಗಲಕೋಟೆಗೆ ತಿಮ್ಮಾಪೂರ ಅವರು ಹಲವು ಕೊಡುಗೆಗಳನ್ನು ನೀಡಿದ್ದಾರೆ. ಅಭಿವೃದ್ಧಿ, ರೈತರ ಹಿತ ಕಾಯಲು ಪ್ರಥಮ ಆದ್ಯತೆ ನೀಡಿದ್ದಾರೆ.

ರೈತ ಮಿತ್ರ: ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ (ಆಲಮಟ್ಟಿ) ಭೂಮಿ ಕಳೆದುಕೊಂಡ ಸಂತ್ರಸ್ತರಿಗೆ ಹೋರಾಡಿ, ಪ್ರತಿ ಎಕರೆಗೆ ₹ 30 ರಿಂದ ₹ 40 ಲಕ್ಷ ದಾಖಲೆಯ ಬೆಲೆ ನಿಗದಿಪಡಿಸುವಲ್ಲಿ ಮುಖ್ಯ ಪಾತ್ರ ವಹಿಸಿದರು.

ಸಕ್ಕರೆ ಕಾರ್ಖಾನೆಗೆ ಮರುಜೀವ: ಮುಚ್ಚಿಹೋಗಿದ್ದ ಮುಧೋಳದ ರೈತರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಮರುಜೀವ ನೀಡಿ, ರೈತರು ಹಾಗೂ ಕಾರ್ಮಿಕರ ಹಿತ ಕಾಯ್ದಿದ್ದಾರೆ.

ಕುಡಿಯುವ ನೀರಿನ ಕ್ರಾಂತಿ: ಮುಧೋಳ ನಗರಕ್ಕೆ ಶಾಶ್ವತ ಕುಡಿಯುವ ನೀರು ಒದಗಿಸಲು ಕೃಷ್ಣಾ ನದಿಯಿಂದ ಪೈಪ್‌ಲೈನ್ ಮೂಲಕ ಅಂದಾಜು ₹ 200 ಕೋಟಿ ವೆಚ್ಚದ ವೆಚ್ಚದ 24*7 ಯೋಜನೆ ಜಾರಿಗೊಳಿಸಿದ್ದಾರೆ.

ಆರೋಗ್ಯ ಮತ್ತು ನಗರಾಭಿವೃದ್ಧಿ: ಬಾಗಲಕೋಟೆಯಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ, ಮುಧೋಳದಲ್ಲಿ 50 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಜಿಲ್ಲಾ ಸೆಷನ್ಸ್ ನ್ಯಾಯಾಲಯ, ಬೈಪಾಸ್ ರಸ್ತೆ ಮತ್ತು ಆಧುನಿಕ ಅಗ್ನಿಶಾಮಕ ಠಾಣೆ ಮಂಜೂರು ಮಾಡಿಸಿದ್ದಾರೆ.

ಸಂಸ್ಕೃತಿ ಮತ್ತು ಕ್ರೀಡೆ: ಮುಧೋಳದ ರನ್ನ ಕ್ರೀಡಾಂಗಣದಲ್ಲಿ ಹೈಟೆಕ್ ಸೌಲಭ್ಯ ಒದಗಿಸುವುದರ ಜೊತೆಗೆ, ನಿಂತುಹೋಗಿದ್ದ ಪ್ರಸಿದ್ಧ ರನ್ನ ಉತ್ಸವ ಮತ್ತು ಚಾಲುಕ್ಯ ಉತ್ಸವವನ್ನು ಪುನಃ ಆರಂಭಿಸಿದ್ದಾರೆ.

ಬೃಹತ್ ಸಮುದಾಯದ ಏಕೈಕ ಆಶಾಕಿರಣ: ಕಿತ್ತೂರು ಕರ್ನಾಟಕ, ಮುಂಬೈ ಕರ್ನಾಟಕ ಹಾಗೂ ಮಹಾರಾಷ್ಟ್ರದ ಗಡಿ ಭಾಗಗಳಲ್ಲಿ ಮಾದಿಗ (ಎಡಗೈ) ಸಮಾಜದ ಜನಸಂಖ್ಯೆ ಬೃಹತ್ ಆಗಿದೆ. ಈ ಇಡೀ ವಲಯದಿಂದ ಕಾಂಗ್ರೆಸ್ ಪಕ್ಷದ ಪರ ಆಯ್ಕೆಯಾಗಿರುವ ಏಕೈಕ ಪ್ರಭಾವಿ ಶಾಸಕ ತಿಮ್ಮಾಪೂರ. ಇತ್ತೀಚಿನ ಬಾಗಲಕೋಟೆ ಉಪಚುನಾವಣೆಯಲ್ಲೂ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿನಲ್ಲಿ ಜಿಲ್ಲಾ ಉಸ್ತುವಾರಿಯಾಗಿದ್ದ ಇವರ ಸಂಘಟನೆಯೇ ಮುಖ್ಯ ಕಾರಣವಾಗಿತ್ತು.

ನಿರಾಶೆಯಲ್ಲಿರುವ ಅಹಿಂದ ವರ್ಗ: ಮೊದಲ ಹಂತದಲ್ಲೇ ಇವರಿಗೆ ಸಚಿವ ಸ್ಥಾನ ಸಿಗದೇ ಇರುವುದರಿಂದ ಬಲಾಢ್ಯ ಮಾದಿಗ ಸಮುದಾಯಕ್ಕೆ ಹಾಗೂ ಅಹಿಂದ ವರ್ಗಕ್ಕೆ ತೀವ್ರ ನಿರಾಸೆಯಾಗಿದೆ.



ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

2008ರ ಬೆಂಗಳೂರು ಸರಣಿ ಬಾಂಬ್ ಸ್ಫೋಟ ಪ್ರಕರಣದ ಆರೋಪಿ

ಜೈಲಿನಲ್ಲಿದ್ದ ಶಂಕಿತ ಭಯೋತ್ಪಾದಕ ಸಾವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 2008ರಲ್ಲಿ ಬೆಂಗಳೂರಿನ 9 ಸ್ಥಳಗಳಲ್ಲಿ ಬಾಂಬ್ ಸ್ಫೋಟ
- ಘಟನೆಯಲ್ಲಿ ಒಬ್ಬರು ಮಹಿಳೆ ಸಾವು–ಹಲವರಿಗೆ ಗಾಯ
- ಆರೋಪಿಯನ್ನು 2010ರಲ್ಲಿ ಬಂಧಿಸಿದ್ದ ಎನ್ಐಎ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಬೆಂಗಳೂರು ಸರಣಿ ಬಾಂಬ್ ಸ್ಫೋಟ ಪ್ರಕರಣದ ಶಂಕಿತ ಉಗ್ರ ಅಬ್ದುಲ್ ಖಾದರ್ (60) ಹೃದಯಾಘಾತದಿಂದ ಶುಕ್ರವಾರ ಮೃತಪಟ್ಟಿದ್ದಾರೆ.

ಕೊಡಗು ಜಿಲ್ಲೆಯ ವಿರಾಜಪೇಟೆಯ ಅಬ್ದುಲ್ ಖಾದರ್, ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು. ಜೈಲಿನ ಆಸ್ಪತ್ರೆಯಲ್ಲೇ ಅವರಿಗೆ ಚಿಕಿತ್ಸೆ ಕೊಡಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗೆ ಜಯದೇವ ಆಸ್ಪತ್ರೆಗೆ ಶುಕ್ರವಾರ ಮಧ್ಯಾಹ್ನ ಕರೆದೊಯ್ಯುವ ಮಾರ್ಗದಲ್ಲಿ ಅಬ್ದುಲ್ ಖಾದರ್ ಮೃತಪಟ್ಟಿದ್ದಾರೆ. ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಮೃತದೇಹ ರವಾನೆ ಮಾಡಲಾಗಿದೆ. ಕುಟುಂಬದವರಿಗೂ ಮಾಹಿತಿ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ನಗರದಲ್ಲಿ 2008ರಲ್ಲಿ ಮಡಿವಾಳ, ಆಡುಗೋಡಿ, ಕೋರಮಂಗಲ, ರಿಚ್‌ಮಂಡ್ ಟೌನ್ ಸೇರಿದಂತೆ 9 ಸ್ಥಳಗಳಲ್ಲಿ ಬಾಂಬ್ ಸ್ಫೋಟ ನಡೆದಿತ್ತು. ಘಟನೆಯಲ್ಲಿ ಮಹಿಳೆ ಮೃತಪಟ್ಟು, ಹಲವರು ಗಾಯಗೊಂಡಿದ್ದರು. ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್ಐಎ) ವರ್ಗಾವಣೆ ಮಾಡಲಾಗಿತ್ತು. ಎನ್ಐಎ ಅಧಿಕಾರಿಗಳು, 2010ರಲ್ಲಿ ಅಬ್ದುಲ್ ಖಾದರ್‌ನನ್ನು ಬಂಧಿಸಿದ್ದರು.

ಬಾಂಬ್ ಸ್ಫೋಟ ಪ್ರಕರಣದ ವಿಚಾರಣೆಯು ಎನ್ಐಎ ನ್ಯಾಯಾಲಯದಲ್ಲಿ ನಡೆಯುತ್ತಿದ್ದು, ಕೆಲವೇ ದಿನಗಳಲ್ಲಿ ಪ್ರಕರಣದ ತೀರ್ಪು ಹೊರಬರುವ ಸಾಧ್ಯತೆಯಿತ್ತು. ತೀರ್ಪು ಹೊರಬರುವ ಮುನ್ನ ಶಂಕಿತ ಉಗ್ರ ಮೃತಪಟ್ಟಿದ್ದಾರೆ.

ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ಅಬ್ದುಲ್ ಖಾದರ್ ಶಾಮೀಲಾಗಿರುವ ಆರೋಪವಿದೆ. 2012ರಲ್ಲಿ ಹೈಕೋರ್ಟ್ ಇವರ ಜಾಮೀನು ಅರ್ಜಿಯನ್ನು ವಜಾಗೊಳಿಸಿತ್ತು. 2024ರಲ್ಲಿ ಎನ್ಐಎ ವಿಶೇಷ ನ್ಯಾಯಾಲಯದಲ್ಲೂ ಅರ್ಜಿ ತಿರಸ್ಕೃತಗೊಂಡಿತ್ತು.


ಅಬ್ದುಲ್ ಖಾದರ್ ಮೇಲೆ ಬಾಂಬ್ ಸಾಮಗ್ರಿ ಸಾಗಣೆ, ಸ್ಫೋಟಕ್ಕೆ ಬಳಸಿದ ವಾಹನಗಳನ್ನು ಒದಗಿಸುವಲ್ಲಿ ಭಾಗಿ ಆಗಿದ್ದ ಆರೋಪ ಇದೆ. ನಾಲ್ಕು ವಾಹನಗಳನ್ನು ಕೇರಳದಲ್ಲಿ ವಶಪಡಿಸಿಕೊಳ್ಳಲಾಗಿತ್ತು. ಕೇರಳ ಮೂಲದ ತಾಜುದ್ದೀನ್, ಸರ್ಫುದ್ದೀನ್ ಜೊತೆಗೆ ಅಬ್ದುಲ್ ಖಾದರ್ ಸಂಪರ್ಕದಲ್ಲಿ ಇದ್ದದ್ದು, ತನಿಖೆ ವೇಳೆ ಪತ್ತೆಯಾಗಿತ್ತು ಎಂದು ಮೂಲಗಳು ತಿಳಿಸಿವೆ.

‘ಪಿತೂರಿ ವಿರುದ್ಧ ತನಿಖೆ ನಡೆಸಿ’

ಧರ್ಮಸ್ಥಳ ಪ್ರಕರಣ: ಎಸ್ಐಟಿ ವರದಿ ಬಹಿರಂಗವಾಗಲಿ: ಸುನಿಲ್ ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮಸ್ಥಳಕ್ಕೆ ಕಳಂಕ ತರುವ ಮತ್ತು ಹಿಂದೂಗಳ ಶ್ರದ್ಧೆಗೆ ಕೊಡಲಿ ಪೆಟ್ಟು ಹಾಕುವ ಷಡ್ಯಂತ್ರಕ್ಕೆ ನೂರಾರು ಕೋಟಿ ಬಳಕೆಯಾಗಿದೆ ಎಂಬುದು ಬಯಲಿಗೆ ಬಂದಿದೆ. ಅದರ ಹಿಂದಿನ ಎಲ್ಲ ಶಕ್ತಿಗಳನ್ನು ಬಯಲಿಗೆಳೆಯಲು ಸಮಗ್ರ ತನಿಖೆ ನಡೆಸಬೇಕು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಒತ್ತಾಯಿಸಿದರು.


ವಿಜಯೇಂದ್ರ

ಸುದ್ದಿಗಾರರ ಜತೆ ಮಾತನಾಡಿದ ಅವರು, ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದನ್ನೂ ಪರಾಮರ್ಶೆ ಮಾಡದೇ ಯಾರೋ ಬೀದಿಯಲ್ಲಿ ಹೋಗುವವರ ಮಾತು ಕೇಳಿ ಎಸ್ಐಟಿ ತನಿಖೆಗೆ ಆದೇಶಿಸಿದರು. ಅದು ಸಮರ್ಪಕ ನಿರ್ಧಾರ ಆಗಿರಲಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

‘ಕಾಂಗ್ರೆಸ್ ಸರ್ಕಾರ ಇಂತಹ ಷಡ್ಯಂತ್ರಗಳಿಗೆ ಶಕ್ತಿ ತುಂಬುವ ಕೆಲಸ ಮಾಡಿರುವುದು ನೋವು ತಂದಿದೆ. ಇದರ ಹಿಂದೆ ಯಾರೆಲ್ಲ ಇದ್ದರು? ಯಾರೆಲ್ಲ ಬಂಡವಾಳ ಹಾಕಿದ್ದರು. ಅಂದಿನ ಮುಖ್ಯಮಂತ್ರಿ ಯಾಕೆ ಕಣ್ಮುಚ್ಚಿ ಎಸ್ಐಟಿಗೆ ಕೊಟ್ಟರು. ಸತ್ಯಾಸತ್ಯತೆ ಹೊರಕ್ಕೆ ಬರಬೇಕು ಎಂಬುದು ನಾಡಿನ ಜನರ ಮತ್ತು ಹಿಂದೂಗಳ ಅಪೇಕ್ಷೆ’ ಎಂದು ವಿಜಯೇಂದ್ರ ಹೇಳಿದರು.

ಎಸ್ಐಟಿ ವರದಿ ಬಹಿರಂಗವಾಗಲಿ: ‘ಧರ್ಮಸ್ಥಳ ಪ್ರಕರಣದ ತನಿಖೆಗೆ ರಚಿಸಲಾಗಿರುವ ಎಸ್ಐಟಿ ವರದಿಯನ್ನು ಸರ್ಕಾರ ತಕ್ಷಣವೇ ಬಹಿರಂಗ ಮಾಡಬೇಕು’ ಎಂದು ಶಾಸಕ ವಿ.ಸುನಿಲ್ ಕುಮಾರ್ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಎಸ್ಐಟಿ ರಚನೆ ಆಗಿ ಸಾಕಷ್ಟು ತಿಂಗಳು ಕಳೆದರೂ ವರದಿಯನ್ನು ಬಹಿರಂಗ ಮಾಡಿಲ್ಲ. ಈ ಪ್ರಕರಣದ ಹಿಂದೆ ಯಾರ ಕೈವಾಡ ಇದೆ ಎಂಬುದನ್ನು ಸರ್ಕಾರ ತಿಳಿಸಲಿ’ ಎಂದರು.

‘ಹಿಂದೂ ಧಾರ್ಮಿಕ ಕ್ಷೇತ್ರ ಧರ್ಮಸ್ಥಳದ ಬಗ್ಗೆ ವಿನಾಕಾರಣ ಅವಹೇಳನ ಮಾಡಲಾಗುತ್ತಿದೆ. ದೊಡ್ಡ ಷಡ್ಯಂತ್ರ ರೂಪಿಸಿದ್ದ ಬುರುಡೆ ಗ್ಯಾಂಗಿನ ಆರೋಪಿ ಕೋರ್ಟ್‌ಗೆ ನೀಡಿರುವ ಹೇಳಿಕೆ ಆಘಾತಕಾರಿಯಾಗಿದೆ. ಇದರ ಹಿಂದೆ ಬೇರೆ ಬೇರೆ ರಾಜ್ಯಗಳ ನಂಟಿದೆ ಎಂದು ಈ ಹಿಂದೆಯೇ ಹೇಳಿದ್ದೆವು’ ಎಂದರು.

‘ಆರೋಪಿ ಎಸ್ಐಟಿ ಮುಂದೆ ಹೇಳಲಾಗದ್ದನ್ನು ನ್ಯಾಯಾಲಯದ ಮುಂದೆ ಹೇಳಿದ್ದಾನೆಂದರೆ ಎಸ್ಐಟಿ ಯಾವ ರೀತಿಯ ತನಿಖೆ ಮಾಡಿತ್ತು. ಇದರ ಹಿಂದಿರುವ ಹುನ್ನಾರ ಏನು? ಎಲ್ಲವೂ ಸಾರ್ವಜನಿಕ ಚರ್ಚೆಗೆ ಬರಬೇಕಾಗಿದೆ’ ಎಂದು ಸುನಿಲ್ ಹೇಳಿದರು.

‘ಡಿ.ಕೆ.ಶಿವಕುಮಾರ್ ಅವರು ಕಾಸು ಬಿಡದ ತಿಮ್ಮಪ್ಪ, ಮಾತು ಬಿಡದ ಮಂಜುನಾಥ ಅಂತ ಉಲ್ಲೇಖಿಸಿ, ತಾನು ಧರ್ಮಸ್ಥಳದ ಪರವಾಗಿ ಇದ್ದೇನೆ ಎಂದು ವಿಧಾನಸಭೆಯಲ್ಲಿ ಹೇಳಿದ್ದರು. ಕೇವಲ ಹೆಸರಿನಲ್ಲಿ ಶಿವ ಅಂತ ಇಟ್ಟುಕೊಂಡರೆ ಆಗಲ್ಲ. ಧರ್ಮಸ್ಥಳದ ಬಗ್ಗೆ ಯಾರು ಅವಹೇಳನ ಮಾಡಿದ್ದಾರೋ ಅವರನ್ನು ಸರ್ಕಾರ ಒದ್ದು ಒಳಗೆ ಹಾಕಬೇಕಿತ್ತು’ ಎಂದರು.

‘ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆಯಲಿ’

ಚಿಕ್ಕಮಗಳೂರು: ‘ಧರ್ಮಸ್ಥಳ ಪ್ರಕರಣದಲ್ಲಿ ಗೃಹ ಸಚಿವರು ಸರ್ಟಿಫಿಕೇಟ್ ಕೊಡುವುದು ಬೇಕಿಲ್ಲ. ಪ್ರಕರಣವನ್ನು ಮುಚ್ಚಿ ಹಾಕುವ ಉದ್ದೇಶ ಪ್ರಿಯಾಂಕ ಖರ್ಗೆ ಅವರಿಗೆ ಇದ್ದಂತೆ ಕಾಣುತ್ತದೆ. ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ಹಾಲಿ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖೆ ನಡೆಸಬೇಕು’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಆಗ್ರಹಿಸಿದರು.

ಧರ್ಮಸ್ಥಳ ಸಂಸ್ಥೆಯ ವಿರುದ್ಧ ದೊಡ್ಡ ಪ್ರಮಾಣದ ಷಡ್ಯಂತ್ರ ನಡೆದಿದೆ. ಅದು ಈಗ ಬಯಲಾಗಿದೆ. ಹಿಂದೂ ಧಾರ್ಮಿಕ ಕೇಂದ್ರಗಳ ಕುರಿತು ಅಪನಂಬಿಕೆ ತರುವುದು ಇದರ ಹಿಂದಿರುವವರ ಹುನ್ನಾರ ಎಂದು ಸುದ್ದಿಗಾರರಿಗೆ ಶುಕ್ರವಾರ ಪ್ರತಿಕ್ರಿಯಿಸಿದರು.

ನಕ್ಸಲ್ ಬೆಂಬಲಿಸುವ, ಅರಾಜಕತೆ ಉಸಿರಾಗಿಸಿಕೊಂಡಿರುವ ಪ್ರಕಾಶ್ ರಾಜ್ ಇದರ ಭಾಗವಾಗಿರುವುದು ತಿಳಿದು ಬಂದಿದೆ. ಸರ್ಕಾರಕ್ಕೆ ಪ್ರಾಮಾಣಿಕತೆ ಇದ್ದರೆ ತಕ್ಷಣವೇ ಅವರನ್ನು ಬಂಧಿಸಬೇಕು. ಯಾವ ಉದ್ದೇಶಕ್ಕೆ ಷಡ್ಯಂತ್ರ ನಡೆದಿದೆ ಎಂಬುದನ್ನು ಬಯಲಿಗೆ ತರಬೇಕು ಎಂದರು.

‘ಆರೋಪ: ಸಮಗ್ರ ಪರಿಶೀಲನೆ ಅಗತ್ಯ’


ಪ್ರಿಯಾಂಕ್ ಖರ್ಗೆ

‘ಧರ್ಮಸ್ಥಳದ ಅಪಪ್ರಚಾರಕ್ಕಾಗಿ ₹200 ಕೋಟಿ ಬಳಸಲಾಗಿದೆ. ಇದರ ಹಿಂದೆ ಷಡ್ಯಂತ್ರವಿದೆ ಎಂಬ ಆರೋಪವನ್ನು ಸಮಗ್ರವಾಗಿ ಪರಿಶೀಲಿಸುವ ಅಗತ್ಯವಿದೆ’ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಈ ಪ್ರಕರಣದ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ಎಸ್ಐಟಿಯಿಂದ ಮಾಹಿತಿ ಕೇಳಿದೆ. ಎಸ್ಐಟಿ ನ್ಯಾಯಾಲಯಕ್ಕೆ ಮಾಹಿತಿ ನೀಡಲಿ. ಈ ಹಂತದಲ್ಲಿ ಮಾಧ್ಯಮಗಳ ಮುಂದೆ ಚರ್ಚಿಸುವುದು ಸರಿಯಲ್ಲ’ ಎಂದರು.

‘ಯಾವುದೇ ವ್ಯಕ್ತಿ ಯಾರದೊಬ್ಬರನ್ನು ಹೆಸರಿಸಿದ ತಕ್ಷಣ ಆತ ಕ್ರಿಮಿನಲ್ ಆಗುವುದಿಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ನಟ ಪ್ರಕಾಶ್ ರಾಜ್ ಹೆಸರು ಪ್ರಸ್ತಾಪವಾಗಿದೆ ಎನ್ನಲಾಗಿದೆ. ನ್ಯಾಯಾಲಯದಲ್ಲಿ ಏನಾಗುತ್ತದೆ ನೋಡೋಣ’ ಎಂದು ಹೇಳಿದರು.

‘ಧರ್ಮಸ್ಥಳದ ವಿರುದ್ಧ ಅಪಪ್ರಚಾರಕ್ಕೆ ಹೊರಗಿನಿಂದ ಹಣ ಬಂದಿದೆ. ಈ ಪಿತೂರಿಯಲ್ಲಿ ಹಲವು ಭಾಗಿಯಾಗಿದ್ದಾರೆ. ₹200 ಕೋಟಿ ಬಳಕೆ ಆಗಿದೆ ಎಂದರೆ ಅದು ಸಣ್ಣ ಮೊತ್ತವಲ್ಲ. ಆರೋಪ ಮಾಡಿರುವ ವ್ಯಕ್ತಿಯ ಹೇಳಿಕೆಗಳು ಸತ್ಯವೊ ಸುಳ್ಳೋ ಎಂಬುದನ್ನೂ ಪರಿಶೀಲಿಸಬೇಕಾಗಿದೆ’ ಎಂದೂ ಪ್ರಿಯಾಂಕ್ ಹೇಳಿದರು.

ಗಾಳಿ ಸುದ್ದಿ ನಂಬಬೇಡಿ: ಪ್ರಕಾಶ್ ರಾಜ್

‘ಕೋಟ್ಯಂತರ ಭಕ್ತರ ನಂಬಿಕೆ ವಿಷಯದಲ್ಲಿ ಯಾರೊಬ್ಬರೂ ಗಾಳಿ ಸುದ್ದಿಯನ್ನು ನಂಬಬೇಡಿ’ ಎಂದು ನಟ ಪ್ರಕಾಶ್ ರಾಜ್ ಹೇಳಿದ್ದಾರೆ.

ಪ್ರಕರಣದಲ್ಲಿ ತಮ್ಮ ಹೆಸರು ಪ್ರಸ್ತಾಪವಾಗಿರುವ ಕಾರಣ ‘ಎಕ್ಸ್’ನಲ್ಲಿ ಅವರು ಪೋಸ್ಟ್ ಮಾಡಿದ್ದಾರೆ.

‘ಎಲ್ಲರಿಗೂ ನಮಸ್ಕಾರ.. ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ನನ್ನ ಬಗ್ಗೆ ಕೆಲವು ಸುದ್ದಿಗಳು ಚರ್ಚೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಇದು ಅತ್ಯಂತ ಸೂಕ್ಷ್ಮ ವಿಷಯವಾಗಿರುವುದರಿಂದ ಇಂತಹ ಅನುಮಾನಗಳಿಗೆ ಉತ್ತರಿಸುವುದು ನನ್ನ ಕರ್ತವ್ಯ. ನಾನು ಸದ್ಯ ಊರಿನಲ್ಲಿ ಇಲ್ಲ. ಇನ್ನೆರಡು ದಿನಗಳಲ್ಲಿ ನಾನೇ ಖುದ್ದಾಗಿ ಬಂದು ಮಾಧ್ಯಮಗಳ ಮೂಲಕ ಸೂಕ್ತ ಪ್ರತಿಕ್ರಿಯೆ ನೀಡಲಿದ್ದೇನೆ’ ಎಂದಿದ್ದಾರೆ.

ಹಾಸ್ಟೆಲ್‌ನಲ್ಲಿ ಬಾಲಕಿ ಹೆರಿಗೆ: ಮಗು ಸಾವು

ಪ್ರಜಾವಾಣಿ ವಾರ್ತೆ

ಶಿರಸಿ: ತಾಲ್ಲೂಕಿನ ವಿದ್ಯಾರ್ಥಿನಿಲಯವೊಂದರಲ್ಲಿ ಶುಕ್ರವಾರ 9ನೇ ತರಗತಿ ಬಾಲಕಿಯೊಬ್ಬಳು ಮಗುವಿಗೆ ಜನ್ಮ ನೀಡಿದ್ದು, ಮಗು ಮೃತಪಟ್ಟಿದೆ.

ರಾಜ್ಯ ಸರ್ಕಾರದ ಇಲಾಖೆಯೊಂದರ ಅಧೀನದಲ್ಲಿರುವ ವಿದ್ಯಾರ್ಥಿನಿಲಯದ ಶೌಚಾಲಯದಲ್ಲಿ ಬಾಲಕಿಯು ಸ್ವಯಂ ಹೆರಿಗೆ ಮಾಡಿಕೊಂಡು, ಮಗುವನ್ನು ಕಿಟಕಿಯಿಂದ ಹೊರಗೆ ಎಸೆದಿದ್ದಾಳೆ. ಮಗು ತಕ್ಷಣ ಮೃತಪಟ್ಟಿದೆ. ಶಾಲೆಯ ಹಿಂಭಾಗದಲ್ಲಿ ಸಿಬ್ಬಂದಿ, ಸ್ವಚ್ಛತೆಗೆ ತೆರಳಿದ್ದ ವೇಳೆ ವಿಷಯ ಗೊತ್ತಾಗಿದೆ. ಬಳಿಕ ವಿದ್ಯಾರ್ಥಿನಿಲಯದ ಮುಖ್ಯಸ್ಥರು ಈ ವಿಷಯವನ್ನು ಪೊಲೀಸ್ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕಂದಾಯ ಇಲಾಖೆ ಗಮನಕ್ಕೆ ತಂದಿದ್ದಾರೆ. ಬಾಲಕಿಯನ್ನು ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆಕೆಯ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ವೈದ್ಯಕೀಯ ಮೂಲಗಳು ತಿಳಿಸಿವೆ.

‘ಗರ್ಭ ಧರಿಸಲು ಹತ್ತಿರದ ರಕ್ತ ಸಂಬಂಧಿಯೇ ಕಾರಣ ಎಂದು ಬಾಲಕಿ ತಿಳಿಸಿದ್ದಾಳೆ. ಆಕೆ ನೀಡಿದ ಮಾಹಿತಿ ಆಧರಿಸಿ ತನಿಖೆ ಆರಂಭಿಸಿದ್ದೇವೆ’ ಎಂದು ಶಿರಸಿ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಸೀರ್ ಅಹಮದ್ ದಿವಾಳಿ: ಎನ್‌ಸಿಎಲ್‌ಟಿ

ಬ್ಯಾಂಕ್‌ಗಳಿಗೆ ₹1,454 ಕೋಟಿ ಮರುಪಾವತಿ ಮಾಡದ ಪ್ರಕರಣ

• ನಷ್ಟವಾದ ಕಾರಣ ಸಾಲ ಮರುಪಾವತಿಸದ ಕಂಪನಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಎಸ್‌ಬಿಐ, ಕೆನರಾ, ಐಡಿಬಿಐ ಬ್ಯಾಂಕ್‌ಗಳಿಂದ ಸಾಲ
- ನಸೀರ್, ಪತ್ನಿ ಮತ್ತು ಪುತ್ರ ವೈಯಕ್ತಿಕ ಖಾತರಿ

ಬೆಂಗಳೂರು: ಬ್ಯಾಂಕ್‌ಗಳಿಂದ ಪಡೆದಿದ್ದ ಸಾಲ ಮತ್ತು ಬಡ್ಡಿಯ ಮೊತ್ತ ₹1,454.71 ಕೋಟಿ ಮರುಪಾವತಿ ಮಾಡದೇ ಇರುವ ಪ್ರಕರಣದಲ್ಲಿ ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯ ನಸೀರ್ ಅಹಮದ್ ಅವರನ್ನು ದಿವಾಳಿ ಎಂದು ರಾಷ್ಟ್ರೀಯ ಕಂಪನಿ ಕಾನೂನುಗಳ ನ್ಯಾಯ ಮಂಡಳಿಯು (ಎನ್‌ಸಿಎಲ್‌ಟಿ) ಘೋಷಿಸಿದೆ. ಇದರಿಂದಾಗಿ ನಸೀರ್ ಅವರ ವಿಧಾನ ಪರಿಷತ್ ಸದಸ್ಯತ್ವವೂ ರದ್ದಾಗುವ ಸಾಧ್ಯತೆ ಇದೆ.

ನಸೀರ್ ಅವರು ವ್ಯವಸ್ಥಾಪಕ ನಿರ್ದೇಶಕರಾಗಿದ್ದ, ಅವರ ಪತ್ನಿ ನುಝುತ್ ಆಯಿಷಾ ನಸೀರ್ ಮತ್ತು ಪುತ್ರ ಅವ್ವೈಜ್ ಅಹಮದ್ ಅವರು ನಿರ್ದೇಶಕರಾಗಿದ್ದ ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್, ಎಸ್‌ಬಿಐ, ಕೆನರಾ, ಐಡಿಬಿಐ ಬ್ಯಾಂಕ್‌ಗಳಿಂದ ಸಾಲ ಪಡೆದಿತ್ತು. ಈ ಸಾಲಕ್ಕೆ ನಸೀರ್, ಅವರ ಪತ್ನಿ ಮತ್ತು ಪುತ್ರ ವೈಯಕ್ತಿಕ ಖಾತರಿ ನೀಡಿದ್ದರು.

ಕಂಪನಿಯು ನಷ್ಟವಾದ ಕಾರಣ ಸಾಲ ಮರುಪಾವತಿ ಮಾಡಿರಲಿಲ್ಲ. ಸಾಲ ವಸೂಲಾತಿಗೆ ಬ್ಯಾಂಕ್‌ಗಳು ಮಾಡಿದ್ದ ಪ್ರಯತ್ನ ಫಲ ನೀಡಿರಲಿಲ್ಲ. ಹೀಗಾಗಿ ಬ್ಯಾಂಕ್‌ಗಳು ಸ್ಕಾಟ್ಸ್ ಗಾರ್ಮೆಂಟ್ಸ್ ಲಿಮಿಟೆಡ್‌ನ ಸಾಲವನ್ನು ಅನುತ್ಪಾದಕ ಸಾಲ (ಎನ್‌ಪಿಎ) ಎಂದು ವರ್ಗೀಕರಿಸಿದ್ದವು. ಜತೆಗೆ ಎನ್‌ಸಿಎಲ್‌ಟಿ ಮೂಲಕ ಸಾಲ ವಸೂಲಿಗೆ ಮುಂದಾಗಿದ್ದವು.

ದಿವಾಳಿ ಸಂಹಿತೆ (ಐಬಿಸಿ) ಅಡಿಯಲ್ಲಿ ಪರಿಹಾರಾತ್ಮಕ ವಸೂಲಾತಿ ಕ್ರಮ ಮತ್ತು ಕಂಪನಿಯ ಸ್ವತ್ತುಗಳ ಮುಟ್ಟುಗೋಲು ಪ್ರಕ್ರಿಯೆಯನ್ನು 2019ರಲ್ಲಿ ಆರಂಭಿಸಲಾಗಿತ್ತು. ಪರಿಹಾರಾತ್ಮಕ ಕ್ರಮದ ಪ್ರಕಾರ ನಸೀರ್ ಮತ್ತು ಕುಟುಂಬದವರು ಬ್ಯಾಂಕ್‌ಗಳಿಗೆ ಒಟ್ಟು ₹791 ಕೋಟಿ ಪಾವತಿ ಮಾಡುವ ಪ್ರಸ್ತಾಪವನ್ನು ಇಡಲಾಗಿತ್ತು. ಮರುಪಾವತಿ ಕಾರ್ಯಯೋಜನೆಯನ್ನು ಸಲ್ಲಿಸಿ ಎಂದು ಎನ್‌ಸಿಎಲ್‌ಟಿಯು ನಸೀರ್ ಮತ್ತು ಇತರ ಖಾತರಿದಾರರಿಗೆ ಸೂಚಿಸಿತ್ತು.

ಹಲವು ತಿಂಗಳ ಸಮಯಾವಕಾಶ ನೀಡಿದರೂ ಖಾತರಿದಾರರು ಮರುಪಾವತಿ ಕಾರ್ಯಯೋಜನೆಯನ್ನು ಸಲ್ಲಿಸಿರಲಿಲ್ಲ. ಹೀಗಾಗಿ ಬ್ಯಾಂಕ್‌ಗಳು 'ದಿವಾಳಿತನ ಘೋಷಣೆ ಪ್ರಕ್ರಿಯೆ ಆರಂಭಿಸಿ' ಎಂದು ಎನ್‌ಸಿಎಲ್‌ಟಿಗೆ ಅರ್ಜಿ ಸಲ್ಲಿಸಿದ್ದವು. ಸುನಿಲ್ ಕುಮಾರ್ ಅಗರ್‌ವಾಲ್ (ನ್ಯಾಯಾಂಗ ಸದಸ್ಯ) ಮತ್ತು ರಾಧಾಕೃಷ್ಣ ಶ್ರೀಪಾದ (ತಾಂತ್ರಿಕ ಸದಸ್ಯ) ಅವರಿದ್ದ ಎನ್‌ಸಿಎಲ್‌ಟಿಯ ಬೆಂಗಳೂರು ಪೀಠವು ವಿಚಾರಣೆ ನಡೆಸಿತ್ತು.

'ನಾವು ಬ್ಯಾಂಕ್‌ಗಳಿಗೆ ನೇರವಾಗಿ ಖಾತರಿ ಒದಗಿಸಿಲ್ಲ. ಹೀಗಾಗಿ ನಮ್ಮ ವಿರುದ್ಧ ದಿವಾಳಿತನ ಘೋಷಣೆ ಪ್ರಕ್ರಿಯೆ ಆರಂಭಿಸಲು ಸಾಧ್ಯವಿಲ್ಲ' ಎಂದು ನಸೀರ್ ಮತ್ತು ಕುಟುಂಬದವರು ವಾದಿಸಿದ್ದರು. ಆದರೆ ಪೀಠವು ಈ ವಾದವನ್ನು ತಿರಸ್ಕರಿಸಿ, ನಸೀರ್ ಮತ್ತು ಕುಟುಂಬದವರು ದಿವಾಳಿ ಎಂದು ಘೋಷಿಸಿದೆ. ಮುಂದಿನ ಪ್ರಕ್ರಿಯೆಗಾಗಿ ರವೀಂದ್ರ ಬೆಲೆಯೂರ್ ಅವರನ್ನು ದಿವಾಳಿತನ ಟ್ರಸ್ಟಿ ಆಗಿ ನೇಮಿಸಿದೆ.

ವಿಧಾನ ಪರಿಷತ್ತಿನ ಸದಸ್ಯತ್ವ, ಮತಹಕ್ಕಿಗೂ ಕುತ್ತು...


ನಸೀರ್ ಅಹಮದ್


ದಿವಾಳಿ ಸಂಹಿತೆಯ 140ನೇ ಸೆಕ್ಷನ್ ಪ್ರಕಾರ ದಿವಾಳಿ ಎಂದು ಘೋಷಿತರಾದವರು ಸರ್ಕಾರಿ ಕರ್ತವ್ಯ, ಚುನಾಯಿತ ಹುದ್ದೆಯಲ್ಲಿ ಮುಂದುವರೆಯುವಂತಿಲ್ಲ. ಸಂವಿಧಾನದ 191(1) (ಸಿ) ಸೆಕ್ಷನ್ ಸಹ ಇದನ್ನೇ ಹೇಳುತ್ತದೆ. ಈ ಪ್ರಕಾರ ನಸೀರ್ ಅಹಮದ್ ಅವರನ್ನು ವಿಧಾನ ಪರಿಷತ್ ಸದಸ್ಯತ್ವದಿಂದ ಅಮಾನತು ಮಾಡಬೇಕಾಗುತ್ತದೆ.

ಜತೆಗೆ, ಅವರು ಸ್ಪರ್ಧಿಸಲಿರುವ ಚುನಾವಣೆ, ಆಯ್ಕೆ ಪ್ರಕ್ರಿಯೆಯಿಂದಲೂ ದೂರ ಉಳಿಯಬೇಕಾಗುತ್ತದೆ. ಮತದಾನದ ಹಕ್ಕನ್ನೂ ಅವರು ಕಳೆದುಕೊಳ್ಳಬೇಕಾಗುತ್ತದೆ.

ನಸೀರ್ ಮತ್ತು ಅವರ ಕುಟುಂಬದವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ದಿವಾಳಿ ಸಂಹಿತೆಯ 125ನೇ ಸೆಕ್ಷನ್ ದಿವಾಳಿತನ ಟ್ರಸ್ಟಿಗೆ ನೀಡುತ್ತದೆ. ಆಸ್ತಿಯ ಮೌಲ್ಯದ ಜತೆಗೆ, ಸಾಲದ ಉಳಿಕೆ ಮೊತ್ತವನ್ನು ವಸೂಲಿ ಮಾಡಲು ಟ್ರಸ್ಟಿಯು ಕ್ರಮಕೈಕೊಳ್ಳಬಹುದು. ಟ್ರಸ್ಟಿಯ ಅನುಮತಿ ಇಲ್ಲದೆ ನಸೀರ್ ಸೇರಿ ಮೂವರು ಖಾತರಿದಾರರು ಹೊಸದಾಗಿ ಸಾಲ ಮಾಡುವಂತಿಲ್ಲ, ಯಾವುದೇ ಸ್ವತ್ತು ಮಾರಾಟ ಮಾಡುವಂತಿಲ್ಲ, ಇತರ ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಳ್ಳುವಂತಿಲ್ಲ. ಪೂರ್ವಾನುಮತಿ ಪಡೆದು ಪಾಲುದಾರಿಕೆ ಮಾಡಿಕೊಳ್ಳುವುದಿದ್ದರೂ, ತಾನು ದಿವಾಳಿ ಎಂಬುದನ್ನು ಪಾಲುದಾರರಿಗೆ ಕಡ್ಡಾಯವಾಗಿ ತಿಳಿಸಬೇಕು. ಟ್ರಸ್ಟಿಯ ಅನುಮತಿ ಪಡೆದುಕೊಂಡೇ ವಿದೇಶಿ ಪ್ರಯಾಣ ಕೈಗೊಳ್ಳಬಹುದು.

'ಇದು ಕೊನೇ ಪ್ರಮಾಣಪತ್ರ ಆಗಬಹುದು'

ಪ್ರಜಾವಾಣಿ ವಾರ್ತೆ


ಮಲ್ಲಿಕಾರ್ಜುನ ಖರ್ಗೆ

ಬೆಂಗಳೂರು: 'ಇದು ನನ್ನ ಕೊನೆಯ ಪ್ರಮಾಣಪತ್ರ ಸ್ವೀಕಾರ ಆಗಬಹುದು' ಎಂದು ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ಅವರಿಂದ ಶುಕ್ರವಾರ ಪ್ರಮಾಣಪತ್ರ ಸ್ವೀಕರಿಸಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

'13ನೇ ಸಲ ಜನಪ್ರತಿನಿಧಿಯಾಗುವ ಅವಕಾಶ ಸಿಕ್ಕಿದೆ. ಇದಕ್ಕಾಗಿ ಕಲಬುರಗಿ ಜನತೆ, ಪಕ್ಷದ ಕಾರ್ಯಕರ್ತರು ಮತ್ತು ನಾಯಕರಿಗೆ ಕೃತಜ್ಞತೆ ಸಲ್ಲಿಸುವೆ. ಜೀವನದಲ್ಲಿ ಇಷ್ಟು ಅವಕಾಶ ಸಿಗಲು ಕಾಂಗ್ರೆಸ್ ಪಕ್ಷವೇ ಕಾರಣ. ಇಂದಿರಾಗಾಂಧಿ ಅವರ ಅವಧಿಯಿಂದ ಸೋನಿಯಾಗಾಂಧಿವರೆಗೆ ನನಗೆ ಅವಕಾಶಗಳು ಸಿಕ್ಕಿವೆ. 1972ರಲ್ಲಿ ನಾನು ವಿಧಾನಸೌಧಕ್ಕೆ ಕಾಲಿಟ್ಟೆ. ರಾಜಕೀಯ ಜೀವನದಲ್ಲಿ ಅನೇಕ ಏರುಪೇರುಗಳನ್ನು ನೋಡಿದ್ದೇನೆ' ಎಂದು ಹೇಳಿದರು.

'ಪ್ರಜಾಪ್ರಭುತ್ವ ನಿಷ್ಪಕ್ಷವಾಗಿ ಇರಬೇಕಾದರೆ, ಮಾಧ್ಯಮವೂ ನಿಷ್ಪಕ್ಷವಾಗಿ ಕಾರ್ಯ ನಿರ್ವಹಿಸಬೇಕು. ರಾಜಕೀಯ ನಡವಳಿಕೆಯೂ ಹಾಗೇ ಇರಬೇಕು. 60 ವರ್ಷಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ನೋಡಿದ್ದೇನೆ. ರಾಜಕೀಯ ಮತ್ತು ಮಾಧ್ಯಮ ಎರಡೂ ಕ್ಷೇತ್ರಗಳಲ್ಲೂ ಸುಧಾರಣೆ ಆಗಬೇಕು' ಎಂದರು.

ರಾಜ್ಯಸಭಾ ಚುನಾವಣೆಯಲ್ಲಿ ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ತಿರಸ್ಕೃತಗೊಂಡ ವಿಷಯ ಕುರಿತು ಮಾತನಾಡಿದ ಅವರು, 'ಇದೊಂದು ವಿಶೇಷ ಪ್ರಕರಣ. ಈ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನಿರ್ದೇಶನದಂತೆ ಹೈಕೋರ್ಟ್ ಮೆಟ್ಟಿಲು ಹತ್ತುತ್ತೇವೆ. ಮಧ್ಯಪ್ರದೇಶದಲ್ಲಿ ನಡೆದಿರುವುದು ಕಾನೂನುಬಾಹಿರ ಮತ್ತು ಪ್ರಜಾಪ್ರಭುತ್ವ ವಿರೋಧಿ. ಮೋದಿ ಬೆಂಬಲ ಇಲ್ಲದೇ ಇದು ನಡೆಯುತ್ತಿರಲಿಲ್ಲ' ಎಂದು ಖರ್ಗೆ ದೂರಿದರು.

'ಎಲ್ಲ ಕಡೆ ಆರ್‌ಎಸ್‌ಎಸ್‌ನ ಏಜೆಂಟರನ್ನು ಕೂರಿಸಿ, ಮನಸ್ಸಿಗೆ ಬಂದಂತೆ ಆಟ ಆಡುತ್ತಿದ್ದಾರೆ. ಜಾರ್ಖಂಡ್‌ನಲ್ಲೂ ಇದೇ ರೀತಿ ಆಗಿದೆ. ಮತ ಖರೀದಿ, ಮತ ವಿಭಜನೆಗಾಗಿ ಏಜೆಂಟರನ್ನು ಕೂರಿಸುತ್ತಾರೆ' ಎಂದರು.

ರಾಜ್ಯ ವಕೀಲರ ಪರಿಷತ್ ಹೈಕೋರ್ಟ್ ಆದೇಶಕ್ಕೆ ಬದ್ಧ

ಬೆಂಗಳೂರು: 'ಕರ್ನಾಟಕ ರಾಜ್ಯ ವಕೀಲರ ಪರಿಷತ್'ಗೆ (ಕೆಎಸ್‌ಬಿಸಿ) ನಡೆದ ಚುನಾವಣೆಯ ಫಲಿತಾಂಶವು ಈ ಕುರಿತಾಗಿ ದಾಖಲಾಗಿರುವ ರಿಟ್ ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದು ಹೈಕೋರ್ಟ್ ಆದೇಶಿಸಿದೆ.

ಕೆಎಸ್‌ಬಿಸಿ ಚುನಾವಣೆಯಲ್ಲಿನ ಭ್ರಷ್ಟಾಚಾರ ಮತ್ತು ನೀತಿ ಸಂಹಿತೆ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ, ಸ್ಪರ್ಧಿಯಾಗಿರುವ ಸಂಧ್ಯಾ ಯು ಪ್ರಭು ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅರ್ಜಿಯಲ್ಲಿ ಉಲ್ಲೇಖಿಸಿರುವ ಆರೋಪಗಳು ಗಂಭೀರ ಸ್ವರೂಪದ್ದಾಗಿವೆ. ಹಾಗಾಗಿ, ಚುನಾವಣಾ ಪ್ರಕ್ರಿಯೆಯ ಪಾವಿತ್ರ್ಯ ಕಾಪಾಡಲು ಮತ್ತು ಸಂಬಂಧಪಟ್ಟ ಎಲ್ಲಾ ಪಕ್ಷಗಾರರ ಹಕ್ಕುಗಳು ಹಾಗೂ ವಾದಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ಸೂಕ್ತವಾದ ಮಧ್ಯಂತರ ಕ್ರಮದ ಅಗತ್ಯವಿದೆ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಈ ಆದೇಶ ಹೊರಡಿಸಿದೆ.

ನ್ಯಾಯ ಪೀಠವು, 'ಚುನಾವಣಾ ಪ್ರಕ್ರಿಯೆಯ ಸಮಯದಲ್ಲಿ ಸಲ್ಲಿಸಲಾಗಿರುವ ದೂರುಗಳಿಗೆ ಸಂಬಂಧಿಸಿದಂತೆ ಚುನಾವಣಾ ಅಧಿಕಾರಿ, ವೀಕ್ಷಕ, ಕೇಂದ್ರ ಚುನಾವಣಾ ನ್ಯಾಯಮಂಡಳಿ ಅಥವಾ ಸಮಿತಿ ಮತ್ತು ಸಂಬಂಧಪಟ್ಟ ಯಾವುದೇ ಇತರೆ ಪ್ರಾಧಿಕಾರಗಳು ಯಾವ ಕ್ರಮ ಕೈಗೊಂಡಿವೆ? ಈ ಪ್ರಕರಣದಲ್ಲಿ ಇವುಗಳು ತಮ್ಮ ಶಾಸನಬದ್ಧ ಚೌಕಟ್ಟನ್ನು ಪಾಲಿಸಿವೆಯೇ ಎಂಬುದರ ಪರಾಮರ್ಶೆಯ ಅಗತ್ಯವಿದೆ' ಎಂದಿದೆ.

ಅಂತೆಯೇ, 'ಪ್ರತಿವಾದಿ ಕೆಎಸ್‌ಬಿಸಿ ಚುನಾವಣಾಧಿಕಾರಿ, ಉನ್ನತಾಧಿಕಾರ ಚುನಾವಣಾ ಸಮಿತಿ ಅಧ್ಯಕ್ಷ ಮತ್ತು ಭಾರತೀಯ ವಕೀಲರ ಪರಿಷತ್‌ನ ಕಾರ್ಯ ದರ್ಶಿಗಳು ಈ ಅರ್ಜಿಗೆ ಸಂಬಂಧಿಸಿ ದಂತೆ ತಮ್ಮ ನಿಲುವನ್ನು ಸ್ಪಷ್ಟಪಡಿಸುವ ಆಕ್ಷೇಪಣೆ ಸಲ್ಲಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿದೆ.

ಕೋರಿಕೆ

'ಕೆಎಸ್‌ಬಿಸಿಗೆ 2026ರ ಮಾರ್ಚ್ 11ರಂದು ನಡೆದ ಚುನಾವಣೆಯಲ್ಲಿನ ಅಕ್ರಮದ ಆರೋಪಗಳು ತೃಪ್ತಿಕರವಾಗಿ ಪರಿಹಾರ ಕಾಣುವ ತನಕ ಫಲಿತಾಂಶ ತಡೆ ಹಿಡಿಯಬೇಕು ಎಂಬುದೂ ಸೇರಿದಂತೆ ಚುನಾವಣಾ ಪೂರ್ವ ಮತ್ತು ನಂತರದ ದೂರುಗಳಿಗೆ ಸಂಬಂಧಿಸಿದಂತೆ ಕಾನೂನು ಕ್ರಮ ಜರುಗಿಸುವ ನಿಟ್ಟಿನಲ್ಲಿ ಸಕ್ಷಮ ಪ್ರಾಧಿಕಾರದ ಅಧಿಕಾರಿಗಳು ತಮ್ಮ ಕರ್ತವ್ಯ ಪಾಲಿಸುವಂತೆ ಆದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

'ಪೊಲೀಸ್ ಸಾಮರ್ಥ್ಯ ಸುಧಾರಣೆಗೆ ನೆರವು ನೀಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಎರಡು ಹೆಚ್ಚುವರಿ ಇಂಡಿಯಾ ರಿಸರ್ವ್ ಬೆಟಾಲಿಯನ್ಸ್ ಸೃಷ್ಟಿ, ಪೊಲೀಸ್ ಇಲಾಖೆ ಚಟುವಟಿಕೆಗಳಿಗೆ ಸಿಎಸ್‌ಆರ್ ನಿಧಿ ಬಳಕೆ, ಪೊಲೀಸ್ ತರಬೇತಿ ಸಂಸ್ಥೆಗಳಲ್ಲಿ ಮೂಲಸೌಕರ್ಯ ಮೇಲ್ದರ್ಜೆಗೆ ಏರಿಕೆ, ಕಾರಾಗೃಹಗಳ ಆಧುನೀಕರಣ ಸೇರಿದಂತೆ ಕರ್ನಾಟಕ ರಾಜ್ಯದ ಭದ್ರತಾ ಮೂಲಸೌಕರ್ಯ ಮತ್ತು ಪೊಲೀಸ್ ಸಾಮರ್ಥ್ಯ ಸುಧಾರಣೆಗೆ ನೆರವಾಗುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಮನವಿ ಸಲ್ಲಿಸಿದರು.

ನವದೆಹಲಿಯಲ್ಲಿ ಗೃಹ ಸಚಿವರನ್ನು ಶುಕ್ರವಾರ ಭೇಟಿ ಮಾಡಿದ ಅವರು ಮನವಿ ಸಲ್ಲಿಸಿದರು.


ನವದೆಹಲಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಡಿ.ಕೆ. ಶಿವಕುಮಾರ್ ಅವರು ಭೇಟಿ ಮಾಡಿದರು —ಪಿಟಿಐ ಚಿತ್ರ

ಪ್ರಮುಖ ಅಂಶಗಳು

ರಾಜ್ಯ ಪೊಲೀಸ್‌ಗೆ ಪ್ರಶಸ್ತಿ: ಕರ್ನಾಟಕ ರಾಜ್ಯ ಪೊಲೀಸ್‌ಗೆ 'ಪ್ರೆಸಿಡೆಂಟ್ಸ್ ಕಲರ್' ಪ್ರಶಸ್ತಿಯನ್ನು ನೀಡುವ ಕುರಿತಾದ ಪ್ರಸ್ತಾವನೆಯನ್ನು 2024ರಲ್ಲಿ ಗೃಹ ಸಚಿವಾಲಯಕ್ಕೆ ಸಲ್ಲಿಸಲಾಗಿದ್ದು, ಪರಿಶೀಲನೆಯಲ್ಲಿದೆ. ಈ ವಿಷಯವನ್ನು ಶೀಘ್ರವಾಗಿ ಪರಿಶೀಲಿಸಿ 'ಪ್ರೆಸಿಡೆಂಟ್ಸ್ ಕಲರ್' ಪ್ರಶಸ್ತಿ ನೀಡಲು ಅನುಮೋದನೆ ನೀಡಬೇಕು.

ಎರಡು ಹೆಚ್ಚುವರಿ ಇಂಡಿಯಾ ರಿಸರ್ವ್ ಬೆಟಾಲಿಯನ್ಸ್ ಸೃಷ್ಟಿ: ವಿಜಯನಗರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಇನ್ನೂ ಎರಡು ಹೆಚ್ಚುವರಿ ಐಆರ್‌ಬಿ ಬೆಟಾಲಿಯನ್‌ಗಳನ್ನು ಸ್ಥಾಪಿಸಲು ಅಂದಾಜು ₹243.87 ಕೋಟಿ ಪ್ರಸ್ತಾವನೆಯನ್ನು 2025ರ ಫೆಬ್ರುವರಿಯಲ್ಲಿ ಸಚಿವಾಲಯಕ್ಕೆ ಸಲ್ಲಿಸಲಾಗಿದೆ. ಇದಕ್ಕೆ ಶೀಘ್ರದಲ್ಲಿ ಮಂಜೂರಾತಿ ನೀಡಬೇಕು.

ಪೊಲೀಸ್ ವ್ಯವಸ್ಥೆ ಆಧುನೀಕರಣಕ್ಕೆ ನೆರವು: ನಾಲ್ಕು ಪ್ರಮುಖ ನಗರಗಳಲ್ಲಿ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ಗಳು ಹಾಗೂ ಸಂವಹನ ಉಪಕರಣಗಳ ಸ್ಥಾಪನೆಗಾಗಿ ಎಎಸ್‌ಯುಎಂಪಿ ಯೋಜನೆಯಡಿ ₹280 ಕೋಟಿಯ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಆದಷ್ಟು ಬೇಗ ಮಂಜೂರಾತಿ ನೀಡಬೇಕು.

ಸಿಎಸ್‌ಆರ್ ನೆರವು: ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯನ್ನು ಬಳಸಿಕೊಳ್ಳಲು ಅನುಕೂಲವಾಗುವಂತೆ ಕಂಪನಿಗಳ ಕಾಯ್ದೆ– 2013ರ ಷೆಡ್ಯೂಲ್ 7ರ ಅಡಿಯಲ್ಲಿ ಪೊಲೀಸ್ ಸಂಬಂಧಿತ ಚಟುವಟಿಕೆಗಳನ್ನು ಸೇರಿಸುವ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಶೀಘ್ರದಲ್ಲಿ ಅನುಮೋದನೆ ನೀಡಬೇಕು.

ಮೂಲಸೌಕರ್ಯ ಅಭಿವೃದ್ಧಿ: ಪೊಲೀಸ್ ತರಬೇತಿ ಸಂಸ್ಥೆಗಳಲ್ಲಿ ಮೂಲ ಸೌಕರ್ಯಗಳನ್ನು ಮೇಲ್ದರ್ಜೆಗೆ ಏರಿಸಲು ₹258.53 ಕೋಟಿಯ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಇದಕ್ಕೆ ಒಪ್ಪಿಗೆ ಕೊಡಬೇಕು.

ಜೈಲುಗಳ ಆಧುನೀಕರಣ: ಕಾರಾಗೃಹಗಳ ಆಧುನೀಕರಣ ಯೋಜನೆಯಡಿ 2025-26ರ ಆರ್ಥಿಕ ವರ್ಷಕ್ಕೆ (ಸಿಸಿಟಿವಿ, ವಾಕಿ-ಟಾಕಿ ಮತ್ತು ಇತರ ಭದ್ರತಾ ಉಪಕರಣಗಳ ಖರೀದಿಗೆ) ₹20 ಕೋಟಿ ಬಿಡುಗಡೆ ಮಾಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಮೊತ್ತವನ್ನು ಶೀಘ್ರ ಮಂಜೂರು ಮಾಡಬೇಕು.

ಪೊಲೀಸ್ ಠಾಣೆಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ಮೇಲ್ದರ್ಜೆಗೆ ಹಣ: ಸುಪ್ರೀಂ ಕೋರ್ಟ್‌ನ ಸೂಚನೆ ಅನುಸಾರ, ಪೊಲೀಸ್ ಠಾಣೆಗಳಲ್ಲಿ ಅಳವಡಿಸಲಾಗಿರುವ ಸಿಸಿಟಿವಿ ಕ್ಯಾಮೆರಾಗಳನ್ನು ಮೇಲ್ದರ್ಜೆಗೆ ಏರಿಸಲು ₹278.26 ಕೋಟಿಯ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದಕ್ಕೆ ಸಕಾರಾತ್ಮಕವಾಗಿ ಪರಿಗಣಿಸಬೇಕು.

'ನದಿ ಜೋಡಣೆ: ನ್ಯಾಯಯುತ ಪಾಲು ಕೊಡಿ'

ನದಿಗಳ ಜೋಡಣೆ ಸಂದರ್ಭದಲ್ಲಿ ಸಮಾನ ಹಂಚಿಕೆಯ ತತ್ವದ ಆಧಾರದಲ್ಲಿ ಕರ್ನಾಟಕ ರಾಜ್ಯಕ್ಕೆ ನ್ಯಾಯಸಮ್ಮತವಾದ ಪಾಲನ್ನು ಹಂಚಿಕೆ ಮಾಡಬೇಕು ಎಂದು ಡಿ.ಕೆ. ಶಿವಕುಮಾರ್ ಅವರು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರನ್ನು ಭೇಟಿಯಾಗಿ ಹಕ್ಕೊತ್ತಾಯ ಮಂಡಿಸಿದ್ದಾರೆ.

ಮುಖ್ಯಮಂತ್ರಿಗಳ ಪ್ರಸ್ತಾವನೆಯ ಪ್ರಮುಖ ಅಂಶಗಳು:

ಮೇಕೆದಾಟು ಯೋಜನೆ: ಯೋಜನೆಯ ಅನುಮತಿಯ ಬಗ್ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕೇಂದ್ರ ಜಲ ಆಯೋಗ ನಿರ್ಧಾರ ತೆಗೆದುಕೊಳ್ಳಬೇಕು ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಯೋಜನೆಯ ಮೌಲ್ಯಮಾಪನ ಮಾಡುವಂತೆ ಜಲ ಆಯೋಗಕ್ಕೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಈ ಹಿಂದೆಯೇ ಸೂಚಿಸಿದೆ. ಹೀಗಾಗಿ, ಮೇಕೆದಾಟು ಯೋಜನೆಗೆ ಅನುಮತಿ ನೀಡಲು ಇಲಾಖೆ ಕ್ರಮ ಕೈಗೊಳ್ಳಬೇಕು.

ಕೃಷ್ಣಾ ಗೆಜೆಟ್ ಅಧಿಸೂಚನೆ: ಕೃಷ್ಣಾ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಕೃಷ್ಣಾ ಜಲವಿವಾದ ನ್ಯಾಯಮಂಡಳಿ ತೀರ್ಪು ನೀಡಿ ದಶಕ ಕಳೆದಿದ್ದರೂ, ಕೇಂದ್ರ ಸರ್ಕಾರ ಈ ವರೆಗೆ ಗೆಜೆಟ್‌ನಲ್ಲಿ ಅಧಿಸೂಚಿಸಿಲ್ಲ. ನಮ್ಮ ಯೋಜನೆ ಮುಂದುವರಿಸಲು ಹಾಗೂ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಲು ಕೇಂದ್ರದ ಬೆಂಬಲದ ಅಗತ್ಯವಿದೆ.

ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದ ನೆರವು: ಈ ಯೋಜನೆಗೆ 2023-24ರ ಕೇಂದ್ರ ಬಜೆಟ್‌ನಲ್ಲಿ ₹5,300 ಕೋಟಿ ನೆರವು ಘೋಷಿಸಲಾಗಿತ್ತು. ಆದರೆ, 3 ವರ್ಷಗಳು ಕಳೆದರೂ ಅನುದಾನ ಬಿಡುಗಡೆ ಆಗಿಲ್ಲ. ಕೃಷಿ ಸಿಂಚಾಯಿ ಯೋಜನೆಯಡಿ ನೆರವನ್ನು ಶೀಘ್ರ ಬಿಡುಗಡೆ ಮಾಡಬೇಕು.

ಮಹದಾಯಿ ಯೋಜನೆ: ಈ ಯೋಜನೆಯ ಡಿಪಿಆರ್‌ಗೆ ಜಲಶಕ್ತಿ ಸಚಿವಾಲಯ 2022ರ ಡಿಸೆಂಬರ್‌ನಲ್ಲಿ ಅನುಮತಿ ನೀಡಿದೆ. ಈ ಯೋಜನೆಗೆ ಯಾವುದೇ ಕಾನೂನು ಅಡಚಣೆಗಳಿಲ್ಲದಿದ್ದರೂ ಕೇಂದ್ರ ಪರಿಸರ ಸಚಿವಾಲಯ ಅನುಮತಿ ನೀಡದೆ ಕಾಲಹರಣ ಮಾಡುತ್ತಿದೆ. ಹೀಗಾಗಿ ಆದಷ್ಟು ಬೇಗ ಈ ಯೋಜನೆಗಳಿಗೆ ಅನುಮತಿ ಕೊಡಿಸಬೇಕು.

ಏತ ನೀರಾವರಿ ಯೋಜನೆಗಳಿಗೆ ಅನುದಾನ: ಪ್ರವಾಹ ನಿರ್ವಹಣೆಗಾಗಿ ವಿವಿಧ ಏತನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುದಾನ ಒದಗಿಸಬೇಕು.

ಪರಿಷತ್ ಚುನಾವಣೆ: 16ಕ್ಕೆ 'ಕೈ' ಶಾಸಕರು ರೆಸಾರ್ಟ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್‌ನ ಏಳು ಸ್ಥಾನಗಳಿಗೆ ಇದೇ 18ರಂದು ಚುನಾವಣೆ ನಡೆಯಲಿದ್ದು, ಅಡ್ಡ ಮತದಾನ ತಡೆಯಲು ಮುಂದಾಗಿರುವ ಕಾಂಗ್ರೆಸ್ ಪಕ್ಷ ತನ್ನ ಶಾಸಕರನ್ನು ಎರಡು ದಿನ ಮೊದಲೇ ರೆಸಾರ್ಟ್‌ಗೆ ಸ್ಥಳಾಂತರಿಸುತ್ತಿದೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಡದಿ ಸಮೀಪ ಇರುವ ವಂಡರ್‌ಲಾ ರೆಸಾರ್ಟ್‌ನಲ್ಲಿ ಇದೇ 16ರ ಸಂಜೆ 6ಕ್ಕೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ. ಪಕ್ಷದ ಶಾಸಕರು ಹಾಗೂ ಬಾಹ್ಯ ಬೆಂಬಲಿತ ಶಾಸಕರು ಭಾಗವಹಿಸುವಂತೆ ಪಕ್ಷ ಸೂಚಿಸಿದೆ.

ವಿಧಾನಸಭೆ ಸದಸ್ಯರಿಂದ ಪರಿಷತ್ತಿಗೆ ಆಯ್ಕೆಯಾಗಬೇಕಾದ ಒಟ್ಟು ಏಳು ಸ್ಥಾನಗಳಿಗೆ ಎಂಟು ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಒಬ್ಬ ಅಭ್ಯರ್ಥಿಯ ಗೆಲುವಿಗೆ ತಲಾ 28 ಮತಗಳು ಬೇಕಾಗುತ್ತದೆ. ಶಾಸಕರ ಸಂಖ್ಯಾ ಬಲದ ಆಧಾರದಲ್ಲಿ ಕಾಂಗ್ರೆಸ್ ನಾಲ್ಕು ಮತ್ತು ಬಿಜೆಪಿ ಎರಡು ಸ್ಥಾನಗಳನ್ನು ಅನಾಯಾಸವಾಗಿ ಗೆಲ್ಲಲಿವೆ. ಉಳಿದ ಒಂದು ಸ್ಥಾನಕ್ಕೆ ಕಾಂಗ್ರೆಸ್ ಮತ್ತು ಜೆಡಿಎಸ್ ಮಧ್ಯೆ ಸ್ಪರ್ಧೆ ಇದ್ದು, ಅಭ್ಯರ್ಥಿಗಳು ಗೆಲ್ಲುವ ಮತಕ್ಕಾಗಿ ಅನ್ಯಮತಗಳ ಶಾಸಕರನ್ನು ಸೆಳೆಯಲು ಇನ್ನಿಲ್ಲದ ಪ್ರಯತ್ನ ನಡೆಯುವ ಸಾಧ್ಯತೆ ಇದೆ. ತನ್ನ ಶಾಸಕರನ್ನು ಹಿಡಿದಿಟ್ಟುಕೊಳ್ಳಲು ಕಾಂಗ್ರೆಸ್ ರೆಸಾರ್ಟ್‌ಗೆ ಕರೆದೊಯ್ಯುತ್ತಿದೆ.

ಸಂಗೀತ ನಾಟಕ ಅಕಾಡೆಮಿ ಸಾಧಕರು

ಪ್ರಜಾವಾಣಿ ವಾರ್ತೆ


ಕೇಂದ್ರ ಸಂಸ್ಕೃತಿ ಇಲಾಖೆಯು ಸಂಗೀತ ನಾಟಕ ಅಕಾಡೆಮಿ ಫೆಲೋಷಿಪ್ (ಅಕಾಡೆಮಿ ರತ್ನ), 2024 ಮತ್ತು 2025ನೇ ಸಾಲಿನ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (ಅಕಾಡೆಮಿ ಪುರಸ್ಕಾರ) ಹಾಗೂ 'ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ'ವನ್ನು ಪ್ರಕಟಿಸಿದ್ದು, ಕರ್ನಾಟಕದ ಹಲವು ಕಲಾವಿದರು ಆಯ್ಕೆಯಾಗಿದ್ದಾರೆ.

ಜ್ಯೋತಿ ಹೆಗಡೆ



ವಿದುಷಿ ಜ್ಯೋತಿ ಹೆಗಡೆ (ದೇವಗುಡಿ) ಅವರು ಶಿರಸಿ ಸಮೀಪದ ಬಿಸಿಲಕೊಪ್ಪದವರು. ಭಾರತೀಯ ಶಾಸ್ತ್ರೀಯ ಸಂಗೀತ ಕ್ಷೇತ್ರದ ಪುರಾತನ ಶೈಲಿ ಧ್ರುಪದ್ ಮತ್ತು ಕಠಿಣವಾದ ರುದ್ರವೀಣೆ ವಾದನವನ್ನು ಜಾಗತಿಕ ಮಟ್ಟದಲ್ಲಿ ಮಾನ್ಯತೆ ತಂದುಕೊಟ್ಟರು. ದಂತಕಥೆ ಉಸ್ತಾದ್ ಅಸದ್ ಅಲಿ ಖಾನ್ ಸಾಹೆಬ್ ಅವರ ಏಕೈಕ ಮಹಿಳಾ ಶಿಷ್ಯೆ ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಅವರು 2025ನೇ ಸಾಲಿನ ಅಕಾಡೆಮಿ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ.

ರಂಜನಿ ವಾಸುಕಿ




ಬೆಂಗಳೂರಿನ ರಂಜನಿ ವಾಸುಕಿ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ. ತಾಯಿ ಮತ್ತು ಗುರು ನಾಗವಲ್ಲಿ ನಾಗರಾಜ್ ಅವರಿಂದ ಬಾಲ್ಯದಿಂದಲೇ ಸಂಗೀತ ಅಭ್ಯಾಸ ಆರಂಭಿಸಿದರು. ಎಂ.ಎ.ಸಂಗೀತದಲ್ಲಿ ಚಿನ್ನದ ಪದಕ ಪಡೆದ ಅವರು ಕರ್ನಾಟಕ ಸಂಗೀತದಲ್ಲಿ ಗಮಕ ಸೌಂದರ್ಯ ಕುರಿತು ಮಹಾಪ್ರಬಂಧ ಮಂಡಿಸಿ ಪಿಎಚ್.ಡಿ ಪಡೆದಿದ್ದಾರೆ. ಅವರು 2025ನೇ ಸಾಲಿನ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ವೀಣಾ ಮೂರ್ತಿ




ಬೆಂಗಳೂರಿನವರಾದ ವೀಣಾ ಮೂರ್ತಿ ವಿಜಯ್ ಐದು ದಶಕಗಳಿಂದ ನೃತ್ಯ ಕ್ಷೇತ್ರದಲ್ಲಿ ಆಳವಾದ ಅಭ್ಯಾಸ ಮಾಡಿದ್ದಾರೆ. ಭರತನಾಟ್ಯ ಮತ್ತು ಕೂಚಿಪುಡಿ ನೃತ್ಯ ಪ್ರಕಾರಗಳಲ್ಲಿ ಅಂತರರಾಷ್ಟ್ರೀಯ ಮಟ್ಟದ ಸಾಧನೆ ಮಾಡಿದ್ದರೆ. ರಾಜರಾಜೇಶ್ವರಿ ಕಲಾನಿಕೇತನ ಎಂಬ ನೃತ್ಯ ಶಾಲೆ ಆರಂಭಿಸಿ, ಆ ಮೂಲಕ ನೂರಾರು ವಿದ್ಯಾರ್ಥಿಗಳಿಗೆ ಶಾಸ್ತ್ರೀಯವಾಗಿ ನೃತ್ಯ ಕಲಿಸುತ್ತಿದ್ದಾರೆ. ದೇಶ ವಿದೇಶಗಳ ವಿಶ್ವವಿದ್ಯಾಲಯಗಳಲ್ಲಿ ನೃತ್ಯ ಕಾರ್ಯಾಗಾರಗಳನ್ನು ಆಯೋಜಿಸಿದ್ದಾರೆ. ಅವರಿಗೆ 2024ನೇ ಸಾಲಿನ ಅಕಾಡೆಮಿ ಪುರಸ್ಕಾರ ಸಂದಿದೆ.

ಆನೂರು ಅನಂತಕೃಷ್ಣ ಶರ್ಮ




ಮೃದಂಗ ವಿದ್ವಾನ್ ಆನೂರು ಅನಂತಕೃಷ್ಣ ಶರ್ಮಾ (ಶಿವು ಎಂದು ಜನಪ್ರಿಯ) ವಿದ್ವಾನ್ ಆನೂರು ಆರ್ ರಾಮಕೃಷ್ಣ ಮತ್ತು ಲಕ್ಷ್ಮೀ ದಂಪತಿಯ ಪುತ್ರ. ಸಂಗೀತಗಾರರ ಕುಟುಂಬದವರು. ಗಾಯನ ಮೃದಂಗ ಕಲಾವಿದರಾಗಿರುವ ಇವರು ಸುಗಮ, ಕರ್ನಾಟಕ ಶಾಸ್ತ್ರೀಯ, ಜನಪದ ಹಾಗೂ ಸಿನಿಮಾ ಸಂಗೀತದಲ್ಲಿ ಛಾಪು ಮೂಡಿಸಿರುವ ಕಲಾವಿದರು. ಶಿವು ಅವರು 28ಕ್ಕೂ ಹೆಚ್ಚು ಪಕ್ಕವಾದ್ಯ ನುಡಿಸುವ ಅಪರೂಪ ಕಲಾವಿದರಾಗಿದ್ದಾರೆ. ಅವರು 2024ನೇ ಸಾಲಿನ ಅಕಾಡೆಮಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಟಿ.ಎಸ್. ಸತ್ಯವತಿ



ಬೆಂಗಳೂರಿನ ಟಿ.ಎಸ್. ಸತ್ಯವತಿ ಅವರು ಕರ್ನಾಟಕ ಸಂಗೀತ ಗಾಯಕಿ, ಸಂಗೀತಶಾಸ್ತ್ರಜ್ಞೆ ಹಾಗೂ ಸಂಸ್ಕೃತ ವಿದುಷಿ. ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರು. ಎರಡರ ಹರೆಯದಲ್ಲಿಯೇ ಮೈಸೂರು ಮಹಾರಾಣಿಯ ಮುಂದೆ ಹಾಡಿದ ಬಾಲಪ್ರತಿಭೆ. ಹಿರಿಯಕ್ಕ ವಿದುಷಿ ವಸಂತ ಮಾಧವಿ, ವಿದ್ವಾನ್ ಆರ್. ಕೆ. ಶ್ರೀಕಂಠನ್ ಅವರ ಮಾರ್ಗದರ್ಶನದಲ್ಲಿ ಸಂಗೀತ ಕಲಿತವರು. ವಿದ್ವಾನ್ ಬೆಂಗಳೂರು ಕೆ ವೆಂಕಟರಾಂ ಅವರಲ್ಲಿ ಮೃದಂಗ ಕಲಿತರು. ಇವರ ಸಾಧನೆಗೆ 2024ನೇ ಸಾಲಿನ ಅಕಾಡೆಮಿ ಪುರಸ್ಕಾರ ಸಂದಿದೆ.

ಕೆ. ವಾಗೀಶ್



ಮೈಸೂರಿನ ಕೆ. ವಾಗೀಶ್ ಅವರು ಪ್ರಸಿದ್ಧ ಸಂಗೀತಕಾರರು ಮತ್ತು ಪ್ರಸಾರ ಭಾರತಿಯ ನಿವೃತ್ತ ಡೆಪ್ಯುಟಿ ಡೈರೆಕ್ಟರ್ ಜನರಲ್ ಆಗಿದ್ದರು. ಟೈಗರ್ ವರದಾಚಾರ್ಯರ ಸಂಗೀತ ಕಲಾಪದ್ಧತಿಗೆ ಸೇರಿದ ಇವರು ಬಾಲ್ಯದಿಂದಲೇ ಸಂಗೀತ ಆಸಕ್ತಿ ಬೆಳೆಸಿಕೊಂಡರು. ನಂತರ ಶಾಲಾ–ಕಾಲೇಜುಗಳ ಹಂತದಲ್ಲಿ ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಪಡೆದವರು. ಅವರು 2024ನೇ ಸಾಲಿನ ಅಕಾಡೆಮಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಎಸ್.ಸಿ ಶರ್ಮಾ



ಬೆಂಗಳೂರಿನ ಶರ್ಮಾ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಪಿಟೀಲು ವಾದನದಲ್ಲಿ ಪರಿಣತಿ ಪಡೆದಿದ್ದಾರೆ. ಅವರಿಗೆ 'ಕರ್ನಾಟಕ ಕಲಾಶ್ರೀ', ಗಾನ ಕಲಾಶ್ರೀ' ಸೇರಿ ಹಲವು ಪ್ರಶಸ್ತಿಗಳು ಸಂದಿವೆ. ಇವರು ಜನಪದ ಸಂಸ್ಕೃತಿಯನ್ನು ಐತಿಹಾಸಿಕವಾಗಿ, ಮಾನವಿಕ, ಸಮಾಜ ಶಾಸ್ತ್ರೀಯ, ಸಾಂಸ್ಕೃತಿಕ ವೈವಿಧ್ಯದ ನೆಲೆಗಳಲ್ಲಿ ಅಧ್ಯಯನ ನಡೆಸಿದ್ದಾರೆ. ವಿಶ್ವವಿದ್ಯಾಲಯದ ಕುಲಪತಿಯಾಗಿ, ನ್ಯಾಕ್ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಅವರು 2024ನೇ ಸಾಲಿನ ಅಕಾಡೆಮಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಜನರಿಗೆ ಹಿರಿಯರಿಂದ ಬರುವ ಆಭರಣಗಳಲ್ಲಿ ಭಾಷೆಯೂ ಒಂದು. ಅದು ಚೆನ್ನಾಗಿದ್ದಷ್ಟೂ ಭೂಷಣ.

–ಬಿ.ಎಂ. ಶ್ರೀಕಂಠಯ್ಯ

ಸಂಪಾದಕೀಯ

ಮೋದಿ: ಪ್ರಧಾನಿಯಾಗಿ 12 ವರ್ಷ
ಆತಂಕದ ನಡುವೆಯೂ ಅಭಿವೃದ್ಧಿ

ಪ್ರಧಾನಿ ನರೇಂದ್ರ ಮೋದಿ ಅವರು ನಿರಂತರ ಹನ್ನೆರಡು ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸಿರುವ ವಿದ್ಯಮಾನವನ್ನು ಒಂದು ಮೈಲಿಗಲ್ಲಿನಂತೆ ಸಂಭ್ರಮಿಸಲಾಗುತ್ತಿದೆ. ಅವರ ನೇತೃತ್ವ ವಹಿಸಿರುವ 'ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ'ದ (ಎನ್‌ಡಿಎ) ಮೂರು ಅವಧಿಗಳ ಸರ್ಕಾರಗಳು ತಂದಿರುವ ಬದಲಾವಣೆಗಳಲ್ಲಿ ಅವರ ಸಾಧನೆಗಳು ಸ್ಪಷ್ಟವಾಗಿ ಪ್ರತಿಫಲಿಸುತ್ತಿವೆ. ಆ ಸಾಧನೆಗಳ ಪರಾಮರ್ಶೆಗೆ ಇದು ಸೂಕ್ತ ಸಮಯವೂ ಹೌದು. ಕೆಲವು ಪರಿವರ್ತನಾತ್ಮಕ ಬದಲಾವಣೆಗಳ ಶ್ರೇಯಸ್ಸು ಪ್ರಧಾನಿ ಅವರಿಗೆ ಸಲ್ಲುತ್ತದೆ. ವಿಶ್ವದ ಅತಿದೊಡ್ಡ ಆರ್ಥಿಕತೆ ಹೊಂದಿರುವ ದೇಶಗಳ ಪಟ್ಟಿಯಲ್ಲಿ ಭಾರತ ಹತ್ತನೇ ಸ್ಥಾನದಿಂದ ಆರನೇ ಸ್ಥಾನದಲ್ಲಿ ಗುರ್ತಿಸಿಕೊಂಡಿದೆ. ತಲಾದಾಯ ದ್ವಿಗುಣಗೊಂಡಿದೆ. ಕೋವಿಡ್ ಅವಧಿಯನ್ನು ಹೊರತುಪಡಿಸಿದರೆ, ಬೆಳವಣಿಗೆಯ ದರದ ಹೆಚ್ಚಳವು ನಿರಂತರತೆಯನ್ನು ಕಾಯ್ದುಕೊಂಡಿದೆ. ಭೌತಿಕ ಹಾಗೂ ಡಿಜಿಟಲ್ ಮೂಲಸೌಕರ್ಯಗಳ ವಿಸ್ತರಣೆಯನ್ನು ದೇಶ ಕಂಡಿದೆ. ಸುಮಾರು 80 ಕೋಟಿ ಜನರಿಗೆ ಅನುಕೂಲವಾಗುವ ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನವೂ ಆಗಿದೆ. ಹಣದುಬ್ಬರ ನಿಯಂತ್ರಣದಲ್ಲಿದೆ. ಆರ್ಥಿಕ ಬೆಳವಣಿಗೆ ಮುಂದುವರಿಯುವ ಆಶಾವಾದವೂ ಇದೆ. ಈ ಎಲ್ಲ ಮಾನದಂಡಗಳಿಗೆ ಸಂಬಂಧಿಸಿದಂತೆ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು, ಹಿಂದಿನ ಸರ್ಕಾರಗಳು ಹಾಕಿಕೊಟ್ಟ ಅಡಿಪಾಯದ ಮೇಲೆ ಉತ್ತಮ ಕಾರ್ಯ ನಿರ್ವಹಣೆ ಮಾಡಿದೆ ಎಂದು ಹೇಳಬಹುದು.



ಪ್ರಧಾನಿ ನರೇಂದ್ರ ಮೋದಿ ಅವರ 12 ವರ್ಷಗಳ ಆಡಳಿತಾವಧಿಯಲ್ಲಿ ದೇಶ ಆರ್ಥಿಕವಾಗಿ ಬೆಳವಣಿಗೆಯ ಗತಿಯಲ್ಲಿದೆ; ಅದೇ ಅವಧಿಯಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳು ಇಳಿಮುಖವಾಗಿವೆ.

ಮೂಲಸೌಕರ್ಯ ಆಧಾರಿತ ಆರ್ಥಿಕತೆಗಿಂತಲೂ ದೇಶವೊಂದರ ಅತ್ಯಂತ ಮುಖ್ಯ ಅಂಶಗಳಾದ ಅಲ್ಲಿನ ನಾಗರಿಕರು, ಅವರ ಜೀವನ, ಸಾಮಾಜಿಕ ಮತ್ತು ರಾಜಕೀಯ ಸಮೂಹಗಳು ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಅವರ ಭಾಗವಹಿಸುವಿಕೆಗೆ ಹೆಚ್ಚಿನ ಮಹತ್ವವಿದೆ. ಈ ಸಂಗತಿಗಳಿಗೆ ಸಂಬಂಧಿಸಿದಂತೆ ಕಳೆದ 12 ವರ್ಷಗಳಲ್ಲಿ ಗಮನಾರ್ಹ ಹಿನ್ನಡೆ ಕಂಡುಬಂದಿದೆ. 2014ರಲ್ಲಿ ಇದ್ದುದಕ್ಕಿಂತಲೂ ದೇಶ ಈಗ ಹೆಚ್ಚು ಧ್ರುವೀಕರಣ ಹೊಂದಿದೆ. ಪ್ರಧಾನಿ ಅವರ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಘೋಷಣೆಯು ತನ್ನ ಚೈತನ್ಯ ಮತ್ತು ಉದ್ದೇಶವನ್ನು ಕಳೆದುಕೊಂಡಿದೆ. ತಮ್ಮನ್ನು ಕಡೆಗಣಿಸಲಾಗುತ್ತಿದೆ ಎಂದು ಅಲ್ಪಸಂಖ್ಯಾತ ಸಮುದಾಯಗಳು ಭಾವಿಸುವುದಕ್ಕೆ ಸಾಕಷ್ಟು ಕಾರಣಗಳಿವೆ. ವಿರೋಧ ಪಕ್ಷಗಳು ಮತ್ತು ಅವುಗಳ ನಾಯಕರನ್ನು ಸರ್ಕಾರಿ ತನಿಖಾ ಸಂಸ್ಥೆಗಳ ಕಠಿಣ ಕ್ರಮಗಳು ಮತ್ತು ತನಿಖೆಗೆ ಗುರಿಯಾಗಿಸಲಾಗುತ್ತಿದೆ. ಭಾರತದ ಚುನಾವಣಾ ಆಯೋಗ (ಇಸಿಐ) ಸೇರಿದಂತೆ ಹಲವು ಸಾಂವಿಧಾನಿಕ ಸಂಸ್ಥೆಗಳು ತಮ್ಮ ಸ್ವಾಯತ್ತತೆ ಮತ್ತು ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿರುವ ಪ್ರಕ್ರಿಯೆ ಮುಂದುವರಿದಿದೆ. ಒಕ್ಕೂಟ ವ್ಯವಸ್ಥೆ ಗಂಭೀರ ಸವಾಲುಗಳನ್ನು ಎದುರಿಸಿದೆ. ಪ್ರಜಾಪ್ರಭುತ್ವ ನೀಡಿರುವ ಸ್ವಾತಂತ್ರ್ಯ ಮತ್ತು ವ್ಯಕ್ತಿಗತ ಹಕ್ಕುಗಳು ಒತ್ತಡದಲ್ಲಿವೆ. ದುರ್ಬಲ ವರ್ಗಗಳನ್ನು ಗುರಿಯಾಗಿಸಿಕೊಂಡು ಹಿಂಸೆ ಮತ್ತು ಕಾನೂನುಬಾಹಿರ ಕೃತ್ಯಗಳು ನಡೆಯುವುದು ಹೆಚ್ಚಾಗಿದೆ. ಅಸಮಾನತೆಯು ಹೆಚ್ಚಾಗಿದೆ. ಆರ್ಥಿಕ ಚಟುವಟಿಕೆಗಳು ಚಲನಶೀಲವಾಗಿದ್ದರೂ, ನಿರುದ್ಯೋಗ ಸಮಸ್ಯೆ ಹೆಚ್ಚುತ್ತಲೇ ಇದೆ.

ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಅವರೊಂದಿಗೆ ಮೋದಿ ಅವರ ಆಡಳಿತವನ್ನು ಹೋಲಿಸುವ ಪ್ರಯತ್ನಗಳು ನಡೆಯುತ್ತಿವೆ. ಇದೊಂದು ಅಸಮಂಜಸ ಹಾಗೂ ಅಪ್ರಸ್ತುತ ಕಸರತ್ತಾಗಿದೆ. ನೆಹರೂ ಮತ್ತು ಮೋದಿ ಅವರ ನಡುವೆ ಆರು ದಶಕಗಳಿಗೂ ಹೆಚ್ಚು ಅವಧಿಯ ಅಂತರವಿದೆ ಹಾಗೂ ಇಬ್ಬರೂ ಭಿನ್ನ ಕಾಲಘಟ್ಟಗಳಿಗೆ ಸೇರಿದವರಾಗಿದ್ದಾರೆ. ಇಬ್ಬರೂ ಎದುರಿಸಿದ ಸವಾಲುಗಳು ಬೇರೆ ಬೇರೆಯಾಗಿದ್ದವು; ಅವರ ಪ್ರತಿಕ್ರಿಯೆಗಳೂ ವಿಭಿನ್ನವಾಗಿಯೇ ಇವೆ. ಈ ವ್ಯತ್ಯಾಸಗಳ ನಡುವೆಯೂ, ಸುದೀರ್ಘ ಅವಧಿಯ ಬಲಿಷ್ಠ ನಾಯಕತ್ವ ಮತ್ತು ಸ್ಥಿರ ಆಡಳಿತವನ್ನು ಇಬ್ಬರು ಪ್ರಧಾನಿಗಳ ನಡುವಿನ ಸಾಮ್ಯತೆಯಾಗಿ ಗುರ್ತಿಸಬಹುದು. ನೆಹರೂ ಅವರು ಇತಿಹಾಸದ ಭಾಗವಾಗಿದ್ದಾರೆ. ಮೋದಿ ಅವರು ಸಮಕಾಲೀನ ಭಾರತವನ್ನು ರೂಪಿಸುವುದರಲ್ಲಿ ಸಕ್ರಿಯರಾಗಿದ್ದಾರೆ. ವ್ಯಕ್ತಿಗಳು ಹಾಗೂ ಅವರ ಸಾಧನೆಯನ್ನು ಇತಿಹಾಸವು ದೀರ್ಘ ದೃಷ್ಟಿಕೋನದಿಂದ ಬೆಲೆಗಟ್ಟುತ್ತದೆ. ವರ್ತಮಾನದ ಭಾಗವಾಗಿರುವ ಮೋದಿ ಅವರ ಆಡಳಿತದ ಮೌಲ್ಯವನ್ನೂ ಅಂತಿಮವಾಗಿ ಇತಿಹಾಸವೇ ನಿರ್ಣಯಿಸಲಿದೆ.

ಅಧಿಕಾರ: ಗಾಳಿ ಮತ್ತು ಸೊಡರು



ವಿಶ್ಲೇಷಣೆ

ಎಂ.ಎಸ್. ಆಶಾದೇವಿ

> ಸತ್ಯವನ್ನು ಹೇಳುವ ಧೈರ್ಯ ಪ್ರಜೆ, ಸಾಹಿತಿ–ಕಲಾವಿದರಿಗೆ ಹಾಗೂ ಅದನ್ನು ಸಹಿಸಿಕೊಳ್ಳುವ ವಿವೇಕ ಅಧಿಕಾರ ನಡೆಸುವವರಿಗೆ ಇದ್ದಾಗ 'ಸಮಾನ ಅಧಿಕಾರ' ಪಡೆಯುವ ಆದರ್ಶದ ಸ್ಥಿತಿ ರೂಪುಗೊಳ್ಳುತ್ತದೆ. ಅಂಥದೊಂದು ಸ್ಥಿತಿಯ ಸಾಧ್ಯತೆ ಇರಲಿ, ಕನಸಾದರೂ ವರ್ತಮಾನದಲ್ಲಿ ಇದೆಯೆ?

ನಾಯಕರು, ನಾಯಕತ್ವ, ಅಧಿಕಾರ ಮತ್ತು ಅಧಿಕಾರ ಹಸ್ತಾಂತರ ಕುರಿತ ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲಿ, ಈ ಎಲ್ಲ ಪರಿಕಲ್ಪನೆಗಳ ಆಳದಲ್ಲಿ ಸೂಚಿಸುತ್ತಿರುವ, ಧ್ವನಿಸುತ್ತಿರುವ ಸತ್ಯಗಳು ಯಾವುವು ಎನ್ನುವ ಪ್ರಶ್ನೆ ಕೇಳಿಕೊಳ್ಳಬೇಕಾಗಿದೆ. ಅಧಿಕಾರ ಎನ್ನುವುದು ಅದರ ಮೂಲ ಗುಣವಾದ ಕೇಂದ್ರೀಕರಣವನ್ನು ವಿಸರ್ಜಿಸಿ ವಿಕೇಂದ್ರೀಕರಣದ ಕಡೆಗೆ ಚಲಿಸುವುದು, ಇಡಿಯಾಗಿ ಎನ್ನುವಂತೆ ಘಟಿಸುವುದು ಸಾಧ್ಯವಿದೆಯೆ? ಅಥವಾ ಇದೇನಿದ್ದರೂ ಪಾರ್ಶ್ವಿಕ ಎನ್ನುವುದೇ ಪರಮಸತ್ಯವೆ? ರಾಜಕೀಯ ಪಂಡಿತರು ಹೇಳುವಂತೆ ರಾಜಕೀಯ ವಿಕೇಂದ್ರೀಕರಣ ಎನ್ನುವುದು ಆಮೆಯ ನಡಿಗೆಯೆ? ಹಿಂದಕ್ಕೂ ಮುಂದಕ್ಕೂ ಹೊಯ್ದಾಡುವ ಗಾಳಿಗೊಡ್ಡಿದ ಸೊಡರೆ?

ಪ್ರಭುತ್ವದ ರಚನೆಯಾದಾಗಿನಿಂದಲೂ ಅದರ ಅಗತ್ಯ, ಅನಿವಾರ್ಯತೆಯನ್ನು ಒಪ್ಪಿಕೊಳ್ಳುತ್ತಲೇ ಅದರ ಬಗೆಗಿನ ಬಂಡಾಯ, ನಿರಾಕರಣೆಯ ಪ್ರಕ್ರಿಯೆಯೂ ಜಾರಿಯಲ್ಲಿದ್ದೇ ಇದೆ. ಪ್ರಭುತ್ವವನ್ನು ಕುರಿತಂತೆ ಇಂಟಿಮೇಟ್ ಎನಿಮಿಯ ನೆಲೆ ಶಾಶ್ವತ ವಿರೋಧ ಪಕ್ಷದಂತೆ ಇದ್ದೂ, ಪ್ರಭುತ್ವವೇ ಇಲ್ಲದ ನೆಲೆಯೊಂದನ್ನು ನಮಗೆ ಕಟ್ಟಿಕೊಳ್ಳಲಾಗಿಲ್ಲ ಎನ್ನುವುದೇ ಪ್ರಭುತ್ವದ ಬೇರುಗಳು ಬಲವಾಗಲು ಮಾತ್ರವಲ್ಲ, ಅದನ್ನು ಪ್ರಶ್ನಿಸಲಾಗದ ಮತ್ತು ಅದರ ದೌರ್ಬಲ್ಯಗಳನ್ನು, ಕೊರತೆಗಳನ್ನು ಸಹಿಸಿಕೊಳ್ಳುವ ಮನಃಸ್ಥಿತಿಗೆ ಲೋಕವನ್ನು ತಂದುಬಿಟ್ಟಿದೆಯೇನೋ ಅನ್ನಿಸುತ್ತದೆ.

ರಾಜಭೀತಿ ಮತ್ತು ರಾಜನಿಲ್ಲದ ಭೀತಿಗಳ ನಡುವೆ ರಾಜನಿಲ್ಲದ ಭೀತಿಯೇ ಮೇಲುಗೈ ಸಾಧಿಸಿ, ರಾಜಭೀತಿಯೇ ವಾಸಿ ಎನ್ನುವ ತೀರ್ಮಾನಕ್ಕೆ ಬಂದು ಬಿಟ್ಟಿರುವುದು ನಮ್ಮ ಅಸಹಾಯಕತೆಯೋ, ರಾಜಿಯೋ, ಲೋಕಕ್ರಮವೋ ಎನ್ನುವುದೇ ತಿಳಿಯದ ದಿಕ್ಕೇಡಿತನದಲ್ಲಿ ನಾವು ಬಿದ್ದುಬಿಟ್ಟಿರುವಂತೆಯೂ ಕೆಲವೊಮ್ಮೆ ಭಾಸವಾಗುತ್ತದೆ.

'ಲೊಳಲೊಟ್ಟೆ ಎಲ್ಲ ಲೊಳಲೊಟ್ಟೆ' ಎನ್ನುವುದು ಬದುಕನ್ನು ಕುರಿತಂತೆ ಎಲ್ಲರಿಗೂ ಒಂದಿಲ್ಲೊಂದು ಗಳಿಗೆಯಲ್ಲಿ ಮಿಂಚುವ ಸತ್ಯವೇ ಆಗಿದ್ದಾಗಲೂ, ಲೋಕರೂಢಿಯಲ್ಲಿ ಅದು ಪ್ರಭುತ್ವದ ಎಲ್ಲ ಮಾದರಿಗಳ ಬಗೆಗೂ ತಳೆಯುವ ನೇತ್ಯಾತ್ಮಕವಾದ, ಸಿನಿಕತನದ ವ್ಯಾಖ್ಯಾನವೇ ಆಗಿಬಿಟ್ಟಿದೆ. ಪಕ್ಷ ಯಾವುದಾದರೇನು? ಅಧಿಕಾರವೇ ನಿನ್ನಯ ಗುಣ ಇದೇ ಅಲ್ಲವೆ ಎಂದು ಎಳೆಯುವ ಉದ್ಗಾರ ಲೋಕ ಸತ್ಯದ ಪುನರುಚ್ಚಾರ ನಿಜ; ಆದರೆ, ಈ ಶರಣಾಗತಿ ಎಲ್ಲಿಗೆ ಒಯ್ಯುತ್ತಿದೆ ಎಂದು ಯೋಚಿಸುವುದೇ ಭಯಾನಕ.

ಪ್ರಭುತ್ವವನ್ನು ಕುರಿತಂತೆ ನಾಗರಿಕತೆಯಲ್ಲಿ ತಾತ್ತ್ವಿಕವಾಗಿ ಅನೇಕ ಬದಲಾವಣೆಗಳು, ಬೆಳವಣಿಗೆಗಳು ಆಗುತ್ತಲೇ ಇವೆ. ಪ್ರಬುದ್ಧವಾದ, ಜನಪರವಾದ ಅಂಶಗಳು ಪ್ರಭುತ್ವದ ತಾತ್ತ್ವಿಕತೆಗೆ ಸೇರ್ಪಡೆಯಾಗುತ್ತಲೇ ಇವೆ. ಪ್ರಭುತ್ವ ಹೀಗಿದ್ದರೆ ಎಷ್ಟು ಚೆನ್ನ ಎಂದು ಆಸೆಯಾಗುವಷ್ಟು ಮಾನವೀಯವಾದ, ಸಮಸಮಾಜದ ಕಲ್ಪನೆಗಳನ್ನು ಎತ್ತಿ ಹಿಡಿದಿವೆ. ಆದರೆ, ಪ್ರಾಯೋಗಿಕವಾಗಿ ಇದರ ಅನುಷ್ಠಾನದ ಬಗ್ಗೆ, ಒಳಗೊಳ್ಳುವಿಕೆಯ ಬಗ್ಗೆ ಯೋಚಿಸಿದರೆ ತತ್ತ್ವಾದರ್ಶಗಳ ಮತ್ತು ವಾಸ್ತವಿಕತೆಯ ನಡುವಿನ ಕಂದರ ಕಣ್ಣಿಗೆ ರಾಚುತ್ತದೆ. ಅಪ್ಪಟ ಜನಪರವಾದ ನಿಲುವುಗಳನ್ನು ಉಳ್ಳ ನಾಯಕರ ಕೈಗಳನ್ನೂ ಕಾಣುವ–ಕಾಣದ ಹಗ್ಗಗಳು ಕಟ್ಟಿಹಾಕಿರುತ್ತವೆ. ಗಾವುದ ನಡೆಯಬಹುದಾದ ಇಚ್ಛಾಶಕ್ತಿ ಇರುವ ನಾಯಕರೂ ಹತ್ತು ಹೆಜ್ಜೆ ಹಾಕುವಲ್ಲಿ ಏದುಸಿರು ಬಿಡುವ ಕಟು ವಾಸ್ತವ ನಮ್ಮೆದುರಿಗಿದೆ.

'ಕಲ್ಯಾಣ ರಾಜ್ಯ'ದ ಪರಿಕಲ್ಪನೆಯೇ ಪ್ರಭುತ್ವದ ಆತ್ಯಂತಿಕ ಮಾದರಿಯನ್ನು ವಿಸ್ತರಿಸುತ್ತಾ ಹೋಗಿದೆ. 'ವೆಲ್‌ಫೇರ್ ಸ್ಟೇಟ್' ಎನ್ನುವುದು ಕಟ್ಟಕಡೆಯ ಮನುಷ್ಯನ ಕಲ್ಯಾಣವನ್ನೂ ಉದ್ದೇಶಿಸಿದ್ದು ತಾನೆ? ಆದರೆ, ಕಲ್ಯಾಣ ರಾಜ್ಯದ ಪ್ರಾಯೋಗಿಕ ಮಾದರಿಗಳೂ ಗೇಲಿಗೊಳಗಾಗುವುದು ಏನನ್ನು ಸೂಚಿಸುತ್ತದೆ? ನಾಯಕರು ಮತ್ತು ಪ್ರಭುತ್ವದ ಚೌಕಟ್ಟು ಅಥವಾ ಅದರ ಸ್ಥಾಪಿತ ಶಕ್ತಿಗಳನ್ನು ಮುರಿಯುವುದರ ಕಷ್ಟವನ್ನೇ. ಅಪರೂಪಕ್ಕೊಮ್ಮೆ ಎನ್ನುವಂತೆ ನಿಜವಾದ ಜನನಾಯಕರು ಜನಪರವಾಗಿದ್ದಾಗಲೂ ಅವರು ಎದುರಿಸುವ ಸವಾಲುಗಳು ಎಷ್ಟು ಸಂಕೀರ್ಣವಾಗಿರುತ್ತವೆ ಎಂದರೆ, ವ್ಯವಸ್ಥೆ ಮತ್ತು ನಾಯಕರ ನಡುವಿನ ಸಂಘರ್ಷಗಳು ಅನೇಕ ಬಾರಿ ಕಣ್ಣಿಗೆ ಕಾಣದೇ ಹೋಗುತ್ತವೆ.

ಸರ್ಕಾರದ 'ಭಾಗ್ಯ'ಗಳನ್ನು ಕುರಿತಂತೆ ಅದೆಷ್ಟು ಹೀನಾಯ ಮಾತುಗಳನ್ನು ಕೇಳುತ್ತಿದ್ದೇವೆ. ಪ್ರಭುತ್ವವು ಜನಪರವಾಗುತ್ತಿರುವಾಗ ಅದರ ಮಿತಿಗಳನ್ನು ಮರೆಯದೇ ಅವುಗಳನ್ನು ಬೆಂಬಲಿಸುವುದು ಕಲ್ಯಾಣ ರಾಜ್ಯಕ್ಕೆ, ಕಟ್ಟಕಡೆಯ ವ್ಯಕ್ತಿಗೆ ನೀಡುವ ಬೆಂಬಲ ಎನ್ನುವುದನ್ನು ಮರೆಯುವುದು ಏಕೆ? ಕಟ್ಟ ಕಡೆಯ ಮನುಷ್ಯನ/ಳ ಜೀವನದಲ್ಲಿ ಎರಡು ಸಾವಿರ ರೂಪಾಯಿ ತಂದುಕೊಡುವ ಆತ್ಮಗೌರವದ ಕಲ್ಪನೆಯೇ ಇಲ್ಲದವರು ಕಲ್ಯಾಣ ರಾಜ್ಯದ ಬಗ್ಗೆ, ರಾಮ ರಾಜ್ಯದ ಬಗ್ಗೆ ಮಾತನಾಡುವುದಕ್ಕಿಂತ ದೊಡ್ಡ ದುರಂತ ಮತ್ತೊಂದಿಲ್ಲ. ಅವೇ ಭಾಗ್ಯಗಳನ್ನು ವಿರೋಧಿಸುವವರೂ ತಮ್ಮ ಪ್ರಣಾಳಿಕೆಯ ಅಸ್ತ್ರಗಳಾಗಿ ಮಾಡಿಕೊಂಡ ಮೇಲೂ ವಿರೋಧಿಸುವ ಅನೈತಿಕತೆ ಒಟ್ಟಾರೆಯಾಗಿ ಪ್ರಭುತ್ವದ ಚೌಕಟ್ಟಿನ ಶಿಥಿಲತೆಯ ಸೂಚಕ.

ಗೋಪಾಲಕೃಷ್ಣ ಅಡಿಗರ ಬದುಕಿನ ಒಂದು ಪ್ರಸಂಗ ವ್ಯವಸ್ಥೆ ಮತ್ತು ನಾಯಕತ್ವಗಳ ವಿವೇಕ, ಸ್ವಾಯತ್ತತೆಗೆ ಒಳ್ಳೆಯ ಉದಾಹರಣೆ. 'ಪ್ರಭೂ ಪರಾಕು ಪಂಪನೊತ್ತಿಯೊತ್ತಿ/ ನಡುಬಗ್ಗಿಸಿ ಡೊಗ್ಗು ಸಲಾಮು ಹೊಡೆಯುವ/ ಹೊಗಳು ಸನ್ನಿಯ ಹೊಗಳು ಭಟ್ಟ ಖಂಡಿತಾ ನಾನಲ್ಲ' ಎಂದು ಆರಂಭವಾಗುವ ಈ ಕವಿತೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾದಾಗ, ಅದನ್ನು ಓದಿದವರೊಬ್ಬರು ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಹತ್ತಿರ, 'ಇದನ್ನು ಬರೆದಿರುವುದೇ ನಿಮ್ಮ ವಿರುದ್ಧ' ಎಂದು ಹೇಳಿದರಂತೆ. ಮುಖ್ಯಮಂತ್ರಿಗಳ ಕಚೇರಿಯಿಂದ ಅಡಿಗರಿಗೆ ಪತ್ರ ಹೋಯಿತು. ಮುಖ್ಯಮಂತ್ರಿಗಳು ನಿಮ್ಮ 'ಪ್ರಾರ್ಥನೆ' ಕವಿತೆಯ ಕುರಿತು ಚರ್ಚಿಸಬೇಕೆಂದಿದ್ದಾರೆ. ಇಂಥ ದಿನ, ಇಂಥ ಹೊತ್ತಿಗೆ ನೀವು ಮುಖ್ಯಮಂತ್ರಿಗಳ ಕಚೇರಿಗೆ ಬರಬೇಕು ಎನ್ನುವುದು ಪತ್ರದ ಒಕ್ಕಣೆಯಾಗಿತ್ತು. ಓದಿದವರೇ ಅಡಿಗರು ಪ್ರತ್ಯುತ್ತರ ಬರೆದರು. 'ಬರಹಗಾರರು ಕೃತಿಯೊಂದನ್ನು ಬರೆದಾದ ಮೇಲೆ ಅದು ಸಾರ್ವಜನಿಕರ ಸೊತ್ತು, ಆ ಕವಿತೆಯ ಬಗ್ಗೆ ಮುಖ್ಯಮಂತ್ರಿಗಳಿಗೆ ಚರ್ಚಿಸಬೇಕೆಂದಿದ್ದರೆ ಅದನ್ನು ನನಗಿಂತ ಚೆನ್ನಾಗಿ ವಿವರಿಸಬಲ್ಲ ಸುಮತೀಂದ್ರ ನಾಡಿಗರನ್ನಾಗಲೀ, ಇತರ ಲೇಖಕರನ್ನಾಗಲೀ ಕೇಳಬಹುದು. ಅದಕ್ಕೆ ನಾನು ಬರಬೇಕಾದ ಅವಶ್ಯಕತೆ ಇಲ್ಲ. ಇಷ್ಟಕ್ಕೂ ಮುಖ್ಯಮಂತ್ರಿಗಳಿಗೆ ಅನುಕೂಲವಾದ ದಿನ ಮತ್ತು ವೇಳೆಯಲ್ಲಿಯೇ ನಾನು ಏಕೆ ಭೇಟಿಯಾಗಬೇಕು? ನನಗೂ ಅನುಕೂಲವಾದ ದಿನ ಮತ್ತು ವೇಳೆ ಇರಬಹುದಲ್ಲವೆ?'

ಈ ಪ್ರಸಂಗದ ಪಕ್ಕದಲ್ಲಿ ಬಸವಣ್ಣನ 'ಆನೀ ಬಿಜ್ಜಳಂಗಂಜುವೆನೆ ಅಯ್ಯಾ' ಎನ್ನುವ ನಿಲುವನ್ನು ಇಟ್ಟರೆ ಇದಕ್ಕೆ ಇನ್ನೂ ಹೆಚ್ಚಿನ ಸ್ಪಷ್ಟತೆ ಬರುತ್ತದೆ. ಪ್ರಭುತ್ವದ ಭಾಗವಾಗಿದ್ದೂ ಅದರ ಹಂಗಿಗೆ ಬೀಳದ ನೈತಿಕತೆಯನ್ನು ಉಳಿಸಿಕೊಳ್ಳುವ ಶಕ್ತಿ ಎಷ್ಟು ಅಗಾಧವಾದುದು ಎನ್ನುವುದು ಬಸವಣ್ಣನ ಮಾತಿನಿಂದ ನಮ್ಮ ಅರಿವಿಗೆ ಬರುತ್ತದೆ. ಬಿಜ್ಜಳ ಮತ್ತು ಬಸವಣ್ಣ ಇಬ್ಬರಿಗೂ ತಾವು ವಿರುದ್ಧ ಧ್ರುವಗಳ ಪ್ರತಿನಿಧಿಗಳು ಎನ್ನುವ ಅರಿವಿನ ಜೊತೆಗೇ ತಾವು ಪರಸ್ಪರರನ್ನು ಎದುರಿಸಬಲ್ಲೆವು ಎನ್ನುವುದು ಸಾಧ್ಯವಾದದ್ದು ಅವರ ಪ್ರಾಮಾಣಿಕತೆಯ ಕಾರಣಕ್ಕೆ. ಕೊನೆಯೇ ಇಲ್ಲದ ರಾಜಿಕಬೂಲಿಗೆ ನಾಯಕ ಮತ್ತು ಪ್ರಜೆಗಳಿಬ್ಬರೂ ಬಂದುಬಿಟ್ಟಾಗ ಅಧಿಕಾರಶಾಹಿಯೇ ಎಲ್ಲವನ್ನೂ ನಿಯಂತ್ರಿಸುತ್ತಾ ಹೋಗುತ್ತದೆ. ಅದು ಪ್ರಜಾಪ್ರಭುತ್ವದ ದುರಂತ. ಇದೆಲ್ಲವನ್ನೂ ಯಾರಿಗೋ ಹೇಳುವುದಲ್ಲ, ನಮಗೆ ನಾವೇ ಹೇಳಿಕೊಳ್ಳಬೇಕಾದ್ದು.

'ನೆನಪಿನಗಣಿಯಲ್ಲಿ' ಆತ್ಮಚರಿತ್ರೆಯಲ್ಲಿ 'ಪ್ರಾರ್ಥನೆ' ಕವಿತೆಯ ಪ್ರಸಂಗವನ್ನು ನೆನಪಿಸಿಕೊಳ್ಳುತ್ತಾ ಅಡಿಗರು, ಮುಖ್ಯಮಂತ್ರಿಗಳಿಗೆ ವಿವೇಕ ಮತ್ತು ಪ್ರಬುದ್ಧತೆ ಇದ್ದುದರಿಂದ ನನ್ನನ್ನು ಜೈಲಿಗೆ ಕಳಿಸಲಿಲ್ಲವೇನೋ ಎನ್ನುತ್ತಾರೆ. ನಾಯಕತ್ವಕ್ಕೆ ಕನಿಷ್ಠ ಇಷ್ಟು ವಿವೇಕ ಮತ್ತು ತಿಳಿವಳಿಕೆ ಇರದಿದ್ದರೆ ಅದು ಬರಿಯ ಬೊಗಳೆಯ ನಾಯಕತ್ವವಾಗುತ್ತದೆ. ವಿರೋಧ, ಪ್ರತಿರೋಧ ಎಲ್ಲದಕ್ಕೂ ಅವಕಾಶ ಇರದಿದ್ದರೆ ಅದು 'ಅರಸು ರಾಕ್ಷಸ ಮಂತ್ರಿ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ'ಯಲ್ಲದೆ ಮತ್ತೇನಾದೀತು?

ನೈಜ ಜನನಾಯಕರು ತಮ್ಮನ್ನು ದಾಟಿ ಯೋಚಿಸಬಲ್ಲವರು, ವಿರೋಧಿ ಹೇಳಿದ ಮಾತಿನಲ್ಲಿಯೂ ಸತ್ಯದ ಹೊಳಹು ಇರಬಹುದೆಂದು ನಂಬುವವರು. ಪ್ರಜಾಪ್ರಭುತ್ವದ ಯಶಸ್ಸು ಇಂಥ ನಾಯಕರ ಮೇಲೆ ಅವಲಂಬಿತ. ಪಂಪ ತಾನಿದ್ದ ಆಸ್ಥಾನದ ಅರಸನನ್ನೇ 'ನಿಜದೊಳೆ ಭೂಪರೆಂಬುವರ್ ಅವಿವೇಕಿಗಳ್' ಎಂದು ಮಾತ್ರವಲ್ಲ, 'ಓಲಗಿಸಿ ಬಾಳ್ವುದೆ ಕಷ್ಟಂ ಇಳಾಧಿನಾಥರಂ' ಎಂದು ಹೇಳಬಲ್ಲವನಾಗಿದ್ದ ಎನ್ನುವುದರಷ್ಟೇ ಮುಖ್ಯವಾದ ಸಂಗತಿ, ಅದನ್ನು ಒಪ್ಪಬಲ್ಲ ವಿವೇಕ ಆ ಅರಸನಿಗೂ ಇತ್ತು ಎನ್ನುವುದು. ಸತ್ಯವನ್ನು ಹೇಳುವ ಧೈರ್ಯ ಪ್ರಜೆಗೆ, ಕಲಾವಿದರಿಗೆ, ಅದನ್ನು ಕನಿಷ್ಠ ಸಹಿಸಿಕೊಳ್ಳುವ ಧೈರ್ಯ ಅರಸರಿಗೆ ಇರಬೇಕು. ಜಗತ್ತಿನ ಹತ್ತು ಮಹತ್ವದ ಪಠ್ಯಗಳಲ್ಲಿ ಒಂದು ಎಂದು ಶ್ರೇಷ್ಠ ವಿದ್ವಾಂಸರಾದ ಷೆಲ್ಡನ್ ಪೊಲಾಕ್ ಗುರ್ತಿಸುವ 'ಕವಿರಾಜ ಮಾರ್ಗ'ದ ಪ್ರಬಂಧ ಧ್ವನಿ ಹೇಳುವುದು ಇದನ್ನೇ. ಕವಿಗಳೂ ರಾಜರೂ ಒಟ್ಟಾಗಿ ಕಟ್ಟುವ ಮಾರ್ಗವೇ ಒಂದು ಸಮುದಾಯದ ನಿಜವಾದ ಮಾರ್ಗ. 'ಭಾಷಾ–ರಾಜ–ಜನ ತ್ರಯಿ' ಈ ಮೂರೂ ಪ್ರಭುತ್ವದಲ್ಲಿ ಸಮಾನ ಅಧಿಕಾರ ಪಡೆಯುವುದು ಆದರ್ಶದ ಸ್ಥಿತಿ ಹೌದು; ಅದು ಕಡೆಯ ಪಕ್ಷ ನಮ್ಮ ಗುರಿಯೋ, ಕನಸೋ, ಕನವರಿಕೆಯೋ ಆಗಬೇಕು.

ಗಿರೀಶ ಕಾರ್ನಾಡರ 'ತಲೆದಂಡ' ನಾಟಕದಲ್ಲಿ, ನೀನು ಯಾಕೆ ಬಸವಣ್ಣನ ಹಿಂದೆ ಹೋಗಿ, ಅವನ ಅನುಯಾಯಿಯೇ ಆಗಿಬಿಡಬಾರದು ಎನ್ನುವ ಹೆಂಡತಿ ರಂಭಾವತಿಯ ಪ್ರಶ್ನೆಗೆ ಬಿಜ್ಜಳನ ಉತ್ತರ: 'ಆಗತಿದ್ನಿ, ಆದರ ಆಟು ಸರಳಿಲ್ಲದು. ಕಳಬ್ಯಾಡ, ಕೊಲಬ್ಯಾಡ ಅಂತ ಅಂವ ಹೇಳ್ತಾನ, ಇಷ್ಟೆಲ್ಲಾ ಬ್ಯಾಡಗಳನ್ನ ಕಟ್ಟಿಕೊಂಡು ನಾನು ರಾಜ್ಯ ನಡುಸೂದ್ಹೆತಿ?' ಈ ಮಾತಿನಲ್ಲಿರುವ ಬ್ಯಾಡಗಳು ನಾಯಕನದ್ದೋ, ವ್ಯವಸ್ಥೆಯದೋ, ಪ್ರಜೆಗಳದ್ದೋ? ಅಧಿಕಾರ ಕಳೆದುಕೊಂಡ ಮೇಲೆ ವಿ.ಎಸ್. ನೈಪಾಲರ 'ದಿ ಏರಿಯಾ ಆಫ್ ಡಾರ್ಕ್‌ನೆಸ್' ಕೃತಿ ಓದುತ್ತಾ ಕುಳಿತ ದೇವರಾಜ ಅರಸರ ಚಿತ್ರ ಕಣ್ಣೆದುರಿಗೆ ಬರುತ್ತಿದೆ.



ವಾಚಕರ ವಾಣಿ

ಸರಳತೆಗೆ ನೋಟಿನ ಹಾರ ಸಾಟಿಯೇ?

ಇತ್ತೀಚೆಗೆ ಶಾಸಕರು ಮತ್ತು ಸಚಿವರ ಜನ್ಮ ದಿನಾಚರಣೆ ಸಮಾರಂಭಗಳು ವೈಭವೋಪೇತವಾಗಿ ನಡೆಯುತ್ತಿವೆ. ಅವರ ಅಭಿಮಾನಿಗಳು ಬೃಹದಾಕಾರದ ಹೂವು, ಸೇಬಿನ ಹಾರ ಹಾಕಿ, ಮೈಸೂರು ಪೇಟ ತೊಡಿಸಿ, ಕೇಕ್ ಕತ್ತರಿಸಿ ಪ್ರೀತಿ, ಅಭಿಮಾನ ತೋರುತ್ತಾರೆ. ಚಳ್ಳಕೆರೆ ಕ್ಷೇತ್ರದ ಶಾಸಕ ಟಿ. ರಘುಮೂರ್ತಿ ಅವರ ಅಭಿಮಾನಿಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶಾಸಕರಿಗೆ ಅವರ ಜನ್ಮದಿನದಂದು ನೋಟಿನ ಹಾರ ಹಾಕಿರುವುದು ವರದಿಯಾಗಿದೆ. ಇದು ನಿಜಕ್ಕೂ ಬೇಸರದ ಸಂಗತಿ. ಇದರ ಹಿಂದಿರುವ ಆಶಯವು ಶಾಸಕರನ್ನು ಮೆಚ್ಚಿಸುವುದೋ ಅಥವಾ ಅವರ ಸಾಮರ್ಥ್ಯ ಪ್ರದರ್ಶಿಸುವುದೋ ತಿಳಿಯದು. ಆದರೆ, ಯಾರಿಗಾದರೂ ನೋಟಿನ ಹಾರ ಹಾಕುವುದು ಸರಿಯಲ್ಲ. ಅಂಥ ಸಂಸ್ಕೃತಿಗೆ ಜನಪ್ರತಿನಿಧಿಗಳೂ ಉತ್ತೇಜನ ನೀಡಬಾರದು. ಶಾಸಕ ಅಥವಾ ಸಚಿವರಾದವರು ತಮಗೆ ಮತ ನೀಡಿ ಗೆಲ್ಲಿಸಿದವರ ಸೇವೆಗೆ ಒತ್ತು ನೀಡಬೇಕು. ಅಭಿಮಾನಿಗಳ ಅತಿರೇಕಕ್ಕೆ ನಿಯಂತ್ರಣ ಹೇರುವುದು ಕೂಡ ಅವರ ಹೊಣೆಯಾಗಿದೆ.

ಕೆ.ಎಂ. ಮುತ್ತುಸ್ವಾಮಿ, ಚಿತ್ರದುರ್ಗ

ಸರ್ಕಾರಿ ಶಾಲೆ: ಹೊಣೆ ಅರಿಯದ ಸರ್ಕಾರ

ಎಲ್ಲ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ನೀಡುವುದು ಮತ್ತು ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಿಸುವುದು ಸರ್ಕಾರದ ಜವಾಬ್ದಾರಿ. ಆದರೆ, ಸರ್ಕಾರ ತನ್ನ ಹೊಣೆಗಾರಿಕೆ ಪ್ರದರ್ಶಿಸುವಲ್ಲಿ ಎಡವಿದೆ. ಇದಕ್ಕೆ ಸಿಂಧನೂರು ತಾಲ್ಲೂಕಿನ ಶಾಲೆಗಳ ದಯನೀಯ ಸ್ಥಿತಿಯೇ ನಿದರ್ಶನ. ಮಾಧ್ಯಮಗಳಲ್ಲಿ ವರದಿಯಾಗಿರುವಂತೆ ಈ ತಾಲ್ಲೂಕಿನ 287 ಸರ್ಕಾರಿ ಶಾಲೆಗಳ ಪೈಕಿ 45 ಶಾಲೆಗಳಲ್ಲಿ ಒಬ್ಬ ಶಿಕ್ಷಕರೂ ಇಲ್ಲ; 52 ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರಿದ್ದು, ಅವರೇ ಎಲ್ಲವನ್ನೂ ನಿಭಾಯಿಸಬೇಕಿದೆ. ಹಲವು ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ಆಟದ ಮೈದಾನ, ಕೂರಲು ಆಸನಗಳಿಲ್ಲ. ಇರುವ ಕಟ್ಟಡಗಳು ಬೀಳುವ ಸ್ಥಿತಿಯಲ್ಲಿವೆ. ಪರಿಸ್ಥಿತಿ ಹೀಗಿರುವಾಗಲೇ ಶಿಕ್ಷಕರ ನೇಮಕಾತಿಯಲ್ಲಿ ಕೆಪಿಎಸ್ ಶಾಲೆಗಳಿಗೆ ಆದ್ಯತೆ ನೀಡುತ್ತಿರುವ ಉದ್ದೇಶವಾದರೂ ಏನು? ಶಾಲೆಗಳಿಗೆ ಮೂಲಸೌಕರ್ಯ, ಶಿಕ್ಷಕರ ನೇಮಕಕ್ಕೆ ಸರ್ಕಾರ ಇನ್ನಾದರೂ ಮುಂದಾಗಲಿ.

ನಾಗೇಶ ಹರಳಯ್ಯ, ಕಲಬುರಗಿ

ಮಕ್ಕಳಿಗೆ ಮನೋವಿಜ್ಞಾನದ ಅರಿವಿರಲಿ

ಗಂಗಾವತಿ ತಾಲ್ಲೂಕಿನ ಹೊಸ ಅಯೋಧ್ಯ ಗ್ರಾಮದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಎಸಗಿದ ಕೊಲೆ ರಹಸ್ಯವು ಬಯಲಾಗಿದೆ. ಈ ಘಟನೆ ಅವಲೋಕಿಸಿದರೆ ಮಕ್ಕಳ ಮನಸ್ಸಿನಲ್ಲಿ ಯಾಕಿಷ್ಟು ಕ್ರೌರ್ಯ ಮನೆ ಮಾಡುತ್ತಿದೆ ಎಂಬ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಯಬೇಕಿದೆ. ಪೋಷಕರು ಮಕ್ಕಳನ್ನು ಅಂಕಗಳಿಸುವ ಯಂತ್ರವನ್ನಾಗಿ ಮಾರ್ಪಡಿಸಿದ್ದಾರೆ. ಇದು ಅವರ ಮನಸ್ಸಿನ ಮೇಲಿನ ಒತ್ತಡ ಹೆಚ್ಚಿಸುತ್ತಿದೆ. ಆದರೆ, ಅವರಲ್ಲಿ ಇರುವ ಸುಪ್ತ ಪ್ರತಿಭೆ ಗುರ್ತಿಸುವ ಕೆಲಸವು ಪೋಷಕರು ಮತ್ತು ಶಿಕ್ಷಕರಿಂದ ಆಗುತ್ತಿಲ್ಲ. ಶಿಕ್ಷಣ ಸಂಸ್ಥೆಗಳು ಮತ್ತು ಪೋಷಕರ ಜಂಜಾಟದಲ್ಲಿ ಮಕ್ಕಳು ಬಳಲುತ್ತಿದ್ದಾರೆ. ಅವರ ಪ್ರತಿಭೆಯೂ ನಶಿಸುತ್ತಿದೆ. ಮಕ್ಕಳಿಗೆ ಅವರ ಇಚ್ಛೆಯಂತೆ ಕೋರ್ಸ್ ಆಯ್ಕೆಗೆ ಸ್ವಾತಂತ್ರ್ಯ ನೀಡಬೇಕು. ಶಾಲಾಕಾಲೇಜಿನಲ್ಲಿ ಮನೋವೈಜ್ಞಾನಿಕ ಶಿಕ್ಷಣದ ಕಲಿಕೆಗೂ ಅವಕಾಶ ಕಲ್ಪಿಸಬೇಕು.

ಪುನೀತ್ ಎನ್., ಮೈಸೂರು

ಕೊಟ್ಟ ಕುದುರೆಯನು ಏರಲರಿಯದವರು

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಂತ್ರಿ ಮಂಡಲದ ಹಲವು ಸಚಿವರಿಗೆ ತಮಗೆ ನೀಡಿರುವ ಖಾತೆಗಳು ಇಷ್ಟವಾಗದೆ ಬೇರೆ ಖಾತೆ ಬೇಕೆಂದು ಮುನಿಸಿಕೊಂಡಿದ್ದಾರೆ. ಹೈಕಮಾಂಡ್ ಭೇಟಿಗಾಗಿ ದೆಹಲಿಗೆ ವಿಮಾನವೇರುವುದು ನಡೆದಿದೆ. ಸಚಿವರ ಈ ವರ್ತನೆಯು ಸಾರ್ವಜನಿಕರೆದುರು ನಗೆಪಾಟಲಿಗೀಡಾಗಿದೆ. ತಮಗೆ ನೀಡಿದ ಖಾತೆಗಳಲ್ಲೇ ದಕ್ಷತೆ ತೋರಿದರೆ ರಾಜ್ಯಕ್ಕೂ ಕ್ಷೇಮ; ಪಕ್ಷಕ್ಕೂ ಒಳ್ಳೆಯದು. ಅದನ್ನು ಬಿಟ್ಟು 'ಕೊಟ್ಟ ಕುದುರೆಯ ಏರಲರಿಯದೆ ಮತ್ತೊಂದು ಕುದುರೆಯ ಬೇಡುವವನು ವೀರನೂ ಅಲ್ಲ ಧೀರನೂ ಅಲ್ಲ!' ಎನ್ನುವಂತಾಗಿದೆ ಸಚಿವರ ಸ್ಥಿತಿ. ಮುಖ್ಯಮಂತ್ರಿಯವರು ಸಚಿವರ ದಕ್ಷತೆ ಗುರ್ತಿಸಿ ಖಾತೆ ಹಂಚಬೇಕು. ಇಲ್ಲವಾದರೆ ಆಡಳಿತವು ಸುಗಮವಾಗಿ ಸಾಗಲು ಕಷ್ಟವಾಗಲಿದೆ.

ಪ್ರೊ. ಶಿವರಾಮಯ್ಯ, ಬೆಂಗಳೂರು

ನೇರಳೆ ಅಭಿವೃದ್ಧಿಗೆ ಸರ್ಕಾರ ಸಹಕರಿಸಲಿ

ಪ್ರಸ್ತುತ ನೇರಳೆ ಹಣ್ಣಿನ ಋತು ಆರಂಭವಾಗಿದೆ. ನೇರಳೆ ಬೀಜಗಳು ಔಷಧೀಯ ಗುಣಗಳ ಆಗರ. ಸರ್ಕಾರವು ಇವುಗಳ ಮೌಲ್ಯವರ್ಧನೆಗೆ ಕ್ರಮಕೈಗೊಳ್ಳಬೇಕಿದೆ. ಮೊದಲನೆಯದಾಗಿ ತೋಟಗಾರಿಕೆ ಇಲಾಖೆಯು ರೈತರು ಮತ್ತು ಸಣ್ಣ ವ್ಯಾಪಾರಿಗಳಿಂದ ಬೀಜಗಳನ್ನು ನ್ಯಾಯಯುತ ಬೆಲೆಗೆ ಖರೀದಿಸಲು ಗ್ರಾಮೀಣ ಭಾಗದಲ್ಲಿ ಸಂಗ್ರಹಣಾ ಕೇಂದ್ರ ಸ್ಥಾಪಿಸಬೇಕು. ಇವುಗಳಲ್ಲಿನ ಔಷಧೀಯ ಗುಣಗಳಿಂದಾಗಿ ಮಧುಮೇಹ ನಿಯಂತ್ರಣಕ್ಕೆ ಗುಣಮಟ್ಟದ ಬೀಜದ ಪುಡಿ ತಯಾರಿಸಲು ಸಣ್ಣ ಕೈಗಾರಿಕೆಗಳಿಗೆ ಸಹಾಯಧನ ನೀಡಬೇಕು. ಸುಧಾರಿತ ಕಸಿ ಸಸಿಗಳನ್ನು ಉಚಿತವಾಗಿ ವಿತರಿಸುವ ಮೂಲಕ ರೈತರ ಆದಾಯವನ್ನೂ ದ್ವಿಗುಣಗೊಳಿಸಬಹುದು.

ವಿಜಯಕುಮಾರ್ ಎಚ್.ಕೆ., ರಾಯಚೂರು

ಜಡ್ಡುಗಟ್ಟಿದ ಕಚೇರಿಗಳಿಗೆ ಬೇಕಿದೆ ಚಿಕಿತ್ಸೆ

ಆರೋಗ್ಯ ಸಚಿವ ಯು.ಟಿ. ಖಾದರ್ ಅವರು ಇತ್ತೀಚೆಗೆ ಸರ್ಕಾರಿ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿರುವುದು ಆರೋಗ್ಯ ಇಲಾಖೆಯ ಸಿಬ್ಬಂದಿಗೆ ಎಚ್ಚರಿಕೆಯ ಗಂಟೆಯಾಗಿದೆ. ಇದೇ ರೀತಿಯಲ್ಲಿ ಉಳಿದ ಸಚಿವರು ಆಗಾಗ್ಗೆ ತಮ್ಮ ಇಲಾಖೆಯ ಕಚೇರಿಗಳಿಗೆ ದಿಢೀರ್ ಭೇಟಿ ನೀಡಿದರೆ ವ್ಯವಸ್ಥೆಯ ನೈಜ ದರ್ಶನ ಗೋಚರಿಸುತ್ತದೆ. ಅಲ್ಲಿನ ನ್ಯೂನತೆ ಸರಿಪಡಿಸಿ ಇಲಾಖೆಯಲ್ಲಿ ಸುಧಾರಣೆಗೆ ಪ್ರಯತ್ನಿಸಬಹುದು. ಸರ್ಕಾರಿ ಕಚೇರಿಗಳು ಜಡ್ಡುಗಟ್ಟಿವೆ. ಈ ಜಡತ್ವ ನಿವಾರಣೆಯಾದರಷ್ಟೇ ಸರ್ಕಾರದ ಸೌಲಭ್ಯಗಳು ಅರ್ಹರಿಗೆ ತಲಪಲು ಸಾಧ್ಯ.

ಗಣಪತಿ ನಾಯ್ಕ್, ಕಾನಗೋಡ

ಜಾಲಡಿಜಾ

ನಾಯಕತ್ವದ ಬಣ್ಣ ಬಯಲು



ಒಮಾನ್ ಕರಾವಳಿಯಲ್ಲಿ ಭಾರತದ ಹಡಗಿನ ಮೇಲೆ ಅಮೆರಿಕ ದಾಳಿ ನಡೆಸಿದೆ. ಆದರೆ, ಪ್ರಧಾನಿ ನರೇಂದ್ರ ಮೋದಿಯವರು ಈ ಬಗ್ಗೆ ಒಂದೂ ಮಾತನಾಡಿಲ್ಲ. ಭಾರತದ ನಾಯಕತ್ವಕ್ಕೆ ಎಂತಹ ಸ್ಥಿತಿ ಬಂದಿದೆ. ಅಮೆರಿಕವನ್ನು ಹೆದರಿಸೋದು ಹೋಗಲಿ, ಕನಿಷ್ಠ ಘಟನೆಯನ್ನು ಖಂಡಿಸಿ ಒಂದು ಹೇಳಿಕೆಯನ್ನು ಬಿಡುಗಡೆ ಮಾಡಬೇಕಲ್ಲವೆ?

ರೂಪೇಶ್ ರಾಜಣ್ಣ, ಕನ್ನಡ ಕಾರ್ಯಕರ್ತ, 'ಎಕ್ಸ್'ನಿಂದ

ಕಿಡಿನುಡಿ



ಸಾರ್ವಜನಿಕರ ತೆರಿಗೆ ಹಣದಲ್ಲಿ ವಿದ್ಯುತ್ ಕಂಬಗಳು, ಉಪ ಕೇಂದ್ರಗಳು ಹಾಗೂ ಲೈನ್‌ಗಳನ್ನು ನಿರ್ಮಿಸಲಾಗಿದೆ. ಇವುಗಳನ್ನು ಖಾಸಗಿ ಕಂಪನಿಗಳು ಬಳಸಿಕೊಳ್ಳಲು ಅನುಮತಿ ನೀಡುವುದು ಸರಿಯಲ್ಲ. ರಾಜ್ಯ ಸರ್ಕಾರದ ನೀತಿಯು ಗ್ರಾಮೀಣ ರೈತರ ಬದುಕಿಗೆ ಪೆಟ್ಟು ನೀಡಲಿದೆ.

ಗೋವಿಂದ ಕಾರಜೋಳ, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಬುಧವಾರ, 13-6-2001

- **ಧಾರವಾಡ ಜಿ.ಪಂ. ಸದಸ್ಯ ಹಂಚಿನಾಳ ಭೀಕರ ಕೊಲೆ**

ಧಾರವಾಡ, ಜೂನ್ 12– ಜಿಲ್ಲಾ ಪಂಚಾಯಿತಿಯ ಕಾಂಗ್ರೆಸ್ ಸದಸ್ಯ ಬಸವಣ್ಣಪ್ಪ ಹಂಚಿನಾಳ (53) ಅವರನ್ನು ಇಂದು ಧಾರವಾಡ ಸಮೀಪದ ಸೋಮಾಪುರ ಬಳಿ ಭೀಕರವಾಗಿ ಕೊಲೆ ಮಾಡಲಾಗಿದೆ.

ಮೂರು ತಿಂಗಳ ಹಿಂದೆ ಧಾರವಾಡದ ಬಳಿ ಕೊಲೆಯಾದ ಮೊರಬ ಗ್ರಾಮದ ಉದಯಗೌಡರ ಅವರ ಸೋದರರು ಹಾಗೂ ಬೆಂಬಲಿಗರಿದ್ದ 9 ಜನರ ಗುಂಪು ಹಂಚಿನಾಳ ಅವರನ್ನು ಕೊಲೆ ಮಾಡಿದೆ ಎಂದು ಆರೋಪಿಸಲಾಗಿದೆ.

ಕೊಲೆಯಾದ ಬಸವಣ್ಣ ಹಂಚಿನಾಳ ಅವರ ಪುತ್ರ ಹಾಗೂ ಬೆಂಬಲಿಗರು ಉದಯಗೌಡರ ಅವರನ್ನು ಕೊಲೆ ಮಾಡಿದ ಆರೋಪ ಎದುರಿಸುತ್ತಿದ್ದರು.

- **ಮಕ್ಕಳನ್ನು ಶಾಲೆಗೆ ಆಕರ್ಷಿಸಲು ಮಹತ್ವದ ಯೋಜನೆ**

ಬೆಂಗಳೂರು, ಜೂನ್ 12– ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಮತ್ತು ಶಾಲೆಯಿಂದ ಹೊರಗೆ ಉಳಿದಿರುವ ಸುಮಾರು 12 ಲಕ್ಷಕ್ಕೂ ಹೆಚ್ಚು ಮಕ್ಕಳನ್ನು ಮತ್ತೆ ಶಾಲೆಗಳಿಗೆ ಆಕರ್ಷಿಸುವ ನಿಟ್ಟಿನಲ್ಲಿ ಒಂದು ಮಹತ್ವದ ಹೆಜ್ಜೆ ಎಂಬಂತೆ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನ ಮತ್ತು ರಾಜ್ಯ ಸರ್ಕಾರಗಳು ಕೈ ಜೋಡಿಸಿ ಒಪ್ಪಂದ ಪತ್ರಕ್ಕೆ ಸಹಿ ಹಾಕಿದವು.

ಅರ್ಧಕ್ಕೇ ಶಾಲೆ ಬಿಡುವ ಮಕ್ಕಳ ಪ್ರಮಾಣ ಹೆಚ್ಚಿರುವ ಉತ್ತರದ ಏಳು ಜಿಲ್ಲೆಗಳಲ್ಲಿ ಪ್ರತಿಷ್ಠಾನವು ಹೆಚ್ಚಿನ ನಿಗಾ ವಹಿಸಿ ಕಾರ್ಯ ನಡೆಸಲಿದೆ.

75 ವರ್ಷಗಳ ಹಿಂದೆ

ಬುಧವಾರ, 13-6-1951

- **ಜುಲೈ 13ರಂದು ಬೆಂಗಳೂರಿನಲ್ಲಿ ಎಐಸಿಸಿ ಸಭೆ**

ನವದೆಹಲಿ, ಜೂನ್ 12– ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮೂರು ದಿನಗಳ ಅಧಿವೇಶನವು ಬೆಂಗಳೂರು ನಗರದಲ್ಲಿ ಜುಲೈ 13ನೇ ತಾರೀಖಿನಿಂದ ಸೇರಿ ಬರುವ ಮಹಾ ಚುನಾವಣೆಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಚುನಾವಣಾ ಘೋಷಣೆಯನ್ನು ಚರ್ಚಿಸಿ ಪರಿಶೀಲಿಸುವುದು ಮತ್ತು ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸುವ ಮಾರ್ಗೋಪಾಯಗಳನ್ನು ಕಂಡುಹಿಡಿಯುವುದು.

ಎಐಸಿಸಿಯ ಬೆಂಗಳೂರು ಅಧಿವೇಶನದಲ್ಲಿ ಖಾಸಗಿ ನಿರ್ಣಯಗಳನ್ನು ಮಂಡಿಸಿ ಚರ್ಚಿಸಲು ಅವಕಾಶವಿರುವುದಿಲ್ಲ. ಆದರೆ, ಚುನಾವಣಾ ಘೋಷಣೆ ಮತ್ತು ಸಂಸ್ಥೆಯನ್ನು ಬಲಗೊಳಿಸುವ ಬಗ್ಗೆ ಸದಸ್ಯರುಗಳ ಸಲಹೆಗಳನ್ನು ಸ್ವೀಕರಿಸಲಾಗುವುದು.

ಚುರುಮುರಿ



ಉತ್ತರಕುಮಾರ ಚರಿತೆ!

• ತುರುವೇಕೆರೆ ಪ್ರಸಾದ್

'ಏನ್ರಲಾ, ನಮ್ ಸಿಎಂ ಸಾಹೇಬ್ರುಗೆ ಉತ್ತರ ಚೆನ್ನಾಗಿ ಆಗ್‌ಬಂದಿರೊ ಅಂಗೈತೆ' ಎಂದ ಗುದ್ಲಿಂಗ.

'ವ್ಹಾ ಕಣ್ಲಾ! ಕಮಲ್ದೋರು ವಾಸ್ತು ನೆಟ್ಟಗಿಲ್ಲ ಅಂತ ಮುಚ್ಚಿದ್ದ ವಿಧಾನಸೌಧದ ಪಶ್ಚಿಮ ಬಾಗ್ಲನ್ನ ಸಿದ್ದಣ್ಣ ತೆಗೆಸಿ ಅದ್ರಲ್ಲೇ ಜುಂ ಅಂತ ಓಡಾಡ್ಕಂಡಿದ್ರು. ಈಗ ಡಿಕೆಶಿ ಉತ್ತರ ದ್ವಾರದಿಂದ ವಿಧಾನಸೌಧಕ್ಕೆ ಎಂಟ್ರಿ ಕೊಟ್ಟವ್ರಂತೆ' ಎಂದ ಮಾಲಿಂಗ.

'ಅಷ್ಟೇ ಅಲ್ಲ, ಸಿಎಂ ಗೃಹಕಚೇರೀನೂ ಉತ್ತರ ದ್ವಾರದಿಂದ ಪ್ರವೇಶ ಮಾಡೋ ಅಂಗೆ ರೆಡಿ ಮಾಡ್ಸವ್ರಂತೆ'.

'ಸರ್ವಂ ಉತ್ತರಂ! ನಂಗೂ ಅದೇ ಸರಿ ಅನ್ಸುತ್ತೆ' ಎಂದ ಕಲ್ಲೇಶಿ.

'ಉತ್ತರಂನ 'ರಂ'ಗೆ ಬಾಯ್ ಬಿಡದೆ ಪಾಯಿಂಟ್ಗೆ ಬಾ' ಗದರಿದ ಪರ್ಮೇಶಿ.

'ವಿಂಧ್ಯ, ಹಿಮಾಲಯ, ಎಲ್ಲಾ ನಮ್ ಉತ್ತರಕ್ಕೆ ಇರೋದು. ಡಿಕೆಶಿನೂ ಒಂಥರಾ ಬಂಡೆ ಅಲ್ವಾ? ಅದಕ್ಕೇ ಎಲ್ಲಾ ಉತ್ತರಮಯ'.

'ಆದ್ರೆ ಸಿಎಂ ಕ್ಷೇತ್ರಾನೆ ದಕ್ಷಿಣಕ್ಕಿದೆಯಲ್ಲ' ಸಂಶಯದ ಹೊಗೆ ಬಿಟ್ಟ ಭದ್ರ.

'ವಿಧಾನಸೌಧ ಕ್ಷೇತ್ರದ ಉತ್ತರಕ್ಕಿದೆಯಲ್ಲ, ಅದು ತಾನೆ ಮುಖ್ಯ'.

'ಹೌದೌದು, ಮುಂದೆ ಕನಕಪುರದ ಹೆಸರನ್ನ ಉತ್ತರಪುರ ಅಂತ ಬದ್ಲಾಯ್ಸಿದ್ರೆ ಆಯ್ತು. ಹಂಗೆ ಬೆಂಗಳೂರನ್ನ 'ಉತ್ತರ ಕಾಣದೂರು' ಅಂತಾನೂ ಬದ್ಲಾಯಿಸಬಹುದು'.

'ಉತ್ತರ ಕೊಡೋರೆಲ್ಲಾ ಡೆಲ್ಲಿ ಸೇರ್ಕಂಡ್ರೆ ಉತ್ತರ ಕಾಣದೂರೇ! ಏನೆಲ್ಲಾ ಆದ್ರೂ ಮೂರು ರಾಶಿಯೋರಿಗೆ ಉತ್ತರ ಆಗಿ ಬತ್ತದಂತೆ. ಡೆಲ್ಲಿನೂ ಉತ್ತರಕ್ಕೇ ಐತೆ. ಮೂರೂ ರಾಶಿಯ ಮೂವತ್ತಕ್ಕೂ ಹೆಚ್ಚು ಶಾಸಕರು ಮಂತ್ರಿಗಿರಿ ಚೌಕಾಶಿಗೆ ಉತ್ತರಕ್ಕೇ ಹಾರಿ 'ಅ-ಫಲ' ಗಿಟ್ಟದೆ ಒಣದ್ರಾಕ್ಷಿ ತಿನ್ಕಂಡು ಉತ್ತರಕುಮಾರರಂತೆ ವಾಪಸ್ ಬತ್ತಾವ್ರೆ'.

'ಹಿಂಗೇ ಎಲ್ರೂ ಉತ್ತರ ಉತ್ತರ ಅಂತಿದ್ರೆ ಕರ್ನಾಟಕನೇ 'ಉತ್ತರಕುಮಾರರ ನಾಡು' ಅಂತ ಕರೀಬೋದೇನೋ?'

'ಹಾಗೇ ಈ ರಾಜಕೀಯ ಚರಿತೆನೂ 'ಉತ್ತರಕುಮಾರ ಚರಿತೆ' ಅಂತ ಇತಿಹಾಸದಲ್ಲಿ ಹಾಡಿ ಹೊಗಳಬಹುದು' ಎಂದ ಪರ್ಮೇಶಿ. ಎಲ್ಲಾ ಹೌದೌದು ಎಂದು ತಲೆಯಾಡಿಸಿದರು.

ಸಂಗತ

ಪರದೆಯಲ್ಲಿ ಬೆಳಕು; ಎಳೆಮನಸ್ಸಿನಲ್ಲಿ ಕತ್ತಲೆ


ಡಿಜಿಟಲ್ ಲೋಕದ ಸ್ನೇಹ–ವ್ಯವಹಾರಗಳ ವ್ಯಸನ ನೈಜ ಸಂಬಂಧಗಳ ನಿರ್ವಹಣೆಗೆ ಅಡ್ಡಿಯಾಗಿದೆ. ಇದರ ಫಲವೇ ಮಾನಸಿಕ ಅಸ್ವಸ್ಥತೆ ಹಾಗೂ ಹಿಂಸಾತ್ಮಕ ನಡವಳಿಕೆ.

• ನಾಗರಾಜ್ ಬಿ.ಎನ್.

ಮಕ್ಕಳು ಬೊಂಬೆಗಳೊಂದಿಗೆ ಆಟವಾಡುವ ಕಾಲ ಹಿನ್ನೆಲೆಗೆ ಸರಿಯುತ್ತಿದ್ದು, ಆಟಿಕೆಗಳ ಜಾಗದಲ್ಲಿ ಮೊಬೈಲ್ ಕಾಣಿಸಿಕೊಳ್ಳುತ್ತಿದೆ. ಮಕ್ಕಳಿಗೆ ಊಟ ಮಾಡಿಸಲು ಆಕಾಶದಲ್ಲಿನ ಚಂದ್ರನ ತೋರಿಸುವ ಬದಲು, ಮೊಬೈಲ್‌ನಲ್ಲಿ ಕಾರ್ಟೂನ್‌ಗಳನ್ನು ತೋರಿಸುತ್ತಿದ್ದೇವೆ. ಅಮ್ಮನ ಜೋಗುಳದ ಜಾಗವನ್ನು ಮೊಬೈಲ್ ರಿಂಗಣ ಆವರಿಸಿಕೊಳ್ಳುತ್ತಿದೆ.

ಇಂಟರ್ನೆಟ್ ಮತ್ತು ಕೃತಕ ಬುದ್ಧಿಮತ್ತೆಯು ಹೊಸ ತಲೆಮಾರಿನ ಜೀವನದ ಸಹಜ ಭಾಗವಾಗಿದೆ. ಆದರೆ, ತಂತ್ರಜ್ಞಾನವನ್ನು ಬಳಸುವ ಸಾಮರ್ಥ್ಯ ಮತ್ತು ನಿಯಂತ್ರಿಸುವ ಪ್ರೌಢಿಮೆ ಎರಡೂ ಒಂದೇ ಅಲ್ಲ ಎನ್ನುವುದನ್ನು ಮರೆಯಬಾರದು. ಮಕ್ಕಳಲ್ಲಿ ವಿವೇಚನಾಶಕ್ತಿ ಕಡಿಮೆ ಇರುವುದರಿಂದ ಅವರು ತಮಗರಿವಿಲ್ಲದಂತೆಯೇ ಮೊಬೈಲ್ ವ್ಯಸನಕ್ಕೆ ಒಳಗಾಗುತ್ತಾರೆ. ಅದು ಅವರ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ; ಮಾನಸಿಕ ಒತ್ತಡ, ವ್ಯಗ್ರತೆಯ ಜೊತೆಗೆ, ಸಾಮಾಜಿಕ ಸಂಬಂಧಗಳಿಂದಲೂ ಅವರನ್ನು ವಿಮುಖವಾಗಿಸುವ ಸಾಧ್ಯತೆಯಿದೆ.

ಮಕ್ಕಳಿಗೆ ಬಹುಪ್ರಿಯವಾದ ಆನ್‌ಲೈನ್ ಗೇಮ್‌ಗಳನ್ನು ಬಳಕೆದಾರನ ಮೆದುಳಿನ ಡೋಪಮೈನ್ (ಮೆದುಳಿನಲ್ಲಿ ನೈಸರ್ಗಿಕವಾಗಿ ಉತ್ಪತ್ತಿಯಾಗುವ ರಾಸಾಯನಿಕ ಸಂದೇಶವಾಹಕ) ವ್ಯವಸ್ಥೆಯನ್ನು ಗುರಿಯಾಗಿಸಿಕೊಂಡು, ಮತ್ತೆ ಮತ್ತೆ ಆಟ ಆಡಲು ಪ್ರೇರೇಪಿಸುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿರುತ್ತದೆ. ಪ್ರತಿ ಗೆಲುವು, ಪ್ರತಿ ಬಹುಮಾನ, ಪ್ರತಿ ಹಂತವು ಮೆದುಳಿಗೆ ಕ್ಷಣಿಕ ಸಂತೋಷ ನೀಡುತ್ತದೆ. ಆಟದ ಗೀಳಿನಲ್ಲಿ ವಾಸ್ತವ ಜೀವನದ ಸಂಬಂಧಗಳು, ಜವಾಬ್ದಾರಿಗಳು ಮತ್ತು ಭಾವನೆಗಳು ಆಕರ್ಷಣೆ ಕಳೆದುಕೊಳ್ಳುತ್ತಾ ಹೋಗುತ್ತವೆ. ಇದನ್ನು ವಿಶ್ವ ಆರೋಗ್ಯ ಸಂಸ್ಥೆ 'ಗೇಮಿಂಗ್ ಡಿಸಾರ್ಡರ್' ಎಂದು ಗುರ್ತಿಸಿದೆ.



ಈ ಹಿಂದೆ ಮಕ್ಕಳಿಗೆ ಮನೆಯಷ್ಟೇ ಅಲ್ಲ, ಕುಟುಂಬ, ನೆರೆಹೊರೆ, ಶಾಲೆ, ಊರು, ಸಂಸ್ಕೃತಿ ಮತ್ತು ಮೌಲ್ಯಗಳು ಬದುಕಿನ ಭಾಗವಾಗಿದ್ದವು. ಈಗ, ಆ ಜಾಗವನ್ನು ಮೊಬೈಲ್ ಪರದೆ ಆಕ್ರಮಿಸಿಕೊಳ್ಳುತ್ತಿದೆ. ಪುಸ್ತಕಗಳನ್ನು ಹಿಡಿಯುತ್ತಿದ್ದ ಕೈಗೆ ಸ್ಮಾರ್ಟ್‌ಫೋನ್‌ಗಳು ಬಂದಿವೆ. ಮಕ್ಕಳು ಆಟದ ಮೈದಾನದಲ್ಲಿ ಕಳೆಯಬೇಕಾದ ಸಮಯ, ವರ್ಚುವಲ್ ಯುದ್ಧಭೂಮಿಯಲ್ಲಿ ಕಳೆದುಹೋಗುತ್ತಿದೆ!

ತಂತ್ರಜ್ಞಾನ ನಮ್ಮ ವಿರೋಧಿಯಲ್ಲ. ಆದರೆ, ಅದನ್ನು ನಿಯಂತ್ರಿಸುವ ಸಾಮರ್ಥ್ಯ ಕಳೆದುಕೊಂಡಾಗ ಸಮಾಜ ತನ್ನ ಭವಿಷ್ಯವನ್ನು ತಾನೇ ಅಪಾಯಕ್ಕೆ ತಳ್ಳಿಕೊಳ್ಳುತ್ತದೆ. ಇಂದಿನ ಮಕ್ಕಳು ಮಾಹಿತಿ ಕೊರತೆಯಲ್ಲಿ ಬೆಳೆಯುತ್ತಿಲ್ಲ. ಬದಲಿಗೆ, ಅದರ ಪ್ರವಾಹದಲ್ಲಿ ಮುಳುಗುತ್ತಿದ್ದಾರೆ. ಜ್ಞಾನ ಹೆಚ್ಚುತ್ತಿದೆಯೇ ಹೊರತು, ಜೀವನ ಅರ್ಥ ಮಾಡಿಕೊಳ್ಳುವ ವಿವೇಕ ಬೆಳೆಯುತ್ತಿಲ್ಲ. ಸಾವಿರಾರು ಮಂದಿಯೊಂದಿಗೆ ಆನ್‌ಲೈನ್ ಸಂಪರ್ಕ ಹೊಂದಿರುವ ಯುವಕ, ತನ್ನ ಮನೆಯವರೊಂದಿಗೆ ಮಾತನಾಡಲು ಸಮಯವಿಲ್ಲದ ಸ್ಥಿತಿಗೆ ತಲಪಿದ್ದಾನೆ. ಜಗತ್ತಿನ ಆಟಗಾರರೊಂದಿಗೆ ತನ್ನದೇ ಆದ ತಂಡ ರಚಿಸಿಕೊಳ್ಳುವ ತರುಣ, ತನ್ನ ಕುಟುಂಬದ ಸದಸ್ಯರೊಂದಿಗೆ ಭಾವನೆಗಳನ್ನು ಹಂಚಿಕೊಳ್ಳಲು ಅಸಮರ್ಥನಾಗಿದ್ದಾನೆ.

'ನಿರಂತರ ಡಿಜಿಟಲ್ ಉತ್ತೇಜನೆ ಮನುಷ್ಯನ ಸಹನೆಯ ಮಟ್ಟ ಕುಗ್ಗಿಸುತ್ತದೆ' ಎಂದು ಮನೋವಿಜ್ಞಾನಿಗಳು ಬಹುಕಾಲದಿಂದ ಎಚ್ಚರಿಸುತ್ತಲೇ ಇದ್ದಾರೆ. ತಕ್ಷಣದ ಸಂತೋಷ, ಕ್ಷಣಿಕ ಗೆಲುವು ಮತ್ತು ನಿರಂತರ ಪ್ರಚೋದನೆಗಳಿಗೆ ಒಗ್ಗಿಕೊಂಡ ಮನಸ್ಸು, ನಿರಾಕರಣೆ ಅಥವಾ ನಿಯಂತ್ರಣವನ್ನು ಸಹಿಸಿಕೊಳ್ಳಲು ಕಷ್ಟಪಡುತ್ತದೆ. ಬದುಕಿನ ವಾಸ್ತವಿಕತೆ ಮತ್ತು ವರ್ಚುವಲ್ ಜಗತ್ತಿನ ನಡುವೆ ಅಂತರ ಹೆಚ್ಚಾದಂತೆ ನಿರಾಶೆ, ಕೋಪ ಮತ್ತು ಅಸಹನೆಗಳು ತೀವ್ರಗೊಳ್ಳುತ್ತವೆ.

ನಾವು ಮಕ್ಕಳಿಗೆ ಉತ್ತಮ ಶಾಲೆಗಳನ್ನು ಕೊಟ್ಟಿದ್ದೇವೆ. ಆದರೆ, ಸಮಯ ಕೊಡುತ್ತಿಲ್ಲ. ಮೊಬೈಲ್ ಕೊಟ್ಟಿದ್ದೇವೆ, ಬದುಕಿನ ಮೌಲ್ಯಗಳನ್ನು ಕಲಿಸುವಲ್ಲಿ ಯಶಸ್ವಿಯಾಗಿಲ್ಲ. ಆಧುನಿಕ ಕುಟುಂಬಗಳ ದೊಡ್ಡ ದುರಂತವೆಂದರೆ, ಒಟ್ಟಿಗೆ ವಾಸಿಸುತ್ತಿದ್ದರೂ ಪರಸ್ಪರರ ಬದುಕಿನೊಳಗೆ ಪ್ರವೇಶಿಸದಿರುವುದು. ಒಂದೇ ಮನೆಯಲ್ಲಿ ನಾಲ್ಕು ಜನ ಇದ್ದರೂ, ನಾಲ್ಕು ಪ್ರತ್ಯೇಕ ಡಿಜಿಟಲ್ ಜಗತ್ತಿನಲ್ಲಿ ಬದುಕುತ್ತಿರುತ್ತಾರೆ. ಸಂವಾದ ಕಡಿಮೆಯಾಗುತ್ತಿದೆ. ಸಂಬಂಧಗಳು ಔಪಚಾರಿಕವಾಗುತ್ತಿವೆ, ಭಾವನೆಗಳು ಗೌಣವಾಗುತ್ತಿವೆ.

ನಮ್ಮ ಶಿಕ್ಷಣ ವ್ಯವಸ್ಥೆ ಮಕ್ಕಳನ್ನು ಉದ್ಯೋಗಕ್ಕಾಗಿ ಸಜ್ಜುಗೊಳಿಸುತ್ತದೆ; ಜೀವನಕ್ಕಾಗಿ ಸಿದ್ಧಗೊಳಿಸುತ್ತಿಲ್ಲ. ಮಾನಸಿಕ ಆರೋಗ್ಯ, ಡಿಜಿಟಲ್ ಶಿಸ್ತು, ಸಹಾನುಭೂತಿ ಮತ್ತು ಸಾಮಾಜಿಕ ಜವಾಬ್ದಾರಿಯೂ ಶಿಕ್ಷಣದ ಭಾಗವಾಗಬೇಕು. ಶಿಕ್ಷಣ ನಮ್ಮೊಳಗಿನ ಚೆಲುವನ್ನು ಹೆಚ್ಚಿಸುವಂತಿರಬೇಕು.

ಉತ್ತಮ ಸಮಾಜ ಕಟ್ಟಬೇಕಾದರೆ ಮಕ್ಕಳಿಗೆ ಲೈಬ್ರರಿ, ಕ್ರೀಡಾಂಗಣ, ಸಾಂಸ್ಕೃತಿಕ ವೇದಿಕೆಗಳು ಮತ್ತು ಸಮುದಾಯ ಚಟುವಟಿಕೆಗಳ ಅವಕಾಶಗಳು ಹೆಚ್ಚಾಗಬೇಕು. ಪರದೆಯಾಚೆಗಿನ ಬದುಕಿನ ಸೌಂದರ್ಯವನ್ನು ಅವರಿಗೆ ತೋರಿಸಬೇಕು.

ಸರ್ಕಾರ 'ಡಿಜಿಟಲ್ ಇಂಡಿಯಾ' ರೂಪಿಸಲು ತೋರುವ ಉತ್ಸಾಹವನ್ನು, 'ಮಾನಸಿಕ ಆರೋಗ್ಯದ ಸಮಾಜ' ನಿರ್ಮಿಸುವಲ್ಲಿಯೂ ತೋರಬೇಕಿದೆ. ಶಾಲಾ ಮಟ್ಟದಲ್ಲಿಯೇ ಮಾನಸಿಕ ಆರೋಗ್ಯ ಶಿಕ್ಷಣ ಕಡ್ಡಾಯವಾಗಬೇಕು. ಆನ್‌ಲೈನ್ ಗೇಮ್‌ಗಳ ನಿಯಂತ್ರಣ, ಪೋಷಕರ ಜಾಗೃತಿ ಕಾರ್ಯಕ್ರಮಗಳು ಮತ್ತು ಯುವಜನರ ಸಲಹಾ ಕೇಂದ್ರಗಳಿಗೆ ಆದ್ಯತೆ ದೊರೆಯಬೇಕು. ಯಾವುದೇ ರಾಷ್ಟ್ರದ ಭವಿಷ್ಯ ಅದರ ತಂತ್ರಜ್ಞಾನದಿಂದ ಮಾತ್ರ ನಿರ್ಧಾರವಾಗುವುದಿಲ್ಲ. ಅಲ್ಲಿಯ ಯುವ ಮನಸ್ಸುಗಳ ಗುಣಮಟ್ಟದಿಂದಲೂ ನಿರ್ಧಾರವಾಗುತ್ತದೆ.

ಯಂತ್ರಗಳನ್ನು ಸಿದ್ಧಪಡಿಸುವುದು ಸುಲಭ. ಮನುಷ್ಯರನ್ನು ರೂಪಿಸುವುದು ಕಷ್ಟ. ಈ ಕಠಿಣ ಜವಾಬ್ದಾರಿಯಿಂದ ನಾವು ತಪ್ಪಿಸಿಕೊಳ್ಳುವಂತಿಲ್ಲ. ಎಚ್ಚೆತ್ತುಕೊಳ್ಳದಿದ್ದರೆ, ಪರದೆಗಳ ಬೆಳಕು ಹೆಚ್ಚಾದಂತೆ ಮನಸ್ಸುಗಳ ಕತ್ತಲೆ ಗಾಢವಾಗುವುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಹಿಳೆಯರ ಮತ ಸೆಳೆಯಲು ಪೈಪೋಟಿ ನಡೆಸುವ ರಾಜಕೀಯ ಪಕ್ಷಗಳು ಪ್ರಾತಿನಿಧ್ಯದ ವಿಚಾರದಲ್ಲಿ ಆಸಕ್ತಿ ತೋರುತ್ತಿಲ್ಲವೇಕೆ? ಈ ಕುರಿತು ಎರಡು ಅಭಿಪ್ರಾಯಗಳು

ರಾಜಕೀಯದಲ್ಲಿ ಹೆಣ್ಣು ಕರಿಬೇವೇ?

• ಮೋಟಮ್ಮ



> ಪಂಚರಾಜ್ಯಗಳ ಚುನಾವಣೆ ಸಂದರ್ಭದಲ್ಲಿ 'ನಾರಿಶಕ್ತಿ' ಎಂದು ಬಿಂಬಿಸಿದ ಬಿಜೆಪಿ, ಮಹಿಳಾ ಮೀಸಲಾತಿಯನ್ನು ಕ್ಷೇತ್ರ ಮರು ವಿಂಗಡಣೆ ಮಸೂದೆ ಜತೆಗೆ ಸೇರ್ಪಡೆ ಮಾಡಿ ಮಂಡಿಸಿತು. ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಗೊಳ್ಳಬಾರದು ಎಂಬ ಕಾರಣಕ್ಕೇ ಎರಡನ್ನೂ ಒಂದರಲ್ಲೇ ಮಿಶ್ರಣ ಮಾಡಲಾಯಿತು. ಈಗ ಪ್ರಧಾನಿ ನರೇಂದ್ರ ಮೋದಿ ಆದಿಯಾಗಿ ಬಿಜೆಪಿಯವರು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಲೋಕಸಭೆ, ವಿಧಾನಸಭೆಯಲ್ಲಿ ಮಹಿಳಾ ಮೀಸಲಾತಿ ಜಾರಿಯಾದರೆ, ಅದರಲ್ಲೂ ಜಾತಿಗಳ ಒಳ ಮೀಸಲಾತಿ ವರ್ಗೀಕರಣ ಆಗಬೇಕು. ಹಾಗೆ ಮಾಡಿದರೆ ತಮ್ಮ ಕ್ಷೇತ್ರಗಳು ಕೈ ಜಾರಲಿವೆ ಎಂಬ ಭಯವೂ ಅವರಿಗೆ ಇದ್ದಂತಿದೆ

21ನೇ ಶತಮಾನದಲ್ಲೂ ರಾಜಕೀಯ ಪಕ್ಷಗಳಿಗೆ ಮಹಿಳಾ ಪ್ರಾತಿನಿಧ್ಯ ಎಂಬುದು ಕೇವಲ ಕರಿಬೇವಿನ ಸೊಪ್ಪಿನಂತೆ ಆಗಿದೆ. ಒಗ್ಗರಣೆಗಷ್ಟೇ ಬಳಸಿಕೊಂಡು ಹೆಸರಿಗಷ್ಟೆ ಒಬ್ಬರಿಗೋ, ಇಬ್ಬರಿಗೋ ಸ್ಥಾನ ನೀಡಿ ಅದನ್ನೇ ಮಹಿಳಾ ಪ್ರಾತಿನಿಧ್ಯ ಎನ್ನಲಾಗುತ್ತಿದೆ. ಎಲ್ಲಾ ಪಕ್ಷಗಳಲ್ಲೂ ಮಹಿಳಾ ವಿಭಾಗಗಳಿವೆ. ಆದರೆ, ಅವುಗಳಿಗೆ ಯಾವುದೇ ಆದ್ಯತೆ ಇಲ್ಲ. ಮಹಿಳೆಯರಿಗೆ ಸ್ಥಾನ ನೀಡಬೇಕು ಎಂಬ ಕಾರಣಕ್ಕೆ ಕಷ್ಟಪಟ್ಟು ಅವಕಾಶಗಳನ್ನು ಕಲ್ಪಿಸುವುದು ಎಲ್ಲಾ ಪಕ್ಷಗಳಲ್ಲೂ ನಿರಂತರವಾಗಿ ನಡೆದುಕೊಂಡು ಬಂದಿದೆ.

ರಾಜಕಾರಣದಲ್ಲಿ ಮಹಿಳೆಯರ ಪಾತ್ರವು ಕ್ರಮೇಣ ಹೆಚ್ಚಾಗುತ್ತಿದೆ. ಮಹಿಳೆಯರು ಇಲ್ಲದ ರಾಜಕೀಯ ಪಕ್ಷವನ್ನಾಗಲಿ, ರಾಜಕಾರಣವನ್ನಾಗಲಿ ಊಹಿಸಿಕೊಳ್ಳಲು ಸಾಧ್ಯವಿಲ್ಲ. ಸಾರ್ವಜನಿಕ ಸಭೆ, ಸಮಾರಂಭ, ಪ್ರತಿಭಟನೆ, ಜಾಥಾ, ಮತ ಯಾಚನೆ– ಹೀಗೆ ಪಕ್ಷಕ್ಕೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳಲ್ಲೂ ಪುರುಷರಿಗೆ ಸಮನಾಗಿ– ಕೆಲವೊಮ್ಮೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಹಿಳೆಯರು ಸಕ್ರಿಯರಾಗಿದ್ದಾರೆ. ಆದರೆ, ಅಧಿಕಾರ, ಸ್ಥಾನಮಾನ ಹಂಚಿಕೆಯ ವಿಚಾರದಲ್ಲಿ ಮಾತ್ರ ಮಹಿಳೆಯರ ಪಾತ್ರವನ್ನು ಅತ್ಯಂತ ಸೀಮಿತಗೊಳಿಸಲಾಗಿದೆ. ಹಿಂದಿನಿಂದಲೂ ಇದೇ ಪ್ರವೃತ್ತಿ ಮುಂದುವರಿಯುತ್ತಿದೆ.

ಕರ್ನಾಟಕ ರಾಜ್ಯದ ಮಟ್ಟಿಗೆ ನೋಡುವುದಾದರೆ ಮಹಿಳೆಯರ ರಾಜಕೀಯ ಪ್ರವೇಶ ಆರಂಭವಾಗಿದ್ದು ಯಶೋಧರಮ್ಮ ದಾಸಪ್ಪ ಮತ್ತು ಚಿಕ್ಕಮಗಳೂರಿನ ಬಿ.ಎಲ್.ಸುಬ್ಬಮ್ಮ ಅವರ ಮೂಲಕ. ಯಶೋಧರಮ್ಮ ಅವರು 1962ರಲ್ಲಿ ಹಾಸನ ಕ್ಷೇತ್ರದಿಂದ ವಿಧಾನಸಭೆ ಪ್ರವೇಶ ಮಾಡಿದರು. ಚಿಕ್ಕಮಗಳೂರಿನಿಂದ ಬಿ.ಎಸ್.ಸುಬ್ಬಮ್ಮ ಶಾಸಕಿಯಾಗಿದ್ದರು.

ಈ ಇಬ್ಬರ ಪೈಕಿ ಯಶೋಧರಮ್ಮ ದಾಸಪ್ಪ ಅವರು ಎರಡು ಬಾರಿ ಸಚಿವರಾದರು. ಕರ್ನಾಟಕದ ಇತಿಹಾಸದಲ್ಲಿ ಸಂಪುಟ ದರ್ಜೆ ಸಚಿವೆಯಾದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೂ ಯಶೋಧರಮ್ಮ ಪಾತ್ರರಾದರು. ಎಸ್.ನಿಜಲಿಂಗಪ್ಪ ಮತ್ತು ಎಸ್.ಆರ್.ಕಂಠಿ ಅವರ ನೇತೃತ್ವದ ಸರ್ಕಾರಗಳಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದರು. ನಿಜಲಿಂಗಪ್ಪ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಮದ್ಯಪಾನ ನಿಷೇಧವನ್ನು ಹಿಂಪಡೆಯಿತು. ಅಪ್ಪಟ ಗಾಂಧಿವಾದಿಯಾಗಿದ್ದ ಯಶೋಧರಮ್ಮ ಅವರು ಇದನ್ನು ವಿರೋಧಿಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದು ಮತ್ತೊಂದು ಇತಿಹಾಸ.

ದೇವರಾಜ ಅರಸು ಅವರ ಕಾಲದಲ್ಲಿ ಮಹಿಳೆಯರಿಗೆ ಒಂದು ಹೆಜ್ಜೆ ಹೆಚ್ಚಿನ ಆದ್ಯತೆ ದೊರಕಿತ್ತು. ಮನೋರಮಾ ಮಧ್ವರಾಜ್, ಇ.ವಾ.ವಾಸ್ ಅವರಿಗೆ ಸಚಿವ ಸ್ಥಾನ ದೊರಕಿತು. ಸುಮತಿ ಮಡಿಮನ್ ಅವರು ಉಪಸಭಾಧ್ಯಕ್ಷರಾದರು. 1978ರಲ್ಲಿ ನಾನು ಮೊದಲ ಬಾರಿಗೆ ಶಾಸಕಿಯಾಗಿ ಆಯ್ಕೆಯಾದೆ. ಸುಮಾ ವಸಂತ್, ನಾಗಮ್ಮ ಕೇಶವಮೂರ್ತಿ ಕೂಡ ಶಾಸಕಿಯರಾಗಿದ್ದರು. ಆಗ ಇಂದಿರಾ ಗಾಂಧಿ ಪ್ರಧಾನಿಯಾದರು. ಈಗಿನಂತೆ ಸಚಿವ ಸ್ಥಾನಕ್ಕೆ ಮಹಿಳೆಯರ ಒತ್ತಡವೂ ಇರಲಿಲ್ಲ. ಆದರೂ, ಸುಮಾ ವಸಂತ್ ಮತ್ತು ನಾಗಮ್ಮ ಕೇಶವಮೂರ್ತಿ ಸಚಿವರಾದರು.

ಗುಂಡೂರಾವ್, ಎಸ್.ಆರ್.ಬೊಮ್ಮಾಯಿ, ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ, ಎಸ್.ಬಂಗಾರಪ್ಪ, ವೀರಪ್ಪ ಮೊಯಿಲಿ ಆಡಳಿತದ ಅವಧಿಯಲ್ಲಿ ಮಹಿಳಾ ಪ್ರಾತಿನಿಧ್ಯ ಅಷ್ಟೇನೂ ಕಾಣಿಸಲಿಲ್ಲ. 1994ರಲ್ಲಿ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಬಿ.ಟಿ.ಲಲಿತಾ ನಾಯಕ್ ಒಬ್ಬರೇ ಮಹಿಳಾ ಸಚಿವೆ. 1999ರಲ್ಲಿ ಆರು ಜನ ಮಹಿಳೆಯರು ಆರಿಸಿ ಬಂದಿದ್ದೆವು. ಆಗ ನಾನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯಾದೆ. ಸುಮಾ ವಸಂತ್ ಮುಜರಾಯಿ ಖಾತೆ, ರಾಣಿ ಸತೀಶ್ ಕನ್ನಡ ಮತ್ತು ಸಂಸ್ಕೃತಿ, ನಫೀಜಾ ಫಸಲ್ ಅವರಿಗೆ ವೈದ್ಯಕೀಯ ಶಿಕ್ಷಣ ಖಾತೆ ನೀಡಲಾಯಿತು.


2004ರ ಚುನಾವಣೆಯಲ್ಲಿ ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಧರಂಸಿಂಗ್ ಮುಖ್ಯಮಂತ್ರಿಯಾದರು. ಆಗ ಭಾಗೀರಥಿ ಮರುಳಸಿದ್ದನಗೌಡ ಒಬ್ಬರಿಗೇ ಸಚಿವ ಸ್ಥಾನ ದೊರಕಿತ್ತು. ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಯಾವುದೇ ಮಹಿಳೆಗೆ ಸಚಿವ ಸ್ಥಾನ ಸಿಗಲಿಲ್ಲ.

2008ರಲ್ಲಿ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಶೋಭಾ ಕರಂದ್ಲಾಜೆ ಅವರಿಗೆ ಸಚಿವ ಸ್ಥಾನ ದೊರಕಿತು. 2013ರಲ್ಲಿ ಸಿದ್ದರಾಮಯ್ಯ ಅವರ ಅವಧಿಯಲ್ಲಿ ಉಮಾಶ್ರೀ ಅವರು ಸಚಿವರಾದರು. 2018ರಲ್ಲಿ ಎಚ್.ಡಿ.ಕುಮಾರಸ್ವಾಮಿ ಸರ್ಕಾರದಲ್ಲಿ ಜಯಮಾಲಾ ಅವರು ಸಚಿವರಾದರು. 2019ರಲ್ಲಿ ಮತ್ತೊಮ್ಮೆ ಯಡಿಯೂರಪ್ಪ ಮುಖ್ಯಮಂತ್ರಿಯಾದಾಗ ಶಶಿಕಲಾ ಜೊಲ್ಲೆ ಅವರಿಗೆ ಅವಕಾಶ ದೊರೆಯಿತು. 2023ರಲ್ಲಿ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿಯಾದಾಗ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಮಾತ್ರ ಸಚಿವರಾಗುವ ಅವಕಾಶ ದೊರೆಯಿತು.

ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಬೇಕು ಎಂಬ ಮಸೂದೆ ಹಲವು ವರ್ಷಗಳಿಂದ ಇದ್ದಲ್ಲೇ ಇದೆ. ಯುಪಿಎ ನೇತೃತ್ವದ ಸರ್ಕಾರದ ಅವಧಿಯಲ್ಲಿ ಮಂಡಿಸಲಾಗಿತ್ತು. ಆದರೆ, ರಾಜ್ಯಸಭೆಯಲ್ಲಿ ಯುಪಿಎಗೆ ಬಹುಮತ ಇರಲಿಲ್ಲ. ನಂತರ ಬಂದ ಎನ್‌ಡಿಎ ನೇತೃತ್ವದ ಸರ್ಕಾರ ಅದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ.

ವಿಧಾನಸಭೆಗಳ ಚುನಾವಣೆ ಸಂದರ್ಭದಲ್ಲಿ 'ನಾರಿಶಕ್ತಿ' ಎಂದು ಬಿಂಬಿಸಿ ಕ್ಷೇತ್ರ ಮರುವಿಂಗಡಣೆ ಮಸೂದೆ ಜತೆಗೆ ಸೇರ್ಪಡೆ ಮಾಡಿ ಮಂಡಿಸಿತು. ಅವರಿಗೆ ಬೇಕಿರುವುದು ಕ್ಷೇತ್ರ ಮರುವಿಂಗಡಣೆಯ ಮಸೂದೆಯೇ ಹೊರತು, ಮಹಿಳಾ ಮೀಸಲಾತಿ ಅಲ್ಲ. ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಗೊಳ್ಳಬಾರದು ಎಂಬ ಕಾರಣಕ್ಕೇ ಎರಡನ್ನೂ ಒಂದರಲ್ಲೇ ಮಿಶ್ರಣ ಮಾಡಲಾಯಿತು. ಈಗ ಪ್ರಧಾನಿ ನರೇಂದ್ರ ಮೋದಿ ಆದಿಯಾಗಿ ಬಿಜೆಪಿಯವರು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಮಹಿಳೆಯರು ನಮ್ಮಷ್ಟೇ ಸಮರ್ಥರು ಅವರಿಗೆ ಸ್ಥಾನಮಾನ ಕೊಡಲೇಬೇಕು ಎಂಬ ನಿಜವಾದ ಕಾಳಜಿ ಇಲ್ಲ. ಲೋಕಸಭೆ, ವಿಧಾನಸಭೆಯಲ್ಲಿ ಮಹಿಳಾ ಮೀಸಲಾತಿ ಜಾರಿಯಾದರೆ ಅದರಲ್ಲೂ ಜಾತಿಗಳ ಒಳ ಮೀಸಲಾತಿ ವರ್ಗೀಕರಣ ಆಗಬೇಕು. ಹಾಗೆ ಮಾಡಿದರೆ ತಮ್ಮ ಕ್ಷೇತ್ರಗಳು ಕೈ ಜಾರಲಿವೆ ಎಂಬ ಭಯವೂ ಅವರಿಗೆ ಇದ್ದಂತಿದೆ.

ಮಹಿಳೆಯರು ಇಂದು ಸೇನೆ, ಬಾಹ್ಯಾಕಾಶ ಸೇರಿ ಎಲ್ಲ ಕ್ಷೇತ್ರಗಳಲ್ಲಿ ಸಾಮರ್ಥ್ಯ ಪ್ರದರ್ಶಿಸಿದ್ದಾರೆ. ಆದರೂ, ಮಹಿಳೆಯರ ಸಾಮರ್ಥ್ಯದ ಬಗ್ಗೆ ನಂಬಿಕೆ ಇಲ್ಲವಾಗಿದೆ. ಮಹಿಳೆಯರಿಗೆ ಚುನಾವಣೆಯಲ್ಲಿ ಟಿಕೆಟ್ ನೀಡಲು ಮೀಸಲಾತಿಯೇ ಬೇಕೆಂದಿಲ್ಲ. ರಾಜಕೀಯ ಬದ್ಧತೆ, ಸಮಾನತೆಯ ಬದ್ಧತೆ ಬೇಕಾಗುತ್ತದೆ. ಮಸೂದೆಯ ಪರ ಇರುವ ಪಕ್ಷವಾಗಲಿ, ವಿರುದ್ಧ ಇರುವ ಪಕ್ಷವಾಗಲಿ ಯಾವ ಪಕ್ಷವೂ ಶೇ 33 ಬೇಡ, ಕನಿಷ್ಠ ಶೇ 20ರಷ್ಟು ಕ್ಷೇತ್ರಗಳಲ್ಲೂ ಮಹಿಳೆಯರಿಗೆ ಈವರೆಗೆ ಟಿಕೆಟ್ ನೀಡಿದ ಉದಾಹರಣೆ ಇಲ್ಲ.



ಲೋಕಸಭೆಯ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಅವರು ಸಂವಿಧಾನದ ಪುಸ್ತಿಕೆಯನ್ನು ಕೈಯಲ್ಲಿ ಹಿಡಿದುಕೊಂಡು, ಪ್ರಜಾಪ್ರಭುತ್ವದ ಆಶಯಗಳನ್ನು ಬಲವಾಗಿ ಪ್ರತಿಪಾದಿಸುತ್ತಿದ್ದಾರೆ. ಹಾಗಿದ್ದರೂ, ಕಾಂಗ್ರೆಸ್ ಪಕ್ಷದಲ್ಲಿಯೂ ಮಹಿಳೆಯರಿಗೆ ಸರಿಯಾದ ಪ್ರಾತಿನಿಧ್ಯ ಸಿಗುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇತ್ತೀಚೆಗೆ ಕರ್ನಾಟಕದಿಂದ ನಾಲ್ವರನ್ನು ರಾಜ್ಯಸಭೆ ಕಳುಹಿಸಲಾಯಿತು. ವಿಧಾನಪರಿತ್ತಿನ ಏಳು ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಕಾಂಗ್ರೆಸ್ ಮತ್ತು ಬಿಜೆಪಿ ಒಬ್ಬ ಮಹಿಳೆಗೂ ಅವಕಾಶ ಕಲ್ಪಿಸಲಿಲ್ಲ. ಮುಂದಿನ ದಿನಗಳಲ್ಲಿ ವಿಧಾನ ಪರಿಷತ್‌ನ 5 ಸ್ಥಾನಗಳಿಗೆ ನಾಮನಿರ್ದೇಶನ ನಡೆಯಲಿದ್ದು, ಕನಿಷ್ಠ ಆಗಲಾದರೂ ಮಹಿಳೆಯರನ್ನು ಪರಿಗಣಿಸಬೇಕು.

ನಮ್ಮ ಪಕ್ಷದ ಹೊಸ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನೂ ಒಳಗೊಂಡು 13 ಜನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅದರಲ್ಲಿ ಕನಿಷ್ಠ ಇಬ್ಬರಿಗೆ ಅವಕಾಶ ನೀಡಿದ್ದರೆ ಏನು ತಪ್ಪಾಗುತ್ತಿತ್ತು. ಸಮರ್ಥರು ಇರಲಿಲ್ಲವೇ ಎಂದರೆ ಈಗ ಆಯ್ಕೆಯಾಗಿರುವ ಮಹಿಳೆಯರಲ್ಲಿ ಎರಡು–ಮೂರು ಅವಧಿಗೆ ಶಾಸಕಿಯಾದವರು ಮೂವರಿದ್ದಾರೆ.

ಡಿ.ಕೆ.ಶಿವಕುಮಾರ್ ಅವರಿಗೆ ಮಹಿಳೆಯರ ಬಗ್ಗೆ ಹೆಚ್ಚಿನ ಕಾಳಜಿ ಇದೆ. ಎಸ್.ಎಂ.ಕೃಷ್ಣ ಅವಧಿಯಲ್ಲಿ ಸ್ತ್ರೀಶಕ್ತಿ ಯೋಜನೆ ಜಾರಿಗೆ ತಂದೆವು. ಬಾಂಗ್ಲಾ ದೇಶದಲ್ಲಿ ಜಾರಿಯಲ್ಲಿದ್ದ ಯೋಜನೆಯ ಅಧ್ಯಯನಕ್ಕೆ ಅಧಿಕಾರಿಗಳನ್ನು ಕಳುಹಿಸಿದ್ದೆವು. ಆ ಯೋಜನೆಗೆ ಹೆಸರಿಡುವ ಸಂದರ್ಭ ಬಂದಾಗ 'ಸ್ತ್ರೀ ಶಕ್ತಿ' ಎಂದು ಹೆಸರು ಕೊಟ್ಟವರೇ ಡಿ.ಕೆ.ಶಿವಕುಮಾರ್. 'ನಾ ನಾಯಕಿ' ಎಂಬ ಪರಿಕಲ್ಪನೆಯನ್ನು ಪ್ರಿಯಾಂಕಾ ಗಾಂಧಿ ಅವರು ಪಕ್ಷದಲ್ಲಿ ಅನುಷ್ಠಾನಕ್ಕೆ ತಂದಿದ್ದಾರೆ. ಇದನ್ನು ನಾನು ಸೇರಿ ಎಲ್ಲರೂ ಮೆಚ್ಚಿಕೊಂಡಿದ್ದೇವೆ. ಇವೆಲ್ಲದರ ನಡುವೆ ಒಬ್ಬ ಮಹಿಳೆಗೂ ಸಚಿವ ಸ್ಥಾನ ಸಿಗದಿರುವುದು ಬೇಸರ.

ಲೇಖಕಿ: ಮಾಜಿ ಸಚಿವೆ

ನಿರೂಪಣೆ: ವಿಜಯಕುಮಾರ್ ಎಸ್.ಕೆ.

ಸ್ಥಳೀಯ ಸಂಸ್ಥೆ; ಬದಲಾದ ಪರಿಸ್ಥಿತಿ

ಕರ್ನಾಟಕ ರಾಜಕೀಯ ಇತಿಹಾಸ ಗಮನಿಸಿದರೆ, ದೇವರಾಜ ಅರಸು ಮತ್ತು ಎಸ್.ಎಂ.ಕೃಷ್ಣ ಅವರ ಅವಧಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಸಚಿವ ಸ್ಥಾನಗಳು ಸಿಕ್ಕಿವೆ. ಇತರೆ ಸರ್ಕಾರಗಳ ಅವಧಿಯಲ್ಲಿ ಶೇ 1ರಷ್ಟು ಅವಕಾಶವೂ ದೊರೆತಿಲ್ಲ. ಅವಕಾಶ ಕೊಡುವಲ್ಲಿ ಯಾವುದೇ ಪಕ್ಷ ಮುತುವರ್ಜಿ ವಹಿಸಲಿಲ್ಲ. ಆದರೆ, ಮಹಿಳೆಯರ ಮತಗಳನ್ನು ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳಲು ಓಲೈಕೆ ರಾಜಕಾರಣ ಮಾಡುವುದು ನಿರಂತರವಾಗಿ ನಡೆದುಕೊಂಡು ಬಂದಿದೆ. ಅವರಿಗಾಗಿ ವಿಶೇಷ ಯೋಜನೆಗಳನ್ನು ಘೋಷಣೆ ಮಾಡುವುದು ಎಲ್ಲಾ ಸಂದರ್ಭಗಳಲ್ಲೂ ನಡೆದಿದೆ. ಆದರೆ, ಮಹಿಳೆಯರಲ್ಲೂ ವಿಚಾರವಂತಿಕೆ ಇದೆ. ಅಧಿಕಾರ ನಡೆಸುವ ಸಾಮರ್ಥ್ಯ ಇದೆ. ಪುರುಷರಿಗೆ ಸಮಾನವಾಗಿ ರಾಜಕೀಯವಾಗಿ ಮುಂದೆ ಬರಲು ಎಲ್ಲಾ ರೀತಿಯ ಅರ್ಹತೆ ಇದೆ ಎಂದು ವಿಚಾರ ಮಾಡುವವರು ವಿರಳ. ಇದು ಮಹಿಳೆಯರ ದುರಂತ.

ಮಹಿಳೆಯರಿಗೆ ಪ್ರಾತಿನಿಧ್ಯ ಕೊಡಲೇಬೇಕು ಎಂಬ ಅಭಿಪ್ರಾಯಗಳು ಮೂಡಿಬಂದಿದ್ದು ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿದ್ದಾಗ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಅವಕಾಶ ದೊರೆಯಿತು. ಕರ್ನಾಟಕವೂ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ಕಲ್ಪಿಸಲಾಗಿದೆ. ಆರಂಭದಲ್ಲಿ ಮಹಿಳಾ ಪ್ರತಿನಿಧಿಗಳ ಸ್ಥಾನಗಳಲ್ಲಿ ಅವರ ಗಂಡಂದಿರು ಅಧಿಕಾರ ನಡೆಸುತ್ತಾರೆ ಎನ್ನುವ ದೂರುಗಳು ವ್ಯಾಪಕವಾಗಿ ಬಂದವು. ಆದರೆ, ಮಹಿಳೆಯರಲ್ಲಿ ಶಿಕ್ಷಣ, ಅನುಭವ, ರಾಜಕೀಯ ಪ್ರಜ್ಞೆ ಹೆಚ್ಚಾದಂತೆ, ದಶಕಗಳ ಅವಧಿಯಲ್ಲಿ ಈ ಪ್ರವೃತ್ತಿಯು ಕಡಿಮೆಯಾಗಿ, ಇಂದು ವಿರಳ ವಿದ್ಯಮಾನವಾಗಿದೆ. ಮಹಿಳಾ ಪ್ರಾತಿನಿಧ್ಯ ಕಲ್ಪಿಸುವ ವಿಚಾರದಲ್ಲಿ ವ್ಯಕ್ತವಾಗುವ ಹಲವು ಪ್ರಶ್ನೆಗಳಿಗೆ ಈ ಬೆಳವಣಿಗೆಯಲ್ಲಿ ಉತ್ತರವಿದೆ.

ಮೂಗಿಗೆ ತುಪ್ಪ ಸವರಿದರೆ ಸಾಕೇ?

• ಮೈತ್ರೇಯಿ ಸಚ್ಚಿದಾನಂದ ಹೆಗಡೆ



> ಕ್ಷೇತ್ರ ಮರುವಿಂಗಡಣೆಯ ಚರ್ಚೆಗೆ ತನ್ನದೇ ಆದ ನ್ಯಾಯ-ಅನ್ಯಾಯಗಳಿವೆ. ಆದರೆ, ಮಹಿಳೆಯರ ಪ್ರಾತಿನಿಧ್ಯ ಎಂಬ ಪ್ರಶ್ನೆಯನ್ನು ಅದರ ಜೊತೆಗೆ ಕಟ್ಟಿ ಹಾಕಬೇಕಾದ ಅನಿವಾರ್ಯ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ, ಮೊದಲು ಜನಗಣತಿ ನಡೆಸಿ, ಅದರ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆ ಮಾಡಿ, ಅದಾದ ಮೇಲೆ ಮಹಿಳಾ ಮೀಸಲಾತಿ ಕೊಡೋಣ ಎಂದು ಹೊರಡುವುದು ಮೂರ್ಖತನ ಮಾತ್ರವಲ್ಲ, ಮಹಿಳಾ ಮತದಾರರ ಮೂಗಿನ ಮೇಲೆ ತುಪ್ಪ ಸವರಿದಂತೆ. ಮಹಿಳೆಯರ ಪ್ರಾತಿನಿಧ್ಯದ ದೃಷ್ಟಿಯಿಂದ ಮೀಸಲಾತಿಯನ್ನು ಮರುವಿಂಗಡಣೆ ಮತ್ತು ಜನಗಣತಿಯ ಸಂಕೋಲೆಯಿಂದ ಮುಕ್ತಗೊಳಿಸಬೇಕಾಗಿದೆ

1947ರ ಜುಲೈ 18; ಸಂವಿಧಾನ ಸಭೆಯ ಚರ್ಚೆಯ ಜಗುಲಿಯಲ್ಲಿ ರೇಣುಕಾ ರಾಯ್ ಎದೆ ತಟ್ಟಿ ಹೇಳಿದ್ದರು; 'ಮಹಿಳಾ ಮೀಸಲಾತಿಯ ಕಲ್ಪನೆಯನ್ನು ನಾವು ಮಹಿಳೆಯರು ಯಾವಾಗಲೂ ವಿರೋಧಿಸುತ್ತಲೇ ಬಂದಿದ್ದೇವೆ. ಹೋರಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಪುರುಷರು ಅಧಿಕಾರಕ್ಕೆ ಬಂದಿರುವಾಗ ಮಹಿಳೆಯರ ಹಕ್ಕುಗಳು ಖಂಡಿತವಾಗಿಯೂ ದೊರಕುತ್ತವೆ ಎಂಬ ನಂಬಿಕೆ ನನ್ನದು. ಮುಂದಿನ ದಿನಗಳಲ್ಲಿ ಸಮರ್ಥ ಮಹಿಳೆಯರು ದೊಡ್ಡ ಜವಾಬ್ದಾರಿಗಳಿಗೆ ಹೆಗಲಾಗಲಿದ್ದಾರೆ ಎಂಬ ಗಟ್ಟಿ ವಿಶ್ವಾಸ ನನ್ನದು. ಮೀಸಲಾತಿ ಕೊಟ್ಟು ಮಹಿಳೆಯರನ್ನು ಮತ್ತು ಅವರ ಸಾಮರ್ಥ್ಯವನ್ನು ಅವಮಾನ-ಗೇಲಿ ಮಾಡಬೇಡಿ' ಎಂದು ಅವರು ಗರ್ಜಿಸಿದ್ದರು. ಏಳೂವರೆ ದಶಕಗಳ ಸ್ವತಂತ್ರ ಭಾರತಕ್ಕೆ ಆ ಗರ್ಜನೆ ಹಗಲುಗನಸಿನಂತೆ ಕಾಣುತ್ತಿದ್ದರೆ, ಅದಕ್ಕೆ ಕಾರಣ ಅನುಭವ; ಅಧಿಕಾರದ ಗಂಟು ತಾನಾಗೇ ಸಮಾನತೆಯ ಹೊಸಿಲು ದಾಟಲಾರದು ಎಂಬ ವಾಸ್ತವದ ಅರಿವು. ಅಂತೂ ಇಂತೂ ಮುನಿಸಿಪಾಲಿಟಿ - ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಶೇ 30ರಷ್ಟು ಮೀಸಲಾತಿ ಕೊಟ್ಟು, (1994, 74ನೇ ಸಾಂವಿಧಾನಿಕ ತಿದ್ದುಪಡಿ) ಪ್ರತಿರೋಧ, ಅಪಹಾಸ್ಯ ಕ್ರಮೇಣ ತಣ್ಣಗಾದ ನಂತರ, ಆ ವ್ಯವಸ್ಥೆಯನ್ನು ಒಪ್ಪಿಕೊಂಡು ಲೋಪದೋಷಗಳನ್ನು ಸರಿಮಾಡುವತ್ತ ಗಮನಹರಿಸಿದ್ದೇವೆ. ಆದರೆ, ದೇಶದ ಅರ್ಧ ಜನಸಂಖ್ಯೆಗೆ ಮೇಲ್ಮನೆ ಮತ್ತು ಕೆಳಮನೆಗಳಲ್ಲಿ ಮಾತ್ರ ಇವತ್ತಿಗೂ ಬೆರಳಣಿಕೆಯಷ್ಟು ಪ್ರಾತಿನಿಧ್ಯ ಸಿಕ್ಕಿದ್ದು, ಅವರ ಧ್ವನಿ ಕ್ಷೀಣವಾಗಿದೆ. 2023ರಲ್ಲಿ 'ನಾರಿ ಶಕ್ತಿ ವಂದನ್' ಕಾಯ್ದೆ ಅಂಗೀಕರಿಸಿ, ಅದನ್ನು ಜಾರಿಗೆ ತರಲು ಪ್ರಸ್ತಾವಿಸಿದ ಸಾಂವಿಧಾನಿಕ ತಿದ್ದುಪಡಿಗಳನ್ನು 2026ರಲ್ಲಿ ತಿರಸ್ಕರಿಸಿ, ಮುಂದೇನು ಎಂಬ ತಿರುವಿನಲ್ಲಿ ಬಂದು ನಿಂತಿದ್ದೇವೆ.

ಎದುರುತ್ತರವೇ ಇಲ್ಲ ಎಂಬ ರೀತಿಯಲ್ಲಿ ಅಂಗೀಕಾರಗೊಂಡಿತ್ತು 2023ರ ನಾರಿ ಶಕ್ತಿ ಕಾಯ್ದೆ. ರಾಜಕೀಯ ಪಕ್ಷಗಳಿಗೆ ಕ್ಷೇತ್ರ ಮರುವಿಂಗಡಣೆ ಮತ್ತು ಜನಗಣತಿ ನಿಬಂಧನೆಗಳ ಸಮಸ್ಯೆಗಳಿಗಿಂತ ಕೊನೆಗೂ ಮಹಿಳಾ ಮೀಸಲಾತಿ ಸಂಸತ್ತನ್ನು ತಲುಪಿತು ಎಂಬ ಸಂತಸವೇ ದೊಡ್ಡದಾಗಿತ್ತು. 2026ರಲ್ಲಿ ಹೊಸ ಜೋಡಿ ಕರಡು ಮಸೂದೆಗಳು ಸಿದ್ಧವಾದವು. ಮರುವಿಂಗಡಣೆ ಮತ್ತು ಜನಗಣತಿಯನ್ನು ಈಗಲೇ ನಡೆಸಿ, 2029ರ ಚುನಾವಣೆಯಲ್ಲಿ ಹೊಸ ಕ್ಷೇತ್ರಗಳು ರೂಪುಗೊಳ್ಳಲಿವೆ ಎಂಬ ಪರಿಸ್ಥಿತಿ ಬಂದಾಗ, ಕರಡುಗಳ ಬಗ್ಗೆ ಗಹನ ಚರ್ಚೆ ನಡೆಯಿತು. ಕ್ಷೇತ್ರ ಮರುವಿಂಗಡಣೆ ನಮ್ಮ ಮೂಲ ಸಂವಿಧಾನದಲ್ಲೇ ಅಡಕವಾಗಿರುವ ವಿಚಾರ; ಪ್ರಜಾಪ್ರಭುತ್ವದ ಅಡಿಪಾಯಗಳಲ್ಲೊಂದು. ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಹೀಗೆ ಹಲವು ದೇಶಗಳಲ್ಲಿ ಈ ವ್ಯವಸ್ಥೆ ಇದೆ. ಆ ದೇಶಗಲ್ಲಿ ಮೇಲ್ಮನೆಯಲ್ಲಿ ರಾಜ್ಯಗಳಿಗೆ ಸಮನಾದ ಪ್ರಾತಿನಿಧ್ಯವಿರುವುದರಿಂದ ಒಕ್ಕೂಟ ವ್ಯವಸ್ಥೆಯ ಹಕ್ಕುಗಳು ಸಮತೋಲನ ಕಳೆದುಕೊಳ್ಳುವುದಿಲ್ಲ. ಆದರೆ, ನಮ್ಮ ದೇಶದಲ್ಲಿ ಮೇಲ್ಮನೆ ಮತ್ತು ಕೆಳಮನೆಗಳೆರಡರಲ್ಲೂ ಸದಸ್ಯ ಬಲ ಹೆಚ್ಚು ಕಡಿಮೆ ಇರುವುದರಿಂದ, ಕೇವಲ ಜನಸಂಖ್ಯೆಯ ಆಧಾರದ ಮೇಲೆ ಕ್ಷೇತ್ರ ಮರುವಿಂಗಡಣೆ ಮಾಡುವಾಗ, ಒಕ್ಕೂಟ ವ್ಯವಸ್ಥೆಯ ಆಶಯಗಳಿಗೆ ಧಕ್ಕೆಯಾಗುವ ಸಾಧ್ಯತೆಯಿದೆ. ವರ್ಷಗಳ ಕಾಲ ದೇಶದ ನೀತಿಯನ್ನು ಪಾಲಿಸುವ ನಿಟ್ಟಿನಲ್ಲಿ ಜನಸಂಖ್ಯೆ ನಿಯಂತ್ರಣ ಮಾಡಿಕೊಂಡ ರಾಜ್ಯಗಳು ಈಗ ಪ್ರಾತಿನಿಧ್ಯ ಕಳೆದುಕೊಳ್ಳುವ ಪರಿಸ್ಥಿತಿ ಬಂದಾಗ ಕಳವಳಗೊಳ್ಳುವುದು ಸ್ವಾಭಾವಿಕ. ಇದೇ ವೇಳೆ, ಸಂಪತ್ತಿನ ಸಮಾನ ಹಂಚಿಕೆಯಾಗುವ ದಿಸೆಯಲ್ಲಿ ಮರುವಿಂಗಡಣೆ ಮೂಲಕ ಸಾಧ್ಯವಾಗುವ ಅಭಿವೃದ್ಧಿಯ ಸಮತೋಲನ ನಾಡಿನ ಬೆಳವಣಿಗೆಗೆ ಈಗ ಅಗತ್ಯ ಎಂಬ ವಾದವೂ ಹುರುಳಿಲ್ಲದ್ದಲ್ಲ.

ಭಾರತದಂತಹ ಅಗಾಧವಾದ ದೇಶದ ಜನಗಣತಿ ಮಾಡಿ ಮುಗಿಸುವುದು ಸುಲಭದ ಮಾತು ಅಲ್ಲವೇ ಅಲ್ಲ. ಕ್ಷೇತ್ರ ಮರುವಿಂಗಡಣೆ, ಒಂದು ದೇಶ ಸಮಾಜವಾದಿ ಗಣತಂತ್ರವೋ ಅಥವಾ ಬಂಡವಾಳಶಾಹಿ ಪ್ರಜಾಪ್ರಭುತ್ವವೋ ಎಂಬ ಸಂಕೀರ್ಣ ಪ್ರಶ್ನೆ ಮತ್ತು ಉತ್ತರಗಳ ನಡುವೆ ಅಡಗಿರುವ ವಿಷಯ. ಹಾಗೆಯೇ ಜನಗಣತಿಯೂ ಸಮಯ ತೆಗೆದುಕೊಳ್ಳುವ ಆಡಳಿತಾತ್ಮಕ ಪ್ರಕ್ರಿಯೆ. ಸದ್ಯಕ್ಕೆ ರಾಜಕೀಯವಾಗಿ, ಆಡಳಿತಾತ್ಮಕವಾಗಿ ಮತ್ತು ಸಂಪನ್ಮೂಲಗಳ ನೆಲೆಯಲ್ಲಿ ಭಾರವಾಗಿರುವ ಈ ಪ್ರಸ್ತಾವನೆಗಳಿಂದ ಬಳಲುತ್ತಿರುವುದು ಮಾತ್ರ ಮಹಿಳಾ ಮೀಸಲಾತಿ ಎಂಬ ತುರ್ತಾಗಿರುವ ಅಗತ್ಯ.

ಕ್ಷೇತ್ರ ಮರುವಿಂಗಡಣೆ, ಜನಗಣತಿ ಮತ್ತು ಮಹಿಳಾ ಮೀಸಲಾತಿಯ ಮೂರು ಸಾಂವಿಧಾನಿಕ ತಿದ್ದುಪಡಿಯ ಕರಡುಗಳು ಇತ್ತೀಚೆಗೆ ಚರ್ಚೆಗೆ ಬಂದರೂ, ಅಂಗೀಕಾರವಾಗಲಿಲ್ಲ. ಕೇಂದ್ರ ಸರ್ಕಾರವು ಅವುಗಳನ್ನು ಹಿಂಪಡೆದದ್ದೂ ಆಯಿತು. 2023ರಲ್ಲಿ ಇವೇ ವಿಚಾರಗಳನ್ನು ಒಳಗೊಂಡ ಕರಡು ಅಂಗೀಕಾರವಾಗಿ ಕಾಯ್ದೆಯಾದರೂ, ಕ್ಷೇತ್ರ ಮರುವಿಂಗಡಣೆ ವಿರುದ್ಧ ಜನರ ಆಕ್ಷೇಪ ತೀವ್ರವಾಗಿದ್ದರಿಂದ ರಾಜಕೀಯ ಪಕ್ಷಗಳು ತಮ್ಮ ನಿಲುವುಗಳನ್ನು ಬದಲಾಯಿಸಿವೆ. ಕ್ಷೇತ್ರ ಮರುವಿಂಗಡಣೆಯ ಚರ್ಚೆಗೆ ತನ್ನದೇ ಆದ ನ್ಯಾಯ-ಅನ್ಯಾಯಗಳಿವೆ. ಆದರೆ, ಮಹಿಳೆಯರ ಪ್ರಾತಿನಿಧ್ಯ ಎಂಬ ಪ್ರಶ್ನೆಯನ್ನು ಅದರ ಜೊತೆಗೆ ಕಟ್ಟಿ ಹಾಕಬೇಕಾದ ಅನಿವಾರ್ಯ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ, ಮೊದಲು ಜನಗಣತಿ ನಡೆಸಿ, ಅದರ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆ ಮಾಡಿ, ಅದಾದ ಮೇಲೆ ಮಹಿಳಾ ಮೀಸಲಾತಿ ಕೊಡೋಣ ಎಂದು ಹೊರಡುವುದು ಮೂರ್ಖತನ ಮಾತ್ರವಲ್ಲ, ಮಹಿಳಾ ಮತದಾರರ ಮೂಗಿನ ಮೇಲೆ ತುಪ್ಪ ಸವರಿದಂತೆ, ಕನ್ನಡಿಯಲ್ಲಿರುವ ಗಂಟಿನ ಆಸೆ ತೋರಿಸಿದಂತೆ.

ಮಹಿಳೆಯರ ಪ್ರಾತಿನಿಧ್ಯದ ದೃಷ್ಟಿಯಿಂದ ಮೀಸಲಾತಿಯನ್ನು ಮರುವಿಂಗಡಣೆ ಮತ್ತು ಜನಗಣತಿಯ ಸಂಕೋಲೆಯಿಂದ ಮುಕ್ತಗೊಳಿಸಬೇಕಾಗಿದೆ. ಹಾಗಾದರೆ ಮಾತ್ರ ಶೀಘ್ರದಲ್ಲೇ ರಾಜಕಾರಣದಲ್ಲಿ ಮಹಿಳಾ ಮೀಸಲಾತಿ ಸಾಕಾರವಾಗುವುದು ಸಾಧ್ಯ.

2023ರಲ್ಲಿ ಒಕ್ಕೊರಲಿನಿಂದ ಸಂಸತ್ತು ಮೀಸಲಾತಿ ಕಾಯ್ದೆ ಅಂಗೀಕರಿಸಿದ್ದರೂ ಇನ್ನೂ ನಮ್ಮಲ್ಲಿ ಮೀಸಲಾತಿಯ ಮೂಲಕವೇ ಪ್ರಗತಿ ಸಾಧ್ಯವೇ ಎಂದು ಪ್ರಶ್ನೆ ಕೇಳುವವರಿದ್ದಾರೆ. ಸಮಾಜ ಪ್ರಗತಿಯಾಗುತ್ತಿರುವ ನೆಲೆಯಲ್ಲಿ ನಿಧಾನವಾಗಿಯಾದರೂ ಈ ಬದಲಾವಣೆ ಸಹಜವಾಗಿಯೇ ನಮ್ಮಲ್ಲಿ ಬಾರದಿರುವುದೇ ಎಂಬುದು ಅವರ ಪ್ರಶ್ನೆ. ಉದಾಹರಣೆಗೆ, ಸತತವಾದ ಶಿಕ್ಷಣ, ಸ್ವಾತಂತ್ರ್ಯ ಹೋರಾಟ, ಹೊರದೇಶಗಳಲ್ಲಿನ ಚಳವಳಿಗಳಿಂದ ಪ್ರಭಾವಿತರಾಗಿ ಯಾವುದೇ ಕಾನೂನಿನ ಬಲವಿಲ್ಲದಿದ್ದರೂ ಶಿಕ್ಷಣ, ವೈದ್ಯಕೀಯ ಮತ್ತು ಇತರ ಕ್ಷೇತ್ರಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು, ಮಹತ್ತರ ಕೊಡುಗೆ ನೀಡುವುದನ್ನು ಕಂಡಿದ್ದೇವೆ. ಹಾಗೆಯೇ, ರಾಜಕಾರಣದಲ್ಲಿ ಮಹಿಳೆಯರು ಹಿಂದಿಗಿಂತಲೂ ಈಗ ಹೆಚ್ಚಾಗಿದ್ದಾರೆ. ಹಾಗಾಗಿ ಸ್ವಾಭಾವಿಕವಾಗಿಯೇ ಹೆಚ್ಚಿನ ಮುಖಗಳು ನಮಗೆ ಚುನಾವಣೆಗಳಲ್ಲೂ ಶಾಸನಸಭೆಗಳಲ್ಲೂ ಕಾಣಸಿಗುತ್ತವೆ ಎಂಬ ವಾದ ಅವರದು.

ಈ ಹೋಲಿಕೆಯಲ್ಲಿ ಮುಖ್ಯವಾದ ಭಿನ್ನತೆಯಿದೆ. ಮೊದಲನೆಯ ಉದಾಹರಣೆಯಲ್ಲಿ ಸ್ಪರ್ಧೆ ಜೀವನೋಪಾಯಕ್ಕಾಗಿ ನಡೆದರೆ, ರಾಜಕೀಯದಲ್ಲಿ ಸ್ಪರ್ಧೆ ಅಧಿಕಾರಕ್ಕಾಗಿ ನಡೆಯುತ್ತದೆ. ಕುರ್ಚಿ ಬಿಟ್ಟುಕೊಡುವ, ಹಂಚಿಕೊಳ್ಳುವ ಪ್ರಶ್ನೆಯೇ ಇಲ್ಲ ಅಲ್ಲಿ ಕುಳಿತವರಿಗೆ. ಹಾಗಾಗಿ ತಾರತಮ್ಯ ಮಾಡದೇ ಇರಲು ಬೇಕಾಗುವ ಕಾನೂನುಗಳು ಎಷ್ಟು ಅಗತ್ಯವೋ, ಅಷ್ಟೇ ಅಗತ್ಯ ಗಣತಂತ್ರದಲ್ಲಿ ಮಹಿಳೆಯರನ್ನು ಮೇಲೆತ್ತಲೂ ಬೇಕಿವೆ. 2008ರ ಮೋನಾ ಲೇನ ಕ್ರೂಕ್ (ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್) ಅಧ್ಯಯನದ ಪ್ರಕಾರ ನೂರಕ್ಕೂ ಹೆಚ್ಚಿನ ದೇಶಗಳು ಮಹಿಳೆಯರ ರಾಜಕೀಯ ಪ್ರಾತಿನಿಧ್ಯ ಹೆಚ್ಚಿಸಲು ಒಂದಲ್ಲ ಒಂದು ರೀತಿಯ ಸಕಾರಾತ್ಮಕ ನೀತಿ ಅಥವಾ ಕಾನೂನನ್ನು ಹೊಂದಿವೆ. ಹಾಗಾಗಿ ಮೀಸಲಾತಿ ಬೇಕೆ ಎಂಬ ಪ್ರಶ್ನೆ ಇವತ್ತು ಅಪ್ರಸ್ತುತ.

ಶಿಕ್ಷಣ ಹೆಚ್ಚಿದಂತೆ, ಲೋಕ ಕಂಡಂತೆ, ಜನರ ಬೇಡಿಕೆ, ಧ್ವನಿ ಹೆಚ್ಚಾದಂತೆ ಮಹಿಳೆಯರನ್ನು ಬೆಂಬಲಿಸುವುದು ಪಕ್ಷಗಳಿಗೆ ಇವತ್ತಿನ ರಾಜಕೀಯ ಅಗತ್ಯವಾಗಿದೆ. ಹಲವು ಪಕ್ಷಗಳು ಆ ಕೆಲಸ ಮಾಡುವಂತೆ ನಟಿಸುತ್ತಿವೆ. ಕೆಲವು ನಿಜವಾಗಿಯೂ ಮಾಡಬಹುದು. ಆದರೆ ಸಮಾನತೆಯಲ್ಲಿ ಮತ್ತು ನ್ಯಾಯದಲ್ಲಿ ನಂಬಿಕೆ ಇಟ್ಟವರು ಈ ಮುಖವಾಡಗಳನ್ನು ಪ್ರಶ್ನಿಸಬೇಕು.

ಸತ್ವವುಳ್ಳ ರಾಜಕೀಯ ಕಟ್ಟಲು ಮೊದಲು ಬೇಕಿರುವುದು ಜೊಳ್ಳಿರದ ಪ್ರಶ್ನೆಗಳು ಮತ್ತು ಪ್ರಾಮಾಣಿಕತೆ ಇರುವ ಜ್ಞಾನ. ಮಹಿಳಾ ಮೀಸಲಾತಿಯ ವಿಚಾರದಲ್ಲೂ ಈ ಚಿಂತನೆ ನಮಗೆ ಮುಂದಿನ ದಾರಿ ತೋರಿಸಲಿ.

ಲೇಖಕಿ: ಸುಪ್ರೀಂ ಕೋರ್ಟ್ ವಕೀಲರು

ಎರಡು ಮಾದರಿಗಳು

ಬೇರೆ ಯಾವುದೇ ರಾಜಕೀಯ ಯುದ್ಧ ಮಾಡದೆ ಮೀಸಲಾತಿಯನ್ನು ಮಹಿಳೆಯರಿಗೆ ಹೇಗೆ ದಕ್ಕಿಸಬಹುದು ಎಂಬುದಕ್ಕೆ ಮುಖ್ಯವಾಗಿ ಎರಡು ಸಾಧ್ಯತೆಗಳಿವೆ. ಮೊದಲನೆಯದು, ಐರೋಪ್ಯ ಮಾದರಿಗಳ ಪಾಠಗಳು. ಫ್ರಾನ್ಸ್, ಪೋರ್ಚುಗಲ್, ಸ್ಪೇನ್, ಬೆಲ್ಜಿಯಂ, ಸರ್ಬಿಯ, ಸ್ಲೋವಿಯಾ ಮುಂತಾದ ಐರೋಪ್ಯ ರಾಷ್ಟ್ರಗಳಲ್ಲಿ ರಾಜಕೀಯ ಪಕ್ಷಗಳು ಕನಿಷ್ಠ ಇಂತಿಷ್ಟು ಮಹಿಳಾ ಉಮೇದುವಾರರನ್ನು ನಿಲ್ಲಿಸಬೇಕು ಎಂಬ ಕಾನೂನಿದೆ. ಸ್ವೀಡನ್, ಜರ್ಮನಿ ಮುಂತಾದ ದೇಶಗಳಲ್ಲಿ ಕಾನೂನಿಲ್ಲದಿದ್ದರೂ ಪಕ್ಷಗಳು ಸ್ವತಃ ಮಹಿಳಾ ಅಭ್ಯರ್ಥಿಗಳಿಗೆ ಕಡ್ಡಾಯವಾಗಿ ಟಿಕೆಟ್ ಕೊಡುತ್ತವೆ. ನಮ್ಮ ದೇಶದಲ್ಲಿ ಪಕ್ಷಗಳು ತಮ್ಮದೇ ಉಮೇದಿಯಿಂದ ಮಹಿಳಾ ಅಭ್ಯರ್ಥಿಗಳಿಗೆ ಕಡ್ಡಾಯವಾಗಿ ಅಥವಾ ಆಂತರಿಕ ನಿಯಮಗಳ ಮೂಲಕ ಟಿಕೆಟ್ ಖಾತ್ರಿ ಮಾಡುವುದು ನಡೆಯದ ಕೆಲಸ. ಹಾಗಾಗುವುದಿದ್ದರೆ ಸೋನಿಯಾ ಗಾಂಧಿ, ಮಮತಾ ಬ್ಯಾನರ್ಜಿ, ಜಯಲಲಿತಾ, ಉಮಾಭಾರತಿ ಪಕ್ಷಗಳಲ್ಲಿ ನಿರ್ಣಾಯಕವಾಗಿದ್ದಾಗ ಬದಲಾವಣೆಗಳು ಬಂದಿರುತ್ತಿದ್ದವು. ಹಾಗಾಗಿ ಪ್ರತಿಯೊಂದು ಪಕ್ಷದಿಂದಲೂ ಕನಿಷ್ಠ ಪ್ರಮಾಣದಲ್ಲಿಯಾದರೂ ಮಹಿಳಾ ಅಭ್ಯರ್ಥಿಗಳನ್ನು ನಿಲ್ಲಿಸುವ ಸಂಬಂಧ ಕಾನೂನು ತರಬೇಕು. ಇಂತಹ ಕಾನೂನಿಗೆ ಸಂವಿಧಾನದ ತಿದ್ದುಪಡಿಯ ಅವಶ್ಯಕತೆಯೂ ಇಲ್ಲ. ಜನಪ್ರತಿನಿಧಿಗಳ ಕಾಯ್ದೆಗೆ ತಿದ್ದುಪಡಿ ಅಥವಾ ಬೇರೊಂದು ಹೊಸ ಕಾಯ್ದೆಯ ಮೂಲಕ ಈ ಬದಲಾವಣೆಯನ್ನು ತರಬಹುದು.

ಎರಡನೆಯದು, ಸಾಂವಿಧಾನಿಕ ಮಾದರಿಗಳ ಪಾಠಗಳು. ರುವಾಂಡಾ, ಬಾಂಗ್ಲಾದೇಶ, ಉಗಾಂಡ, ತಾಂಜಾನಿಯಾ ಮತ್ತು ಪಾಕಿಸ್ತಾನಗಳಲ್ಲಿ ಸಂವಿಧಾನದಲ್ಲೇ ಮಹಿಳೆಯರಿಗೆ ಸೀಟುಗಳನ್ನು ಮೀಸಲಿಡಲಾಗಿದೆ. 2023ರಲ್ಲಿ ಪರಿಚಯಿಸಲಾದ ತಿದ್ದುಪಡಿ ಕಾಯ್ದೆಗೆ ಬದಲಾವಣೆ ತಂದು ಈಗಿರುವ ಕ್ಷೇತ್ರಗಳಲ್ಲೇ ಒಂದು ಭಾಗ ಮಹಿಳೆಯರಿಗೆ ಮೀಸಲಿಡಬಹುದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

13 ಜೂನ್ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಕೃಷ್ಣ ತ್ರಯೋದಶಿ ಗಂ. 16-08 ನಕ್ಷತ್ರ: ಕೃತ್ತಿಕಾ ಗಂ. 25-17 ಯೋಗ: ಸುಕರ್ಮ ಗಂ. 17-29 ಕರಣ: ಗರ ಗಂ. 5-56 ನಂತರ ವಣಿಜ ಗಂ. 16-08, ವೃಷಭ ಮಾಸದ 30 ನೇ ದಿನ. ಮಳೆ ನಕ್ಷತ್ರ : ಮೃಗಶಿರ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30 ಸೂರ್ಯೋದಯ : 06-07 ಸೂರ್ಯಾಸ್ತ : 06-54 , ಮುಸ್ಲಿಂ ದಿನಾಂಕ : 27 ದುಲ್ ಹಿಜ್ಜಾ , ಅದೃಷ್ಟ ಸಂಖ್ಯೆ : 5, 1

ಮೇಷ: ಅಭಿವೃದ್ಧಿಯನ್ನು ನೋಡಿ ಬಂಧುಗಳು ಶತ್ರುಗಳಾಗುವರು. ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸುವುದರಿಂದ ಬಹುಮಾನ ಪಡೆಯುವಿರಿ. ಗಣ್ಯ ವ್ಯಕ್ತಿಯೊಬ್ಬರನ್ನು ಭೇಟಿಯಾಗಲಿದ್ದೀರಿ.

ವೃಷಭ: ಆಮೆಗತಿಯಲ್ಲಿ ನಡೆಯುತ್ತಿರುವ ಜಮೀನಿನ ಕೆಲಸಗಳನ್ನು ತ್ವರಿತ ಗತಿಯಲ್ಲಿ ನಡೆಸಿಕೊಡುವಂತೆ ಕೆಲಸಗಾರರಲ್ಲಿ ಕೇಳಿಕೊಳ್ಳಿ. ಸಹೋದರರಲ್ಲಿನ ಸಂಬಂಧಗಳು ಗಟ್ಟಿಗೊಳ್ಳಲಿದೆ.

ಮಿಥುನ: ಕಾರ್ಯಕ್ಷೇತ್ರದಲ್ಲಿನ ಸನ್ನಿವೇಶವನ್ನು ಅನುಕೂಲಕ್ಕೆ ತಕ್ಕಂತೆ ಬದಲಾಯಿಕೊಳ್ಳಿ. ಮಗನ ಇಂದಿನ ಅನಿರೀಕ್ಷಿತ ಬದಲಾವಣೆ ಅಚ್ಚರಿ ತರುತ್ತದೆ. ಶುಭಫಲಕ್ಕಾಗಿ ಈಶ್ವರನನ್ನು ಆರಾಧಿಸಿ.

ಕರ್ಕಾಟಕ: ಪರಿಶ್ರಮಕ್ಕೆ ತಕ್ಕ ಆದಾಯವಿಲ್ಲದೆ ಸೊರಗಿದ್ದರೆ ಹೆಚ್ಚಿನ ವರಮಾನದ ಮಾರ್ಗ ಕಾಣಲಿದೆ. ವಿದ್ಯಾಭ್ಯಾಸದಲ್ಲಿ ಉದಾಸೀನ ತೋರುತ್ತಿದ್ದ ವಿದ್ಯಾರ್ಥಿಗಳಿಗೆ ಆಸಕ್ತಿ ಉಂಟಾಗಲಿದೆ.

ಸಿಂಹ: ಬದಲಾದ ದಿನಚರಿಯಿಂದ ಅಥವಾ ಅನವಶ್ಯಕ ಮಾತಿನಿಂದ ಉದ್ವೇಗ ಉಂಟಾಗಬಹುದು. ಸಾರ್ವಜನಿಕ ಸ್ಥಳದಲ್ಲಿ ಗೌರವವನ್ನು ಕಾಪಾಡಿಕೊಳ್ಳುವ ಬಗ್ಗೆ ಗಮನವಿರಲಿ. ಕುಲದೇವರ ಸೇವೆಯಿಂದ ಫಲ ಲಭಿಸಲಿದೆ.

ಕನ್ಯಾ: ಕೆಲಸ ಕಾರ್ಯಗಳಿಗೆ ಬೇಕಾದ ಸೂಕ್ತ ವ್ಯಕ್ತಿಯನ್ನು ಹುಡುಕುವಲ್ಲಿ ವಿಫಲರಾಗುವ ಮುನ್ಸೂಚನೆ ಸಿಗುವುದು. ರಕ್ತದ ಒತ್ತಡ, ಮೂತ್ರ ಸಂಬಂಧದ ದೋಷಗಳ ಬಗ್ಗೆ ಜಾಗ್ರತೆ ವಹಿಸಿ. ಶುಭ ಸುದ್ದಿ ಕೇಳುವಿರಿ.

ತುಲಾ: ಅಂಗಡಿಯಲ್ಲಿ ಕಳ್ಳತನ ನಡೆಯುತ್ತಿರುವುದನ್ನು ಗಮನಿಸುವಿರಿ. ರಕ್ಷಣೆಗಾಗಿ ಕ್ರಮ ಕೈಗೊಳ್ಳುವುದು ಉತ್ತಮ. ಅದೃಷ್ಟವನ್ನು ಪರೀಕ್ಷಿಸಿಕೊಳ್ಳಬಹುದು. ಜಮೀನಿನ ಕೆಲಸಗಳು ತೊಂದರೆ ಇಲ್ಲದೆ ನೆರವೇರಲಿವೆ.

ವೃಶ್ಚಿಕ: ಹಿರಿಯ ಮಗನ ಸಹಾಯದಿಂದ ಗಣ್ಯರ ಪರಿಚಯ ಹಾಗೂ ಸಹಾಯ ದೊರೆತು ಹೊಸ ಯೋಜನೆಗಳಿಗೆ ಅನುಕೂಲ ತೋರಿಬರಲಿದೆ. ವಾದ ಮಾಡುವ ಅಭ್ಯಾಸದಿಂದ ಸಂಬಂಧ ಹಾಳುಮಾಡಿಕೊಳ್ಳುವ ಲಕ್ಷಣಗಳಿವೆ.

ಧನು: ಯಾವುದಕ್ಕೂ ಆತುರ ಪಡಬೇಡಿ. ಭಾವನೆಗಳ ಜೊತೆಗೆ ಅಭಿಪ್ರಾಯವು ಬದಲಾಗುವ ಕಾಲ. ಯಾವುದೇ ವಿಷಯದಲ್ಲಿ ಆತುರದ ನಿರ್ಧಾರ ಸರಿಯಲ್ಲ. ಸಂಜೆ ಅಚ್ಚರಿಯ ಸುದ್ದಿ ಕೇಳಲಿರುವಿರಿ.


ಮಕರ: ಹೆಚ್ಚಿನ ಸಂಪಾದನೆ ಮಾಡುವ ಬಗ್ಗೆ ಯೋಚನೆ ಬರಲಿದೆ. ರಾಸಾಯನಿಕ ವಸ್ತುಗಳ ವ್ಯಾಪಾರಗಳಲ್ಲಿ ಲಾಭ ಕಾಣಲಿದ್ದೀರಿ. ಶೀತಬಾಧೆಯಿಂದ ಪೂರ್ವ ನಿಯೋಜಿತ ಕಾರ್ಯಗಳೆಲ್ಲವೂ ಸ್ತಬ್ಧವಾಗುವುದು.

ಕುಂಭ: ಸ್ವಾರ್ಥವಾಗಿ ಯೋಚಿಸಿ ಅಧಿಕಾರ ದುರುಪಯೋಗಪಡಿಸಿಕೊಳ್ಳಬೇಡಿ. ದೇಹಕ್ಕೆ ಅವಶ್ಯಕತೆ ಇರುವಷ್ಟು ನಿದ್ದೆಯನ್ನು, ವಿಶ್ರಾಂತಿಯನ್ನು ಮಾಡುವುದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದು.

ಮೀನ: ಗುತ್ತಿಗೆದಾರರಿಗೆ ಕಾರ್ಯಭಾರ ಪ್ರಾರಂಭವಾಗುವುದು. ವ್ಯವಹಾರದ ವಿಚಾರದಲ್ಲಿ ಅನುಭವ ಅಗತ್ಯ. ಅನಿವಾರ್ಯವಾಗಿ ಶಿಕ್ಷಣ ನಿಲ್ಲಿಸಿದವರಿಗೆ ಮುಂದುವರಿಸಲು ಸಹಾಯ ದೊರಕಲಿದೆ.

ಪದಬಂಧ 6432

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಯಜ್ಞ ಪುರೋಹಿತನನ್ನು ಹೀಗೂ ಕರೆವರು (3)
4.ಭವದಲ್ಲಿ ಹುಟ್ಟು ಕೊನೆಗೊಂಡಿದೆ (3)
6.ವಂಚನೆಯ ಯುಕ್ತಿಯಿದು (5)
7.ಭವನದ ಮೇಲಿಂದ ನೋಡಿರುವ ಆಕಾಶ (2)
9.ಮಾನವನಲ್ಲಿ ಹೊಸತು ಕಾಣುತಿದೆ (2)
10.ಗುರುವಿಗೆ ತಕ್ಕನಾದ ವಿದ್ಯಾರ್ಥಿ (2)
12.ಸುಪ್ರಭಾತದ ಹೊತ್ತಿನಲ್ಲಿ ಬಂದಿರುವ ಮಗ (2)
14.ಅಳಿಯನನ್ನು ಮನೆಯಲ್ಲಿಯೇ ಇರಿಸಿಕೊಳ್ಳುವುದು (5)
16.ಮಸ್ತಿಷ್ಕ ಇಲ್ಲಿದೆ (3)
17.ಪುನಃ ಪುನಃ ಬಂದಿರುವ ಸ್ಮರಣೆ (3)

ಮೇಲಿಂದ ಕೆಳಕ್ಕೆ

1.ವರ್ಷದ ಎರಡೆರಡು ತಿಂಗಳುಗಳ ಅವಧಿ (4)
2.ಒತ್ತಾಸೆಯು ಇಲ್ಲಿ ತಿರುವುಮುರುವಾಗಿದೆ (3)
3.ರೂಢಿಯಲ್ಲಿರುವ ಕ್ರಮ (4)
4.ಶಯನದ ಸಮಯದಲ್ಲಿ ಬಂದಿರುವ ಅನುಮಾನ! (3)
5.ಅರವತ್ತು ವರ್ಷದ ಹುಟ್ಟಿದ ಹಬ್ಬ (4)
8.ಮುಂದೆ ಬರಲಿರುವ ಕಾಲ (3)
9.ಸ್ವಪ್ನವಿಲ್ಲಿ ನಿಜವಾಗಿದೆ (3)
10.ತಲೆ ಬರಹವಿದು (4)
11.ರತ್ನಖಚಿತವಾದ ಒಡವೆ (4)
13.ಕನ್ನಡಿಗನು ಧರಿಸಿದ ಹೆಲ್ಮೆಟ್ (4)
14.ಮರದ ಹತ್ತಿರ ಬಿದ್ದಿರುವ ಉಸುಕು (3)
15.ಮೂಲೆಮನೆಯ ಮಾದರಿ (3)

6431ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ತಡಸಲು 5.ಮಧುಕರಿ 6.ಶುಕ 7.ದಸ್ತಗಿರಿ 9.ಸಂಕ 11.ಕೆರ 12.ಕಟುನುಡಿ 14.ಕಾಷ್ಠ 16.ಉದಾಸೀನ 17.ಕಾರ್ಯಕ್ಷೇತ್ರ

ಮೇಲಿಂದ ಕೆಳಕ್ಕೆ:
1.ಗಮಕ 2.ಮಕರಂದ 3.ತರಾತುರಿ 4.ಲುಬ್ಧಕ 6.ಶುಕ್ತಿಕೆ 8.ಗಿಲೀಟು 10.ಕನಿಷ್ಠ 12.ಕಟಿಸೂತ್ರ 13.ಡಿಕ್ರಿದಾರ 14.ಕಾಯಕಾ 15.ಕನಸು

ಸುಡೊಕು 6815

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4	1			7		3	
	7		2	3		1		5
5		2		1				
2		5					7	
				5	3	8		9
	9		8				5	
4		3			2			
						7		2
7		9	6		5		1	

6814 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ಮೂವರು ಸಾಧಕರಿಗೆ ಜುಲೈ 11ರಂದು ಪ್ರಶಸ್ತಿ ಪ್ರದಾನ

ಬ್ಯಾರಿ ಸಾಹಿತ್ಯ ಅಕಾಡೆಮಿ ಗೌರವ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ನೀಡುವ 2025ನೇ ಸಾಲಿನ ಗೌರವ ಪ್ರಶಸ್ತಿಗೆ ಮೂವರು ಸಾಧಕರನ್ನು ಆಯ್ಕೆ ಮಾಡಲಾಗಿದೆ.

ಬೆಂಗಳೂರಿನ ದಿ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಶನ್ ಸ್ಥಾಪಕ ಸದಸ್ಯ ಅತ್ತೂರು ಚೆಯ್ಯಬ್ಬ (ಬ್ಯಾರಿ ಭಾಷೆ), ಬ್ಯಾರಿ ಕವಿ ಅಬ್ದುಲ್ ಸಮದ್ ಕಾಟಿಪಳ್ಳ (ಬ್ಯಾರಿ ಕಲೆ, ಸಂಸ್ಕೃತಿ) ಹಾಗೂ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಮಾಜಿ ಸದಸ್ಯೆ ಆಯಿಷಾ ಯು.ಕೆ. (ಬ್ಯಾರಿ ಸಾಹಿತ್ಯ) ಬ್ಯಾರಿ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹50 ಸಾವಿರ ನಗದು, ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಜುಲೈ 11 ರಂದು ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.


ಅತ್ತೂರು ಚೆಯ್ಯಬ್ಬ


ಅಬ್ದುಲ್ ಸಮದ್


ಆಯಿಷಾ

'ಬ್ಯಾರಿ ವಾರ್ತೆ' ಮಾಸಿಕದ ಸಂಪಾದಕ ಬಶೀರ್ ಬೈಕಂಪಾಡಿ, ಪತ್ರಕರ್ತ ಅಬ್ಬಾಸ್ ಕಿರುಗುಂದ, ಲೇಖಕಿ ಝುಲೇಖ ಮುಮ್ತಾಜ್ ಮತ್ತು ಕವಯಿತ್ರಿ ನಝ್ಮತುನ್ನಿಸಾ ಲೈಝ್ ಗೌರವ ಪ್ರಶಸ್ತಿಯ ಆಯ್ಕೆ ಸಮಿತಿಯಲ್ಲಿದ್ದರು. ಬ್ಯಾರಿ ಸಾಹಿತ್ಯ ಅಕಾಡೆಮಿಯ ಸ್ಥಾಯಿ ಸಮಿತಿ ಸಭೆ ಹಾಗೂ ಸರ್ವ ಸದಸ್ಯರ ಸಭೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಅಂತಿಮಗೊಳಿಸಲಾಗಿದೆ ಎಂದು ಅಕಾಡೆಮಿಯ ಅಧ್ಯಕ್ಷ ಉಮರ್ ಯು.ಎಚ್. ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರದ ಕಣ್ತೆರೆಸಲು ಆಂದೋಲನ

ಶೌಚಗುಂಡಿ ಕಾರ್ಮಿಕರ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಗುರುತಿಸಲ್ಪಟ್ಟ ಎಲ್ಲಾ 7,483 ಶೌಚಗುಂಡಿ ಕಾರ್ಮಿಕರಿಗೆ ಏಕಕಾಲದಲ್ಲಿ ಪುನರ್ ವಸತಿ ಕಲ್ಪಿಸಬೇಕು' ಎಂದು ಆಗ್ರಹಿಸುವ ಸಲುವಾಗಿ ರಾಜ್ಯಮಟ್ಟದ ಆಂದೋಲನವನ್ನು ಹಮ್ಮಿಕೊಳ್ಳಲು ಶುಕ್ರವಾರ ಇಲ್ಲಿ ಮುಕ್ತಾಯವಾದ ಶೌಚಗುಂಡಿ ಕಾರ್ಮಿಕರ ರಾಜ್ಯಮಟ್ಟದ ಜಾಗೃತಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

'ವಿವಿಧ ಯೋಜನೆಗಳಡಿ ಸೌಲಭ್ಯ ಕಲ್ಪಿಸುವುದನ್ನೇ ಪುನರ್ವಸತಿ ಎಂದು ತಪ್ಪಾಗಿ ಅರ್ಥೈಸಿರುವ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಕಣ್ತೆರೆಸಲು ಆಂದೋಲನ ಅತ್ಯಗತ್ಯ' ಎಂದು ವಿವಿಧ ಜಿಲ್ಲೆಗಳ ಸಫಾಯಿ ಕರ್ಮಚಾರಿ ಕಾವಲು ಸಮಿತಿಗಳ ಸದಸ್ಯರು ಪ್ರತಿಪಾದಿಸಿದರು.

ಸಮಾರಂಭದ ಕೊನೆಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಸಂಚಾಲಕ ಕೆ.ಬಿ.ಓಬಳೇಶ್, 'ಮೊದಲಿಗೆ ಜಿಲ್ಲಾ ಮಟ್ಟದಲ್ಲಿ ಕಾವಲು ಸಮಿತಿಗಳು ಎಲ್ಲ ಶೌಚಗುಂಡಿ ಕಾರ್ಮಿಕರನ್ನು ಸೇರಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಬೇಕು. ರಾಜ್ಯಮಟ್ಟದ ಜಾಗೃತಿ ತಂಡದ ಜಾಥಾ ಎಲ್ಲ ಜಿಲ್ಲೆಗಳಲ್ಲೂ ಸಂಚರಿಸಿ, ಕೊನೆಗೆ ಬೆಂಗಳೂರಿನಲ್ಲಿ ಮುಕ್ತಾಯಗೊಳಿಸಿ ನೇರವಾಗಿ ಮುಖ್ಯಮಂತ್ರಿಯವರ ಗಮನ ಸೆಳೆಯಲಾಗುವುದು' ಎಂದರು.

'ರಾಜ್ಯದಲ್ಲಿ ಶೌಚಗುಂಡಿ ಕಾರ್ಮಿಕರಿಲ್ಲ ಎಂದು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ವರದಿ ನೀಡಿದೆ. ಆದರೆ ಬಹುತೇಕ ಜಿಲ್ಲೆಗಳಲ್ಲಿರುವ ಶೌಚಾಲಯಗಳಿಗೆ ಗುಂಡಿಗಳ ಸಂಪರ್ಕ ನೀಡಲಾಗಿದೆ. ಗುಂಡಿಗಳನ್ನು ಸ್ವಚ್ಛಗೊಳಿಸಲು ಕಾರ್ಮಿಕರನ್ನೇ ಬಳಸಲಾಗುತ್ತಿದೆ. ಚರಂಡಿಗಳಿಗೆ ನೇರವಾಗಿ ಮಲ ಹರಿಯುವ ಪೈಪ್ ಸಂಪರ್ಕ ನೀಡಲಾಗಿದೆ. ಅಂಥ ಫೋಟೊಗಳನ್ನು ತೆಗೆದು ಮಾಧ್ಯಮಗಳಿಗೆ ಬಿಡುಗಡೆ ಮಾಡಬೇಕು. ಸಾಮಾಜಿಕ ಮಾಧ್ಯಮಗಳನ್ನೂ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಅಂಕಿ ಅಂಶ ಸಮೇತ ಪ್ರತಿಭಟಿಸಿದರೆ ಮಾತ್ರ ಆಂದೋಲನ ಯಶಸ್ವಿಯಾಗುತ್ತದೆ' ಎಂದರು.

'ಕಾರ್ಯಾಗಾರದ ನಿರ್ಣಯಗಳನ್ನು ಶಿಫಾರಸುಗಳ ರೂಪದಲ್ಲಿ ರಾಷ್ಟ್ರೀಯ ಕಾನೂನು ಶಾಲೆಯ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಸಂಯೋಜಕ ಹಾಗೂ ಶಾಲೆಯ ಸಾಮಾಜಿಕ ಒಳಗೊಳ್ಳುವಿಕೆ ಅಧ್ಯಯನ ಕೇಂದ್ರ ಆರ್.ವಿ.ಚಂದ್ರಶೇಖರ್ ತಿಳಿಸಿದರು.

ಕಾನೂನು ಶಾಲೆ, ಬಾಬು ಜಗಜೀವನ ರಾಮ್ ಸಂಶೋಧನಾ ಸಂಸ್ಥೆ ಹಾಗೂ ಸಫಾಯಿ ಕರ್ಮಚಾರಿ ಕಾವಲು ಸಮಿತಿ ಜಂಟಿಯಾಗಿ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ರಾಜ್ಯ ಮೇಲ್ವಿಚಾರಣಾ ಸಮಿತಿ ಸದಸ್ಯೆ ಪದ್ಮಾ, ಬಳ್ಳಾರಿ ಜಿಲ್ಲಾ ಸಮಿತಿ ಸದಸ್ಯ ರಾಮು ಪಾಲ್ಗೊಂಡಿದ್ದರು.

ಶೌಚಗುಂಡಿ ಸ್ವಚ್ಛತೆಗೆ ಕರ್ಮಚಾರಿಗಳ ಬಳಸಬೇಡಿ: ಖಂಡ್ರೆ

'ಶೌಚಗುಂಡಿಯನ್ನು ಸಫಾಯಿ ಕರ್ಮಚಾರಿಗಳಿಂದ ಸ್ವಚ್ಛಗೊಳಿಸಿದರೆ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಎಚ್ಚರಿಕೆ ನೀಡಿದರು.

ದೇವನಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯಂತ್ರಗಳ ಮೂಲಕವೇ ಸ್ವಚ್ಛತೆ ಮಾಡಬೇಕು. ಅದಕ್ಕಾಗಿ ಅಗತ್ಯವಿರುವ ಜೆಟ್ಟಿಂಗ್, ಸಕ್ಕಿಂಗ್ ಯಂತ್ರ ಖರೀದಿಸಲಾಗುವುದು' ಎಂದರು.

'ರಾಜ್ಯದಲ್ಲಿ 7,483 ಶೌಚಗುಂಡಿ ಕಾರ್ಮಿಕರು ಇರುವುದಾಗಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಿರುವ ಬಗ್ಗೆ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುರಳಿ ಅಶೋಕ್ ಸಾಲಪ್ಪ ಗಮನ ಸೆಳೆದಿದ್ದಾರೆ. ನಾನು ಹಿಂದೆ ಪೌರಾಡಳಿತ ಸಚಿವನಾಗಿದ್ದಾಗ ಮಲತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಿಸಲು ಯೋಜನೆ ರೂಪಿಸಲಾಗಿತ್ತು. ಈಗ ಪಂಚಾಯ್ತಿ ಮಟ್ಟದಲ್ಲೂ ಘಟಕ ನಿರ್ಮಿಸಲಾಗುವುದು' ಎಂದರು.

'ನದಿಗಳೆಲ್ಲವೂ ಶೌಚಗುಂಡಿಗಳು'

'ಸಫಾಯಿ ಕರ್ಮಚಾರಿಗಳು, ಶೌಚಗುಂಡಿ ಕಾರ್ಮಿಕರು ಭಕ್ತಿಪೂರ್ವಕವಾಗಿ ನದಿಗಳಲ್ಲಿ ಮುಳುಗುವುದನ್ನು ನಿಲ್ಲಿಸಬೇಕು. ಏಕೆಂದರೆ ಅವೆಲ್ಲವೂ ಶೌಚಗುಂಡಿಗಳೇ ಅಲ್ಲಿ ಮುಳುಗಿದ್ದರೆ ಗುಂಡಿ ಸ್ವಚ್ಛಗೊಳಿಸಿದಂತೆ' ಎಂದು ಸಮಾಜ ವಿಜ್ಞಾನಿ ಸಿ.ಜಿ.ಲಕ್ಷ್ಮಿಪತಿ ಪ್ರತಿಪಾದಿಸಿದರು.

ಸಮಾರೋಪ ಭಾಷಣ ಮಾಡಿದ ಅವರು, 'ಮಾನಸಿಕ ಮತ್ತು ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಪಡೆಯಿರಿ. ಅಂಬೇಡ್ಕರ್ ಪ್ರತಿಪಾದಿಸಿದ ಶಿಕ್ಷಣ, ಸಂಘಟನೆ, ಹೋರಾಟದ ಹಾದಿ ತುಳಿಯಿರಿ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ' ಎಂದು ಸಲಹೆ ನೀಡಿದರು.

ಇಗ್ನೊ: ಅರ್ಜಿ ಆಹ್ವಾನ

ಬೆಂಗಳೂರು: ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯವು (ಇಗ್ನೊ) 2026ನೇ ಸಾಲಿಗೆ ವಿವಿಧ ಪದವಿ, ಸ್ನಾತಕೋತ್ತರ ಪದವಿ, ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ.

ಆನ್‌ಲೈನ್ ಮೂಲಕವೂ ಅರ್ಜಿ ಸಲ್ಲಿಸಬಹುದು. ವಿವರಕ್ಕೆ ವಿ.ವಿ ವೆಬ್‌ಸೈಟ್ www.ignou.ac.inಗೆ ಭೇಟಿ ನೀಡಬಹುದು.

ಪೂರ್ಣ ಕುಂಭ ಸ್ವಾಗತ • ದೇವರಿಗೆ ಬೆಳ್ಳಿ ಖಡ್ಗ ಸಮರ್ಪಣೆ • ಅಭಿಮಾನಿಗಳ ಸಂಭ್ರಮ

ಕೊಲ್ಲೂರು ಮೂಕಾಂಬಿಕೆ ದರ್ಶನ ಪಡೆದ ವಿಜಯ್

ಪ್ರಜಾವಾಣಿ ವಾರ್ತೆ

ಉಡುಪಿ/ ಕುಂದಾಪುರ: ತಮಿಳು ನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಕೊಲ್ಲೂರು ಶ್ರೀಮೂಕಾಂಬಿಕಾ ದೇವಸ್ಥಾನಕ್ಕೆ ಶುಕ್ರವಾರ ಭೇಟಿ ನೀಡಿ ದೇವರ ದರ್ಶನ ಪಡೆದರು. ದೇವರಿಗೆ ಬೆಳ್ಳಿಯ ಖಡ್ಗವನ್ನು ಸಮರ್ಪಿಸಿದರು.

ಬಜಪೆಯ ಮಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಿಶೇಷ ವಿಮಾನದಲ್ಲಿ ಬಂದಿಳಿದ ವಿಜಯ್ ಅವರು ಅಲ್ಲಿಂದ ರಸ್ತೆ ಮಾರ್ಗವಾಗಿ ಕೊಲ್ಲೂರಿಗೆ ಕಾರಿನಲ್ಲಿ ಪ್ರಯಾಣಿಸಿದರು. ದೇವಸ್ಥಾನದ ವತಿಯಿಂದ ಋತ್ವಿಜರು ಅವರನ್ನು ಪೂರ್ಣ ಕುಂಭಗಳೊಂದಿಗೆ ಬರಮಾಡಿಕೊಂಡರು.

ದೇವಸ್ಥಾನದ ತಂತ್ರಿಗಳಾದ ರಾಮಚಂದ್ರ ಅಡಿಗ, ನಿತ್ಯಾನಂದ ಅಡಿಗ, ಅರ್ಚಕ ವಿಘ್ನೇಶ್ ಅಡಿಗ ಹಾಗೂ ಸುರೇಶ್ ಭಟ್ ಮಾರ್ಗದರ್ಶನದಲ್ಲಿ ಸಂಕಲ್ಪ ಹಾಗೂ ತುಪ್ಪದ ದೀಪಾರಾಧನೆ ನೆರವೇರಿಸಲಾಯಿತು.


ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಕೊಲ್ಲೂರು ಶ್ರೀಮೂಕಾಂಬಿಕಾ ದೇವಸ್ಥಾನಕ್ಕೆ ಶುಕ್ರವಾರ ಭೇಟಿ ನೀಡಿ ದೇವರ ದರ್ಶನ ಪಡೆದರು

ಪೂಜೆ, ಮಂಗಳಾರತಿ ಹಾಗೂ ಪ್ರಾರ್ಥನೆಯ ಬಳಿಕ ಪ್ರಸಾದ ನೀಡಲಾಯಿತು. ದೇಗುಲದ ಗರ್ಭಗುಡಿ ಹಾಗೂ ಸುತ್ತು ಪೌಳಿ ಆವರಣದಲ್ಲಿ ಪ್ರದಕ್ಷಿಣೆ ಬಂದ ವಿಜಯ್ ಅವರು, ಆದಿ ಶಂಕರಾಚಾರ್ಯ ಪೀಠ, ಚಿನ್ನದ ರಥ, ಶ್ರೀವೀರಭದ್ರ ಹಾಗೂ ಪರಿಹಾರ ದೇವತೆಗಳ ದರ್ಶನ ಪಡೆದು ಪ್ರಾರ್ಥನೆ ಸಲ್ಲಿಸಿದರು. ಅವರನ್ನು ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ.ಬಾಬು ಶೆಟ್ಟಿ ತಗ್ಗರ್ಸೆ ಹಾಗೂ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಕುಮಾರ ಶೆಟ್ಟಿ ಗೌರವಿಸಿದರು.

ಅಭಿಮಾನಿಗಳ ಉತ್ಸಾಹ: ವಿಜಯ್ ಅವರು ದೇವಸ್ಥಾನಕ್ಕೆ ಭೇಟಿ ನೀಡುವ ಮಾಹಿತಿ ಅರಿತು ದೇವಸ್ಥಾನದ ಸುತ್ತಮುತ್ತಲಿನ ಪ್ರದೇಶದಲ್ಲಿ ರಾಜ್ಯದ ವಿವಿಧೆಡೆಗಳಿಂದ ಹಾಗೂ ಕೇರಳದಿಂದ ಬಂದಿದ್ದ ಅಭಿಮಾನಿಗಳು ಸೇರಿದ್ದರು. ವಿಜಯ್ ಅವರು ಬರುತ್ತಿದ್ದಂತೆ ಜೈಕಾರ ಕೂಗಿದರು.

ದೇವರ ದರ್ಶನ ಪಡೆದು ಹೊರಗೆ ಬಂದ ವಿಜಯ್, ನೇರವಾಗಿ ಅಭಿಮಾನಿಗಳ ಬಳಿಗೆ ಸಾಗಿ ಕೈಬೀಸಿದರು. ಬಳಿಕ ಸ್ವತಃ ಕಾರು ಚಲಾಯಿಸಿಕೊಂಡು ಅತಿಥಿ ಗೃಹದತ್ತ ತೆರಳಿದರು. ಅಲ್ಲಿ ಕೆಲಕಾಲ ವಿಶ್ರಾಂತಿ ಪಡೆದು ಬಳಿಕ ರಸ್ತೆ ಮಾರ್ಗವಾಗಿ ಬಜಪೆಯ ಮಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಿದರು.

ಕಪ್ಪು ಬಾವುಟ ಪ್ರದರ್ಶನಕ್ಕೆ ಯತ್ನ– ಬಂಧನ

ಮೇಕೆದಾಟು ಯೋಜನೆಗೆ ತಮಿಳುನಾಡು ಸರ್ಕಾರ ವಿರೋಧ ವ್ಯಕ್ತಪಡಿಸುತ್ತಿರುವುದನ್ನು ಖಂಡಿಸಿ ವಿಜಯ್ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲು ಸಿದ್ಧರಾಗಿದ್ದ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಕುಮಾರ್ ಶೆಟ್ಟಿ ಬಣ) ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಬಳಿಕ ಬಿಡುಗಡೆಗೊಳಿಸಿದರು.

ಉಡುಪಿಯ ಉದ್ಯಾವರ ಬಲಾಯಿಪಾದೆಯ ರಾಷ್ಟ್ರೀಯ ಹೆದ್ದಾರಿ ಬಳಿ ಕಾರ್ಯಕರ್ತರು ಕಪ್ಪು ಬಾವುಟ ಪ್ರದರ್ಶನಕ್ಕೆ ಸಿದ್ಧತೆ ನಡೆಸಿದ್ದರು. ವಿಜಯ್ ಅವರ ವಾಹನ ತಲುಪುವುದಕ್ಕೂ ಮುನ್ನವೇ ಪೊಲೀಸರು, ಕ.ರ.ವೇ ಉಡುಪಿ ಜಿಲ್ಲಾ ಘಟಕದ ಗೌರವಾಧ್ಯಕ್ಷ ಅನ್ಸಾರ್ ಅಹಮದ್ ಸೇರಿದಂತೆ ಹಲವು ಪದಾಧಿಕಾರಿಗಳನ್ನು ವಶಕ್ಕೆ ಪಡೆದು ಬೇರೆ ಕಡೆಗೆ ಕರೆದೊಯ್ದರು.

ಧಾರವಾಡ: ಅಮಾನತಾಗಿದ್ದ ಜೈಲರ್ ಆತ್ಮಹತ್ಯೆ

ಧಾರವಾಡ: ನಗರದ ಕೇಂದ್ರ ಕಾರಾಗೃಹದ ಜೈಲರ್ (ಅಮಾನತಿನಲ್ಲಿದ್ದ) ಸಿದ್ರಾಮಪ್ಪ ವಡ್ಡರ್ (33) ಅವರು ವಸತಿಗೃಹದಲ್ಲಿ ಶುಕ್ರವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಸೂಡಿ ಗ್ರಾಮದವರು.

'ಕೇಂದ್ರ ಕಾರಾಗೃಹದ ಒಳಗೆ ತಂಬಾಕು, ಗುಟ್ಕಾ ಸಾಗಣೆ ಪ್ರಕರಣ ಮಾರ್ಚ್‌ನಲ್ಲಿ ನಡೆದಿತ್ತು. ಪ್ರಕರಣ ನಡೆದ ದಿನ ಜೈಲರ್ ಕರ್ತವ್ಯದಲ್ಲಿದ್ದ ಸಿದ್ರಾಮಪ್ಪ ಅವರ ವಿರುದ್ಧ ಇಲಾಖಾ ಶಿಸ್ತುಕ್ರಮ ಜರುಗಿಸಲಾಗಿತ್ತು. ಅವರನ್ನು ಅಮಾನತು ಮಾಡಿ, ಆಡಳಿತಾತ್ಮಕ ಕಾರಣಕ್ಕೆ ಮೈಸೂರಿಗೆ ವರ್ಗಾವಣೆ ಮಾಡಲಾಗಿತ್ತೆಂದು ಗೊತ್ತಾಗಿದೆ. ಅವರ ಕುಟುಂಬದವರು ನೀಡುವ ದೂರು ಆಧರಿಸಿ ಮುಂದಿನ ಕ್ರಮ ವಹಿಸಲಾಗುವುದು' ಎಂದು ಹುಬ್ಬಳ್ಳಿ–ಧಾರವಾಡ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ಅವರು ತಿಳಿಸಿದರು.


ಸಿದ್ರಾಮಪ್ಪ

ನಿಧನ ವಾರ್ತೆ

ಪ್ರೊ.ಕೆ.ಬಾಲಕೃಷ್ಣ ಗಟ್ಟಿ



ಮಂಗಳೂರು: ಜನವಾಹಿನಿ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾಗಿ 1998-2003ರ ಅವಧಿಯಲ್ಲಿ ಕಾರ್ಯನಿರ್ವಹಿಸಿದ್ದ ಪತ್ರಕರ್ತ ಪ್ರೊ.ಕೆ.ಬಾಲಕೃಷ್ಣ ಗಟ್ಟಿ (83) ಅಲ್ಪಕಾಲದ ಅನಾರೋಗ್ಯದಿಂದ ಇಲ್ಲಿನ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು.

ಕುಂಬಳೆಯ ಸಾಮಾಜಿಕ ಧುರೀಣ ದಿ.ಮಹಾಲಿಂಗ ಗಟ್ಟಿ ಅವರ ಪುತ್ರರಾದ ಬಾಲಕೃಷ್ಣ ಗಟ್ಟಿ ಬಂಟ್ವಾಳ ಎಸ್.ವಿ.ಎಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿ, ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದರು.

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗೆ ಬಂಟ್ವಾಳ ತಾಲ್ಲೂಕಿನ ಸ್ಟ್ರಿಂಜರ್ ಆಗಿ ಕಾರ್ಯನಿರ್ವಹಿಸಿದ್ದರು. 'ನೇತ್ರಾವತಿ ವಾರ್ತೆ' ದೈನಿಕವನ್ನು ಮುನ್ನಡೆಸಿದ್ದರು. 2024ರಲ್ಲಿ ಬಂಟ್ವಾಳ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ನಿವೃತ್ತಿ ಬಳಿಕ ಅವರು ಮಂಗಳೂರಿನಲ್ಲಿ ನೆಲಸಿದ್ದರು. ಅವರಿಗೆ ಪತ್ನಿ, ಒಬ್ಬ ಪುತ್ರ, ಒಬ್ಬಳು ಪುತ್ರಿ ಇದ್ದಾರೆ.

ಆರೋಗ್ಯ ವಿ.ವಿ: 16ಕ್ಕೆ ಘಟಿಕೋತ್ಸವ

ಫಲಿತಾಂಶ: 2015ರ ಶೇ75ರಿಂದ 2026ರಲ್ಲಿ ಶೇ89ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ 28ನೇ ಘಟಿಕೋತ್ಸವವು ಇದೇ ಜೂನ್ 16ರಂದು ನಡೆಯಲಿದ್ದು, ಒಟ್ಟು 72,741 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತದೆ ಎಂದು ಕುಲಪತಿಗಳಾದ ಡಾ. ಭಗವಾನ್ ಬಿ.ಸಿ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. '2026ರಲ್ಲಿ ವಿಶ್ವವಿದ್ಯಾಲಯವು ಶೇ 89.22ರಷ್ಟು ಫಲಿತಾಂಶ ದಾಖಲಿಸಿದೆ. 2015ರಲ್ಲಿ ಉತ್ತೀರ್ಣ ಪ್ರಮಾಣ ಶೇ 75.49ರಷ್ಟು ಇತ್ತು. ಪಠ್ಯಕ್ರಮ ಮತ್ತು ಪರೀಕ್ಷಾ ವಿಧಾನಗಳಲ್ಲಿ ಸುಧಾರಣೆ ತಂದ ಪರಿಣಾಮವಾಗಿ ಫಲಿತಾಂಶ ಸುಧಾರಿಸಿದೆ' ಎಂದು ಮಾಹಿತಿ ನೀಡಿದರು.

'72,741 ವಿದ್ಯಾರ್ಥಿಗಳ ಪೈಕಿ 62,419 ಪದವಿ ಮತ್ತು 9,761 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪಡೆಯಲಿದ್ದಾರೆ. 71 ಸಂಶೋಧಕರಿಗೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಗುತ್ತದೆ. ಜತೆಗೆ, 250 ವಿದ್ಯಾರ್ಥಿಗಳಿಗೆ ಫೆಲೋಶಿಪ್, 211 ವಿದ್ಯಾರ್ಥಿಗಳಿಗೆ ವಿಶೇಷ ಕೋರ್ಸ್, 8 ವಿದ್ಯಾರ್ಥಿಗಳಿಗೆ ಡಿಪ್ಲೊಮಾ ಪ್ರಮಾಣ ಪತ್ರ ವಿತರಿಸಲಾಗುತ್ತದೆ' ಎಂದು ಹೇಳಿದರು.

'103 ವಿದ್ಯಾರ್ಥಿಗಳಿಗೆ ಒಟ್ಟು 115 ಚಿನ್ನದ ಪದಕ ಮತ್ತು ನಗದು ಬಹುಮಾನ ವಿತರಿಸಲಾಗುತ್ತದೆ. ಪ್ರೊ.ನೈಲಾಡಿ ಶ್ರೀಧರ ಶೆಟ್ಟಿ, ಡಾ.ಹರ್ಷಿಣಿಗಿ ವೀರಭದ್ರಪ್ಪ, ಡಾ.ಎ.ಸಿ.ಷಣ್ಮುಗಂ ಅವರಿಗೆ ಗೌರವ ಡಾಕ್ಟರೇಟ್ (ಡಾಕ್ಟರ್ ಆಫ್ ಸೈನ್ಸ್) ಪದವಿ ಪ್ರದಾನ ಮಾಡಲಾಗುತ್ತದೆ' ಎಂದರು.

'ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನದಲ್ಲಿ ಜೂನ್ 16ರಂದು ಘಟಿಕೋತ್ಸವ ಆಯೋಜಿಸಲಾಗಿದೆ' ಎಂದರು.

ಸ್ಪಂದನಾಗೆ ಮೂರು ಚಿನ್ನದ ಪದಕ

ಬೆಂಗಳೂರಿನ ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್ ಫಿಸಿಯೋಥೆರಪಿಯ ವಿದ್ಯಾರ್ಥಿ ಸ್ಪಂದನಾ. ಐ ಅವರು ಮೂರು ಚಿನ್ನದ ಪದಕ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವಿದ್ಯಾರ್ಥಿ ಪ್ರಜ್ವಲ್ ಕಶ್ಯಪ್ ಅವರು ಎರಡು ಚಿನ್ನದ ಪದಕ ಮತ್ತು ಎರಡು ನಗದು ಬಹುಮಾನ ಪಡೆಯಲಿದ್ದಾರೆ.

ಡಾ.ಪ್ರಜ್ವಲ್ ಕಶ್ಯಪ್, 'ಚಿನ್ನದ ಪದಕ ಬರುತ್ತದೆ ಎಂಬ ನಿರೀಕ್ಷೆ ಇರಲಿಲ್ಲ. ವಿಷಯ ಕಲಿಯಬೇಕು ಎಂದು ಗಮನವಿಟ್ಟು ಓದಿದ್ದೆ ಅಷ್ಟೆ. ಈ ಎಲ್ಲದರ ಶ್ರೇಯ ನನ್ನ ಪೋಷಕರು ಮತ್ತು ಪ್ರಾಧ್ಯಾಪಕರಿಗೆ ಸಲ್ಲಬೇಕು' ಎಂದರು.

ವೈದ್ಯಕೀಯ: ಈ ವರ್ಷ ಇಲ್ಲ ಶುಲ್ಕ ಹೆಚ್ಚಳ

ಒಂದನೇ ಪುಟದಿಂದ...

'2026–27ನೇ ಸಾಲಿಗೆ ಸರ್ಕಾರಿ ಕೋಟಾಕ್ಕೆ ಹೆಚ್ಚುವರಿಯಾಗಿ 550 ಎಂ.ಬಿ.ಬಿ.ಎಸ್ ಸೀಟುಗಳು ಸೇರ್ಪಡೆಯಾಗಿದ್ದು, ಮೊದಲನೇ ವರ್ಷದ ವೈದ್ಯಕೀಯ ಸೀಟುಗಳ ಸಂಖ್ಯೆ 14,495ಕ್ಕೆ ಏರಿಕೆಯಾಗಿದೆ. ಸ್ನಾತಕೋತ್ತರ ವೈದ್ಯಕೀಯಕ್ಕೆ (ಪಿ.ಜಿ) 572 ಹೆಚ್ಚುವರಿ ಸೀಟುಗಳು ಸಿಕ್ಕಿವೆ. 2025–26ನೇ ಸಾಲಿನಲ್ಲಿ ಪಿ.ಜಿ ಸೀಟುಗಳ ಸಂಖ್ಯೆ 7,687 ಇತ್ತು' ಎಂದು ಹೇಳಿದರು.

ರಾಜ್ಯದಲ್ಲಿನ ವೈದ್ಯಕೀಯ ಸೀಟುಗಳು ದೇಶದಲ್ಲೇ ಅಧಿಕ. ವೈದ್ಯಕೀಯ ಸೀಟುಗಳ ಹೆಚ್ಚಳದಿಂದ ರಾಜ್ಯಕ್ಕೆ ಕೇಂದ್ರ ಸರ್ಕಾರ ₹1,036 ಕೋಟಿ ಆರ್ಥಿಕ ನೆರವು ನೀಡುತ್ತಿದೆ. ಅನುದಾನಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ್ದು, ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಇದನ್ನು ಬಳಸಲಾಗುವುದು ಎಂದು ವಿವರಿಸಿದರು.

ವೈದ್ಯಕೀಯ ಶಿಕ್ಷಣ ಸಚಿವರ ಸಮ್ಮೇಳನ

ರಾಜ್ಯ ಕೋಟಾದ ಸೀಟುಗಳ ಪ್ರವೇಶಕ್ಕೆ ಪರೀಕ್ಷೆ ನಡೆಸುವ ಅಧಿಕಾರವನ್ನು ಆಯಾ ರಾಜ್ಯಗಳಿಗೆ ನೀಡಬೇಕೆಂದು ಒತ್ತಾಯಿಸಲು ಎಲ್ಲ ರಾಜ್ಯಗಳ ವೈದ್ಯಕೀಯ ಶಿಕ್ಷಣ ಸಚಿವರ ಸಮ್ಮೇಳನ ಆಯೋಜನೆಗೆ ನಿರ್ಧರಿಸಲಾಗಿದೆ ಎಂದು ಶರಣಪ್ರಕಾಶ ಪಾಟೀಲ ಹೇಳಿದರು.

ನೀಟ್ ವೈಫಲ್ಯ, ಭವಿಷ್ಯದ ಪರೀಕ್ಷೆಗಳಲ್ಲಿ ಸುಧಾರಣೆ ಕುರಿತು ಸುದೀರ್ಘ ಚರ್ಚೆ ನಡೆಸಬೇಕಿದೆ. ಸಮ್ಮೇಳನದಲ್ಲಿ ಸಿಗುವ ಸಲಹೆ ಹಾಗೂ ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಕೇಂದ್ರಕ್ಕೆ ಸಲ್ಲಿಸಲಾಗುವುದು. ವೈದ್ಯಕೀಯ ಶಿಕ್ಷಣ ಸಚಿವರ ಸಮ್ಮೇಳನದ ಆತಿಥ್ಯವನ್ನು ಕರ್ನಾಟಕವೇ ವಹಿಸಲಿದೆ. ಈ ಕುರಿತು ಸಿದ್ಧತೆ ಆರಂಭಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿ ಸಲ್ಲಿಸಿದ ಶುಲ್ಕ ಹೆಚ್ಚಳದ ಬೇಡಿಕೆಯನ್ನು ತಿರಸ್ಕರಿಸಲಾಗಿದೆ. ಕಳೆದ ಸಾಲಿನಲ್ಲಿ ನಿಗದಿಪಡಿಸಿದ್ದ ಶುಲ್ಕವನ್ನೇ ಮುಂದುವರಿಸಲಾಗಿದೆ

ಶರಣಪ್ರಕಾಶ ಪಾಟೀಲ, ವೈದ್ಯಕೀಯ ಶಿಕ್ಷಣ ಸಚಿವ

ಎಂ.ಬಿ.ಬಿ.ಎಸ್	ಶುಲ್ಕ
ಸರ್ಕಾರಿ ಕಾಲೇಜು	₹55,000
ಖಾಸಗಿ ಕಾಲೇಜು–ಸರ್ಕಾರಿ ಕೋಟಾ	₹1,41,621
ಖಾಸಗಿ ಕಾಲೇಜು–ಖಾಸಗಿ ಕೋಟಾ	₹11,88,167
ದಂತ ವೈದ್ಯಕೀಯ	
ಸರ್ಕಾರಿ ಕಾಲೇಜು	₹40,000
ಖಾಸಗಿ ಕಾಲೇಜು–ಸರ್ಕಾರಿ ಕೋಟಾ	₹83,358
ಖಾಸಗಿ ಕಾಲೇಜು–ಖಾಸಗಿ ಕೋಟಾ	₹7,32,625

‘ಸುಪ್ರೀಂ’ನಿಂದ ಮೀನಾಕ್ಷಿ ಅರ್ಜಿ ವಜಾ

ನಾಮಪತ್ರ ತಿರಸ್ಕಾರ: ಚುನಾವಣಾ ಆಯೋಗದಲ್ಲೇ ಪರಿಹಾರ ಪಡೆಯಬೇಕು

ನವದೆಹಲಿ(ಪಿಟಿಐ): ರಾಜ್ಯಸಭೆಗೆ ಮಧ್ಯಪ್ರದೇಶದಿಂದ ಆಯ್ಕೆ ಬಯಸಿ ತಾವು ಸಲ್ಲಿಸಿದ್ದ ನಾಮಪತ್ರವನ್ನು ಚುನಾವಣಾ ಅಧಿಕಾರಿ ತಿರಸ್ಕರಿಸಿದ್ದನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕಿ ಮೀನಾಕ್ಷಿ ನಟರಾಜನ್ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪ್ರಶಾಂತ ಕುಮಾರ್ ಮಿಶ್ರಾ ಹಾಗೂ ಅತುಲ್ ಎಸ್. ಚಂದೂರಕರ್ ಅವರು ಇದ್ದ ಪೀಠವು, ‘ಅರ್ಜಿದಾರರು ಈ ವಿಚಾರವಾಗಿ ಚುನಾವಣಾ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಲು ಸ್ವತಂತ್ರರು’ ಎಂದು ಹೇಳಿದೆ.

‘ಒಂದೊಮ್ಮೆ ಚುನಾವಣಾ ಅಧಿಕಾರಿಯು ನಾಮಪತ್ರವನ್ನು ತಿರಸ್ಕರಿಸಿದಲ್ಲಿ ಹಾಗೂ ಅಧಿಕಾರಿ ಕೈಗೊಂಡ ನಿರ್ಧಾರ ತಪ್ಪಿನಿಂದ ಕೂಡಿದೆ ಎಂದು ಭಾವಿಸಿದರೂ, ಅಭ್ಯರ್ಥಿಯು ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸುವುದೊಂದೇ ಪರಿಹಾರ’ ಎಂದು ಪೀಠ ಸ್ಪಷ್ಟಪಡಿಸಿದೆ.

ವಿಚಾರಣೆ ವೇಳೆ, ಮೀನಾಕ್ಷಿ ನಟರಾಜನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ‘ನನ್ನ ಕಕ್ಷಿದಾರರ ನಾಮಪತ್ರ ತಿರಸ್ಕರಿಸುವ ಮೂಲಕ ಆಗಿರುವ ಪ್ರಮಾದಕ್ಕೆ ಪರಿಹಾರ ಕೊಡಬೇಕು. ಇದಕ್ಕಾಗಿ ಸಂವಿಧಾನದ 32ನೇ ವಿಧಿ ಅಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ನ್ಯಾಯಾಲಯ ಮಧ್ಯಪ್ರವೇಶಿಸಬೇಕು’ ಎಂದು ಪೀಠವನ್ನು ಕೋರಿದರು.

ಈ ವಾದವನ್ನು ತಿರಸ್ಕರಿಸಿದ ಪೀಠವು, ‘ಚುನಾವಣಾ ತಕರಾರು ಅರ್ಜಿಗಳ ವಿಚಾರಣೆ ವೇಳೆ, ಸಂವಿಧಾನದ 32 ವಿಧಿಯಡಿ ಸುಪ್ರೀಂ ಕೋರ್ಟ್ ಹೊಂದಿರುವ ಅಧಿಕಾರ ಅಥವಾ 226ನೇ ವಿಧಿ ಅಡಿ ಹೈಕೋರ್ಟ್ ತನಗಿರುವ ಅಧಿಕಾರ ಚಲಾಯಿಸಲು ಪ್ರಯತ್ನಿಸಿದರೆ, ಸಂವಿಧಾನದ 329(ಬಿ) ವಿಧಿಯು ನ್ಯಾಯಾಲಯ ಮಧ್ಯಪ್ರವೇಶಿಸುವುದಕ್ಕೆ ನಿರ್ಬಂಧ ವಿಧಿಸುತ್ತದೆ’ ಎಂದು ಹೇಳಿತು.

ಚುನಾವಣೆಗೆ ಸಂಬಂಧಿಸಿದ ವಿಚಾರಗಳಲ್ಲಿ ನ್ಯಾಯಾಲಯಗಳು ಮಧ್ಯ ಪ್ರವೇಶಿಸುವುದನ್ನು ಸಂವಿಧಾನದ 329ನೇ ವಿಧಿಯು ನಿರ್ಬಂಧಿಸುತ್ತದೆ. ಯಾವುದೇ ನ್ಯಾಯಿಕ ಪ್ರಕ್ರಿಯೆಗಳಿಂದ ಚುನಾವಣೆಗಳು ವಿಳಂಬವಾಗಬಾರದು ಎಂಬುದು ಈ ವಿಧಿಯ ಆಶಯ.

‘ಕನಿಷ್ಠ ಎರಡು ವರ್ಷ ಜೈಲು ಶಿಕ್ಷೆ ವಿಧಿಸಬಹುದಾದಂತಹ ಕ್ರಿಮಿನಲ್ ಪ್ರಕರಣವಿದ್ದಾಗ ಮಾತ್ರ ಅಭ್ಯರ್ಥಿಯು ಆ ಕುರಿತು ನಾಮಪತ್ರದಲ್ಲಿ ಉಲ್ಲೇಖಿಸಬೇಕು. ಈ ಪ್ರಕರಣದಲ್ಲಿ ಅಭ್ಯರ್ಥಿಗೆ ಕೇವಲ ಸಮನ್ಸ್ ನೀಡಲಾಗಿದೆ’ ಎಂದು ಸಿಂಘ್ವಿ ಅವರು ಪೀಠಕ್ಕೆ ತಿಳಿಸಿದರು.

ಆಗ, ‘ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತಗೊಂಡ ಸಂದರ್ಭಗಳಲ್ಲಿ ಈ ನ್ಯಾಯಾಲಯ ಮಧ್ಯಪ್ರವೇಶಿಸಿ ತೀರ್ಪು ನೀಡಿರುವ ಯಾವುದಾದರೂ ಪ್ರಕರಣಗಳು ಇದ್ದಲ್ಲಿ ತೋರಿಸಿ’ ಎಂದು ಪೀಠ ಹೇಳಿತು.

ರಾಜ್ಯಸಭಾ ಚುನಾವಣೆಯಲ್ಲಿ ವಿಜೇತ ಅಭ್ಯರ್ಥಿ ಪರ ಹಿರಿಯ ವಕೀಲ ಮುಕುಲ್ ರೋಹ್ಟಗಿ, ಮಧ್ಯಪ್ರದೇಶ ಸರ್ಕಾರ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಚುನಾವಣಾ ಆಯೋಗದ ಪರ ಹಿರಿಯ ವಕೀಲ ಡಿ.ಎಸ್.ನಾಯ್ಡು ಹಾಜರಿದ್ದರು.

ತೆಲಂಗಾಣದಲ್ಲಿ ತಮ್ಮ ವಿರುದ್ಧ ದಾಖಲಾಗಿದ್ದ ಪ್ರಕರಣ ಕುರಿತು ಮೀನಾಕ್ಷಿ ನಟರಾಜನ್ ಅವರು ಅಫಿಡವಿಟ್‌ನಲ್ಲಿ ಉಲ್ಲೇಖಿಸಿಲ್ಲ ಎಂದು ಬಿಜೆಪಿಯ ಮಹೇಶ್ ಕೇವಟ್ ಅವರು ದೂರು ಸಲ್ಲಿಸಿದ್ದರು. ಈ ದೂರು ಆಧರಿಸಿ ದಾಖಲೆಗಳನ್ನು ಪರಿಶೀಲಿಸಿದ್ದ ಚುನಾವಣಾ ಅಧಿಕಾರಿ ಅರವಿಂದ ಶರ್ಮಾ ಅವರು,‘ಅಪೂರ್ಣ ಅಫಿಡವಿಟ್ ಸಲ್ಲಿಸಲಾಗಿದೆ’ ಎಂದು ಅಭಿಪ್ರಾಯಪಟ್ಟು, ಮೀನಾಕ್ಷಿ ನಟರಾಜನ್ ಅವರ ನಾಮಪತ್ರವನ್ನು ತಿರಸ್ಕರಿಸಿ ಆದೇಶಿಸಿದ್ದರು.

ಬಿಜೆಪಿಯ ಎಲ್ಲ ಮೂರು ಅಭ್ಯರ್ಥಿಗಳು ಗೆದ್ದಿರುವುದಾಗಿ ಘೋಷಿಸಿದ್ದರು.



ಮೀನಾಕ್ಷಿ ನಟರಾಜನ್ ಅವರ ರಾಜ್ಯಸಭೆ ಚುನಾವಣೆಯ ನಾಮಪತ್ರ ತಿರಸ್ಕರಿಸಿರುವುದನ್ನು ಖಂಡಿಸಿ ನವದೆಹಲಿಯಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು ಎಐಸಿಸಿ ಕಚೇರಿಯಿಂದ ರಾಷ್ಟ್ರಪತಿ ಭವನದವರೆಗೆ ತೆರಳುತ್ತಿದ್ದ ವೇಳೆ ಮುಖಂಡರೊಬ್ಬರನ್ನು ಪೊಲೀಸರು ವಶಕ್ಕೆ ಪಡೆದರು — ಪಿಟಿಐ ಚಿತ್ರ

ಸೀಟ್ ಚೋರಿ’ ಆಗಿರುವುದು ಸ್ಪಷ್ಟ: ಮೀನಾಕ್ಷಿ ನಟರಾಜನ್


ಮೀನಾಕ್ಷಿ ನಟರಾಜನ್

‘ಮಧ್ಯಪ್ರದೇಶದಿಂದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ‘ಸೀಟು ಚೋರಿ’ ಆಗಿದೆ ಎಂಬುದು ಪ್ರತಿಯೊಬ್ಬರಿಗೂ ಸ್ಪಷ್ಟವಾಗಿದೆ. ಇದರ ವಿರುದ್ಧ ಹೋರಾಡಲು ನಾವು ಸಿದ್ಧರಾಗಿದ್ದೇವೆ’ ಎಂದು ಕಾಂಗ್ರೆಸ್ ನಾಯಕಿ ಮೀನಾಕ್ಷಿ ನಟರಾಜನ್ ಶುಕ್ರವಾರ ಹೇಳಿದರು.

‘ಸೀಟು ಚೋರಿಯಲ್ಲಿ ಬಿಜೆಪಿ ಮತ್ತು ಚುನಾವಣಾ ಆಯೋಗ ಸ್ನೇಹಿತರಾಗಿವೆ’ ಎಂದು ಅವರು ಆರೋಪಿಸಿದ್ದಾರೆ. ರಾಜ್ಯಸಭೆ ಚುನಾವಣೆ ವೇಳೆ ತಮ್ಮ ನಾಮಪತ್ರ ತಿರಸ್ಕೃತಗೊಂಡಿದ್ದನ್ನು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಜಾ ಗೊಳಿಸಿದ ಬೆನ್ನಲ್ಲೇ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು,‘ಈ ಬೆಳವಣಿಗೆ ಕೇವಲ ನನ್ನ ವೈಯಕ್ತಿಕ ಸೋಲಲ್ಲ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯು ಮೇಲಿಂದ ಮೇಲೆ ಇಂತಹ ಆಘಾತಕ್ಕೀಡಾಗುತ್ತಿರುವುದು ಕಳವಳಕಾರಿ ವಿಚಾರ. ‘ಮುಂದಿನ ನಡೆ ಕುರಿತು ಪಕ್ಷ ತೀರ್ಮಾನಿಸಲಿದೆ. ಜನತಾ ನ್ಯಾಯಾಲಯಕ್ಕೆ ಹೋಗುತ್ತೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪ್ರತಿವಾದಿಯಾಗಿ ಮೀನಾಕ್ಷಿ: ಮನವಿ ತಿರಸ್ಕೃತ

ಹೈದರಾಬಾದ್: ‘ಲೈಂಗಿಕ ಹಿಂಸೆ’ ಹಾಗೂ ಬೆದರಿಕೆ ಆರೋಪಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಎಐಸಿಸಿಯ ತೆಲಂಗಾಣ ಉಸ್ತುವಾರಿ ಮೀನಾಕ್ಷಿ ನಟರಾಜನ್ ಅವರನ್ನು ಪ್ರತಿವಾದಿಯನ್ನಾಗಿ ಹೆಸರಿಸಬೇಕು ಎಂದು ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಇಲ್ಲಿನ ನ್ಯಾಯಾಲಯವೊಂದು ಶುಕ್ರವಾರ ವಜಾಗೊಳಿಸಿದೆ.

ಎ.ಶ್ರೀಲತಾ ಎಂಬುವವರು ಈ ಅರ್ಜಿ ಸಲ್ಲಿಸಿದ್ದರು. ರಾಜ್ಯಸಭೆ ಚುನಾವಣೆ ವೇಳೆ, ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ತಿರಸ್ಕೃತಗೊಳ್ಳಲು ಈ ಪ್ರಕರಣದ ವಿಚಾರವೇ ಕಾರಣವಾಗಿದ್ದಿರಬಹುದು ಎನ್ನಲಾಗುತ್ತಿದೆ.

‘ಕಾಂಗ್ರೆಸ್ ಮುಖಂಡ ಕುಂಭಂ ಶಿವಕುಮಾರ್ ರೆಡ್ಡಿ ನನಗೆ ದೈಹಿಕ ಹಿಂಸೆ ನೀಡಿ, ಜೀವಬೆದರಿಕೆ ಒಡ್ಡಿದ್ದಾರೆ’ ಎಂದು ಶ್ರೀಲತಾ ಆರೋಪಿಸಿದ್ದು, ಇದರ ಆಧಾರದ ಮೇಲೆ ಎಫ್‌ಐಆರ್ ಕೂಡ ದಾಖಲಾಗಿದೆ. ಕಾಂಗ್ರೆಸ್‌ನ ರಾಜ್ಯ ಘಟಕದ ಅಧ್ಯಕ್ಷ ಬಿ.ಮಹೇಶ್ ಕುಮಾರ್ ಗೌಡ್ ಹಾಗೂ ಮೀನಾಕ್ಷಿ ನಟರಾಜನ್ ಅವರನ್ನು ಪ್ರತಿವಾದಿಯನ್ನಾಗಿ ಮಾಡಲಾಗಿತ್ತು.

‘ಈ ಪ್ರಕರಣದಲ್ಲಿ ಶಾಸಕರು ಸೇರಿ ಕೆಲ ಜನಪ್ರತಿನಿಧಿಗಳನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ’ ಎಂದು ಮೀನಾಕ್ಷಿ ನಟರಾಜನ್ ಪರ ವಕೀಲರು ನ್ಯಾಯಾಲಯದ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ನ್ಯಾಯಾಲಯ, ಶ್ರೀಲತಾ ಅವರ ಅರ್ಜಿಯನ್ನು ವಜಾಗೊಳಿಸಿತು.

‘ಮುಂದಿನ ಚುನಾವಣೆ ಈಗಾಗಲೇ ಗೆದ್ದಿದ್ದೇವೆ’

• ಶೆಮಿನ್ ಜಾಯ್


ನವದೆಹಲಿ: ನವದೆಹಲಿ(ಪಿಟಿಐ): ‘ಜನರಲ್ಲಿರುವ ಕೋಪವನ್ನು ಗಮನಿಸಿದರೆ, ಮುಂದಿನ ಸಾರ್ವತ್ರಿಕ ಚುನಾವಣೆಯನ್ನು ಈಗಾಗಲೇ ನಾವು ಗೆದ್ದಿದ್ದೇವೆ. ಆದರೆ, ಮುಖ್ಯ ಸಮಸ್ಯೆ ಏನೆಂದರೆ, ಗೆಲ್ಲಲು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಯುವುದಿಲ್ಲ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಇದೇ ತಿಂಗಳ 8ರಂದು ‘ಇಂಡಿಯಾ’ ಒಕ್ಕೂಟದ ಸಭೆಯಲ್ಲಿಯೇ ಈ ವಿಷಯವನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ.

‘ನಾವು ಒಟ್ಟಾಗಿ ನಿಂತು ಹೋರಾಡಿದರೆ, ಬಿಜೆಪಿಯನ್ನು ಸೋಲಿಸುವುದು ಸುಲಭ. ನಮ್ಮೊಳಗೆ ಯಾವುದೇ ಭಿನ್ನಾಭಿಪ್ರಾಯಕ್ಕೆ ಆಸ್ಪದ ನೀಡಬಾರದು’ ಎಂದು ಅವರು ಕರೆ ನೀಡಿದ್ದಾರೆ.

ಬಿಜೆಪಿ ಪ್ರಚಾರಕ್ಕೆ ಬಲಿಯಾಗಬೇಡಿ:‘ಇಂಡಿಯಾ ಒಕ್ಕೂಟದ ನಡುವೆ ಸಮನ್ವಯವಿಲ್ಲ ಎಂಬ ಬಿಜೆಪಿ ನಡೆಸುತ್ತಿರುವ ಪ್ರಚಾರಕ್ಕೆ ನಾಯಕರು ಬಲಿಯಾಗಬಾರದು. ಒಕ್ಕೂಟದ ಕಲ್ಪನೆಯನ್ನು ಸಮರ್ಥಿಸಲು ಎಲ್ಲರೂ ಒಟ್ಟಿಗೆ ಇರುತ್ತೇವೆ. ಇದರಲ್ಲಿ ಡಿಎಂಕೆ ಕೂಡ ಒಳಗೊಂಡಿರುತ್ತದೆ’ ಎಂದು ರಾಹುಲ್ ಗಾಂಧಿ ತಿಳಿಸಿದ್ದಾರೆ.

‘ಕಾಂಗ್ರೆಸ್ ಪಕ್ಷವು ಎಲ್ಲ ಟೀಕೆಗಳನ್ನು ಸ್ವೀಕರಿಸುತ್ತದೆ. ನಿಮ್ಮೆಲ್ಲರ ಪ್ರೀತಿ ಹಾಗೂ ವಿಶ್ವಾಸದಿಂದ ನಾವು ಮುಂದೆಯೂ ಕೂಡ ಒಗ್ಗಟ್ಟಿನಲ್ಲಿ ಇರಲಿದ್ದೇವೆ’ ಎಂದು ಭರವಸೆ ನೀಡಿದ್ದಾರೆ. ಕಾಂಗ್ರೆಸ್ ಕಾರಣದಿಂದಲೇ ನಿತೀಶ್ ಕುಮಾರ್ ಹಾಗೂ ಜೆಡಿ-ಯು ಮೈತ್ರಿಯಿಂದ ಹೊರನಡೆಯಿತು ಎಂಬ ಆರೋಪವನ್ನು ಅವರು ತಳ್ಳಿಹಾಕಿದ್ದಾರೆ.


ರಾಹುಲ್ ಗಾಂಧಿ

‘ಇಂಡಿಯಾ’ದಲ್ಲಿ ಒಗ್ಗಟ್ಟಿಲ್ಲ ಎಂದು ಬಿಜೆಪಿ ಬಿಂಬಿಸುತ್ತಿದೆ. ಇದು ಸತ್ಯವಲ್ಲ. ರಾಷ್ಟ್ರೀಯ ಮಟ್ಟದಲ್ಲಿ ಜೊತೆಗಿದ್ದರೂ ಕೂಡ ಕೆಲವು ಪಕ್ಷಗಳ ಜೊತೆಗೆ ಭಿನ್ನಾಭಿಪ್ರಾಯ ಹೊಂದಿದ್ದೇವೆ. ಕೇರಳದಲ್ಲಿ ನಾವು ಪಿಣರಾಯಿ ವಿಜಯನ್ ಅವರನ್ನು ಕಟುವಾಗಿ ಟೀಕಿಸಿದ್ದೆವು. ನೀವು ಹೋಗಿ ಅವರನ್ನು ಆಲಂಗಿಸಿಕೊಳ್ಳಿ ಎಂದರೆ ಅದು ಸಾಧ್ಯವಿಲ್ಲ. ನಾವು ಅವರ ಜೊತೆ ರಾಜಕೀಯವಾಗಿ ಹೋರಾಟ ನಡೆಸುತ್ತಿದ್ದೇವೆ’ ಎಂದು ರಾಹುಲ್ ಸ್ಪಷ್ಟಪಡಿಸಿದ್ದಾರೆ.

ನೀಟ್-ಸಿಬಿಎಸ್ ಪರೀಕ್ಷೆ ವಿವಾದಕ್ಕೆ ಸಂಬಂಧಿಸಿ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಕೂಡಲೇ ರಾಜೀನಾಮೆ ನೀಡಬೇಕು. ಎಸ್‌ಐಆರ್ ಪ್ರಕ್ರಿಯೆ ಹಾಗೂ ಮತಕಳ್ಳತನಕ್ಕೆ ಸಂಬಂಧಿಸಿದಂತೆ ಭಾರತದ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರ ಬರೆಯಲು ‘ಇಂಡಿಯಾ’ ಒಕ್ಕೂಟ ಸರ್ವಾನುಮತದಿಂದ ನಿರ್ಣಯ ಕೈಗೊಂಡಿದೆ.

ಬಂಗಾಳ: 4 ಸಾವಿರ ಇವಿಎಂ ಭಸ್ಮ

ಕೋಲ್ಕತ್ತ (ಪಿಟಿಐ): ಇಲ್ಲಿನ ಸರ್ಕಾರಿ ಕಟ್ಟಡಕ್ಕೆ ಬೆಂಕಿ ತಗುಲಿ, ಒಳಗಡೆ ಇರಿಸಲಾಗಿದ್ದ 4 ಸಾವಿರ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳಿಗೆ ಬೆಂಕಿ ತಗುಲಿ ಸುಟ್ಟು ಕರಕಲಾಗಿದೆ. ದುರಂತದ ಹಿಂದೆ ವಿಧ್ವಂಸಕ ಕೃತ್ಯದ ಸಂಚಿನ ಅನುಮಾನವಿದೆ ಎಂದು ಪಶ್ಚಿಮ ಬಂಗಾಳ ಸಚಿವ ಕೌಶಿಕ್ ಚೌಧರಿ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ದಕ್ಷಿಣ ಕೋಲ್ಕತ್ತದ ಅಲಿಪೋರ ಪ್ರದೇಶದಲ್ಲಿರುವ ಒಂಬತ್ತು ಮಹಡಿಯ ಕಟ್ಟಡದ ಒಳಗಡೆ ಬೆಂಕಿ ಕಾಣಿಸಿಕೊಂಡಿದೆ. ಈ ಕಟ್ಟಡದಲ್ಲಿಯೇ ಸರ್ಕಾರದ ಹಲವು ಇಲಾಖೆ, ದಕ್ಷಿಣ 24 ಪರಗಣ ಜಿಲ್ಲೆಯ ಜಿಲ್ಲಾ ಪಂಚಾಯಿತಿ ಕಚೇರಿ ಕೂಡ ಕಾರ್ಯನಿರ್ವಹಿಸುತ್ತಿತ್ತು.

‘ಸುಮಾರು 4 ಸಾವಿರ ಇವಿಎಂಗಳು ಸುಟ್ಟು ಕರಕಲಾಗಿವೆ. ಇದರಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯ 10 ವಿಧಾನಸಭಾ ಕ್ಷೇತ್ರದಲ್ಲಿ ಮತ ಎಣಿಕೆಯ ಇವಿಎಂಗಳು ಕೂಡ ಸೇರಿದ್ದವು’ ಎಂದು ಅಗ್ನಿಶಾಮಕ ಹಾಗೂ ತುರ್ತುಸೇವೆಗಳ ಸಚಿವ ಕೌಶಿಕ್ ಚೌಧರಿ ತಿಳಿಸಿದ್ದಾರೆ.

‘ಇದು ಮಾಮೂಲಿ ಬೆಂಕಿಯಂತೆ ಕಾಣಿಸುತ್ತಿಲ್ಲ. ವಿಧ್ವಂಸಕ ಕೃತ್ಯ ನಡೆದಿದೆಯೇ ಎಂಬುದರ ಕುರಿತು ಪರಿಶೀಲನೆ ನಡೆಸಲಾಗುವುದು. 9 ಹಾಗೂ 10 ಮಹಡಿಯವರೆಗೂ ಬೆಂಕಿ ಹರಡಿದ್ದು ಏಕೆ ಎಂಬುದರ ಕುರಿತು ಸ್ಪಷ್ಟ ಮಾಹಿತಿ ತಿಳಿದಿಲ್ಲ’ ಎಂದು ಹೇಳಿದ್ದಾರೆ.

ನೀಟ್–ಯುಜಿ ಮರುಪರೀಕ್ಷೆಗೆ ಹಲವು ಕ್ರಮ: ಎನ್‌ಟಿಎ

ಹೆಚ್ಚುವರಿ ಪರೀಕ್ಷಾ ಅವಧಿ, ರಫ್‌ಶೀಟ್

ನವದೆಹಲಿ (ಪಿಟಿಐ): ಮುಂಬರಲಿರುವ ‘ನೀಟ್-ಯುಜಿ’ ಮರು ಪರೀಕ್ಷೆಗೆ ಹೆಚ್ಚುವರಿ ‘ರಫ್ ಶೀಟ್’, ಹೆಚ್ಚುವರಿ ಪರೀಕ್ಷಾ ಅವಧಿ ಸೇರಿದಂತೆ ಹಲವು ವಿದ್ಯಾರ್ಥಿ ಸ್ನೇಹಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಪ್ರಕಟಿಸಿದೆ.

ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಇದೇ 21ರಂದು ನಡೆಯಲಿದೆ. ಎನ್‌ಟಿಎ ಪ್ರಕಾರ, ಮಧ್ಯಾಹ್ನ 2 ಗಂಟೆಯಿಂದ ಸಂಜೆ 5.15ರವರೆಗೆ ಪರೀಕ್ಷೆ ನಡೆಯಲಿದ್ದು, ಒಟ್ಟು ಪರೀಕ್ಷಾ ಅವಧಿ 195 ನಿಮಿಷಗಳು. ಈ ಹಿಂದೆ 180 ನಿಮಿಷಗಳಿದ್ದ ಪರೀಕ್ಷಾ ಅವಧಿಯನ್ನು 15 ನಿಮಿಷಗಳ ಕಾಲ ವಿಸ್ತರಿಸಲಾಗಿದೆ.

ಪರೀಕ್ಷೆಯ ಪ್ರಾರಂಭ ಮತ್ತು ಅಂತ್ಯದಲ್ಲಿ ಮೇಲ್ವಿಚಾರಣಾ ಕಾರ್ಯಗಳನ್ನು ನಿರ್ವಹಿಸಲೂ ಈ ಹೆಚ್ಚುವರಿ ಅವಧಿ ಉಪಯುಕ್ತವಾಗಲಿದೆ ಎಂದು ಎನ್‌ಟಿಎ ತಿಳಿಸಿದೆ.

ಹೆಚ್ಚುವರಿ ಎರಡು ‘ರಫ್‌ಶೀಟ್’: ಪರೀಕ್ಷಾರ್ಥಿಗಳಿಗೆ ಪ್ರಶ್ನೆ ಪತ್ರಿಕೆಯಲ್ಲಿ ನೀಡಲಾಗುತ್ತಿದ್ದ ರಫ್ ಶೀಟ್‌ಗಳನ್ನು ಎರಡರಿಂದ ನಾಲ್ಕಕ್ಕೆ ಹೆಚ್ಚಿಸಲಾಗಿದೆ. ಪ್ರಶ್ನೆ ಪತ್ರಿಕೆ ಬುಕ್‌ಲೆಟ್‌ನ ಮೊದಲ ಪುಟದ ನಂತರ ಎರಡು ಹಾಗೂ ಕೊನೆಯಲ್ಲಿ ಎರಡು ರಫ್ ಶೀಟ್‌ಗಳನ್ನು ಒದಗಿಸಲಾಗುತ್ತದೆ. ಅಭ್ಯರ್ಥಿಗಳು ಲೆಕ್ಕ ಮತ್ತು ಇತರ ತಾರ್ಕಿಕ ಕ್ರಿಯೆಗೆ ಹೆಚ್ಚುವರಿ ಸ್ಥಳ ಬಳಸಿಕೊಳ್ಳಬಹುದು ಎಂದು ಎನ್‌ಟಿಎ ವಿವರಿಸಿದೆ.

ಮೊದಲು ಪ್ರಶ್ನೆ ಪತ್ರಿಕೆಯ ಬುಕ್‌ಲೆಟ್ ಕೊನೆಯಲ್ಲಿ ಮಾತ್ರ ಎರಡು ರಫ್‌ಶೀಟ್‌ಗಳನ್ನು ನೀಡಲಾಗುತ್ತಿತ್ತು. ಇದು ಬಲಗೈನಲ್ಲಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಅನುಕೂಲಕರವಾಗಿತ್ತು. ಎಡಗೈ ಪರೀಕ್ಷಾರ್ಥಿಗಳಿಗೆ ರಫ್‌ವರ್ಕ್ ಮಾಡಲು ಕಷ್ಟವಾಗುತ್ತಿತ್ತು. ಈಗ ಆರಂಭದಲ್ಲೂ ಎರಡು ರಫ್‌ಶೀಟ್‌ಗಳನ್ನು ನೀಡುವುದರಿಂದ ಎಡಗೈ ಪರೀಕ್ಷಾರ್ಥಿಗಳಿಗೂ ಉಪಯುಕ್ತವಾಗಲಿದೆ. ಒಟ್ಟಾರೆ ಪರೀಕ್ಷಾರ್ಥಿಗಳಲ್ಲಿ ಶೇ 10ರಷ್ಟು ಎಡಗೈ ಅಭ್ಯರ್ಥಿಗಳಾಗಿದ್ದಾರೆ ಎಂದು ಅದು ತಿಳಿಸಿದೆ.

ಮೇ 3ರಂದು ನಡೆದಿದ್ದ ನೀಟ್-ಯುಜಿ ಪರೀಕ್ಷೆಯನ್ನು ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಮೇರೆಗೆ ಎನ್‌ಟಿಎ ರದ್ದುಪಡಿಸಿತ್ತು. ಈ ಕುರಿತು ಸಿಬಿಐ ತನಿಖೆ ನಡೆಸುತ್ತಿದೆ.

ಏಳು ವಿದ್ಯಾರ್ಥಿಗಳಲ್ಲಿ ಶಿಗೆಲ್ಲಾ ಸೋಂಕು ದೃಢ

ವಯನಾಡ್ (ಪಿಟಿಐ): ಕೇರಳಂನ ವಯನಾಡ್ ಜಿಲ್ಲೆಯ ಶಾಲೆಯೊಂದರ ಏಳು ವಿದ್ಯಾರ್ಥಿಗಳಲ್ಲಿ ಶಿಗೆಲ್ಲಾ ಸೋಂಕು ದೃಢಪಟ್ಟಿದೆ. ಇದರೊಂದಿಗೆ ಸೋಂಕಿತ ಮಕ್ಕಳ ಸಂಖ್ಯೆ 16ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

‘ಸೋಂಕಿತ ಮಕ್ಕಳ ಆರೋಗ್ಯ ಸ್ಥಿತಿ ಸಹಜವಾಗಿದೆ. ಇತರರು ಸೋಂಕಿತರ ಸಂಪರ್ಕಕ್ಕೆ ಬಾರದಂತೆ, ಸೋಂಕು ಹರಡುವಿಕೆ ತಡೆಗೆ ಕ್ರಮ ಕೈಗೊಳ್ಳಲಾಗಿದೆ’ ಎಂದು ಜಿಲ್ಲಾ ವೈದ್ಯಾಧಿಕಾರಿ (ಡಿಎಂಒ) ಡಾ. ಕೆ.ಟಿ.ರೇಖಾ ಅವರು ತಿಳಿಸಿದ್ದಾರೆ.

‘ಜಿಲ್ಲೆಯಾದ್ಯಂತ ಸಾಂಕ್ರಾಮಿಕ ರೋಗಗಳ ಕಣ್ಗಾವಲು, ನಿಯಂತ್ರಣ ಮತ್ತು ಜಾಗೃತಿ ಮೂಡಿಸುವ ಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ’ ಎಂದು ಅವರು ಹೇಳಿದರು.

‘ಲಕ್ಷಣ ಕಂಡುಬಂದ ಕೂಡಲೇ ಆರೋಗ್ಯ ಕಾರ್ಯಕರ್ತರನ್ನು ಸಂಪರ್ಕಿಸಿ, ಸ್ಥಳೀಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬೇಕು. ಇಲಾಖೆ ನೀಡಿರುವ ಮುನ್ನೆಚ್ಚರಿಕೆಗಳನ್ನು ಪಾಲಿಸಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

ಅತಿಸಾರ, ಜ್ವರ, ಹೊಟ್ಟೆ ನೋವು ಲಕ್ಷಣ ಕಾಣಿಸಿಕೊಳ್ಳುತ್ತದೆ. ಕಲುಷಿತ ಆಹಾರ, ನೀರು ಸೇವನೆ ಮತ್ತು ಸೋಂಕಿತರ ಸಂಪರ್ಕದಿಂದ ಹರಡುತ್ತದೆ.

‘ನೈಜ ಟಿಎಂಸಿ ಎಂದು ಮಾನ್ಯತೆ ನೀಡಿ’

ನವದೆಹಲಿ (ಪಿಟಿಐ): ಟಿಎಂಸಿಯ ಭಿನ್ನಮತೀಯ ಸಂಸದರು, ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರನ್ನು ಸೋಮವಾರ ಭೇಟಿ ಮಾಡಿ, ಬಂಡಾಯ ಸಂಸದರ ಗುಂಪನ್ನು ‘ನೈಜ ಟಿಎಂಸಿ’ ಎಂದು ಗುರುತಿಸಿ ಮಾನ್ಯತೆ ನೀಡಬೇಕು ಎಂದು ಮನವಿ ಮಾಡಲಿದ್ದಾರೆ.

‘ಜೂನ್ 8ರಿಂದಲೇ ಸಹಿ ಸಂಗ್ರಹಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ಈವರೆಗೆ 19 ಸಂಸದರು ಸಹಿ ಹಾಕಿದ್ದಾರೆ. ನಮ್ಮ ಬಣಕ್ಕೆ ನೈಜ ಟಿಎಂಸಿ ಎಂಬ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿ ಈಗಾಗಲೇ ಸ್ಪೀಕರ್ ಅವರಿಗೆ ಪತ್ರ ಬರೆದಿದ್ದೇವೆ’ ಎಂದು ಕೂಚ್ ಬಿಹಾರ್ ಕ್ಷೇತ್ರದ ಸಂಸದ ಜಗದೀಶ್ ಚಂದ್ರ ಬರ್ಮಾ ಬಾಸುನಿಯಾ ಅವರು ತಿಳಿಸಿದ್ದಾರೆ.

ಅಭಿಷೇಕ್ ಬ್ಯಾನರ್ಜಿ ಕುರಿತಂತೆ ಟಿಎಂಸಿ ನಾಯಕ ಕಲ್ಯಾಣ್ ಬ್ಯಾನರ್ಜಿ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಬಾಸುನಿಯಾ, ‘ನಾನು ಕಲ್ಯಾಣ್ ಅವರ ಹೇಳಿಕೆಯನ್ನು ಬೆಂಬಲಿಸುತ್ತೇನೆ. ಅವರು ಸರಿಯಾಗಿಯೇ ಹೇಳಿದ್ದಾರೆ’ ಎಂದು ಹೇಳಿದ್ದಾರೆ.

ಬಂಡಾಯ ಸಂಸದರದ್ದು ಎನ್ನಲಾದ ಪತ್ರವು ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಪತ್ರದಲ್ಲಿ ಕಾಕೋಲಿ ಘೋಷ್ ದಸ್ತಿದಾರ್, ಸತಾಬ್ದಿ ರಾಯ್, ಶರ್ಮಿಳಾ ಸರ್ಕಾರ್, ಬಾಸುನಿಯಾ ಮತ್ತು ಅಸಿತ್ ಮಾಲ್ ಅವರ ಹೆಸರುಗಳಿವೆ.

ಸಂಸದೆ ಕಾಕೋಲಿ ಘೋಷ್ ನೇತೃತ್ವದಲ್ಲಿ ಬಂಡಾಯ ಎದ್ದಿರುವ ಸಂಸದರ ಗುಂಪು ಈಗಾಗಲೇ ಎನ್‌ಡಿಎಗೆ ಬೆಂಬಲವನ್ನು ಘೋಷಿಸಿದೆ.

ಅಭಿಷೇಕ್ ಬ್ಯಾನರ್ಜಿಗೆ ಸಿಐಡಿ ನೋಟಿಸ್


ಅಭಿಷೇಕ್ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ಚುನಾವಣಾ ರ‍್ಯಾಲಿಯಲ್ಲಿ ಪ್ರಚೋದನಾಕಾರಿ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಟಿಎಂಸಿ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಅವರಿಗೆ ಸಿಐಡಿ ನೋಟಿಸ್ ನೀಡಿದೆ.

‘ಪಶ್ಚಿಮ ಬಂಗಾಳ ಸಿಐಡಿ ತಂಡವು ಅಭಿಷೇಕ್ ಅವರ ಮನೆಗೆ ತೆರಳಿ ನೋಟಿಸ್ ನೀಡಿದೆ. ಈ ಸಂದರ್ಭದಲ್ಲಿ ಅಭಿಷೇಕ್ ಬ್ಯಾನರ್ಜಿ ನಿವಾಸದಲ್ಲಿ ಇರಲಿಲ್ಲ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕನ ಆಯ್ಕೆಗೆ ಸಂಬಂಧಿಸಿದ ನಕಲಿ ಸಹಿ ಪ್ರಕರಣದಲ್ಲಿ ಅಭಿಷೇಕ್ ಅವರನ್ನು ಸಿಐಡಿ ವಿಚಾರಣೆ ನಡೆಸಿದ ಮರುದಿನವೇ ಈ ಬೆಳವಣಿಗೆ ನಡೆದಿದೆ.

ಕೇರಳಂ: ಭಾರಿ ಮಳೆ ಮುನ್ಸೂಚನೆ

ತಿರುವನಂತಪುರ (ಪಿಟಿಐ): ಕೇರಳಂ ರಾಜ್ಯದ ಹಲವು ಪ್ರದೇಶಗಳಲ್ಲಿ ವಾರಾಂತ್ಯದ ಮೂರು ದಿನ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಶುಕ್ರವಾರ ಮುನ್ಸೂಚನೆ ನೀಡಿದೆ.

ಇದೇ 14ರ ಭಾನುವಾರದವರೆಗೂ ಕಣ್ಣೂರು ಜಿಲ್ಲೆಗೆ ಆರೆಂಜ್ ಅಲರ್ಟ್ ನೀಡಿದ್ದು, ಎಂಟು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಮೂರು ದಿನಗಳ ಕಾಲ ಗುಡುಗು ಮತ್ತು ಮಿಂಚು ಸಹಿತ ಮಳೆ ಸುರಿಯಲಿದೆ. ಗಂಟೆಗೆ ಸುಮಾರು 40ರಿಂದ 50 ಕಿಲೋ ಮೀಟರ್ ವೇಗದಲ್ಲಿ ಗಾಳಿ ಬೀಸಲಿದೆ ಎಂದು ಐಎಂಡಿ ತಿಳಿಸಿದೆ. ಶನಿವಾರ ಬಿರುಗಾಳಿಯ ವೇಗ ಗಂಟೆಗೆ 60 ಕಿಲೋ ಮೀಟರ್ ಮುಟ್ಟುವ ಸಾಧ್ಯತೆ ಇದೆ. ಕೇರಳಂ, ಕರ್ನಾಟಕದ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಐಎಂಡಿ ಮುನ್ನೆಚ್ಚರಿಕೆ ನೀಡಿದೆ.

ವಿಮಾನ ದುರಂತ; ಸಂತ್ರಸ್ತ ಕುಟುಂಬಗಳನ್ನು ಕಾಡುತ್ತಿವೆ ಹಲವು ಪ್ರಶ್ನೆಗಳು

ವರ್ಷ ಕಳೆದರೂ ಪೂರ್ಣಗೊಳ್ಳದ ತನಿಖೆ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನ ದುರಂತ ಸಂಭವಿಸಿ ಒಂದು ವರ್ಷ ಕಳೆದಿದ್ದು, ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳನ್ನು ಇನ್ನೂ ಹಲವು ಪ್ರಶ್ನೆಗಳು ಕಾಡುತ್ತಿವೆ. ‘ವಿಮಾನ ಪತನಕ್ಕೆ ಕಾರಣವೇನು’ ಎಂಬುದನ್ನು ತಿಳಿದುಕೊಳ್ಳಲು ಅವರು ಕಾಯುತ್ತಿದ್ದಾರೆ.

ಕಳೆದ ವರ್ಷ ಜೂನ್ 12ರಂದು ಅಹಮದಾಬಾದ್‌ನಲ್ಲಿ ಸಂಭವಿಸಿದ್ದ ಏರ್ ಇಂಡಿಯಾ ವಿಮಾನ (ಎಐ171) ದುರಂತದಲ್ಲಿ 260 ಮಂದಿ ಪ್ರಾಣ ಕಳೆದುಕೊಂಡಿದ್ದರು. ವಿಮಾನ ಅಪಘಾತ ಸಂಭವಿಸಿ ಗುರುವಾರಕ್ಕೆ ಒಂದು ವರ್ಷ ಪೂರ್ಣಗೊಂಡಿದೆ.

ದುರಂತದ ಬಗ್ಗೆ ತನಿಖೆ ನಡೆಸುತ್ತಿರುವ ವಿಮಾನ ಅಪಘಾತ ತನಿಖಾ ಸಂಸ್ಥೆ(ಎಎಐಬಿ) ಇನ್ನೂ ಅಂತಿಮ ವರದಿ ನೀಡಿಲ್ಲ. ವಿಮಾನದ ಎಂಜಿನ್‌ಗಳು ಮತ್ತು ಅದರ ನಿಯಂತ್ರಣ ವ್ಯವಸ್ಥೆಗಳಿಗೆ ಸಂಬಂಧಿಸಿದ ನಿರ್ಣಾಯಕ ಸಾಕ್ಷ್ಯಗಳನ್ನು ಅಧಿಕಾರಿಗಳು ಪರಿಶೀಲಿಸುತ್ತಿರುವುದರಿಂದ ತನಿಖೆ ವಿಳಂಬವಾಗಿದೆ. ತನಿಖಾಧಿಕಾರಿಗಳು ತನಿಖೆಯ ಪ್ರಗತಿಯ ಕುರಿತ ಮಧ್ಯಂತರ ವರದಿಯನ್ನು ನೀಡುವ ನಿರೀಕ್ಷೆಯಿದ್ದು, 3 ತಿಂಗಳೊಳಗೆ ಅಂತಿಮ ವರದಿ ಬರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ವಿಮಾನ ಪತನಗೊಳ್ಳುವುದಕ್ಕೂ ಮುನ್ನ ಅದರ ಎರಡೂ ಎಂಜಿನ್‌ಗಳಿಗೆ ಇಂಧನ ಪೂರೈಸುವ ಸ್ವಿಚ್‌ಗಳು ಆಫ್ ಆಗಿದ್ದವು ಎಂದು ಎಎಐಬಿ ಕಳೆದ ವರ್ಷ ಬಿಡುಗಡೆ ಮಾಡಿದ್ದ ಪ್ರಾಥಮಿಕ ವರದಿಯು ತಿಳಿಸಿತ್ತು. ವಿಮಾನ ಟೇಕ್–ಆಫ್ ಆದ ಮೂರೇ ಸೆಕೆಂಡ್‌ಗಳಲ್ಲಿ ಎರಡೂ ಎಂಜಿನ್‌ಗಳ ಇಂಧನ ಪೂರೈಕೆ ಸ್ವಿಚ್‌ಗಳು, ಇದ್ದಕ್ಕಿದ್ದಂತೆ ‘ರನ್’ ಮೋಡ್‌ನಿಂದ ‘ಕಟ್‌ಆಫ್’ ಮೋಡ್‌ಗೆ ಬದಲಾಗಿದ್ದವು.

ಆದರೆ, ಇಂಧನ ಪೂರೈಸುವ ಸ್ವಿಚ್‌ಗಳು ಆಫ್ ಆಗಲು ಕಾರಣ ಏನು ಎಂಬುದನ್ನು ಪ್ರಾಥಮಿಕ ವರದಿಯು ಬಹಿರಂಗಪಡಿಸಿರಲಿಲ್ಲ. ತನಿಖೆಯು ದೀರ್ಘವಾಗುತ್ತಲೇ ಇರುವುದರಿಂದ ವಿಮಾನ ದುರಂತದ ಬಗ್ಗೆ ಹಲವು ಊಹಾಪೋಹಗಳೂ ಎದ್ದಿವೆ. ತನಿಖೆಯ ಮಧ್ಯಂತರ ವರದಿ ಬಿಡುಗಡೆ ಮಾಡುವುದಕ್ಕೆ ಭಾರತೀಯ ಪೈಲಟ್‌ಗಳ ಒಕ್ಕೂಟ ವಿರೋಧ ವ್ಯಕ್ತಪಡಿಸಿದೆ. ತನಿಖೆ ಪೂರ್ಣಗೊಳ್ಳುವ ಬದಲು ಮಧ್ಯಂತರ ವರದಿ ಬಿಡುಗಡೆಯಾದರೆ ತಪ್ಪು ವ್ಯಾಖ್ಯಾನಕ್ಕೆ ಕಾರಣವಾಗಬಹುದು ಎಂದಿದೆ.


ಮೃತರ ಕುಟುಂಬ ಸದಸ್ಯರೊಬ್ಬರು ದುರಂತ ಸ್ಥಳದಲ್ಲಿ ಕಣ್ಣೀರಿಟ್ಟಿದ್ದರು —ಎಎಫ್‌ಪಿ ಚಿತ್ರ

ತನಿಖೆಯಲ್ಲಿ ಸಾಕಷ್ಟು ಪ್ರಗತಿ: ಎಎಐಬಿ

ವಿಮಾನ ದುರಂತದ ತನಿಖೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಿದ್ದು, ಪೂರ್ಣ ತನಿಖೆ ಕೊನೆಗೊಂಡ ಬಳಿಕ ಅಂತಿಮ ವರದಿ ಸಲ್ಲಿಸಲಾಗುವುದು ಎಂದು ವಿಮಾನ ಅಪಘಾತ ತನಿಖಾ ಸಂಸ್ಥೆ(ಎಎಐಬಿ) ತಿಳಿಸಿದೆ.

‘ಫ್ಲೈಟ್ ರೆಕಾರ್ಡರ್ ಡೇಟಾ, ಎಂಜಿನ್‌ಗೆ ಸಂಬಂಧಿತ ಘಟಕಗಳು, ನಿರ್ವಹಣೆ ಮತ್ತು ಕಾರ್ಯಾಚರಣೆಯ ದಾಖಲೆಗಳು ಹಾಗೂ ತನಿಖೆಗೆ ಸಂಬಂಧಿಸಿದ ಇತರ ಪುರಾವೆಗಳ ವಿಶ್ಲೇಷಣೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ’ ಎಂದು ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ.

₹300 ಕೋಟಿ ಪರಿಹಾರ ವಿತರಣೆ


ದುರಂತದಲ್ಲಿ ಸಂತ್ರಸ್ತರಾದ ಕುಟುಂಬಗಳಲ್ಲಿ ಶೇ 96ರಷ್ಟು ಕುಟುಂಬಗಳಿಗೆ ತಲಾ ₹25 ಲಕ್ಷ ಪರಿಹಾರ ಪಾವತಿಸಲಾಗಿದೆ ಎಂದು ಏರ್ ಇಂಡಿಯಾ ಹೇಳಿದೆ. ಅಂತಿಮ ಪರಿಹಾರ ಪಾವತಿ ಪ್ರಕ್ರಿಯೆ ಆರಂಭಿಸಿರುವುದಾಗಿಯೂ ತಿಳಿಸಿದೆ.

ಟಾಟಾ ಸನ್ಸ್ ತನ್ನ ಎಐ171 ಸ್ಮಾರಕ ಮತ್ತು ಕಲ್ಯಾಣ ಟ್ರಸ್ಟ್ ಮೂಲಕ ಶೇ 91ರಷ್ಟು ಕುಟುಂಬಗಳಿಗೆ ತಲಾ ₹1 ಕೋಟಿ ಪರಿಹಾರ ನೀಡಿದೆ. ಎರಡೂ ಸಂಸ್ಥೆಗಳು ಒಟ್ಟಾರೆಯಾಗಿ ಸಂತ್ರಸ್ತ ಕುಟುಂಬಗಳಿಗೆ ನೀಡಿದ ಪರಿಹಾರ ಮೊತ್ತ ₹300 ಕೋಟಿ ದಾಟಿದೆ.

ಸಂತ್ರಸ್ತರಿಗೆ ಸೇರಿದ ವಸ್ತುಗಳನ್ನು ಅವರ ಕುಟುಂಬಗಳಿಗೆ ಹಿಂದಿರುಗಿಸುವ ಪ್ರಕ್ರಿಯೆಯನ್ನು ‘ಅತ್ಯಂತ ಗೌರವ, ಘನತೆ ಮತ್ತು ನಿಖರತೆ’ಯೊಂದಿಗೆ ನಡೆಸಲಾಗಿದೆ ಎಂದು ಟಾಟಾ ಸಮೂಹ ತಿಳಿಸಿದೆ. ‘15 ಜನರ ಕುಟುಂಬಗಳು ಮೃತರಿಗೆ ಸೇರಿದ ವಸ್ತುಗಳನ್ನು ತೆಗೆದುಕೊಳ್ಳಲು ನಿರಾಕರಿಸಿವೆ’ ಎಂದು ಹೇಳಿದೆ.

‘ವಿಮಾನದಲ್ಲಿದ್ದ ಪ್ರಯಾಣಿಕರಿಗೆ ಸೇರಿದ 22 ಸಾವಿರಕ್ಕೂ ಹೆಚ್ಚು ವಸ್ತುಗಳನ್ನು ಸಂರಕ್ಷಿಸಿಟ್ಟು, ಅವರ ಕುಟುಂಬಗಳಿಗೆ ಹಿಂದಿರುಗಿಸುವ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ. 139 ಮಂದಿಗೆ ಸೇರಿದ ವಸ್ತುಗಳನ್ನು ಅವರ ಕುಟುಂಬಗಳಿಗೆ ಹಿಂದಿರುಗಿಸುವ ಪ್ರಕ್ರಿಯೆ ಪೂರ್ಣಗೊಂಡಿದೆ’ ಎಂದಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,161
ಇಂದಿನ ಅಂತ್ಯ:	23,622
ದಿನದ ಗರಿಷ್ಠ:	23,645
	461

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹665
12 ಕ್ಕೆ	₹90
ಮೈಸೂರು: 100 ಕ್ಕೆ	₹685

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹264
ಆರ್‌ಎಸ್‌ಎಸ್-5	₹258
ಗುಡ್ ಲಾಟ್	₹224

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹283-699
ದ್ವಿತಳಿ (ಬಿ.ವಿ)	₹458-859

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1580 (1590)
ಸೋಯಾ (ರಿಫೈನ್ಡ್)	₹1480 (1485)
ಸೂರ್ಯಕಾಂತಿ (ರಿಫೈನ್ಡ್)	₹1655 (1670)
ಪಾಮೋಲಿನ್	₹1470 (1465)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹22500
ಎಸಿ	₹14000
ಆರ್‌ಪಿ	₹18250
ಆರ್‌ಸಿ	₹9725

ವಾಹನ ಬೆಲೆ ಶೇ 1.5ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ (ಟಿಎಂಪಿವಿ) ತನ್ನ ಐಸಿಇ, ವಿದ್ಯುತ್‌ಚಾಲಿತ ವಾಹನಗಳು ಸೇರಿದಂತೆ ತನ್ನ ಪ್ರಯಾಣಿಕ ವಾಹನಗಳ ಬೆಲೆಯನ್ನು ಶೇ 1.5ರವರೆಗೆ ಹೆಚ್ಚಿಸಿದೆ.

ಪರಿಷ್ಕೃತ ದರವು ಜುಲೈ 1ರಿಂದ ಜಾರಿಗೆ ಬರಲಿದೆ.

ದರ ಹೆಚ್ಚಳವು ವಾಹನದ ಮಾದರಿ ಮತ್ತು ವೇರಿಯೆಂಟ್‌ಅನ್ನು ಅವಲಂಬಿಸಿರುತ್ತದೆ. ತಯಾರಿಕಾ ವೆಚ್ಚ ಹೆಚ್ಚಳದಿಂದಾಗಿ ವಾಹನ ಬೆಲೆ ಏರಿಕೆ ಮಾಡಲಾಗುತ್ತಿದೆ ಎಂದು ಕಂಪನಿ ಷೇರುಪೇಟೆಗೆ ತಿಳಿಸಿದೆ.

ಅಡಿಕೆ ಧಾರಣೆ

ಕುಮಟಾ		ರಾಶಿ	48699-54100	ಚಾಲಿ	44599-48699
ಚಿಪ್ಪು	30569-34019	ಗೊರಬಲು	19100-43089	ಕೆಂಪುಗೋಟು	23099-34399
ಕೋಕ	17099-33189	**ಸಿದ್ದಾಪುರ**		ರಾಶಿ	50299-53100
ಫ್ಯಾಕ್ಟರಿ	11869-24764	ಬಿಳಿಗೋಟು	26219-34789	**ಯಲ್ಲಾಪುರ**	
ಹಳೆಚಾಲಿ	45099-48498	ಚಾಲಿ	39699-47719	ಆಪಿ	54179-60006
ಹೊಸಚಾಲಿ	40099-47319	ಕೋಕ	22209-32899	ಬಿಳಿಗೋಟು	18812-35972
ಪುತ್ತೂರು		ಕೆಂಪುಗೋಟು	30889-37300	ಚಾಲಿ	37369-48599
ಕೋಕ	20000-33500	ರಾಶಿ	48099-53099	ಕೋಕ	16000-34969
ಹೊಸತು	30000-47000	ತಟ್ಟಿಬೆಟ್ಟೆ	39000-47419	ಕೆಂಪುಗೋಟು	18612-36999
ಶಿವಮೊಗ್ಗ		**ಶಿರಸಿ**		ರಾಶಿ	48899-53889
ಸರಕು	69099-83359	ಬೆಟ್ಟೆ	41600-49299	ತಟ್ಟಿಬೆಟ್ಟೆ	37099-48199
ಬೆಟ್ಟೆ	52009-62000	ಬಿಳಿಗೋಟು	23088-35899		

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹22000-22000
ಬಂಟ್ವಾಳ	₹7000-8000

ಮುಂಬೈ ಧಾರಣೆ (ಶೇಂಗಾ)

12-06-2026	
ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1590 (1600)
ಒಂದು ವಾರದ ಡೆಲಿವರಿ	1585 (1595)
ಪಾಮ್ ವಾರದ ಡೆಲಿವರಿ	1468 (1463)
ಸೂರ್ಯಕಾಂತಿ ಎಣ್ಣೆ ಕಚ್ಚಾ	1575 (1570)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,46,400 (1,44,000)
ಬೆಳ್ಳಿ ಕೆ.ಜಿಗೆ	2,41,500 (2,32,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಾಜ್ಯ ಸರ್ಕಾರ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸಲು ಮುಂದಾಗಿರುವುದು ಸರಿಯೇ?

ಸರಿ ತಪ್ಪು ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

₹9.6 ಲಕ್ಷ ಕೋಟಿ ಸಂಪತ್ತು ವೃದ್ಧಿ

ಮೂರು ತಿಂಗಳ ಬಳಿಕ ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 86.54 ಡಾಲರ್‌ಗೆ ಇಳಿಕೆ



ಮುಂಬೈ / ನವದೆಹಲಿ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಶುಕ್ರವಾರದ ವಹಿವಾಟಿನಲ್ಲಿ ಶೇ 2ಕ್ಕೂ ಹೆಚ್ಚು ಜಿಗಿತ ಕಂಡಿವೆ. ಷೇರುಪೇಟೆ ಸೂಚ್ಯಂಕಗಳ ಏರಿಕೆಯಿಂದ ಹೂಡಿಕೆದಾರರ ಸಂಪತ್ತು ₹9.6 ಲಕ್ಷ ಕೋಟಿಯಷ್ಟು ಏರಿಕೆಯಾಗಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಜತೆಗಿನ ಯುದ್ಧವನ್ನು ಅಂತ್ಯಗೊಳಿಸಲಾಗಿದೆ ಎಂದು ಘೋಷಿಸಿದ್ದರಿಂದ ಕಚ್ಚಾ ತೈಲ ದರ ಇಳಿಕೆಯಾಯಿತು. ಇದರಿಂದ ಷೇರುಗಳ ಖರೀದಿ ಜೋರಾಗಿದ್ದರಿಂದ ಭಾರತ ಸೇರಿದಂತೆ ಜಾಗತಿಕ ಷೇರುಪೇಟೆ ಸೂಚ್ಯಂಕಗಳು ಏರಿಕೆ ದಾಖಲಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,695 ಅಂಶ (ಶೇ 2.30) ಹೆಚ್ಚಳವಾಗಿ, 75,527ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ವೇಳೆ ಸೆನ್ಸೆಕ್ಸ್ 1,775 ಅಂಶ ಜಿಗಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 461 ಅಂಶ (ಶೇ 2) ಏರಿಕೆಯಾಗಿ, 23,622ಕ್ಕೆ ಕೊನೆಗೊಂಡಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಬಜಾಜ್ ಫೈನಾನ್ಸ್, ಲಾರ್ಸನ್ ಆ್ಯಂಡ್ ಟೊಬ್ರೊ, ಇಂಟರ್‌ಗ್ಲೋಬ್ ಏವಿಯೇಷನ್, ಟೈಟನ್, ಎಟರ್ನಲ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಟೆಕ್ ಮಹೀಂದ್ರ ಮತ್ತು ಪವರ್‌ಗ್ರಿಡ್ ಷೇರಿನ ಮೌಲ್ಯದಲ್ಲಿ ಇಳಿಕೆ ಆಗಿದೆ.

ವರದಿ ಸಿದ್ಧಪಡಿಸುವ ಹೊತ್ತಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರ ಶೇ 4.25ರಷ್ಟು ಇಳಿಕೆಯಾಗಿದೆ. ಮೂರು ತಿಂಗಳ ಬಳಿಕ ಪ್ರತಿ ಬ್ಯಾರಲ್ ಬೆಲೆಯು 86.54 ಡಾಲರ್ ಮಟ್ಟಕ್ಕೆ ತಲುಪಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ ಶೇ 4.63, ಜಪಾನ್ ಶೇ 2.81 ಏರಿಕೆ ಕಂಡಿವೆ. ಶಾಂಘೈ ಮತ್ತು ಹಾಂಗ್ ಕಾಂಗ್ ಸಹ ಸಕಾರಾತ್ಮಕ ಬೆಳವಣಿಗೆ ದಾಖಲಿಸಿವೆ.

'ಅಮೆರಿಕ–ಇರಾನ್ ಶಾಂತಿ ಒಪ್ಪಂದ, ಕಚ್ಚಾ ತೈಲ ದರವು 88 ಡಾಲರ್‌ಗಿಂತ ಕೆಳಕ್ಕೆ ಇಳಿದಿರುವುದು, ರೂಪಾಯಿ ಮೌಲ್ಯದಲ್ಲಿನ ಚೇತರಿಕೆ ಸೇರಿದಂತೆ ವಿವಿಧ ಅಂಶಗಳು ಸೂಚ್ಯಂಕಗಳ ಏರಿಕೆಗೆ ಕಾರಣವಾದವು' ಎಂದು ಬಜಾಜ್ ಬ್ರೋಕಿಂಗ್ ರಿಸರ್ಚ್ ಹೇಳಿದೆ.

ರೂಪಾಯಿ ಮೌಲ್ಯ 67 ಪೈಸೆ ಏರಿಕೆ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 67 ಪೈಸೆ ಏರಿಕೆಯಾಗಿದೆ. ವಹಿವಾಟಿನ ಅಂತ್ಯದ ವೇಳೆಗೆ 95.18ಕ್ಕೆ ತಲುಪಿದೆ.



ವಹಿವಾಟಿನ ಆರಂಭದಲ್ಲಿ ರೂಪಾಯಿ ಮೌಲ್ಯವು 95.40 ಆಗಿತ್ತು. ಇದು ವಹಿವಾಟಿನ ಅಂತ್ಯಕ್ಕೆ 95.18 ಆಗಿದೆ. ಗುರುವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 60 ಪೈಸೆ ಇಳಿಕೆಯಾಗಿತ್ತು.

ಚಿನ್ನ ₹3 ಸಾವಿರ, ಬೆಳ್ಳಿ ₹10 ಸಾವಿರ ಹೆಚ್ಚಳ

ದೆಹಲಿಯ ಚಿನಿವಾರ ಪೇಟೆಯಲ್ಲಿ ಶುಕ್ರವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ದರವು ಏರಿಕೆಯಾಗಿದೆ.

ಶೇ 99.9ರಷ್ಟು ಪರಿಶುದ್ಧತೆಯ 10 ಗ್ರಾಂ ಚಿನ್ನದ ದರವು ₹3 ಸಾವಿರ ಹೆಚ್ಚಳವಾಗಿ, ₹1,56,900ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹10 ಸಾವಿರ ಏರಿಕೆಯಾಗಿ, ₹2,55,700 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಮೆರಿಕದ ಅಧಿಕಾರಿಗೆ ಮತ್ತೆ ಸಮನ್ಸ್

ಒಮಾನ್ ಕರಾವಳಿಯಲ್ಲಿ ಭಾರತೀಯ ಸಿಬ್ಬಂದಿ ಇದ್ದ ಹಡಗಿನ ಮೇಲೆ ದಾಳಿ

ನವದೆಹಲಿ / ವಾಷಿಂಗ್ಟನ್ (ಪಿಟಿಐ): ಒಮಾನ್ ಕರಾವಳಿಯಲ್ಲಿ ಒಂದೇ ವಾರದಲ್ಲಿ ಭಾರತೀಯ ಸಿಬ್ಬಂದಿ ಇದ್ದ ಮೂರು ಹಡಗುಗಳ ಮೇಲೆ ಅಮೆರಿಕ ದಾಳಿ ನಡೆಸಿದ್ದನ್ನು ಭಾರತವು ಖಂಡಿಸಿದ್ದು, ಎರಡನೇ ಸಲ ತನ್ನ ಬಲವಾದ ಪ್ರತಿಭಟನೆಯನ್ನು ದಾಖಲಿಸಿದೆ.



ಜಾಸೊನ್ ಮೀಕ್ಸ್

ನವದೆಹಲಿಯಲ್ಲಿರುವ ಅಮೆರಿಕ ವಿದೇಶಾಂಗ ಕಚೇರಿಯ ಉಪ ಮುಖ್ಯಸ್ಥ ಜಾಸೊನ್ ಮೀಕ್ಸ್ ಅವರನ್ನು ಭಾರತದ ವಿದೇಶಾಂಗ ಇಲಾಖೆಯ ಕೇಂದ್ರ ಕಚೇರಿಗೆ ಕರೆಸಿಕೊಂಡು ತನ್ನ ಪ್ರತಿಭಟನೆಯನ್ನು ದಾಖಲಿಸಿತು. ಬುಧವಾರ ರಾತ್ರಿಯೂ ಕೂಡ ಅವರನ್ನು ಕರೆಸಿಕೊಂಡು ಭಾರತ ಸರ್ಕಾರವು ತನ್ನ ಅಸಮಾಧಾನ ವ್ಯಕ್ತಪಡಿಸಿತ್ತು.

'ಭಾರತದ ನಾವಿಕರನ್ನು ಹೊತ್ತೊಯ್ಯುತ್ತಿದ್ದ ಹಡಗುಗಳ ಮೇಲೆ ಅಮೆರಿಕ ನೌಕಾಪಡೆಯು ದಾಳಿ ಮುಂದುವರಿಸಿದ ಕುರಿತು ಬಲವಾದ ಪ್ರತಿಭಟನೆಯನ್ನು ದಾಖಲಿಸಿದ್ದೇವೆ. ಇದು ಈಗಾಗಲೇ ತಪ್ಪಿಸಬಹುದಾಗಿದ್ದ ಮೂರು ಜೀವಗಳ ಪ್ರಾಣಹಾನಿಗೆ ಕಾರಣವಾಗಿದೆ' ಎಂದು ವಿದೇಶಾಂಗ ಇಲಾಖೆ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

'ನಾಗರಿಕ ಹಡಗುಗಳ ಮೇಲೆ ಮಾರಕವಾದ ಬಲಪ್ರಯೋಗ ನಡೆಸುತ್ತಿರುವ ಕುರಿತಂತೆ ತೀವ್ರ ಕಳವಳ ಹೊಂದಿದ್ದೇವೆ. ಇಂತಹ ಕೃತ್ಯಗಳು ಸ್ವೀಕಾರಾರ್ಹವಲ್ಲ. ಅತ್ಯಂತ ಕಠಿಣ ಸಮಯದಲ್ಲಿ, ಸೂಕ್ಷ್ಮ ಪ್ರದೇಶದಲ್ಲಿ ಜನರ ಸುರಕ್ಷತೆ, ಭದ್ರತೆ ಹಾಗೂ ಸ್ಥಿರತೆಯನ್ನು ದುರ್ಬಲಗೊಳಿಸಬಾರದು' ಎಂದು ತಿಳಿಸಿದೆ.

'ಭಾರತ ವ್ಯಕ್ತಪಡಿಸಿರುವ ಕಳವಳವನ್ನು ಸಂಬಂಧಪಟ್ಟ ಅಧಿಕಾರಿಗಳ ಗಹಮನಕ್ಕೆ ತರಲಾಗುವುದು. ಆ ಭಾಗದಲ್ಲಿ ಕಾರ್ಯನಿರ್ವಹಿಸುವ ಅಮೆರಿಕ ಸೇನೆಯ ಸಿಬ್ಬಂದಿಗೂ ಮಾಹಿತಿ ನೀಡಿ, ನಾಗರಿಕರ ಪ್ರಾಣ ಹಾನಿಯಾಗುವುದನ್ನು ತಡೆಯುವ ನಿಟ್ಟಿನಲ್ಲಿ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಜಾಸೊನ್ ಭರವಸೆ ನೀಡಿದ್ದಾರೆ' ಎಂದು ಹೇಳಿದೆ.

'ದಾಳಿಗೆ ತುತ್ತಾದ ಎರಡು ಹಡಗುಗಳು ಅಮೆರಿಕ ಖಜಾನೆಯ ವಿದೇಶಿ ಆಸ್ತಿ ನಿಯಂತ್ರಣ ಕಚೇರಿ (ಒಎಫ್‌ಸಿ) ವ್ಯಾಪ್ತಿಗೆ ಒಳಪಡುತ್ತವೆ. ಈ ಪೈಕಿ ಒಂದು ಹಡಗಿನ ಮೇಲೆ ಯಾವುದೇ ನಿರ್ಬಂಧವಿರಲಿಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ನಿರ್ಬಂಧಕ್ಕೊಳಗಾಗಿರುವ ಇರಾನ್ ಹಾಗೂ ರಷ್ಯಾ ಕಚ್ಚಾತೈಲ ಸಾಗಿಸುವ ಹಡಗಿನ ಮೇಲೆ ಒಎಫ್‌ಸಿ ಸೇನಾ ಕ್ರಮಗಳನ್ನು ತೆಗೆದುಕೊಂಡಿದೆ. ಹಡಗುಗಳ ಮೇಲೆ ದಾಳಿ ನಡೆಸುವ ಬದಲು ರಾಜತಾಂತ್ರಿಕತೆ ಮೂಲಕ ಸಂಘರ್ಷಕ್ಕೆ ಶಾಂತಿಯುತ ಪರಿಹಾರ ಕಂಡುಕೊಳ್ಳಬೇಕು' ಎಂದು ಅಮೆರಿಕಕ್ಕೆ ತಿಳಿಸಿದ್ದೇವೆ' ಎಂದು ಹೇಳಿದ್ದಾರೆ.

ಭಾರತದ ಹಡಗುಗಳ ಮೇಲೆ ಇರಾನ್ ದಾಳಿ: ಹೊರ್ಮುಜ್ ಜಲಸಂಧಿ ದಾಟುತ್ತಿದ್ದ ಭಾರತದ ಹಡಗುಗಳ ಮೇಲೆ ಇರಾನ್ ಡ್ರೋನ್ ದಾಳಿ ಮಾಡಿದೆ ಎಂದು ಶುಕ್ರವಾರ ಆರೋಪಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ಇದು ಸ್ವಲ್ಪವೂ ಸ್ವೀಕಾರಾರ್ಹವಲ್ಲ' ಎಂದು ಕಿಡಿಕಾರಿದ್ದಾರೆ.

ಭಾರತದ ಹಡಗಿನ ಮೇಲೆ ದಾಳಿ; ಇರಾನ್ ಟೀಕೆ

ದುಬೈ (ಪಿಟಿಐ): ಸರಕು ಹಡಗಿನ ಮೇಲೆ ದಾಳಿ ನಡೆಸಿ, ಮೂವರು ನಾವಿಕರ ಸಾವಿಗೆ ಕಾರಣವಾದ ಅಮೆರಿಕದ ದಾಳಿಯನ್ನು ಇರಾನ್ ಖಂಡಿಸಿದೆ. ಇಂತಹ ಕ್ರಮಗಳನ್ನು ಜಾಗತಿಕ ಶಾಂತಿ ಹಾಗೂ ಭದ್ರತೆಗೆ ಅಪಾಯ ಉಂಟು ಮಾಡಲಿವೆ ಎಂದು ತಿಳಿಸಿದೆ.

'ಮೃತ ಭಾರತೀಯ ನಾವಿಕರ ಕುಟುಂಬಗಳಿಗೆ ತೀವ್ರ ಸಂತಾಪ ಸಲ್ಲಿಸುತ್ತೇವೆ' ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಕಾಯ್ ತಿಳಿಸಿದ್ದಾರೆ.

'ಈ ದಾಳಿಗೆ ಅಮೆರಿಕವನ್ನು ಹೊಣೆಗಾರರನ್ನಾಗಿ ಮಾಡಬೇಕು. ಇಂತಹ ದಾಳಿಗಳು ಜಾಗತಿಕ ಶಾಂತಿ ಹಾಗೂ ಭದ್ರತೆಗೆ ಮಾರಕವಾಗಿದ್ದು, ಮುಕ್ತ ನೌಕಾಯಾನಕ್ಕೆ ಅಡ್ಡಿಪಡಿಸಿವೆ' ಎಂದು ತಿಳಿಸಿದ್ದಾರೆ.

ಶಾಂತಿ ಒಪ್ಪಂದ: ಮತ್ತೆ ಅನಿಶ್ಚಿತ

ಒಂದನೇ ಪುಟದಿಂದ...

ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗೊಳಿಸಲು ಅಮೆರಿಕ ಮತ್ತು ಇರಾನ್ ನಡುವಿನ ಶಾಂತಿ ಒಪ್ಪಂದಕ್ಕೆ ಭಾನುವಾರದೊಳಗೆ ಸಹಿ ಹಾಕುವ ನಿರೀಕ್ಷೆ ಇದೆ. ಶನಿವಾರದೊಳಗೆ ಒಪ್ಪಂದದ ಕರಡನ್ನು ಅಂತಿಮಗೊಳಿಸಲು ಉದ್ದೇಶಿಸಲಾಗಿದೆ. ಒಪ್ಪಂದಕ್ಕೆ ಸಹಿ ಹಾಕುವ ಸ್ಥಳ ಇನ್ನೂ ನಿಗದಿಯಾಗಿಲ್ಲ. ಆದರೆ, ಜಿನೀವಾದಲ್ಲಿ ಕಾರ್ಯಕ್ರಮ ನಡೆಯುವ ಸಾಧ್ಯತೆ ಹೆಚ್ಚಾಗಿದೆ ಎಂದು ಈ ಮೊದಲು ಮೂಲಗಳು ತಿಳಿಸಿದ್ದವು.

ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಮತ್ತು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಅವರು ಈ ಒಪ್ಪಂದಕ್ಕೆ ಸಹಿ ಹಾಕುವ ಸಾಧ್ಯತೆ ಇದೆ ಎಂದು ಇವೇ ಮೂಲಗಳು ಹೇಳಿದ್ದವು.

'ಯುದ್ಧ ಅಂತ್ಯ': ಇದಕ್ಕೂ ಮುನ್ನ, 'ಇರಾನ್ ಜತೆಗಿನ ಯುದ್ಧವನ್ನು ಅಂತ್ಯಗೊಳಿಸಲಾಗಿದೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಘೋಷಿಸಿದ್ದರು.

ಇರಾನ್ ಮೇಲೆ ಭೀಕರ ದಾಳಿ ನಡೆಸುವುದಾಗಿ ಹಾಗೂ ತೈಲ ರಫ್ತು ಕೇಂದ್ರವಾದ ಖಾರ್ಗ್ ದ್ವೀಪವನ್ನು ವಶಪಡಿಸಿಕೊಳ್ಳುವುದಾಗಿ ಟ್ರಂಪ್ ಬೆದರಿಕೆ ಹಾಕಿದ್ದರು. ಅದಾದ ಕೆಲವೇ ಗಂಟೆಗಳಲ್ಲಿ, ಇರಾನ್ ಮೇಲಿನ ಸೇನಾ ದಾಳಿಯನ್ನು ಹಿಂಪಡೆದಿದ್ದರು.

ಓವಲ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ್ದ ಟ್ರಂಪ್, 'ಎಂದಿಗೂ ಅಣ್ವಸ್ತ್ರಗಳನ್ನು ಹೊಂದುವುದಿಲ್ಲ ಎಂದು ಇರಾನ್ ಒಪ್ಪಿಕೊಂಡಿದೆ. ಜತೆಗೆ, ಯಾವುದೇ ರೀತಿಯಲ್ಲಿ ಅಣ್ವಸ್ತ್ರ ಖರೀದಿಸುವುದಿಲ್ಲ, ಅಭಿವೃದ್ಧಿಪಡಿಸುವುದಿಲ್ಲ, ರೂಪಿಸುವುದಿಲ್ಲ ಎಂದು ತಿಳಿಸಿದೆ. ಒಟ್ಟಾರೆ ಅದರ ಬಳಿ ಅಣ್ವಸ್ತ್ರ ಇರುವುದಿಲ್ಲ' ಎಂದು ತಿಳಿಸಿದ್ದರು.

'ಇರಾನ್ ಭೀಕರ ಹೊಡೆತ ಅನುಭವಿಸಿದೆ. ನಮಗಿಂತ ಹೆಚ್ಚಾಗಿ ಇರಾನ್ ಈ ಒಪ್ಪಂದ ಮಾಡಿಕೊಳ್ಳಲು ಬಯಸುತ್ತಿದೆ' ಎಂದೂ ಹೇಳಿದ್ದರು.

ಅಮೆರಿಕದ ಜೊತೆಗೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ಮಾತ್ರಕ್ಕೆ ಇಲ್ಲವೇ ಈ ಕುರಿತ ಸಭೆಗೆ ಹಾಜರಾದರೆ ಮುಟ್ಟುಗೋಲು ಹಾಕಿಕೊಳ್ಳಲಾಗಿರುವ ಇರಾನ್‌ನ ನಿಧಿಗಳನ್ನು ಬಿಡುಗಡೆ ಮಾಡುವುದಿಲ್ಲ. ಎಲ್ಲ ಷರತ್ತುಗಳನ್ನು ಈಡೇರಿಸಿದರೆ ಮಾತ್ರ ಇರಾನ್‌ಗೆ ಎಲ್ಲ ಪ್ರಯೋಜನಗಳು ಸಿಗಲಿವೆ ಎಂಬ ರೀತಿಯಲ್ಲಿ ಒಪ್ಪಂದವನ್ನು ರೂಪಿಸಲಾಗಿದೆ ಎಂದು ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಹೇಳಿದ್ದಾರೆ.

> **ಒಪ್ಪಂದ ಕುರಿತಂತೆ ಇರಾನ್ ಹೇಳುತ್ತಿರುವುದಕ್ಕೂ ವಾಸ್ತವವಾಗಿ ಅದು ನಡೆದುಕೊಳ್ಳುತ್ತಿರುವುದಕ್ಕೂ ಸಂಬಂಧವೇ ಇಲ್ಲ. ಅವರು ನಂಬಿಕೆಗೆ ಅರ್ಹರಲ್ಲ**
> **ಡೊನಾಲ್ಡ್ ಟ್ರಂಪ್,** ಅಮೆರಿಕ ಅಧ್ಯಕ್ಷ

> **ಅಮೆರಿಕ–ಇರಾನ್ ನಡುವೆ ಶಾಂತಿ ಒಪ್ಪಂದ ಅಂತಿಮವಾಗಿಲ್ಲ. ಮಾಧ್ಯಮಗಳು ಈ ಕುರಿತು ಕಪೋಲಕಲ್ಪಿತ ಸುದ್ದಿಗಳನ್ನು ಬಿತ್ತರಿಸಬಾರದು**
> **ಅಬ್ಬಾಸ್ ಅರಾಫ್ಚಿ,** ಇರಾನ್ ವಿದೇಶಾಂಗ ಸಚಿವ

ಡೀಸೆಲ್: ದಿನಕ್ಕೆ 200 ಲೀ. ಮಿತಿ

ಒಂದನೇ ಪುಟದಿಂದ...

ರಿಟೇಲ್ ಬಂಕ್‌ಗಳಲ್ಲಿ ಡೀಸೆಲ್ ಅನ್ನು ವಾಹನದ ಇಂಧನ ಟ್ಯಾಂಕ್‌ಗೇ ತುಂಬಿಸುವ ಮೂಲಕ ಮಾರಾಟ ಮಾಡಬೇಕು. ಕ್ಯಾನ್ ಮತ್ತು ಬ್ಯಾರೆಲ್‌ಗಳಲ್ಲಿ ದೊಡ್ಡ ಪ್ರಮಾಣದಲ್ಲಿ ತುಂಬಿಸಿ ಮಾರುವಂತಿಲ್ಲ. ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆ (ಪಿಇಎಸ್‌ಒ) ಅನುಮತಿಸಿದ ಕ್ಯಾನ್‌ನಲ್ಲಿ ಡೀಸೆಲ್ ಖರೀದಿಸಬಹುದು. ಆದರೆ, ಪ್ರತಿ ವಾಹನ ಮತ್ತು ಪ್ರತಿ ಗ್ರಾಹಕನಿಗೆ ದಿನಕ್ಕೆ ಡೀಸೆಲ್ ಮಾರಾಟದ ಮಿತಿ 200 ಲೀ. ಮೀರುವಂತಿಲ್ಲ ಎಂದು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಉಂಟಾಗಿರುವ ತೈಲ ಬಿಕ್ಕಟ್ಟು, ದೇಶದಲ್ಲೂ ಪೆಟ್ರೋಲ್–ಡೀಸೆಲ್ ಪೂರೈಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ. ರಿಟೇಲ್ ಬಂಕ್‌ಗಳಲ್ಲಿ ಇಂಧನ ಲಭ್ಯತೆ ಕೊರತೆಯಾಗದಂತೆ ನೋಡಿಕೊಳ್ಳಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಪೆಟ್ರೋಲಿಯಂ ಸಚಿವಾಲಯ ಹೇಳಿದೆ. ಸದ್ಯದ ಮಟ್ಟಿಗೆ ಪೆಟ್ರೋಲ್ ಖರೀದಿಗೆ ಯಾವುದೇ ಮಿತಿಯನ್ನು ಹೇರಿಲ್ಲ.

ಡೀಸೆಲ್ ಮಾರಾಟ ನಿರ್ಬಂಧ ಉಲ್ಲಂಘನೆಯು ಅಗತ್ಯ ಸರಕುಗಳ ಕಾಯ್ದೆಯಡಿ ಶಿಕ್ಷಾರ್ಹವಾಗಿರುತ್ತದೆ. ಈ ಆದೇಶವನ್ನು ಕಾರ್ಯಗತಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ.

ಇಂಧನ ಮಾರಾಟದಲ್ಲಿ ಅಸಹಜ ಹೆಚ್ಚಳ: ಸದ್ಯ ರಿಟೇಲ್ ಪೆಟ್ರೋಲ್ ಬಂಕ್‌ಗಳಲ್ಲಿ ಡೀಸೆಲ್ ದರ ಪ್ರತಿ ಲೀಟರ್‌ಗೆ ₹95.20 ಇದೆ. ವಾಣಿಜ್ಯ ಉದ್ದೇಶದ ಇಂಧನ ಮಾರಾಟ ಕೇಂದ್ರಗಳಲ್ಲಿ ಈ ದರ ₹134.50 ಇದೆ. ಈ ದರ ವ್ಯತ್ಯಾಸದಿಂದ ಕೈಗಾರಿಕೆ, ವಾಣಿಜ್ಯ, ಸಗಟು ಖರೀದಿದಾರರು ರಿಟೇಲ್ ಬಂಕ್‌ಗಳಿಂದಲೇ ದೊಡ್ಡ ಪ್ರಮಾಣದಲ್ಲಿ ಇಂಧನ ಖರೀದಿಸಿ, ದಾಸ್ತಾನು ಮಾಡುತ್ತಿವೆ. ಇದರಿಂದ ಇತ್ತೀಚೆಗೆ ಇಂಧನ ಮಾರಾಟದಲ್ಲಿ ಅಸಹಜ ಹೆಚ್ಚಳ ಕಂಡು ಬಂದಿದೆ ಎಂದು ಸಚಿವಾಲಯ ತಿಳಿಸಿದೆ. ವಾಣಿಜ್ಯ ಬಳಕೆದಾರರು, ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ಗಳು ಕೂಡ ರಿಟೇಲ್ ಬಂಕ್‌ಗಳಿಂದ ಇಂಧನ ಖರೀದಿಸುತ್ತಿರುವುದನ್ನು ಸಚಿವಾಲಯ ಗಮನಿಸಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ (ಪಿಎಸ್‌ಯು) ಪೆಟ್ರೋಲ್ ಬಂಕ್‌ಗಳಲ್ಲಿನ ದರಕ್ಕೂ ಖಾಸಗಿ ಕಂಪನಿಗಳ ಬಂಕ್‌ಗಳ ಇಂಧನ ದರಕ್ಕೂ ವ್ಯತ್ಯಾಸವಿದೆ. ಹೀಗಾಗಿ ಪಶ್ಚಿಮ ಏಷ್ಯಾ ಸಂಘರ್ಷದ ಬೆನ್ನಲ್ಲೇ, ಪಿಎಸ್‌ಯು ಬಂಕ್‌ಗಳಿಂದ ಇಂಧನ ಖರೀದಿಸುವುದು ಭಾರಿ ಪ್ರಮಾಣದಲ್ಲಿ ಹೆಚ್ಚಿದೆ. ಮೇ ತಿಂಗಳಿನಲ್ಲಿ ಐಒಸಿ, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಬಂಕ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟವು ಕ್ರಮವಾಗಿ ಶೇ 4.8 ಮತ್ತು ಶೇ 6.4ರಷ್ಟು ಹೆಚ್ಚಳವಾಗಿದೆ.

ಜಾಗತಿಕ ಮಟ್ಟದಲ್ಲಿ ಇಂಧನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಸ್ಥಳೀಯ ಮಾರುಕಟ್ಟೆಯಲ್ಲಿ ಕೊರತೆ ಆಗದಂತೆ ಈ ನಿರ್ಬಂಧ ಹೇರಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

'ಇಂಧನ ಟ್ಯಾಂಕ್ ಸಾಮರ್ಥ್ಯದಷ್ಟು ಡೀಸೆಲ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರವು ಬ್ಯಾರಲ್ ಅಥವಾ ಟ್ಯಾಂಕ್‌ಗಳಲ್ಲಿ ಪೆಟ್ರೋಲ್, ಡೀಸೆಲ್ ಹಾಕದಂತೆ ರಿಟೇಲ್ ಮಳಿಗೆಗಳಿಗೆ ಸೂಚಿಸಿದೆ. ಆದರೆ, ವಾಹನಗಳ ಇಂಧನ ಟ್ಯಾಂಕ್‌ನ ಸಾಮರ್ಥ್ಯಕ್ಕೆ ತಕ್ಕಷ್ಟು ಇಂಧನ ಹಾಕಬಹುದಾಗಿದೆ' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಮಾಜಿ ಅಧ್ಯಕ್ಷ ಎಂ.ಜಿ.ಬಾಲಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

'ಕೆಲವು ವಾಹನಗಳು 600 ಲೀಟರ್ ಸಾಮರ್ಥ್ಯದ ಇಂಧನ ಟ್ಯಾಂಕ್ ಹೊಂದಿವೆ. ಆಗ ಸರ್ಕಾರದ ಮಾನದಂಡ ಪಾಲಿಸಿದರೆ ವಾಹನದ ಟ್ಯಾಂಕ್ ಅರ್ಧದಷ್ಟು ಕೂಡ ತುಂಬುವುದಿಲ್ಲ. ಇದರಿಂದ ವಾಹನಗಳ ಚಾಲನೆಗೆ ತೊಂದರೆ ಆಗಲಿದೆ. ಸರ್ಕಾರವು ದುರ್ಬಳಕೆ ತಪ್ಪಿಸುವ ಮತ್ತು ರಿಟೇಲ್ ಮಾರುಕಟ್ಟೆಯಲ್ಲಿ ಇಂಧನ ಕೊರತೆ ಆಗದಂತೆ ನೋಡಿಕೊಳ್ಳುವ ಉದ್ದೇಶ ಹೊಂದಿದೆ' ಎಂದು ಹೇಳಿದರು.

ಪಶ್ಚಿಮ ಏಷ್ಯಾ ಬಿಕ್ಕಟ್ಟು ಆರಂಭವಾದ ಬಳಿಕ ಕಂಪನಿಗಳು ಇಂಧನವನ್ನು ಮಾರುಕಟ್ಟೆ ದರದಲ್ಲಿ ಮಾರಾಟ ಮಾಡುವಂತೆ ಸೂಚಿಸಿದ್ದರಿಂದ ಇಂಧನದ ಬೆಲೆಯಲ್ಲಿ ಏರಿಕೆಯಾಗಿದೆ. ಹೀಗಾಗಿ, ವಾಣಿಜ್ಯ ಬಳಕೆದಾರರು ರಿಟೇಲ್ ಮಳಿಗೆಗಳಲ್ಲಿ ಇಂಧನ ಖರೀದಿಸಲು ಮುಂದಾಗಿದ್ದಾರೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ರಿಟೇಲ್ ಮಳಿಗೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಇಂಧನ ಮಾರಾಟ ಮಾಡದಂತೆ ಸೂಚನೆ ನೀಡಿದೆ. ಇದರಿಂದ ಕೃಷಿ ಚಟುವಟಿಕೆ, ಕೈಗಾರಿಕೆಗಳಲ್ಲಿ ಜನರೇಟರ್ ಸೇರಿದಂತೆ ಇತರೆ ಅಗತ್ಯಗಳಿಗೆ ತೊಂದರೆ ಆಗುತ್ತದೆ. ಹೀಗಾಗಿ, ಅಲ್ಪ ಪ್ರಮಾಣದಲ್ಲಾದರೂ ವಾಣಿಜ್ಯ ಉದ್ದೇಶಕ್ಕೆ ಇಂಧನ ಮಾರಾಟಕ್ಕೆ ಅನುಮತಿ ನೀಡಬೇಕು ಎಂದು ಬಾಲಕೃಷ್ಣ ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಸುದ್ದಿ 2 ನಿಮಿಷ

ಚಿಲ್ಲರೆ ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ದರವು ಮೇ ತಿಂಗಳಿನಲ್ಲಿ ಶೇ 3.93ಕ್ಕೆ ಏರಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಅಂಕಿ–ಅಂಶ ತಿಳಿಸಿದೆ.

ಏಪ್ರಿಲ್ ತಿಂಗಳಿನಲ್ಲಿ ಹಣದುಬ್ಬರವು ಶೇ 3.48ರಷ್ಟು ದಾಖಲಾಗಿತ್ತು. ಏಪ್ರಿಲ್‌ನಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆ ಶೇ 4.2ರಷ್ಟಿತ್ತು. ಇದು ಮೇ ತಿಂಗಳಿನಲ್ಲಿ ಶೇ 4.78ರಷ್ಟಕ್ಕೆ ಏರಿಕೆಯಾಗಿದೆ.

ಚಿನ್ನಾಭರಣ, ಟೊಮೆಟೊ, ಶುಂಠಿ, ಒಣದ್ರಾಕ್ಷಿ ಬೆಲೆಯಲ್ಲಿ ಹೆಚ್ಚು ಏರಿಕೆಯಾಗಿದೆ. ಆಲೂಗೆಡ್ಡೆ, ಬಟಾಣಿ ಬೆಲೆಯಲ್ಲಿ ಇಳಿಕೆ ಆಗಿದೆ.

ಮೇ ತಿಂಗಳಿನಲ್ಲೂ ಚಿಲ್ಲರೆ ಹಣದುಬ್ಬರ ದರವು ಶೇ 4ರೊಳಗೆ ಇದೆ. ಕಳೆದ ವಾರ ಆರ್‌ಬಿಐ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ದರದ ಅಂದಾಜನ್ನು ಶೇ 4.6ರಿಂದ ಶೇ 5.1ಕ್ಕೆ ಹೆಚ್ಚಿಸಿದೆ.

ಮೇ ತಿಂಗಳಿನಿಂದ ರಿಟೇಲ್ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರವು ಕ್ರಮವಾಗಿ ಶೇ 7.4 ಮತ್ತು ಶೇ 8.4ರಷ್ಟು ಹೆಚ್ಚಳವಾಗಿದೆ.

ನಗರ ಪ್ರದೇಶದಲ್ಲಿ ಹಣದುಬ್ಬರವು ಶೇ 3.93 ಮತ್ತು ಗ್ರಾಮೀಣ ಪ್ರದೇಶದಲ್ಲಿ ಶೇ 4.25ರಷ್ಟಿದೆ. ರಾಜ್ಯಗಳ ಪೈಕಿ, ತೆಲಂಗಾಣದಲ್ಲಿ ಹಣದುಬ್ಬರ ಅತಿಹೆಚ್ಚು ಶೇ 6.15ರಷ್ಟು ದಾಖಲಾಗಿದ್ದರೆ, ಮಿಜೋರಾಂನಲ್ಲಿ ಶೇ 1.03ರಷ್ಟು ಕಡಿಮೆ ಇದೆ ಎಂದು ತಿಳಿಸಿದೆ.



'ರಾಜಿ ಮಾಡಿಕೊಂಡ ಪ್ರಧಾನಿ'

ನವದೆಹಲಿ (ಪಿಟಿಐ): ಕಚ್ಚಾತೈಲ ಸಾಗಿಸುತ್ತಿದ್ದ ಹಡಗಿನ ಮೇಲೆ ಅಮೆರಿಕ ಸೇನೆಯು ನಡೆಸಿದ ದಾಳಿಯಿಂದ ಭಾರತದ ಮೂವರು ನಾವಿಕರು ಮೃತಪಟ್ಟ ಬೆನ್ನಲ್ಲೇ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕಿಡಿಕಾರಿದ್ದಾರೆ.

'ರಾಜಿ ಮಾಡಿಕೊಂಡ ಪ್ರಧಾನಿಯಿಂದ ಭಾರತಮಾತೆಯ ಮಕ್ಕಳನ್ನು ರಕ್ಷಿಸಲು ಸಾಧ್ಯವಿಲ್ಲ. ಜೀವ ತೆಗೆದವರ ವಿರುದ್ಧ ಪ್ರತಿಭಟನೆ ದಾಖಲಿಸುವ ಶಕ್ತಿಯೂ ಅವರಿಗಿಲ್ಲ' ಎಂದು ಹೇಳಿದ್ದಾರೆ.

'ಈ ವಿಚಾರದಲ್ಲಿ ಪ್ರಧಾನಿ ಮೋದಿ ಅವರು ಇದುವರೆಗೂ ಒಂದು ಪದಗಳನ್ನು ಆಡಿಲ್ಲ. ವಿದೇಶಿ ಶಕ್ತಿಗಳು ಭಾರತೀಯರನ್ನು ಕೊಲೆ ಮಾಡಿದಾಗ, ಭಾರತದ ಪ್ರಧಾನಿಯೂ ಮಾತನಾಡಬೇಕಾಗುತ್ತದೆ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕರು ಆಗಿರುವ ರಾಹುಲ್ ನೆನಪಿಸಿದ್ದಾರೆ.

ಮತ್ತೆ ರಸಗೊಬ್ಬರ ಅಭಾವ

ಒಂದನೇ ಪುಟದಿಂದ...

'ಏಪ್ರಿಲ್ 1ರ ಅಂತ್ಯಕ್ಕೆ ಈ ಹಿಂದಿನ ಬಾಕಿ 11.54 ಟನ್ ರಸಗೊಬ್ಬರ ದಾಸ್ತಾನಿದೆ. ಸದ್ಯ ಬೇಡಿಕೆಗೆ ತಕ್ಕಂತೆ ದಾಸ್ತಾನು ಇರುವುದರಿಂದ ರೈತರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ರಸಗೊಬ್ಬರವನ್ನು ಸಮರ್ಪಕವಾಗಿ ಬಳಸಬೇಕು ಅಷ್ಟೆ. ಕಡಿಮೆ ಪ್ರಮಾಣದಲ್ಲಿ ರಸಗೊಬ್ಬರ ಬಳಸುವಂತೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ' ಎಂದು ಕೃಷಿ ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಯೂರಿಯಾ ಗೊಬ್ಬರವನ್ನು ಅನಗತ್ಯವಾಗಿ ಮಾರಾಟ ಮಾಡದೇ, 'ಕೆ-ಕಿಸಾನ್' ತಂತ್ರಾಂಶ ಹಾಗೂ ರೈತರ ಎಫ್‌ಐಡಿ ಸಂಖ್ಯೆ ಮೂಲಕವೇ ವಿತರಿಸಬೇಕು ಎಂದು ಸೂಚನೆ ನೀಡಲಾಗಿದೆ. 2026- 27ನೇ ಸಾಲಿನ ಮುಂಗಾರು ಹಂಗಾಮಿನಿಂದ ಈ ನಿಯಮ ಜಾರಿಗೆ ಬಂದಿದೆ. ಎಲ್ಲ ರೈತರು 'ಫಾರ್ಮರ್ ಐಡಿ' ಹೊಂದಿರುವುದು ಅನಿವಾರ್ಯ. ರಸಗೊಬ್ಬರ ವಿತರಣೆಯಲ್ಲಿ ಪಾರದರ್ಶಕತೆ ತರಲು ಹಾಗೂ ಅಕ್ರಮ ಮತ್ತು ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಅವರು ತಿಳಿಸಿದರು.

'ಈ ಹೊಸ ನಿಯಮದಂತೆ, ರೈತರಿಗೆ ಅವರ ಜಮೀನಿನ ವಿಸ್ತೀರ್ಣ ಹಾಗೂ ಬೆಳೆದಿರುವ ಬೆಳೆಗಳಿಗೆ ಅನುಗುಣವಾಗಿ ಅಗತ್ಯವಿರುವಷ್ಟು ಮಾತ್ರ ರಸಗೊಬ್ಬರ ವಿತರಿಸಲಾಗುತ್ತದೆ. ಈ ಪ್ರಕ್ರಿಯೆ ಸಂಪೂರ್ಣವಾಗಿ `ಕೆ-ಕಿಸಾನ್" ತಂತ್ರಾಂಶದ ಮೂಲಕ ನಡೆಯಲಿದೆ. ರೈತರು ಜಮೀನು ವಿವರ, ಬೆಳೆ ಮಾಹಿತಿ ಹಾಗೂ ಅಗತ್ಯ ಗೊಬ್ಬರ ಪ್ರಮಾಣವನ್ನು ಈ ತಂತ್ರಾಂಶದಲ್ಲಿ ದಾಖಲಿಸಿ, ಅದಕ್ಕೆ ಅನುಗುಣವಾಗಿ ಗೊಬ್ಬರ ಪಡೆಯಬಹುದು. ಇದರಿಂದ ಗೊಬ್ಬರದ ದುರುಪಯೋಗ ಹಾಗೂ ಕೃಷಿಯೇತರ ಬಳಕೆಗೆ ಕಡಿವಾಣ ಬೀಳಲಿದೆ' ಎಂದರು.

ಫಾರ್ಮರ್ ಐ.ಡಿ ಪಡೆಯುವುದು ಹೇಗೆ?

ರೈತರು ಪಹಣಿ ಪತ್ರ, ಆಧಾರ್ ಕಾರ್ಡ್ ಹಾಗೂ ಬ್ಯಾಂಕ್ ಪಾಸ್‌ಬುಕ್‌ನೊಂದಿಗೆ ಹತ್ತಿರದ ರೈತ ಸಂಪರ್ಕ ಕೇಂದ್ರ, ಅಥವಾ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿ ಫಾರ್ಮರ್ ಐ.ಡಿ ಪಡೆಯಬಹುದು.

'ರೈತರು ತಮ್ಮ ಜಮೀನುಗಳ ಸರ್ವೆ ನಂಬರ್‌ಗಳನ್ನು ಫಾರ್ಮರ್ ಐ.ಡಿಗೆ ಜೋಡಣೆ ಮಾಡಿಸಿಕೊಳ್ಳಬೇಕು, ಅದಾದ ಬಳಿಕ ಮಾತ್ರ ರೈತರಿಗೆ ಪೂರ್ಣ ಪ್ರಮಾಣದ ರಸಗೊಬ್ಬರ ದೊರೆಯಲಿದೆ. ಈ ಕ್ರಮದಿಂದ ರೈತರ ಹೆಸರಿನಲ್ಲಿ ಬೇರೆಯವರು ಗೊಬ್ಬರ ಖರೀದಿಸುವ ಅಕ್ರಮ ತಡೆಯಬಹುದು. ಫಾರ್ಮರ್ ಐ.ಡಿ ಸಂಖ್ಯೆಯನ್ನು 'ಕೆ-ಕಿಸಾನ್' ತಂತ್ರಾಂಶದಲ್ಲಿ ದಾಖಲಿಸಿ ಗೊಬ್ಬರ ಮಾರಾಟ ಮಾಡಬೇಕು ಮಾರಾಟಗಾರರಿಗೆ ಸೂಚನೆ ನೀಡಲಾಗಿದೆ. ನಿಯಮ ಉಲ್ಲಂಘಿಸಿದರೆ, ಹೆಚ್ಚಿನ ಬೆಲೆಗೆ ಮಾರಾಟ ಮಾಡಿದರೆ ಅಥವಾ ಕೃಷಿಯೇತರ ಉದ್ದೇಶಕ್ಕೆ ಗೊಬ್ಬರ ನೀಡಿದರೆ ಅಂತಹ ಮಾರಾಟಗಾರರ ಪರವಾನಗಿ ರದ್ದುಗೊಳಿಸಲಾಗುವುದೆಂದು ಎಚ್ಚರಿಕೆ ನೀಡಲಾಗಿದೆ' ಎಂದೂ ಕೃಷಿ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಹೊರ್ಮುಜ್ ನಿಯಂತ್ರಣ ಬಿಟ್ಟುಕೊಡುವುದಿಲ್ಲ: ಇರಾನ್

ಟೆಹರಾನ್ (ಎಎಫ್‌ಪಿ) : ಹೊರ್ಮುಜ್ ಜಲಸಂಧಿಯ ಮೇಲಿನ ನಿಯಂತ್ರಣವನ್ನು ಬಿಟ್ಟುಕೊಡುವುದಿಲ್ಲ. ಅಮೆರಿಕದೊಂದಿಗಿನ ಶಾಂತಿ ಒಪ್ಪಂದದ ಕರಡು ಪ್ರತಿಯಲ್ಲೂ ಈ ಬಗ್ಗೆ ಪ್ರಸ್ತಾಪಿಸಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿದೆ.

'ಅಮೆರಿಕ ಮತ್ತು ಇಸ್ರೇಲ್‌ನ ಸೇನಾ ದಾಳಿಗಿಂತ ಮೊದಲು ಇದ್ದ ಪರಿಸ್ಥಿತಿಯ ಪುನರ್‌ಸ್ಥಾಪನೆ ಅಥವಾ ಜಲಸಂಧಿಯ ನಿರ್ವಹಣೆಯನ್ನು ಬಿಟ್ಟುಕೊಡುವ ಅಂಶಗಳನ್ನು ಕರಡು ಪ್ರತಿಯಲ್ಲಿ ಇರಾನ್ ಸೇರಿಸಿಲ್ಲ' ಎಂದು ಪ್ರಸ್ತುತ ಅಂತಿಮಗೊಳ್ಳುತ್ತಿರುವ ಕರಡನ್ನು ಉಲ್ಲೇಖಿಸಿ ಇಸ್ಲಾಮಿಕ್ ರಿಪಬ್ಲಿಕ್ ನ್ಯೂಸ್ ಏಜೆನ್ಸಿ (ಐಆರ್‌ಎನ್‌ಎ) ವರದಿ ಮಾಡಿದೆ.

'ಇಸ್ಲಾಮಿಕ್ ಗಣರಾಜ್ಯದ ಮೂಲಭೂತ ತತ್ವಗಳ ಚೌಕಟ್ಟಿನೊಳಗೆ ಮಾತ್ರ ಪರಮಾಣು ಕಾರ್ಯಕ್ರಮದ ಬಗ್ಗೆ ಮಾತುಕತೆ ನಡೆಸುತ್ತದೆ. ಸಮೃದ್ಧೀಕರಿಸಿದ ಯುರೇನಿಯಂ ಹಕ್ಕನ್ನು ತನ್ನಲ್ಲೇ ಉಳಿಸಿಕೊಳ್ಳುವ ಅಂಶವನ್ನು ಅಂತಿಮ ಒಪ್ಪಂದದಲ್ಲಿ ಸೇರಿಸಲು ಇರಾನ್ ಆದ್ಯತೆ ನೀಡುತ್ತದೆ' ಎಂದು ಹೇಳಿದೆ.

ಫೆಬ್ರುವರಿ 28ರಂದು ಅಮೆರಿಕ ಮತ್ತು ಇಸ್ರೇಲ್‌ನೊಂದಿಗೆ ಯುದ್ಧ ಆರಂಭವಾದಾಗಿನಿಂದ, ಹೊರ್ಮುಜ್ ಜಲಸಂಧಿಯ ಮೇಲೆ ಇರಾನ್ ನಿಯಂತ್ರಣ ಸಾಧಿಸಿದೆ. ಈ ಮಾರ್ಗದ ಮೂಲಕ ಹಡಗುಗಳು ಹಾದು ಹೋಗಬೇಕಾದರೆ ಸೇನೆಯ ಒಪ್ಪಿಗೆ ಪಡೆಯಬೇಕು ಎಂದು ಇರಾನ್ ಹೇಳಿತ್ತು.

'ಶಾಂತಿ ಒಪ್ಪಂದದ ಕರಡನ್ನು ಅಂತಿಮಗೊಳಿಸಲಾಗುತ್ತಿದೆ' ಎಂದು ಇರಾನ್‌ನ ಸಮಾಲೋಚನಾ ತಂಡದವರ ಮೂಲವನ್ನು ಉಲ್ಲೇಖಿಸಿ 'ಮೆಹರ್' ಸುದ್ದಿ ಸಂಸ್ಥೆ ವರದಿ ಮಾಡಿದೆ.

ಗಾಲ್ಫ್: ಜಂಟಿ ಅಗ್ರಸ್ಥಾನದಲ್ಲಿ ಅನ್ವಿತಾ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರು ಆಟಗಾರ್ತಿ ಅನ್ವಿತಾ ನರೇಂದ್ರ ಅವರು ಜಯ ಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಅಂಗಳದಲ್ಲಿ ನಡೆಯುತ್ತಿರುವ 'ಹೀರೊ ಮಹಿಳಾ ವೃತ್ತಿಪರ ಗಾಲ್ಫ್ ಟೂರ್ನಿ'ಯ 2ನೇ ದಿನವಾದ ಶುಕ್ರವಾರದ ಅಂತ್ಯಕ್ಕೆ ಜಂಟಿ ಅಗ್ರಸ್ಥಾನಕ್ಕೆ ಏರಿದರು.



ಬೆಂಗಳೂರಿನ ಅನ್ವಿತಾ ನರೇಂದರ್ ಆಟದ ವೈಖರಿ

ಚಿತ್ರ: ಅನೂಪ್ ರಾಘ ಟಿ.

19 ವರ್ಷ ವಯಸ್ಸಿನ ಅನ್ವಿತಾ 2ನೇ ಸುತ್ತಿನಲ್ಲಿ 68 ಸ್ಟ್ರೋಕ್‌ಗಳೊಂದಿಗೆ ಉತ್ತಮ ಪ್ರದರ್ಶನದ ಮೂಲಕ ಪುಟಿದೆದ್ದರು. ಅವರಿಗೆ ಅಮೆಚೂರ್ ಆಟಗಾರ್ತಿ ಅನನ್ಯಾ ಸೂದ್ ಹಾಗೂ ಗುರುಗ್ರಾಮದ ರಿಯಾ ಜಾದನ್ ಪೈಪೋಟಿ ಒಡ್ಡಿದ್ದು, ಒಟ್ಟು 140 ಸ್ಕೋರ್‌ನೊಂದಿಗೆ ಮೂವರು ಅಗ್ರಸ್ಥಾನ ಹಂಚಿಕೊಂಡರು.

ಸ್ಥಳೀಯ ಆಟಗಾರ್ತಿ ವಿಧಾತ್ರಿ ಅರಸ್ 142 ಸ್ಕೋರ್‌ನೊಂದಿಗೆ ಅಮನ್‌ದೀಪ್ ಡ್ರಾಲ್ ಹಾಗೂ ದುರ್ಗಾ ನಿಟ್ಟೂರ್ ಅವರೊಂದಿಗೆ 4ನೇ ಸ್ಥಾನ ಹಂಚಿಕೊಂಡರು. ಶನಿವಾರ (ಜೂನ್ 13) ಅಂತಿಮ ಸುತ್ತಿನ ಸ್ಪರ್ಧೆ ನಡೆಯಲಿದೆ.



ವೋಟ್ ಮಾಡಿ

ನಿಮ್ಮ ನೆಚ್ಚಿನ ನಟ, ನಟಿ, ಸಿನಿಮಾ ಹಾಗೂ ಹಾಡಿಗೆ ವೋಟ್ ಮಾಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ



ಸಂದೇಶ ಸಾರುವ ಗಟ್ಟಿ ಕಥೆಯ ಚಿತ್ರಗಳು

4ನೇ ಆವೃತ್ತಿ ಜೂನ್ 19ಕ್ಕೆ

ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳನ್ನು, ನಾಮನಿರ್ದೇಶನಗೊಂಡ ಸಿನಿಮಾಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ–ಸಂಸ್ಥೆಗಳ ಒಂದು ಸಾವಿರಕ್ಕೂ ಅಧಿಕ ಸದಸ್ಯರು ವೋಟ್ ಮಾಡುವ ಮುಖಾಂತರ ಆಯ್ಕೆ ಮಾಡಲಿದ್ದಾರೆ. ಜನಮೆಚ್ಚಿದ ನಟ, ನಟಿ, ಸಿನಿಮಾ ಹಾಗೂ ಹಾಡು ವಿಭಾಗದಲ್ಲಿ ಜನರು ಹಾಕುವ ವೋಟ್ ವಿಜೇತರನ್ನು ತೀರ್ಮಾನಿಸಲಿದೆ. ಇದೀಗ 'ಅತ್ಯುತ್ತಮ ಸಾಮಾಜಿಕ ಪರಿಣಾಮ ಬೀರಿದ ಚಿತ್ರಗಳು' ವಿಭಾಗದಲ್ಲಿ ನಾಮನಿರ್ದೇಶನಗೊಂಡ ಚಿತ್ರಗಳನ್ನು ಪರಿಚಯಿಸುವ ಸಮಯ. ಈ ವಿಭಾಗದ ವಿಜೇತರನ್ನು ನಮ್ಮ ಮುಖ್ಯ ತೀರ್ಪುಗಾರರ ತಂಡವೇ ನಿರ್ಧರಿಸಲಿದೆ.

CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

S/O ಮುತ್ತಣ್ಣ

ಪ್ರಣಂ ದೇವರಾಜ್ ಮತ್ತು ಖುಷಿ ರವಿ ಜೋಡಿಯಾಗಿ ನಟಿಸಿರುವ ಚಿತ್ರವಿದು. ಅಪ್ಪ–ಮಗನ ಬಾಂಧವ್ಯದ ಕಥೆಯನ್ನು ಹೊಂದಿದೆ. ಕೌಟುಂಬಿಕ ಸಂಬಂಧಗಳ ಮೌಲ್ಯವನ್ನು ಗಟ್ಟಿಯಾಗಿ ಪ್ರತಿಪಾದಿಸುವ ಚಿತ್ರದಲ್ಲಿ ರಂಗಾಯಣ ರಘು ನಾಯಕನ ತಂದೆ ಮುತ್ತಣ್ಣನಾಗಿ ನಟಿಸಿದ್ದಾರೆ. ಚಿತ್ರಕ್ಕೆ ಶ್ರೀಕಾಂತ್ ಹುಣಸೂರು ನಿರ್ದೇಶನವಿದೆ. ತಂದೆಯನ್ನು ಹುಡುಕಿಕೊಂಡು ಹೋಗುವ ಮಗನೊಂದಿಗೆ ಕಥೆ ಪ್ರಾರಂಭವಾಗುತ್ತದೆ. ಮುತ್ತಣ್ಣ ಮತ್ತು ಮಗ ಶಿವು ಬದುಕೇ ಚಿತ್ರಕಥೆ. ಜತೆಗೆ ಶಿವುವಿನ ಪ್ರೇಮ ಪಯಣ ಚಿತ್ರಕ್ಕೆ ಕಮರ್ಷಿ ಯಲ್ ಸ್ಪರ್ಶ ನೀಡುತ್ತದೆ. ವೃದ್ಧಾಪ್ಯದಲ್ಲಿ ಪೋಷಕರ ಪ್ರಾಮುಖ್ಯ-ವನ್ನು ಚಿತ್ರ ಹೇಳುತ್ತದೆ.





ಬಿಳಿ ಚುಕ್ಕಿ ಹಳ್ಳಿ ಹಕ್ಕಿ

ತೊನ್ನಿನ ಸಮಸ್ಯೆಯಿಂದ ವ್ಯಕ್ತಿಯೊಬ್ಬ ಅನುಭವಿಸುವ ನೋವು, ಸಂಕಟಗಳನ್ನು ಹಾಸ್ಯಮಯ ದಾಟಿಯಲ್ಲಿ ದಾಟಿಸುತ್ತ ಹೋಗುವ ಚಿತ್ರವಿದು. ಗಂಭೀರವಾದ ಸಮಸ್ಯೆಯ ಕಥೆಗೆ ಕಮರ್ಷಿಯಲ್ ರೂಪ ನೀಡಿದ್ದಾರೆ ನಿರ್ದೇಶಕ ಮಹೇಶ್ ಗೌಡ. ಜತೆಗೆ ಸ್ವತಃ ತೊನ್ನಿನ ಸಮಸ್ಯೆ ಹೊಂದಿರುವ ಅವರೇ ನಾಯಕನಾಗಿಯೂ ನಟಿಸಿದ್ದಾರೆ. ಕಾಜಲ್ ಕುಂದರ್ ಇವರಿಗೆ ಜೋಡಿಯಾಗಿದ್ದಾರೆ. ಯಾವುದೇ ದೈಹಿಕ ಸಮಸ್ಯೆಯಿಂದ ಬಳಲುತ್ತಿರುವವರನ್ನು ಸಮಾಜ ಹೇಗೆ ಸ್ವೀಕರಿಸಬೇಕೆಂಬ ಗಟ್ಟಿಯಾದ ಸಂದೇಶ ನೀಡುತ್ತದೆ.

ಪಿದಾಯಿ



ಮುಟ್ಟಿನ ಆಧಾರಿತ ಗಟ್ಟಿಯನ್ನು ಕಥೆಯನ್ನು ಹೊಂದಿರುವ ಸಿನಿಮಾವಿದು. ಸಂತೋಷ್ ಮಾಳ ನಿರ್ದೇಶನದ ಚಿತ್ರ ಕೆಲ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು, ಒಂದಷ್ಟು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ. ಕನ್ನಡ ಹಾಗೂ ತುಳು ಭಾಷೆಗಳಲ್ಲಿ ಚಿತ್ರ ಮೂಡಿಬಂದಿದೆ. ದಕ್ಷಿಣ ಕನ್ನಡದ ಸಂಪ್ರದಾಯಸ್ಥ ಕೂಡು ಕುಟುಂಬಕ್ಕೆ ಜೆನ್‌ಜಿ ಹುಡುಗಿಯೊಬ್ಬಳು ಸೊಸೆಯಾಗಿ ಬಂದಾಗ ಮುಟ್ಟಿನಿಂದ ಆಗುವ ಸಮಸ್ಯೆಗಳೇ ಚಿತ್ರದ ಒಟ್ಟಾರೆ ಕಥೆ. ಮುಟ್ಟಾದಾಗ ಹೆಣ್ಣನ್ನು ಅಸ್ಪೃಶ್ಯರಂತೆ ನೋಡಬಾರದು, ಆರೈಕೆ ಮಾಡಬೇಕೆಂಬ ಸಂದೇಶ ಹೊಂದಿದೆ.

ಅರಸಯ್ಯನ ಪ್ರೇಮ ಪ್ರಸಂಗ



ಊರಲ್ಲಿ ಯಾರಾದರೂ ಸತ್ತರೆ, ಅವರ ಮನೆ ಮುಂದೆ ರಾತ್ರಿ ಭಜನೆ ಹಾಡುವ ಕುಟುಂಬದ ಯುವಕ ಅರಸಯ್ಯ. ಕೇವಲ ಎರಡನೇ ತರಗತಿ ಓದಿರುವ, ಕಿವಿ ಕೇಳಿಸದ ಈತನ ಬದುಕೇ ಒಟ್ಟಾರೆ ಚಿತ್ರದ ಕಥೆ. ಜೆ.ವಿ.ಆರ್ ದೀಪು ನಿರ್ದೇಶನದ ಚಿತ್ರವಿದು. ಮಹಾಂತೇಶ್ ಹಿರೇಮಠಗೆ ರಶ್ಮಿತ ಆರ್. ಗೌಡ ಜೋಡಿಯಾಗಿದ್ದಾರೆ. ತುಮಕೂರು ಭಾಗದ ಗ್ರಾಮೀಣ ಸೊಗಡಿನ ಚಿತ್ರ ಕಿವಿ ಕೇಳಿಸದವರ ಸಮಸ್ಯೆಗಳ-ನ್ನು ಹಾಸ್ಯಮಯವಾಗಿ ದಾಟಿಸಿದೆ.

ಹೆಬ್ಬುಲಿ ಕಟ್



ಅಸ್ಪೃಶ್ಯತೆ, ಜಾತಿ ತಾರತಮ್ಯ, ದಬ್ಬಾಳಿಕೆಯ ಘಟನೆಗಳ ಚಿತ್ರಣಗಳ-ನ್ನೇ ಕಥೆಯಾಗಿಸಿಕೊಂಡಿರುವ ಚಿತ್ರವಿದು. ಖ್ಯಾತ ನಟ ಚಿತ್ರವೊಂ-ದರಲ್ಲಿ ಮಾಡಿಸಿಕೊಂಡಿರುವ ಹೇರ್ ಕಟ್ ಅನ್ನು ಮಾಡಿಸಿಕೊಳ್ಳಲು ಆಸೆ ಪಡುವ ಹುಡುಗನ ಕಥೆಯನ್ನು ನಿರ್ದೇಶಕ ಭೀಮರಾವ್ ಈ ಚಿತ್ರದ ಮೂಲಕ ತೆರೆಗೆ ತಂದಿದ್ದಾರೆ. ಚಿತ್ರದ ನಾಯಕ–ನಾಯಕಿ ಇಬ್ಬರೂ ಹೈಸ್ಕೂಲ್ ವಿದ್ಯಾರ್ಥಿಗಳು. ಮಲಿಯಾಬಾದ್ ಗ್ರಾಮದ ಚಮ್ಮಾರನ ಮಗನಾದ ನಾಯಕ 'ವಿನ್ಯಾ'(ವಿನಯ) ನಿಗೆ ಊರಿನಲ್ಲಿರುವ ನಾದರಿ ಚೆನ್ನಾನ 'ಮಾಡರ್ನ್ ಮೆನ್ಸ್ ಬ್ಯೂಟಿ ಪಾರ್ಲರ್'ನಲ್ಲಿ ಹೇರ್‌ಕಟಿಂಗ್ ಮಾಡಿಕೊಳ್ಳುವಾಸೆ. ಆತನ ಆಸೆ ಈಡೇರುತ್ತದೆಯೋ ಇಲ್ಲವೋ ಎಂಬುದೇ ಒಟ್ಟಾರೆ ಕಥೆ.


ಕಂದೀಲು



ಯಶೋದಾ ಪ್ರಕಾಶ್ ನಿರ್ದೇಶನದ ಈ ಚಿತ್ರ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪಡೆದಿದೆ. ರೈತಾಪಿ ಕುಟುಂಬದ ಕಥೆಯನ್ನು ಹೊಂದಿರುವ ಸಿನಿಮಾ ಅನೇಕ ಚಿತ್ರೋತ್ಸಗಳಲ್ಲಿಯೂ ಪ್ರದರ್ಶನ ಕಂಡಿತ್ತು. ರೈತನೊಬ್ಬ ಬದುಕಿನಲ್ಲಿ ಎಂಥದ್ದೇ ಕಷ್ಟ ಬಂದರೂ ಜಗ್ಗದೇ ತನ್ನ ಎರಡು ಎಕರೆ ಹೊಲವನ್ನು ಉಳಿಸಿಕೊಳ್ಳುವುದೇ ಒಟ್ಟಾರೆ ಕಥೆ. ಜತೆಗೆ ಕೊಲ್ಲಿ ರಾಷ್ಟ್ರದಲ್ಲಿ ತೀರಿಕೊಂಡ ತಮ್ಮ ಮಗನ ಹೆಣವನ್ನು ಸ್ವದೇಶಕ್ಕೆ ತರಲು ಪರದಾಡುವ ಅಂಶವು ಕಥೆಯ ಭಾಗವಾಗಿದೆ. ಹಳ್ಳಿಗಾಡಿನ ಬದುಕಿನ ಕುರಿತಾದ ಸಂದೇಶ ಹೊಂದಿದೆ.

ಯುದ್ಧಕಾಂಡ

ಅತ್ಯಾಚಾರಕ್ಕೆ ಗುರಿಯಾದ ಮಗಳಿಗೆ ನ್ಯಾಯ ಕೊಡಿಸಲು ತಾಯಿ ಹೋರಾಡುವ ಭಾವನಾತ್ಮಕ ಕಥೆಯನ್ನು ಹೊಂದಿದೆ. ಅಜಯ್ ರಾವ್ ನಾಯಕನಾಗಿ ನಟಿಸಿದ್ದು, ಅರ್ಚನಾ ಜೋಯಿಸ್ ಮಗುವಿನ ತಾಯಿ ಪಾತ್ರದಲ್ಲಿ ಕಾಣಿಸಿಕೊಂ-ಡಿದ್ದಾರೆ. ಅತ್ಯಾಚಾರದ ಪ್ರಕರ-ಣಗಳನ್ನು ನ್ಯಾಯಾಲಯದಲ್ಲಿ ವರ್ಷಗಟ್ಟಲೇ ಎಳೆಯ ಬಾರದು, ತ್ವರಿತವಾಗಿ ನ್ಯಾಯ ಸಿಗಬೇಕೆಂಬ ಗಟ್ಟಿಯಾದ ಸಂದೇಶ ವಿದೆ. ತಾಯಿ, ಮಗಳ ಬೆಂಬಲಕ್ಕೆ ನಿಲ್ಲುವ ವಕೀಲನ ಪಾತ್ರದಲ್ಲಿ ಅಜಯ್ ರಾವ್ ಕಾಣಿಸಿಕೊಂ-ಡಿದ್ದಾರೆ. ಚಿತ್ರಕ್ಕೆ ಪವನ್ ಭಟ್ ನಿರ್ದೇಶನವಿದೆ.



ಶೂಟಿಂಗ್ ಕಣದ 'ಸಿಡಿಗುಂಡು' ರಾಣಾ

ಒಲಿಂಪಿಕ್ಸ್ 'ಡಬಲ್' ಪದಕ ವಿಜೇತೆ ಮನು ಭಾಕರ್‌ಗೆ ಕೋಚ್ ಆಗಿದ್ದ ಜಸ್ಪಾಲ್

ಪಿಟಿಐ/ಪ್ರಜಾವಾಣಿ ವಾರ್ತೆ

ನವದೆಹಲಿ: ಜಸ್ಪಾಲ್ ರಾಣಾ ಅವರು ಪಿಸ್ತೂಲ್ ಹಿಡಿದು ನಿಖರ ಗುರಿ ಕಟ್ಟುತ್ತಿದ್ದರು. ಕ್ರೀಡೆಯೊಳಗಿನ ಆಡಳಿತ ವ್ಯವಸ್ಥೆಯ ವಿರುದ್ಧ ಅವರು ನೀಡುತ್ತಿದ್ದ ದಿಟ್ಟ ಹೇಳಿಕೆಗಳು ಸಿಡಿಗುಂಡಿನಷ್ಟೇ ಪರಿಣಾಮಕಾರಿಯಾಗಿರುತ್ತಿದ್ದವು.

ರಾಣಾ ಅವರು ಇದೇ ತಿಂಗಳ 28ರಂದು ಐವತ್ತನೇ ವಸಂತಕ್ಕೆ ಕಾಲಿಡ ಬೇಕಿತ್ತು. ಅವರ ಮಾರ್ಗದರ್ಶನದಲ್ಲಿ ಬೆಳೆದ ಒಲಿಂಪಿಯನ್ ಮನು ಭಾಕರ್ ಹಾಗೂ ಇನ್ನೂ ಕೆಲವು ಶೂಟರ್‌ಗಳು ಇದೇ ವರ್ಷ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಪದಕಗಳಿಗೆ ಮುತ್ತಿಡುವುದನ್ನು ಕಣ್ತುಂಬಿಕೊಳ್ಳಬೇಕಿತ್ತು.

ಆದರೆ ಅವರು ಹೃದಯ ಸಂಬಂಧಿ ಕಾಯಿಲೆಯಿಂದಾಗಿ ಇಹಲೋಕದ ವ್ಯವಹಾರ ಮುಗಿಸಿ ನಿರ್ಗಮಿಸಿದ್ದಾರೆ. ಇದರೊಂದಿಗೆ ಶೂಟಿಂಗ್ ಕ್ರೀಡೆಯ ಪರವಾದ ಗಟ್ಟಿಧ್ವನಿಯೊಂದು ಸ್ತಬ್ಧವಾದಂತಾಗಿದೆ.

ಉತ್ತರಕಾಶಿಯ ರಾಣಾ ಅವರು ಚಾಂಪಿಯನ್ ಶೂಟರ್ ಹೌದು. ಶೂಟಿಂಗ್‌ನಲ್ಲಿ ಭಾರತಕ್ಕೊಂದು ಪ್ರತಿಷ್ಠಿತ ಸ್ಥಾನಮಾನ ಸಿಗುವಲ್ಲಿ ಅವರ ಕೊಡುಗೆ ದೊಡ್ಡದು. ತಮ್ಮ ದಿಟ್ಟ ಪ್ರದರ್ಶನದ ಮೂಲಕ ಯುವಜನತೆಯನ್ನು ಪ್ರಭಾವಿಸಿದವರು. ಕ್ರಿಕೆಟ್ ಆರಾಧನೆಯೇ ತುಂಬಿರುವ ದೇಶದಲ್ಲಿ ಶೂಟಿಂಗ್ ಕ್ರೀಡೆಯ ಮೂಲಕ ಸ್ಟಾರ್ ಪಟ್ಟ ಪಡೆದವರು ರಾಣಾ. ಅಂತರರಾಷ್ಟ್ರೀಯಮಟ್ಟದಲ್ಲಿ ಭಾರತಕ್ಕೆ ಪದಕಗಳನ್ನು ಜಯಿಸಿಕೊಡಬಲ್ಲ ಕ್ರೀಡೆ ಇದು ಎಂಬುದನ್ನು ತೋರಿಸಿಕೊಟ್ಟ ಶ್ರೇಯ ಅವರಿಗೆ ಸಲ್ಲಬೇಕು.

25 ಮೀ ಸೆಂಟರ್ ಫೈರ್ ಪಿಸ್ತೂಲ್, 25 ಮೀ ಸ್ಟಾಂಡರ್ಡ್ ಪಿಸ್ತೂಲ್, 10 ಮೀ ಏರ್ ಪಿಸ್ತೂಲ್ ಹಾಗೂ 10 ಮೀ ಏರ್ ಪಿಸ್ತೂಲ್ ಪೇರ್ ವಿಭಾಗಗಳಲ್ಲಿ ಅವರು 1994 ರಿಂದ 2006ರವರೆಗೆ ಕಾಮನ್‌ವೆಲ್ತ್, ಏಷ್ಯನ್ ಕ್ರೀಡಾಕೂಟ, ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ಗಳಲ್ಲಿ ಪದಕಗಳ ಗುಚ್ಛವನ್ನು ಕೊರಳಿಗೇರಿಸಿಕೊಂಡಿದ್ದರು. ಅದರಲ್ಲಿ 15 ಚಿನ್ನ, 6 ಬೆಳ್ಳಿ ಮತ್ತು 5 ಕಂಚಿನ ಪದಕಗಳು ಇವೆ. 1996ರ ಅಟ್ಲಾಂಟಾ ಒಲಿಂಪಿಕ್ಸ್‌ನಲ್ಲಿಯೂ ತಮ್ಮ ಅದೃಷ್ಟ ಪರೀಕ್ಷಿಸಿಕೊಂಡರು.

ರಾಣಾ ಅವರಿಗೆ ಶೂಟಿಂಗ್ ಕ್ರೀಡೆಯ ಹವ್ಯಾಸ ಶುರುವಾಗಿದ್ದು ತಂದೆ ನಾರಾಯಣ ಸಿಂಗ್ ಅವರಿಂದ. ಜಸ್ಪಾಲ್ ಅವರಿಗೆ ಮೊದಲ ಗುರು ಕೂಡ ಅವರೇ. 1971ರ ಯುದ್ಧದಲ್ಲಿ ಭಾರತೀಯ ಸೇನಾ ತುಕಡಿಯಲ್ಲಿದ್ದವರು ನಾರಾಯಣಸಿಂಗ್. ನಿವೃತ್ತಿಯ ನಂತರ ರಾಜಕೀಯಕ್ಕೆ ಧುಮುಕಿದ್ದರು. ಭಾರತೀಯ ಜನತಾ ಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳಲ್ಲಿ ಕೆಲಕಾಲ ಇದ್ದರು.

2006ರ ದೋಹಾ ಏಷ್ಯನ್ ಗೇಮ್ಸ್‌ನಲ್ಲಿ ವಿಪರೀತ ಜ್ವರ ಮತ್ತು ತಲೆಸುತ್ತು ಕಾಡಿದ್ದರೂ ಜಸ್ಪಾಲ್ ಅವರು ಮೂರು ಚಿನ್ನದ ಪದಕ ಗೆದ್ದು ತಮ್ಮ ಛಲ ಮೆರೆದಿದ್ದರು.

ಮನು 'ಡಬಲ್ ಪದಕ': 2024ರ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಮಹಿಳೆಯರ ಶೂಟಿಂಗ್‌ನಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದ ಮನು ಭಾಕರ್ ಅವರು ರಾಣಾ ಅವರ ಮಾರ್ಗದರ್ಶನದಲ್ಲಿ ಬೆಳೆದವರು.

ಮನು ಅವರಿಗೆ ವೈಯಕ್ತಿಕ ಕೋಚ್ ಆಗಿ ತರಬೇತಿ ನೀಡಿದ್ದರು. ಇದರಿಂದಾಗಿ ರಾಷ್ಟ್ರೀಯ ಶೂಟಿಂಗ್ ಫೆಡರೇಷನ್ ಕೆಂಗಣ್ಣಿಗೆ ಗುರಿಯಾಗಿದ್ದರು. ಪ್ಯಾರಿಸ್ ಒಲಿಂಪಿಕ್ಸ್ ಪೂರ್ವಸಿದ್ಧತೆ ನಡೆಸುತ್ತಿದ್ದ ಮನು ಅವರ ಮೇಲ್ವಿಚಾರಣೆಗಾಗಿ ದೆಹಲಿಯ ಶೂಟಿಂಗ್ ರೇಂಜ್‌ಗೆ ಹೋಗಿದ್ದ ಜಸ್ಪಾಲ್ ಅವರಿಗೆ ಪ್ರವೇಶ ನೀಡಲು ಹೈಪರ್ಫಾರ್ಮೆನ್ಸ್ ನಿರ್ದೇಶಕ ಪಿಯರೆ ಬೇಚಾಂಪ್ ನಿರಾಕರಿಸಿದ್ದರು. ಅದು ದೊಡ್ಡ ಸುದ್ದಿಯಾಗಿತ್ತು.

ಅದಾಗಿ ಕೆಲವು ದಿನಗಳ ನಂತರ ಒಲಿಂಪಿಕ್ಸ್ ತಂಡದ ಆಯ್ಕೆ ಪ್ರಕ್ರಿಯೆ ಬಗ್ಗೆಯೂ ಅವರು ಟೀಕೆ ಮಾಡಿದ್ದರು.

ಪ್ಯಾರಿಸ್ ಒಲಿಂಪಿಕ್ಸ್ ಸಂದರ್ಭದಲ್ಲಿ ಅವರನ್ನು ಶೂಟಿಂಗ್ ರೇಂಜ್‌ನಿಂದ ದೂರದ ಹೋಟೆಲ್‌ನಲ್ಲಿ ಉಳಿಸಲಾಗಿತ್ತು. ಅದನ್ನು ಅವರು ನಂತರ ಟೀಕಿಸಿದ್ದರು.

'ಫೆಡರೇಷನ್ ನನ್ನ ಮೇಲೆ ಬಹಳಷ್ಟು ನಿರ್ಬಂಧಗಳನ್ನು ಹಾಕುತ್ತ ಬಂದಿದೆ. ಆದರೆ ಅವೆಲ್ಲವೂಗಳಿಂದ ಮತ್ತಷ್ಟು ಬಲಿಷ್ಠರಾಗುತ್ತಲೇ ನಡೆದಿದ್ದೇವೆ. ನಿರ್ಬಂಧಗಳಿಗೆ ನನ್ನನ್ನು ಶೇ 1ರಷ್ಟು ವಿಚಲಿತಗೊಳಿಸಲೂ ಸಾಧ್ಯವಾಗಿಲ್ಲ. ನನ್ನ ಹಾಗೂ ಮನು ಸಮನ್ವಯಕ್ಕೆ ಯಾವುದೇ ರೀತಿಯ ಭಂಗ ಬಂದಿಲ್ಲ. ಶೂಟಿಂಗ್ ರೇಂಜ್‌ನಿಂದ ನಾನು ಉಳಿದಿದ್ದ ಹೋಟೆಲ್ ದೂರ ಇತ್ತು. ಅಲ್ಲಿಗೆ ನಾನು ನಡೆದುಕೊಂಡೇ ಹೋಗುತ್ತಿದ್ದೆ. ಮನು ಕೂಡ ನನ್ನೊಂದಿಗೆ ನಡೆದುಕೊಂಡೇ ಬರುತ್ತಿದ್ದರು. ಇದು ಮಾತುಕತೆಗೆ ಅವಕಾಶ ನೀಡುವುದರ ಜೊತೆಗೆ ಫಿಟ್‌ನೆಸ್‌ಗೂ ಸಹಕಾರಿಯಾಗಿತ್ತು' ಎಂದಿದ್ದರು.



ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಜಸ್ಪಾಲ್ ರಾಣಾ ಅವರ ಪಾರ್ಥಿವ ಶರೀರಕ್ಕೆ ಶುಕ್ರವಾರ ಶೂಟರ್ ಮನು ಭಾಕರ್ ಅಂತಿಮ ನಮನ ಸಲ್ಲಿಸಿದರು ಪಿಟಿಐ ಚಿತ್ರ

ಜಸ್ಪಾಲ್ ಗೆದ್ದಿರುವ ಪ್ರಮುಖ ಪದಕಗಳು

ಕೂಟ	ಚಿನ್ನ	ಬೆಳ್ಳಿ	ಕಂಚು
ಏಷ್ಯನ್ ಗೇಮ್ಸ್	4	2	2
ಕಾಮನ್‌ವೆಲ್ತ್ ಗೇಮ್ಸ್	9	4	2
ಏಷ್ಯನ್ ಚಾಂಪಿಯನ್‌ಷಿಪ್	1	-	1
ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್	1	-	-

ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದ ರಾಣಾ

ನವದೆಹಲಿ (ಪಿಟಿಐ): ಒಲಿಂಪಿಯನ್ ಜಸ್ಪಾಲ್ ರಾಣಾ (49) ಅವರು ಗುರುವಾರ ತಡರಾತ್ರಿ ನಿಧನರಾದರು. ದೆಹಲಿಯ ಮ್ಯಾಕ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಅವರು ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದರು.

'ಮೂರು ದಿನಗಳ ಹಿಂದೆ ರಾಣಾ ಅವರಿಗೆ ತೀವ್ರ ಹೃದಯಾಘಾತವಾಗಿತ್ತು. ಅವರು ಪ್ರಯಾಣದಲ್ಲಿದ್ದಾಗಲೇ ಎದೆನೋವಿನಿಂದ ಬಳಲಿದ್ದರು. ಆಸ್ಪತ್ರೆ ತಲುಪುವ ಹೊತ್ತಿಗೆ ಅವರ ಸ್ಥಿತಿ ಗಂಭೀರವಾಗಿತ್ತು' ಎಂದು ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆ (ಎನ್‌ಆರ್‌ಎಐ) ಅಧ್ಯಕ್ಷ ಕಲಿಕೇಶ್ ನಾರಾಯಣ ಸಿಂಗ್ ದೇವ್ ತಿಳಿಸಿದ್ದಾರೆ.

ಅವರಿಗೆ ಪತ್ನಿ ರೀನಾ ರಾಣಾ, ಮಗಳು ದೇವಾಂಶಿ, ಮಗ ಯುವರಾಜ್, ತಂದೆ ನಾರಾಯಣ ಸಿಂಗ್ ರಾಣಾ, ಶೂಟರ್‌ಗಳಾದ ಸಹೋದರಿ ಸುಷ್ಮಾ ಸಿಂಗ್ ಮತ್ತು ಸುಭಾಷ್ ರಾಣಾ ಅವರು ಇದ್ದಾರೆ.



ಆಸ್ಟ್ರೇಲಿಯಾಕ್ಕೆ ದಕ್ಷಿಣ ಆಫ್ರಿಕಾ ಸವಾಲು

ಮ್ಯಾಂಚೆಸ್ಟರ್: ಆರು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ವನಿತೆಯರ ತಂಡವು ಐಸಿಸಿ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶನಿವಾರ ದಕ್ಷಿಣ ಆಫ್ರಿಕಾ ವಿರುದ್ಧ ಅಭಿಯಾನ ಆರಂಭಿಸಲಿದೆ.

ಎ ಗುಂಪಿನಲ್ಲಿ ಈ ಎರಡು ತಂಡಗಳೊಂದಿಗೆ ಭಾರತ, ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ನೆದರ್ಲೆಂಡ್ಸ್ ಸ್ಥಾನ ಪಡೆದಿವೆ. ಪ್ರತಿ ತಂಡವು ಗುಂಪು ಹಂತದಲ್ಲಿ ತಲಾ ಐದು ಪಂದ್ಯಗಳನ್ನು ಆಡಲಿವೆ. ಗುಂಪಿನಲ್ಲಿ ಅಗ್ರಸ್ಥಾನ ಪಡೆಯುವ ಎರಡು ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಪಡೆಯಲಿವೆ.


ಕಳೆದ ಎರಡು ಆವೃತ್ತಿಗಳಲ್ಲಿ ರನ್ನರ್ಸ್ ಅಪ್ ಆಗಿರುವ ದಕ್ಷಿಣ ಆಫ್ರಿಕಾ ತಂಡವು ಚೊಚ್ಚಲ ಪ್ರಶಸ್ತಿಯ ನಿರೀಕ್ಷೆಯಲ್ಲಿದೆ. ಲಾರಾ ವೋಲ್ವಾರ್ಟ್ ಬಳಗವು 2024ರ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿತ್ತು. ಆದರೆ, ಪ್ರಶಸ್ತಿ ಹೊಸ್ತಿಲಲ್ಲಿ ನ್ಯೂಜಿಲೆಂಡ್ ವಿರುದ್ಧ ಸೋಲು ಅನುಭವಿಸಿತ್ತು. ಈ ಬಾರಿ ಉತ್ತಮ ಪ್ರದರ್ಶನದ ವಿಶ್ವಾಸದಲ್ಲಿದೆ.

ಸೋಫಿ ಮಾಲಿನೆ ನಾಯಕತ್ವದ ಆಸ್ಟ್ರೇಲಿಯಾ ತಂಡವು ಬೌಲಿಂಗ್ ಮತ್ತು ಬ್ಯಾಟಿಂಗ್‌ನಲ್ಲಿ ಬಲಿಷ್ಠವಾಗಿದ್ದು, ಗೆಲ್ಲುವ ನೆಚ್ಚಿನ ತಂಡವಾಗಿದೆ. ಕಳೆದ ಆವೃತ್ತಿಯ ಸೆಮಿಫೈನಲ್‌ನ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ತವಕದಲ್ಲಿದೆ.

ಟಿ20 ವಿಶ್ವಕಪ್‌ನಲ್ಲಿ ಉಭಯ ತಂಡಗಳು ಒಟ್ಟು ಎಂಟು ಬಾರಿ ಮುಖಾಮುಖಿಯಾಗಿದ್ದು, ಅದರಲ್ಲಿ ಏಳು ಬಾರಿ ಆಸ್ಟ್ರೇಲಿಯಾ ತಂಡ ಗೆಲುವು ಸಾಧಿಸಿದರೆ, ಒಂದು ಬಾರಿ ಮಾತ್ರ ದಕ್ಷಿಣ ಆಫ್ರಿಕಾ ತಂಡ ಗೆದ್ದಿದೆ. ವಿಶ್ವ ಕ್ರಮಾಂಕದಲ್ಲಿ ಆಸ್ಟ್ರೇಲಿಯಾ ಅಗ್ರಸ್ಥಾನದಲ್ಲಿದ್ದರೆ, ದಕ್ಷಿಣ ಆಫ್ರಿಕಾ ಐದನೇ ಸ್ಥಾನದಲ್ಲಿದೆ.

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026


ಬೆತ್ ಮೂನಿ


ವೋಲ್ವಾರ್ಟ್

ಇಂದಿನ ಪಂದ್ಯಗಳು

ಸ್ಕಾಟ್ಲೆಂಡ್ V/s ಐರ್ಲೆಂಡ್
ತಾಣ: ಮ್ಯಾಂಚೆಸ್ಟರ್, ಮಧ್ಯಾಹ್ನ 3

ಆಸ್ಟ್ರೇಲಿಯಾ V/s ದ. ಆಫ್ರಿಕಾ
ತಾಣ: ಮ್ಯಾಂಚೆಸ್ಟರ್, ಸಂಜೆ 7

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್

ಸಂಭಾವ್ಯ 11ರ ಬಳಗ: ಆಸ್ಟ್ರೇಲಿಯಾ: ಸೋಫಿ ಮಾಲಿನೆ (ನಾಯಕಿ), ಬೆತ್ ಮೂನಿ (ವಿಕೆಟ್ ಕೀಪರ್), ಜಾರ್ಜಿಯಾ ವೋಲ್, ಫೋಬಿ ಲಿಚ್‌ಫೀಲ್ಡ್, ಎಲಿಸ್ ಪೆರಿ, ಆ್ಯಶ್ಲೆ ಗಾರ್ಡನರ್, ಗ್ರೇಸ್ ಹ್ಯಾರಿಸ್, ಜಾರ್ಜಿಯಾ ವೇರ್‌ಹ್ಯಾಮ್, ಅನ್ನಾಬೆಲ್ ಸದರ್ಲೆಂಡ್, ಕಿಮ್ ಗಾರ್ತ್, ಮೇಗನ್ ಶುಟ್

ದಕ್ಷಿಣ ಆಫ್ರಿಕಾ: ಲಾರಾ ವೋಲ್ವಾರ್ಟ್ (ನಾಯಕಿ), ಸುನೆ ಲೂಸ್, ತಾಜ್ಮಿನ್ ಬ್ರಿಟ್ಸ್, ಡೇನ್ ವ್ಯಾನ್ ನೀಕೆರ್ಕ್, ಮರೈಝನ್ ಕಾಪ್, ನದೀನ್ ಡಿ ಕ್ಲರ್ಕ್, ಕ್ಲೋಯೆ ಟ್ರಯಾನ್, ಸಿನಾಲೊ ಜಾಫ್ತಾ (ವಿಕೆಟ್ ಕೀಪರ್), ಶಬ್ನಿಮ್ ಇಸ್ಮಾಯಿಲ್, ನಾನ್‌ಕುಲುಲೆಕೊ ಮ್ಲಾ, ಅಯಾಬೊಂಗಾ ಖಾಕಾ

ಬ್ಯಾಟಿಂಗ್ ವೇಳೆಯೇ ಋತುಸ್ರಾವ ಆಗಿತ್ತು: ಮಂದಾನ



ಬೆಂಗಳೂರು: ಕ್ರಿಕೆಟ್ ಪಂದ್ಯದಲ್ಲಿ ಆಟಗಾರರು ವಿಕೆಟ್, ರನ್‌ಔಟ್, ವೈಡ್, ನೋಬಾಲ್ ಇತ್ಯಾದಿ ಕಾರಣಗಳಿಗಾಗಿ ಅಂಪೈರ್‌ಗೆ ಮನವಿ ಸಲ್ಲಿಸುವುದನ್ನು ನೋಡಿದ್ದೇವೆ. ಯಾವುದೇ ಕ್ರಿಕೆಟ್ ಪಂದ್ಯದಲ್ಲಿಯೂ ಈ ದೃಶ್ಯಗಳು ಸರ್ವೇಸಾಮಾನ್ಯ.


ಆದರೆ ಮಹಿಳೆಯರ ಕ್ರಿಕೆಟ್‌ನಲ್ಲಿ 'ಸ್ಯಾನಿಟರಿ ಪ್ಯಾಡ್' ಬದಲಿಸಲು ಟೈಮ್ ಆಫ್ ಮನವಿ ಮಾಡಿದ್ದ ಕುರಿತು ಭಾರತ ಕ್ರಿಕೆಟ್ ತಂಡದ ಉಪನಾಯಕಿ ಸ್ಮೃತಿ ಮಂದಾನ ಈಚೆಗೆ ಹೇಳಿಕೊಂಡಿದ್ದಾರೆ. ಇದರೊಂದಿಗೆ ಮಹಿಳೆಯರ ಕ್ರೀಡೆಯಲ್ಲಿ ಎದುರಾಗುವ ಇಂತಹ ಸವಾಲುಗಳ ಕುರಿತು ಗಮನ ಸೆಳೆದಿದ್ದಾರೆ.

'ಟೆಸ್ಟ್ ಪಂದ್ಯವೊಂದರಲ್ಲಿ ನಾನು ಬ್ಯಾಟಿಂಗ್ ಮಾಡುವ ಸಂದರ್ಭದಲ್ಲಿ ಋತುಸ್ರಾವ ಆಯಿತು. ಅಂಪೈರ್ ಬಳಿ ಹೋಗಿ ವಿಷಯ ತಿಳಿಸಲು ಮುಜುಗರವಾಯಿತು' ಎಂದು ಸ್ಮೃತಿ ಈಚೆಗೆ ಸಂವಾದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

'ಆದರೆ ಬಿಳಿ ಬಣ್ಣದ ಪೋಷಾಕು ಧರಿಸಿದ್ದ ಕಾರಣ ಅಂಪೈರ್‌ಗೆ ವಿಷಯ ತಿಳಿಸುವುದು ಅನಿವಾರ್ಯವಾಯಿತು. ಅನುಮತಿ ಪಡೆದು ಡ್ರೆಸಿಂಗ್ ಕೋಣೆಗೆ ಹೋಗಿ ಸ್ಯಾನಿಟರಿ ಪ್ಯಾಡ್ ಬಳಸಿದೆ. ಮತ್ತೆ ಮರಳಿ ಬ್ಯಾಟಿಂಗ್ ಮಾಡಿದೆ. ಅದರಿಂದಾಗಿ ಕೆಲಕಾಲ ಪಂದ್ಯ ಸ್ಥಗಿತವಾಗಿತ್ತು' ಎಂದು ಸ್ಮೃತಿ ಹೇಳಿದ್ದಾರೆ.

ಭಾರತ ಕ್ರಿಕೆಟ್ ತಂಡಕ್ಕೆ ಅವಿನಾಶ್ ಮ್ಯಾನೇಜರ್

ಪ್ರಜಾವಾಣಿ ವಾರ್ತೆ




ಬೆಂಗಳೂರು: ಕರ್ನಾಟಕ ಕ್ರಿಕೆಟ್ ತಂಡದ ಮಾಜಿ ಆಟಗಾರ ಅವಿನಾಶ್ ವೈದ್ಯ ಅವರು ಐರ್ಲೆಂಡ್–ಇಂಗ್ಲೆಂಡ್ ದೇಶಗಳ ಎದುರಿನ ಟಿ20 ಸರಣಿಯಲ್ಲಿ ಆಡುವ ಭಾರತ ತಂಡದ ಮ್ಯಾನೇಜರ್ ಆಗಿ ನೇಮಕವಾಗಿದ್ದಾರೆ.

ಜೂನ್ 26 ಮತ್ತು 28ರಂದು ಭಾರತ ತಂಡವು ಐರ್ಲೆಂಡ್ ವಿರುದ್ಧ ಪಂದ್ಯಗಳನ್ನು ಆಡಲಿದೆ. ಜುಲೈ 1 ರಿಂದ 11ರವರೆಗೆ ಇಂಗ್ಲೆಂಡ್ ಎದುರು ಐದು ಪಂದ್ಯಗಳ ಸರಣಿಯಲ್ಲಿ ಆಡಲಿದೆ.

ಐಪಿಎಲ್ ಟೂರ್ನಿಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ತಂಡಗಳ ಆಡಳಿತ ಮಂಡಳಿಗಳಲ್ಲಿ ಕಾರ್ಯನಿರ್ವಹಿಸಿದ್ದರು. 59 ವರ್ಷದ ಅವಿನಾಶ್ ಪ್ರಸ್ತುತ ಅವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಆಡಳಿತ ಸಮಿತಿಯ ಸದ್ಯಸರೂ ಆಗಿದ್ದಾರೆ.

ಡೈಮಂಡ್ ಲೀಗ್: ನೀರಜ್ ಅಲಭ್ಯ



ನವದೆಹಲಿ (ಪಿಟಿಐ): ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ ಅವರು ಇದೇ 19ರಂದು ನಡೆಯಲಿರುವ ದೋಹಾ ಡೈಮಂಡ್ ಲೀಗ್‌ಗೆ ಅಲಭ್ಯರಾಗಿದ್ದಾರೆ. 28 ವರ್ಷ ವಯಸ್ಸಿನ ನೀರಜ್ ಸ್ವಿಟ್ಜರ್ಲೆಂಡ್‌ನಲ್ಲಿದ್ದು ಬೆನ್ನುನೋವಿನಿಂದ ಚೇತರಿಸಿಕೊಳ್ಳುತ್ತಿದ್ದಾರೆ.

2020ರ ಟೋಕಿಯೊ ಮತ್ತು 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದುಕೊಂಡಿರುವ ಅವರು 2025ರ ದೋಹಾ ಡೈಮಂಡ್ ಲೀಗ್‌ನಲ್ಲಿ ಮೊದಲ ಬಾರಿ 90 ಮೀ. ಮೈಲಿಗಲ್ಲು ದಾಟಿದ್ದರು. ಅವರು ಕಾಮನ್‌ವೆಲ್ತ್ ಕ್ರೀಡೆ ಮತ್ತು ಏಷ್ಯನ್ ಕ್ರೀಡೆಗಳಿಗೆ ಸಿದ್ಧತೆಯಾಗಿ ತರಬೇತಿಯಲ್ಲಿದ್ದಾರೆ.

ಸೆಮಿಗೆ ಸಿಂಧು; ತನ್ವಿ ನಿರ್ಗಮನ


ಪಿ.ವಿ.ಸಿಂಧು

ಸಿಡ್ನಿ (ಪಿಟಿಐ): ಭಾರತದ ಅನುಭವಿ ಆಟಗಾರ್ತಿ ಪಿ.ವಿ.ಸಿಂಧು ಅವರು ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಅಧಿಕಾರಯುತ ಗೆಲುವಿನೊಂದಿಗೆ ಶುಕ್ರವಾರ ಸೆಮಿಫೈನಲ್ ಪ್ರವೇಶಿಸಿದರು.

ಮೂರನೇ ಶ್ರೇಯಾಂಕದ ಸಿಂಧು ಅವರು ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ 21–6, 21–9ರಿಂದ ನೇರ ಗೇಮ್‌ಗಳಲ್ಲಿ ಚೀನಾ ತೈಪೆಯ ಶೆನ್ ಸು ಯು ಅವರನ್ನು ಸೋಲಿಸಿದರು. 30 ವರ್ಷ ವಯಸ್ಸಿನ ಸಿಂಧು ಅವರು ನಾಲ್ಕರ ಘಟ್ಟದಲ್ಲಿ ಜಪಾನ್‌ನ ಅಕಾನೆ ಯಮಾಗುಚಿ ಅವರನ್ನು ಎದುರಿಸಲಿದ್ದಾರೆ.

ಪುರುಷರ ಸವಾಲು ಅಂತ್ಯ: ಹರಿಹರನ್ ಅಮ್ಸಕರುಣನ್– ಎಂ.ಆರ್.ಅರ್ಜುನ್ ಜೋಡಿಯು ಪುರುಷರ ಡಬಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ 19–21, 9–16ರಿಂದ ಹಿನ್ನಡೆಯಲ್ಲಿದ್ದಾಗ, ಪಂದ್ಯದಿಂದ ಹಿಂದೆ ಸರಿಯಿತು. ಅದರೊಂದಿಗೆ, ಟೂರ್ನಿಯಲ್ಲಿ ಭಾರತದ ಪುರುಷರ ಸವಾಲು ಅಂತ್ಯಗೊಂಡಿತು.

ರೋಹಿತ್ 'ಫಿಟ್‌ನೆಸ್' ಪರೀಕ್ಷೆಯ ವೇದಿಕೆ

ಏಕದಿನ ಕ್ರಿಕೆಟ್: ಭಾರತ–ಅಫ್ಗನ್ ಮುಖಾಮುಖಿ ಇಂದು

ಪ್ರಜಾವಾಣಿ ವಾರ್ತೆ

ಧರ್ಮಶಾಲಾ: ಅಮೆರಿಕದಲ್ಲಿ ಫಿಫಾ ವಿಶ್ವಕಪ್ ಫುಟ್‌ಬಾಲ್ ಮತ್ತು ಇಂಗ್ಲೆಂಡ್‌ನಲ್ಲಿ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಗಳ ಭರಾಟೆ ಜೋರಾಗಿದೆ.

ಈ ಹೊತ್ತಿನಲ್ಲಿ ಹಿಮಾಲಯದ ಮಡಿಲಲ್ಲಿರುವ ಧರ್ಮಶಾಲಾದಲ್ಲಿ ಭಾರತ ಮತ್ತು ಅಫ್ಗಾನಿಸ್ತಾನ ತಂಡಗಳು ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಶನಿವಾರ ಇಲ್ಲಿ ನಡೆಯಲಿರುವ ಸರಣಿಯ ಮೊದಲ ಪಂದ್ಯವು ಆತಿಥೇಯ ತಂಡಕ್ಕೆ ತನ್ನ 'ಬೆಂಚ್ ಶಕ್ತಿ'ಯನ್ನು ಪ್ರಯೋಗಕ್ಕೆ ಒಳಪಡಿಸುವ ವೇದಿಕೆಯಾಗಿದೆ. ಅಲ್ಲದೇ ರೋಹಿತ್ ಶರ್ಮಾ ಅವರಿಗೆ ತಮ್ಮ ಫಿಟ್‌ನೆಸ್ ಪರೀಕ್ಷೆಗೊಡ್ಡುವ ಅವಕಾಶವೂ ಆಗಿದೆ. ಶುಭಮನ್ ಗಿಲ್ ಅವರಿಗೆ ತಮ್ಮ ನಾಯಕತ್ವದಲ್ಲಿ ತಂಡವನ್ನು ಸರಣಿ ಗೆಲುವಿನತ್ತ ಮುನ್ನಡೆಸಲು ಇದು ಉತ್ತಮ ಅವಕಾಶವಾಗಿದೆ.

ಮುಂದಿನ ವರ್ಷ ದಕ್ಷಿಣ ಆಫ್ರಿಕಾ–ಜಿಂಬಾಬ್ವೆ–ನಮೀಬಿಯಾ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಭಾರತ ತಂಡದ ಸಂಭವನೀಯ ಆಟಗಾರರ ಆಯ್ಕೆ ಪ್ರಕ್ರಿಯೆ ಈ ಸರಣಿಯಲ್ಲಿ ಆರಂಭವಾಗುವ ನಿರೀಕ್ಷೆ ಇದೆ.

39 ವರ್ಷದ ರೋಹಿತ್ ಅವರು ಸ್ನಾಯುಸೆಳೆತದ ಗಾಯದಿಂದ ಚೇತರಿಸಿಕೊಂಡ ನಂತರ ಆಡುತ್ತಿರುವ ಮೊದಲ ಸರಣಿ ಇದಾಗಿದೆ. ಅವರು ಈಗಾಗಲೇ ಟೆಸ್ಟ್ ಮತ್ತು ಟಿ20 ಮಾದರಿಗಳಿಂದ ನಿವೃತ್ತರಾಗಿದ್ದಾರೆ. ಮುಂದಿನ ವರ್ಷದ ವಿಶ್ವಕಪ್ ಆಡುವ ಉದ್ದೇಶದಿಂದ ಏಕದಿನ ಮಾದರಿಯಲ್ಲಿ ಮಾತ್ರ ಆಟವಾಡುತ್ತಿದ್ದಾರೆ. ಗಾಯಗೊಂಡಿರುವ ವಿರಾಟ್ ಕೊಹ್ಲಿ ಅವರು ಸರಣಿಯಿಂದ ವಿಶ್ರಾಂತಿ ಪಡೆದಿದ್ದಾರೆ. ಕನ್ನಡಿಗ ಕೆ.ಎಲ್.ರಾಹುಲ್, ಇಶಾನ್ ಕಿಶನ್, ಶ್ರೇಯಸ್ ಅಯ್ಯರ್, ಬೌಲಿಂಗ್‌ನಲ್ಲಿ ಪ್ರಸಿದ್ಧಕೃಷ್ಣ, ಅರ್ಷದೀಪ್ ಸಿಂಗ್ ಅವರು ಪ್ರಮುಖರಾಗಿದ್ದಾರೆ. ಹೊಸ ಪ್ರತಿಭೆಗಳಾದ ಗುರ್ನೂರ್ ಬ್ರಾರ್, ಪ್ರಿನ್ಸ್ ಯಾದವ್ ಅವರಿಗೆ ಪದಾರ್ಪಣೆ ಅವಕಾಶ ಸಿಗಬಹುದು.

ಹಷ್ಮತ್‌ವುಲ್ಲಾ ಶಹೀದಿ ನೇತೃತ್ವದ ಅಫ್ಗನ್ ತಂಡವು ಏಕೈಕ ಟೆಸ್ಟ್‌ನಲ್ಲಿ ಸೋತಿದೆ. ಆದರೆ ಏಕದಿನ ಕ್ರಿಕೆಟ್‌ನಲ್ಲಿ ಈ ಹಿಂದೆ ವಿಶ್ವಕಪ್ ಟೂರ್ನಿಗಳಲ್ಲಿ ಉತ್ತಮವಾಗಿ ಆಡಿರುವ ಅನುಭವ ಹೊಂದಿದೆ. ಆದ್ದರಿಂದ ಭಾರತ ತಂಡಕ್ಕೆ ಉತ್ತಮ ಪೈಪೋಟಿಯೊಡ್ಡುವ ನಿರೀಕ್ಷೆ ಇದೆ.


ಪಂದ್ಯ ಆರಂಭ: ಮಧ್ಯಾಹ್ನ 1.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್



ಭಾರತ ತಂಡದ ರೋಹಿತ್ ಶರ್ಮಾ

ಕ್ರಿಕೆಟ್: ವಿಲಿಯಮ್ಸನ್ ವಿದಾಯ



ಕ್ರೈಸ್ಟ್‌ಚರ್ಚ್/ ಲಂಡನ್ (ಪಿಟಿಐ): ನ್ಯೂಜಿಲೆಂಡ್ ಬ್ಯಾಟಿಂಗ್ ದಿಗ್ಗಜ ಕೇನ್ ವಿಲಿಯಮ್ಸನ್ 15 ವರ್ಷಗಳ ಅಂತರರಾಷ್ಟ್ರೀಯ ಕ್ರಿಕೆಟ್ ಜೀವನಕ್ಕೆ ಶುಕ್ರವಾರ ನಿವೃತ್ತಿ ಘೋಷಿಸಿದರು.

ನ್ಯೂಜಿಲೆಂಡ್ ಕ್ರಿಕೆಟ್‌ಗೆ ನಾಯಕರಾಗಿ, ಬ್ಯಾಟರ್ ಆಗಿ ಅಪಾರ ಕೊಡುಗೆ ನೀಡಿರುವ 35 ವರ್ಷ ವಯಸ್ಸಿನ ವಿಲಿಯಮ್ಸನ್ ಅವರು ಈ ಮೂಲಕ ಎಲ್ಲ ಮೂರೂ ಮಾದರಿಗಳಿಗೆ ವಿದಾಯ ಹೇಳಿದಂತಾಗಿದೆ. ಅವರು 2025ರಲ್ಲೇ ಟಿ20 ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು.

'ಕೆಲವು ಸಮಯದಿಂದ ನಿವೃತ್ತಿ ಬಗ್ಗೆ ಯೋಚಿಸುತ್ತಿದ್ದೆ. ಆದರೆ ಕೆಲದಿನಗಳಿಂದ ಇದು ಸಕಾಲ ಎಂಬ ಸ್ಪಷ್ಟ ನಿಲುವಿಗೆ ಬಂದೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಡುವಾಗಲೆಲ್ಲಾ ಉತ್ತಮ ಪ್ರದರ್ಶನ ನೀಡಬೇಕೆಂಬ ಹಸಿವಿತ್ತು. ನ್ಯೂಜಿಲೆಂಡ್‌ಗೆ ಆಡಿದ ಪ್ರತಿಯೊಂದು ಪಂದ್ಯಗಳಲ್ಲಿ ನನ್ನಿಂದ ಸಾಧ್ಯವಿರುವಷ್ಟು ಉತ್ತಮವಾಗಿದ್ದನ್ನು ನೀಡಿದ್ದೇನೆ' ಎಂದು ನ್ಯೂಜಿಲೆಂಡ್ ಕ್ರಿಕೆಟ್ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ವಿಲಿಯಮ್ಸನ್ ತಿಳಿಸಿದ್ದಾರೆ.

2010ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ಅವರು ವಿವಿಧ ಮಾದರಿಗಳಲ್ಲಿ 19,346 ರನ್ ಗಳಿಸಿದ್ದು, 48 ಶತಕ, ಆರು ದ್ವಿಶತಕಗಳನ್ನು ಬಾರಿಸಿದ್ದಾರೆ.


110 ಟೆಸ್ಟ್ ಪಂದ್ಯಗಳನ್ನು ಆಡಿದ್ದು 54 ಸರಾಸರಿಯಲ್ಲಿ 9,515 ರನ್ ಕಲೆಹಾಕಿದ್ದಾರೆ. ಇದರಲ್ಲಿ 33 ಶತಕಗಳು ಒಳಗೊಂಡಿದೆ. ಇದರಲ್ಲಿ ಆರು ದ್ವಿಶತಕಗಳು ಸೇರಿವೆ. ನ್ಯೂಜಿಲೆಂಡ್ ಪರ ಟೆಸ್ಟ್‌ಗಳಲ್ಲಿ ಗರಿಷ್ಠ ಶತಕ ಗಳಿಸಿದ ಆಟಗಾರನೆಂಬ ಹೆಗ್ಗಳಿಕೆ ಅವರದು.

2016 ರಿಂದ 2024ರ ಅವಧಿಯಲ್ಲಿ ಅವರು ಕ್ರಿಕೆಟ್ ಜೀವನದ ಉತ್ತುಂಗದಲ್ಲಿದ್ದು ಮೂರೂ ಮಾದರಿಗಳಲ್ಲಿ ತಂಡವನ್ನು ಮುನ್ನಡೆಸಿದ್ದರು.

'ನಮ್ಮ ಮಹಾನ್ ಆಟಗಾರ ಕೇನ್ ವಿಲಿಯಮ್ಸನ್ ತಕ್ಷಣಕ್ಕೆ ಜಾರಿಗೆ ಬರುವಂತೆ ನಿವೃತ್ತಿ ಘೋಷಿಸಿದ್ದಾರೆ' ಎಂದು ನ್ಯೂಜಿಲೆಂಡ್ ಕ್ರಿಕೆಟ್ ತಿಳಿಸಿದೆ.

ವಿಲಿಯಮ್ಸನ್ ಈಗ ಇಂಗ್ಲೆಂಡ್‌ನಲ್ಲಿದ್ದಾರೆ. ಅಲ್ಲಿ ನಡೆಯುತ್ತಿರುವ ಟೆಸ್ಟ್ ಸರಣಿಯ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ 115 ರನ್‌ಗಳಿಂದ ಸೋತಿತ್ತು. ಎರಡನೇ ಟೆಸ್ಟ್ ಮುಂದಿನ ವಾರ ಓವಲ್‌ನಲ್ಲಿ ನಿಗದಿಯಾಗಿದೆ.





ಕೆನಡಾದ ಟೊರೊಂಟೊ ಕ್ರೀಡಾಂಗಣದಲ್ಲಿ ಶುಕ್ರವಾರ ರಾತ್ರಿ ಟೂರ್ನಿಯ ಉದ್ಘಾಟನಾ ಸಮಾರಂಭದಲ್ಲಿ ಕಲಾವಿದರು ನೃತ್ಯ ಪ್ರದರ್ಶಿಸಿದರು (ಎಡ) ಮೆಕ್ಸಿಕೊ ಸಿಟಿಯಲ್ಲಿ ಗಾಯಕಿ ಶಕೀರಾ ಅವರು ಟೂರ್ನಿಯ ಅಧಿಕೃತ ಗೀತೆ 'ದೈ ದೈ' ಹಾಡಿ ನರ್ತಿಸಿದರು

ತವರಿನಲ್ಲಿ ಮೆಕ್ಸಿಕೊ ಶುಭಾರಂಭ

ಉದ್ಘಾಟನಾ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾಕ್ಕೆ ನಿರಾಸೆ • ಕೊರಿಯಾಕ್ಕೆ ಮಣಿದ ಜೆಕ್ ತಂಡ

ಮೆಕ್ಸಿಕೊ ಸಿಟಿ (ಎಎಫ್‌ಪಿ): ಸಾಕಷ್ಟು ನಾಟಕೀಯ ಕ್ಷಣಗಳಿಗೆ ಸಾಕ್ಷಿಯಾದ ವಿಶ್ವಕಪ್ ಉದ್ಘಾಟನಾ ಪಂದ್ಯದಲ್ಲಿ ಜಂಟಿ ಆತಿಥೇಯ ಮೆಕ್ಸಿಕೊ ತಂಡ ಗುರುವಾರ 2–0 ಗೋಲುಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿತು. ಈ ಪಂದ್ಯದೊಡನೆ ಜಗತ್ತಿನ ಅತಿ ದೊಡ್ಡ ವಿಶ್ವಕಪ್ ಟೂರ್ನಿಗೆ ಅಧಿಕೃತ ಚಾಲನೆಯೂ ದೊರೆಯಿತು.

ಇಲ್ಲಿನ ಐತಿಹಾಸಿಕ ಎಸ್ಟಾಡಿಯೊ ಅಜ್ಟೆಕಾ ಕ್ರೀಡಾಂಗಣವು ಮೂರು ವಿಶ್ವಕಪ್ ಟೂರ್ನಿಯ ಪಂದ್ಯಗಳಿಗೆ ಆತಿಥ್ಯ ವಹಿಸಿದ ವಿಶ್ವದ ಮೊದಲ ತಾಣ ಎನಿಸಿತು. 'ಎ' ಗುಂಪಿನ ಈ ಪಂದ್ಯ ಶುರುವಾಗಿ 9 ನಿಮಿಷಗಳಲ್ಲೇ ಜೂಲಿಯನ್ ಕ್ವಿನೊನೆಸ್ ಮೆಕ್ಸಿಕೊ ತಂಡಕ್ಕೆ ಮುನ್ನಡೆ ಒದಗಿಸಿದರು. 35 ವರ್ಷ ವಯಸ್ಸಿನ ರಾವುಲ್ ಜೆಮಿನೆಝ್ ಅವರು 67ನೇ ನಿಮಿಷ ಎರಡನೇ ಗೋಲನ್ನು ಗಳಿಸಿದರು.

ಸುಮಾರು 80,000 ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ ಪಂದ್ಯದಲ್ಲಿ ಮೂವರಿಗೆ 'ರೆಡ್ ಕಾರ್ಡ್' ದರ್ಶನವಾಯಿತು. 49ನೇ ನಿಮಿಷ ದಕ್ಷಿಣ ಆಫ್ರಿಕಾದ ಸ್ಟೆಫೆಲೊ ಸಿತೊಳೆ ಅವರು ಮೆಕ್ಸಿಕೊ ಆಟಗಾರನನ್ನು ಪೆನಾಲ್ಟಿ ಏರಿಯಾದಲ್ಲಿ ಬೀಳಿಸಿ ಮೆಕ್ಸಿಕೊಗೆ ಖಚಿತವೆನಿಸಿದ್ದ ಗೋಲು ಅವಕಾಶ ತಡೆದಿದ್ದಕ್ಕೆ ರೆಫ್ರಿ ಹೊರಕಳಿಸಿದರು. ಎದುರಾಳಿ ಆಟಗಾರನ ವಿರುದ್ಧ ಒರಟಾಗಿ ವರ್ತಿಸಿದ ಎಂಬಾ ಝ್ವಾನೆ ಅವರಿಗೂ ರೆಡ್ ಕಾರ್ಡ್ ಪ್ರದರ್ಶಿಸಲಾಯಿತು. 'ಇಂಜುರಿ ಅವಧಿಯಲ್ಲಿ' (90 + 2) 'ಫೌಲ್'ಗಾಗಿ ಮೆಕ್ಸಿಕೊದ ಸೀಸರ್ ಮೊಂಟೆಸ್ ಅವರೂ ಹೊರನಡೆಯಬೇಕಾಯಿತು.

ಆದರೆ ಕಿಕ್ಕಿರಿದಿದ್ದ ಕ್ರೀಡಾಂಗಣದೊಳಗೆ ಪ್ರವೇಶಿಸುವಾಗ ಉಂಟಾಗುವ 'ಮೊದಲ ಪಂದ್ಯದ ನರ್ವಸ್' ಅನ್ನು ತಮ್ಮ ತಂಡದ ಆಟಗಾರರು ನಿಭಾಯಿಸಿದರು ಎಂದು ಮೆಕ್ಸಿಕೊ ಕೋಚ್ ಜೇವಿಯರ್ ಅಗಿರೆ ಪ್ರತಿಕ್ರಿಯಿಸಿದರು.

'ಮೊದಲ ಪಂದ್ಯ ಆರಂಭಿಸುವಾಗ ಕಾಲುಗಳಲ್ಲಿ ಕೊಂಚ ನಡುಕವಿದ್ದೇ ಇರುತ್ತದೆ. 25 ವರ್ಷಗಳಲ್ಲಿ ಯಾರಿಗೂ ಸ್ನಾಯುಸೆಳೆತವಾಗಿದ್ದನ್ನು ನೋಡಿರಲಿಲ್ಲ. ಆದರೆ ಶುಕ್ರವಾರ ಮೂವರಿಗೆ ಸೆಳೆತವಾಯಿತು' ಎಂದು ಅಗಿರೆ ಹೇಳಿದರು.

ಮೆಕ್ಸಿಕೊ ತಂಡವು ತನ್ನ ಮುಂದಿನ ಪಂದ್ಯವನ್ನು ಜೂನ್ 18ರಂದು ವದುಲಾಹಾರ ಕ್ರೀಡಾಂಗಣದಲ್ಲಿ ದಕ್ಷಿಣ ಕೊರಿಯಾ ವಿರುದ್ಧ ಆಡಲಿದೆ.



ಗೋಲು ದಾಖಲಿಸಿದ ಸಂಭ್ರಮದಲ್ಲಿ ಮೆಕ್ಸಿಕೊ ತಂಡದ ಆಟಗಾರ ರಾವುಲ್ ಜೆಮಿನೆಝ್ ಚಿತ್ರಗಳು: ಎಎಫ್‌ಪಿ / ಎಪಿ

ಕೊರಿಯಾ ಶುಭಾರಂಭ: ದಕ್ಷಿಣ ಕೊರಿಯಾ ತಂಡ, ಝುಪೊಪಾನ್ ನಗರದ ವದುಲಾಹಾರ ಕ್ರೀಡಾಂಗಣದಲ್ಲಿ ನಡೆದ 'ಎ' ಗುಂಪಿನ ಎರಡನೇ ಪಂದ್ಯದಲ್ಲಿ 2–1 ಗೋಲುಗಳಿಂದ ಜೆಕ್ ರಿಪಬ್ಲಿಕ್ ತಂಡವನ್ನು ಸೋಲಿಸಿ ಶುಭಾರಂಭ ಮಾಡಿತು.

ಸಾಧಾರಣ ಮಟ್ಟಿಗೆ ಭರ್ತಿಯಾಗಿದ್ದ ಈ ಕ್ರೀಡಾಂಗಣದಲ್ಲಿ ಹ್ವಾಂಗ್ ಇನ್–ಬಿಯೊಮ್ (67ನೇ ನಿಮಿಷ) ಮತ್ತು ಸಬ್‌ಸ್ಟಿಟ್ಯೂಟ್ ಆಟಗಾರ ಒ ಹ್ಯಾನ್ ಗ್ಯು (80ನೇ ನಿಮಿಷ) ಅವರು ದ್ವಿತೀಯಾರ್ಧದಲ್ಲಿ ಗಳಿಸಿದ ಗೋಲುಗಳ ನೆರವಿನಿಂದ ಕೊರಿಯಾ ತಂಡ ಹಿನ್ನಡೆಯಿಂದ ಚೇತರಿಸಿ ಗೆಲುವಿನ ಕೇಕೆಹಾಕಿತು.

ಜೆಕ್ ರಿಪಬ್ಲಿಕ್ ತಂಡದ ಲಡಿಸ್ಲಾವ್ ಕ್ರಾಯ್ಚಿ ಅವರು ಪಂದ್ಯದ 59ನೇ ನಿಮಿಷ ತಮ್ಮ ತಂಡಕ್ಕೆ ಮುನ್ನಡೆ ಒದಗಿಸಿದ್ದರು.

ಗೋಲು ಅವಕಾಶಗಳನ್ನು ವ್ಯರ್ಥಪಡಿಸುತ್ತಿದ್ದ ದಕ್ಷಿಣ ಕೊರಿಯಾಕ್ಕೆ ಜೆಕ್ ತಂಡ ಪಾಠ ಕಲಿಸುವಂತೆ ಕಂಡಿತ್ತು. ಆದರೆ, ಕೊನೆಯಲ್ಲಿ ಗ್ಯು ಗಳಿಸಿದ ಗೋಲು ಜೆಕ್ ಪಾಲಿಗೆ ದುಬಾರಿಯಾಯಿತು. ಕೊರಿಯಾದ ಗೋಲ್‌ಕೀಪರ್ ಕಿಮ್ ಸೆಂಗ್–ಗ್ಯು ಅವರು ಎದುರಾಳಿ ತಂಡದ ಮೂರು ಅವಕಾಶಗಳಿಗೆ ತಡೆಗೋಡೆಯಾದರು. ಇದರಲ್ಲಿ ಎರಡು ಅವಕಾಶಗಳನ್ನು ತಡೆದಿದ್ದು ಮುಕ್ತಾಯದ ಹಂತದಲ್ಲಿ ಎಂಬುದು ಗಮನಾರ್ಹ.

ಜೆಕ್ ರಿಪಬ್ಲಿಕ್ ತಂಡ ಮುಂದಿನ ಗುಂಪು ಹಂತದ ಪಂದ್ಯವನ್ನು ಜೂನ್ 18ರಂದು ಅಟ್ಲಾಂಟಾದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಆಡಲಿದೆ.

ವಿಶ್ವಕಪ್ ಪಂದ್ಯಗಳು

ಕತಾರ್	V/s	ಸ್ವಿಟ್ಜರ್ಲೆಂಡ್
ಶನಿವಾರ ಮಧ್ಯರಾತ್ರಿ 12.30		
ಬ್ರೆಜಿಲ್	V/s	ಮೊರಾಕ್ಕೊ
ಭಾನುವಾರ ನಸುಕಿನ ಜಾವ 3.30		
ಹೈಟಿ	V/s	ಸ್ಕಾಟ್ಲೆಂಡ್
ಭಾನುವಾರ ಬೆಳಿಗ್ಗೆ 6.30		
ಆಸ್ಟ್ರೇಲಿಯಾ	V/s	ಟರ್ಕಿ
ಭಾನುವಾರ ಬೆಳಿಗ್ಗೆ 9.30		
ಜರ್ಮನಿ	V/s	ಕುರಾಕಾವೊ
ಭಾನುವಾರ ರಾತ್ರಿ 10.30		

ಲೈವ್: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜೀ5 ಆ್ಯಪ್

ಅಜ್ಟೆಕಾ ಕ್ರೀಡಾಂಗಣದ ಒಳಗೆ ಹಬ್ಬದ ಸಂಭ್ರಮ.. ಹೊರಗೆ ಹೊಯ್‌ಕೈ

ಮೆಕ್ಸಿಕೊದ ಅಜ್ಟೆಕಾ ಕ್ರೀಡಾಂಗಣದ ಒಳಗೆ ಹಬ್ಬದ ವಾತಾವರಣವಿದ್ದರೆ, ಹೊರಗಡೆ ಸಾಕಷ್ಟು ಸಂಖ್ಯೆಯಲ್ಲಿದ್ದ ಪ್ರತಿಭಟನಾಕಾರರು ಪೊಲೀಸರೊಂದಿಗೆ ಘರ್ಷಣೆಯಲ್ಲಿ ತೊಡಗಿದ್ದರು.

ಶಿಕ್ಷಕರ ಗುಂಪು, ನಾಪತ್ತೆಯಾದ ಮೆಕ್ಸಿಕನ್ನರ ಕುಟುಂಬಸ್ಥರು, ವಿದ್ಯಾರ್ಥಿ ಚಳವಳಿಗಾರರು ಕ್ರೀಡಾಂಗಣದ ಹೊರಗೆ ಜಮಾಯಿಸಿದರು. ಒಳಗೆ ಮೆಕ್ಸಿಕೊ ಮೊದಲ ಗೋಲು ಗಳಿಸಿದ ವೇಳೆ ಹೊರಗೆ ಕೆಲವರು ಬ್ಯಾರಿಕೇಡ್‌ಗಳನ್ನು ಮುರಿದು, ಕ್ರೀಡಾಂಗಣದ ವ್ಯಾಪ್ತಿಪ್ರದೇಶದಲ್ಲಿದ್ದ ಪೊಲೀಸ್ ಅಧಿಕಾರಿಗಳೊಂದಿಗೆ ಕೈಕೈ ಮಿಲಾಯಿಸಿದರು. ಕೇಂದ್ರ ಮೆಕ್ಸಿಕೊ ನಗರದಲ್ಲಿ ಪೊಂದ್ಯ ವೀಕ್ಷಿಸಲು ಸಹಸ್ರಾರು ಮಂದಿ ಅಭಿಮಾನಿಗಳು 'ಫ್ಯಾನ್ ಝೋನ್'ನಲ್ಲಿ ಸೇರಿದರು.

ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿರುವ ಮೆಕ್ಸಿಕನ್ ಸಮುದಾಯವು ಲಾಸ್ ಏಂಜಲೀಸ್‌ನ ಕೊಲೋಸಿಯಂನಲ್ಲಿ ಅಳವಡಿಸಲಾಗಿದ್ದ ದೈತ್ಯ ಪರದೆಗಳಲ್ಲಿ ಪಂದ್ಯವನ್ನು ವೀಕ್ಷಿಸಿತು.

ಶಕೀರಾ– ಬರ್ನಾ ಬಾಯ್ ಮಿಂಚು: ಅಜ್ಟೆಕಾ ಕ್ರೀಡಾಂಗಣದಲ್ಲಿ ಮೆಕ್ಸಿಕೊ–ದಕ್ಷಿಣ ಆಫ್ರಿಕಾ ಪಂದ್ಯಕ್ಕೆ ಮುನ್ನ ನಡೆದ ಉದ್ಘಾಟನಾ ಸಮಾರಂಭದಲ್ಲಿ ಕೊಲಂಬಿಯಾದ ಸೂಪರ್‌ಸ್ಟಾರ್ ಗಾಯಕಿ ಶಕೀರಾ ಮತ್ತು ನೈಜೀರಿಯಾದ ಗಾಯಕ ಬರ್ನಾ ಬಾಯ್ ಅವರು ಟೂರ್ನಿಯ ಅಧಿಕೃತ ಗೀತೆ 'ದೈ ದೈ' ಹಾಡಿದರು. ಇಟಲಿಯ ಆಂಡ್ರಿಯಾ ಬೊಸೆಲ್ಲಿ ಅವರು ಫಿಫಾ ಧ್ಯೇಯಗೀತೆ ಡಿಎನ್‌ಎ ಪ್ರಸ್ತುತಪಡಿಸಿದರು.

ಯಾರಿಗೆ ಕಿರೀಟ?: ಅಕ್ಟೋಪಸ್ ಬದಲು ಎ.ಐ ಚಾಟ್‌ಬಾಟ್‌ಗಳ ಭವಿಷ್ಯ

ಪ್ಯಾರಿಸ್ (ಎಎಫ್‌ಪಿ): ಫಿಫಾ ಫುಟ್‌ಬಾಲ್ ವಿಶ್ವಕಪ್ ಎಂದು 2010ರಲ್ಲಿ ಭವಿಷ್ಯ ನುಡಿದಿದ್ದ 'ಪೌಲ್' ಹೆಸರಿನ ಆಕ್ಟೋಪಸ್ ಮೃತಪಟ್ಟು ದಶಕವೇ ಕಳೆದಿದೆ. ಇದೀಗ, ಕೃತಕ ಬುದ್ಧಿಮತ್ತೆ (ಎ.ಐ) ಚಾಟ್‌ಬಾಟ್‌ಗಳು 'ಪೌಲ್'ನಂತೆಯೇ ನಿಖರ ಭವಿಷ್ಯ ಹೇಳಲು ಮುಂದೆಬಂದಿವೆ.

ಓಪನ್ ಎಐ ರೂಪಿಸಿರುವ ಚಾಟ್–ಜಿಪಿಟಿ ಹಾಗೂ 'ಆಂಥ್ರೊಪಿಕ್'ನ ಕ್ಲಾಡ್ ಈ ಬಾರಿ ಸ್ಪೇನ್ ತಂಡ ವಿಶ್ವಕಪ್ ಗೆಲ್ಲುವುದಾಗಿ ಭವಿಷ್ಯ ನುಡಿದಿವೆ. 'ಲೆ ಚಾಟ್' ಫ್ರಾನ್ಸ್‌ಗೆ ವಿಶ್ವ ಕಿರೀಟ ಸಿಗಲಿದೆ ಎಂದು, ಡೀಪ್‌ಸೀಕ್ ಹಾಗೂ ಕ್ವೆನ್ ಚಾಟ್‌ಬಾಟ್‌ಗಳು ಅರ್ಜೆಂಟೀನಾ ಸತತ ಎರಡನೇ ಬಾರಿಗೆ ಚಾಂಪಿಯನ್ ಆಗಲಿದೆ ಎಂದು ಅಂದಾಜು ಮಾಡಿವೆ.

ಸ್ಪೇನ್ ಮತ್ತು ಫ್ರಾನ್ಸ್ ತಂಡಗಳು ಪ್ರಶಸ್ತಿ ಗೆಲ್ಲುವ ಫೇವರಿಟ್ ತಂಡಗಳು ಎಂಬುದು ಮೈಕ್ರೊಸಾಫ್ಟ್ ಒಡೆತನದ ಕೊ–ಪೈಲಟ್ ಭವಿಷ್ಯವಾಗಿದೆ.

ಬೆಂಗಳೂರು ರೇಸ್

ಸಸ್ಸಿ ಸೆರಾ ಗೆಲ್ಲುವ ನಿರೀಕ್ಷೆ

ಜಸ್ಟೀಸ್ ಪಿ. ಮೇದಪ್ಪ ಮೆಮೊರಿಯಲ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸಸ್ಸಿ ಸೆರಾ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡೀಸೆಲ್ 2, ಜೋಲೀಸ್ ಸ್ಟಾರ್ 3, ಸ್ಲಿಂಗ್ ಶಾಟ್ 5
2ನೇ ರೇಸ್: ರಿವರ್ ಡೀಪ್ 10, ಶಹನ್ನಾ 2, ರೋಡ್‌ರನ್ನರ್ 7
3ನೇ ರೇಸ್: ಹುಸನಾರ 1, ಅಗ್ರಿಮಾ 2, ಕಾರ್ಟರ್ 3
4ನೇ ರೇಸ್: ಮನಿಬ್ಯಾಗ್ಸ್ 6, ಎಫಿಕೆಸಿ 8, ನೆವರ್ ಗಿವ್ ಇನ್ 7
5ನೇ ರೇಸ್: ಸಸ್ಸಿ ಸೆರಾ 2, ಬಾಷಾ 3, ಸ್ಟಾರ್ ಆಫ್ ಇಂಡಿಯಾ 4
6ನೇ ರೇಸ್: ಪರ್ಲ್ ಸ್ಟಾರ್ 4, ಕ್ವಾನ್ನಾ 5, ಸ್ಪ್ರೆಝಾಟುರಾ 6
7ನೇ ರೇಸ್: ನೋಬಲ್ ಕಾಸ್ 2, ಎಕ್ಲಿಪ್ಸ್ ಪಲ್ಸ್ 1, ಎಬೋಟ್ಸೆ 4

ಉತ್ತಮ ಬೆಟ್: ಮನಿ ಬ್ಯಾಗ್ಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ರಾಜೇಂದ್ರ ಪಾಲಿಟೆಕ್ನಿಕ್ RAJENDRA POLYTECHNIC

RAJENDRA EDUCATION SOCIETY — KNOWLEDGE IS POWER — Estd. 1986

ಸುಂಕದಕಟ್ಟೆ, ಹೆಗ್ಗನಹಳ್ಳಿ ಕ್ರಾಸ್, ಪೀಣ್ಯ 2 ನೇ ಹಂತ ಸಮೀಪ, ಬೆಂಗಳೂರು - 560091

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 99166 46466



ಆರ್. ಇ. ಎಸ್. ಪಾಲಿಟೆಕ್ನಿಕ್(ಸಂಜೆ)

(ಕೆಲಸ ಮಾಡುವ ವೃತ್ತಿಪರರಿಗಾಗಿ ಕಾರ್ಯಕ್ರಮ) since 2023-24

ಸರ್ಕಾರದ ಮಾನ್ಯತೆ ಪಡೆದ 2 ವರ್ಷದ ಡಿಪ್ಲೊಮಾಗೆ ಸೇರಿಕೊಳ್ಳಿ

- ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್

ಅರ್ಹತೆ:
- 2 ವರ್ಷದ ಅನುಭವದೊಂದಿಗೆ ಯಾವುದೇ ಐಟಿಐ ಟ್ರೇಡ್
- 2 ವರ್ಷದ ಅನುಭವದೊಂದಿಗೆ ಯಾವುದೇ ಪಿಯುಸಿ ವಿಜ್ಞಾನ ವಿಭಾಗ

ಆರ್. ಇ. ಎಸ್. ಪಾಲಿಟೆಕ್ನಿಕ್(ದಿನ)

since 1986

ಸರ್ಕಾರದ ಮಾನ್ಯತೆ ಪಡೆದ 2/3 ವರ್ಷದ ಡಿಪ್ಲೊಮಾಗೆ ಸೇರಿಕೊಳ್ಳಿ

- ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್
- ಇನ್ಫರ್ಮೇಶನ್ ಸೈನ್ಸ್ ಎಂಜಿನಿಯರಿಂಗ್
- ಮೆಕ್ಯಾನಿಕಲ್ ಎಂಜಿನಿಯರಿಂಗ್
- ಆಟೋಮೊಬೈಲ್ ಎಂಜಿನಿಯರಿಂಗ್
- ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್
- ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಎಂಜಿನಿಯರಿಂಗ್
- ಸಿವಿಲ್ ಎಂಜಿನಿಯರಿಂಗ್
- ಫ್ಯಾಷನ್ ಡಿಸೈನ್ & ಟೆಕ್ನಾಲಜಿ
- ಕಮರ್ಶಿಯಲ್ ಪ್ರಾಕ್ಟೀಸ್

ಅರ್ಹತೆ:
- 2 ವರ್ಷದ ಡಿಪ್ಲೊಮಾಗೆ PUC/ITI/12ನೇ ತರಗತಿ ಉತ್ತೀರ್ಣ
- 3 ವರ್ಷದ ಡಿಪ್ಲೊಮಾಗೆ SSLC/10ನೇ ತರಗತಿ ಉತ್ತೀರ್ಣ

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಪ್ರಾಂಶುಪಾಲ / ಕಾರ್ಯದರ್ಶಿ **ಆರ್. ಇ. ಎಸ್. ಪಾಲಿಟೆಕ್ನಿಕ್**
ಕ್ಯಾಂಪಸ್: #5, ಸುಂಕದಕಟ್ಟೆ, ಹೆಗ್ಗನಹಳ್ಳಿ ಕ್ರಾಸ್, ಮಾಗಡಿ ಮೇನ್ ರೋಡ್,
ಬೆಂಗಳೂರು - 560091. ದೂರವಾಣಿ: 080-23484814, 23289424

HILIVING ESTATES — AMRAVANAM



ಷರತ್ತು ಗಳು ಅನ್ವಯ.

ಬಾಲಿ ಶೈಲಿಯ ಕ್ಲಬ್‌ಹೌಸ್

6000 ಚದರ ಅಡಿ ₹42* ಲಕ್ಷ ದಿಂದ ಆರಂಭ

15+ ಜೀವನಶೈಲಿ ಸೌಕರ್ಯಗಳು,
ಮತ್ತು ವೀಕೆಂಡ್ ನಲ್ಲಿ
ಆನಂದದ ಜೀವನವನ್ನು ಕಳೆಯಿರಿ

ನಿಮ್ಮ ಕಾಟೇಜ್ ಅನ್ನು ಬಾಡಿಗೆಗೆ ನೀಡುವ ಮೂಲಕ ತಿಂಗಳಿಗೆ ₹1.5 ಲಕ್ಷದವರೆಗೆ ಸಂಪಾದಿಸಿ

ರಾಮನಗರ- ಬೆಂಗಳೂರಿನಿಂದ 1 ಗಂಟೆಯ ಪ್ರಯಾಣ

ಇತರೆ ಫಾರ್ಮ್ಲ್ಯಾಂಡ್ ಗಳು' ಸಕಲೇಶಪುರ ಮತ್ತು ಚಿಕ್ಕಮಗಳೂರು

+91 78999 02234
hilivingestates.com

ಸಪ್ತಗಿರಿ ಪ್ರಮೋಟರ್ಸ್ ಮತ್ತು ಡೆವಲಪರ್ಸ್ ವತಿಯಿಂದ ನೂತನ ಪ್ರಾಜೆಕ್ಟ್

ಸಪ್ತಗಿರಿ ಎಲಿಗೇನ್ಸ್

Sapthagiri PROMOTERS & DEVELOPERS

ನೆಲಮಂಗಲ - ದೊಡ್ಡಬಳ್ಳಾಪುರ ರಸ್ತೆ

(ನೆಲಮಂಗಲ ಬಸ್ ನಿಲ್ದಾಣದಿಂದ ಕೇವಲ 5 ನಿಮಿಷಗಳ ಅಂತರ)


'ಎ' ಖಾತಾದೊಂದಿಗೆ ನೋಂದಣಿಗೆ ಸಿದ್ಧವಾಗಿದೆ

Just 5 min. drive from Nelamangala Bus stop

Attached to PRR Ring Road

100% Site Realeased & Layout work completed

A Khatha is Ready for Registration



*Actual Pictures



1 km from Railway Station

2 kms from Nelamangala Bus Stop

BMRDA APPROVED

A KHATHA SITES

ಸೌಕರ್ಯಗಳು

- ಒಳಚರಂಡಿ ಸೌಲಭ್ಯ
- ವಿದ್ಯುತ್ ಸೌಲಭ್ಯ
- ಬೀದಿ ದೀಪಗಳು
- ನೀರಿನ ಸೌಲಭ್ಯ
- ನೈರ್ಮಲ್ಯ ಸೌಲಭ್ಯ
- ಗೇಟೆಡ್ ಸಮುದಾಯ
- ಅಗಲವಾದ ಬಿಳಿ ಮೇಲ್ಭಾಗದ ರಸ್ತೆಗಳು (ಸಿಸಿ ರಸ್ತೆ)

9686 49 49 49

Bank Loan Available

For Booking and more information call: **7026 11 88 99**

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್



ಹಳೆಯ (ಹರಿದ) ರೇಷ್ಮೆ ಸೀರೆಗಳು, ರೇಷ್ಮೆ ಪಂಚೆಗಳು, ಬೆಳ್ಳಿ ಜರಿ, ಟಿಷ್ಯೂ ಸೀರೆಗಳು, ಬನಾರಸ್, ಮೈಸೂರು ಸಿಲ್ಕ್ ಯಾವುದೇ ರೀತಿಯಲ್ಲಿದ್ದರು ಸ್ಥಳದಲ್ಲೇ ಹಣ ಕೊಟ್ಟು ಖರೀದಿಸುತ್ತೇವೆ

ದಿನಾಂಕ 13-06-2026 to 25-06-2026

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್
ನಂ. 58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ, 5ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬ್ರಿಡ್ಜ್ ಹತ್ತಿರ, ಬೆಂಗಳೂರು
ಕರೆ ಮಾಡಿ: 9632781499

PUBLIC NOTICE

ಸಾರ್ವಜನಿಕ ಸೂಚನೆ

ನಾನು, ರಾಮಚಂದ್ರ ಶ್ರೀನಿವಾಸ್, ತಂದೆ ದಿ. ರಾಮಚಂದ್ರ ಮೂರ್ತಿ, ವಾಸ: ನಂ. 604, 11ನೇ ಕ್ರಾಸ್, 6ನೇ ಮೇನ್, ಜೆ.ಪಿ. ನಗರ 3ನೇ ಹಂತ, ಬೆಂಗಳೂರು – 560078, ಈ ಮೂಲಕ ತಿಳಿಯಪಡಿಸುವುದು ಏನೆಂದರೆ, ಮೂಲ ಮಾರಾಟ ಪತ್ರ ಸಂಖ್ಯೆ. 02AA 382337 ದಿನಾಂಕ 22.12.2000, ಮೆ. ಚಾಮುಂಡೇಶ್ವರಿ ಬಿಲ್ಡ್ ಟೆಕ್ ಪ್ರೈ. ಲಿ. ರಿಂದ ನನ್ನ ಹೆಸರಿಗೆ ನೋಂದಾಯಿಸಲ್ಪಟ್ಟ, ನಿವೇಶನ ಸಂಖ್ಯೆ P-21, ಖಾತಾ ಸಂಖ್ಯೆ 436/P-21/382, (PID ಸಂಖ್ಯೆ 152900402002600616) 4000 ಚ.ಅ., ಈಗಲ್ಟನ್ ಗಾಲ್ಫ್ ವಿಲೇಜ್, ಮಂಚನಾಯಕನಹಳ್ಳಿ ಗ್ರಾಮ ಪಂಚಾಯತ್, ಶ್ಯಾನಮಂಗಲ ಗ್ರಾಮ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ರಲ್ಲಿ ನೋಂದಾಯಿಸಲ್ಪಟ್ಟ ಸದರಿ ಮಾರಾಟ ಪತ್ರದ ಮೂಲ ಪ್ರತಿಯು ಕಳೆದುಹೋಗಿದೆ. ಕಳೆದುಹೋದ ವರದಿ ಸಂಖ್ಯೆ 2226752/2026 ದಿನಾಂಕ 29.05.2026 ರಂದು ಬೆಂಗಳೂರು ನಗರ ಪೊಲೀಸರಲ್ಲಿ ದಾಖಲಿಸಲಾಗಿದೆ. ಸದರಿ ದಾಖಲೆ ಸಿಕ್ಕಿದವರು ಅಥವಾ ಯಾವುದೇ ಹಕ್ಕು ಇರುವವರು 15 ದಿನಗಳೊಳಗೆ ನಮ್ಮನ್ನು ಸಂಪರ್ಕಿಸಬೇಕು. ಸದರಿ ದಾಖಲೆಯ ಆಧಾರದ ಮೇಲೆ ಯಾವುದೇ ವ್ಯವಹಾರ ನಡೆಸದಂತೆ ಸಾರ್ವಜನಿಕರಿಗೆ ಎಚ್ಚರಿಕೆ ನೀಡಲಾಗುತ್ತದೆ.
ರಾಮಚಂದ್ರ ಶ್ರೀನಿವಾಸ್
ದೂ: 9886086714

ಸಾರ್ವಜನಿಕ ಸೂಚನೆ

ಶ್ರೀ ಗೋಪಿಚಂದ್ ಚೇರುಕೂರಿ, ಎಂ/ಎಸ್ ಹೈಬೂ ಸ್ಟ್ರೀಟ್ ಪ್ರೈವೇಟ್ ಲಿಮಿಟೆಡ್, ಸರ್ವೇ ನಂ.90/7, 90/8, ಔಟರ್ ರಿಂಗ್ ರಸ್ತೆ, ಮಾರತಹಳ್ಳಿ, ರಾಡಿಸನ್ ಬ್ಲೂ ಹೋಟೆಲ್ ಪಕ್ಕದಲ್ಲಿ, ಬೆಂಗಳೂರು, ಕರ್ನಾಟಕ–560037 ರವರು, ಎಂ/ಎಸ್ ಹೈಬೂ ಸ್ಟ್ರೀಟ್ ಪ್ರೈವೇಟ್ ಲಿಮಿಟೆಡ್, ಸರ್ವೇ ನಂ.90/7, 90/8, ಔಟರ್ ರಿಂಗ್ ರಸ್ತೆ, ಮಾರತಹಳ್ಳಿ, ರಾಡಿಸನ್ ಬ್ಲೂ ಹೋಟೆಲ್ ಪಕ್ಕದಲ್ಲಿ, ಬೆಂಗಳೂರು, ಕರ್ನಾಟಕ–560037 ನಲ್ಲಿ ಮ್ಯೂಸಿಕ್, ಲೈವ್ ಮ್ಯೂಸಿಕ್ ಹಾಗೂ ಡಿಜೆ ಮ್ಯೂಸಿಕ್ ನಡೆಸಲು ಪರವಾನಗಿ ನೀಡುವಂತೆ ಈ ಕಚೇರಿಗೆ ಅರ್ಜಿ ಸಲ್ಲಿಸಿದ್ದಾರೆ.

ಈ ಕುರಿತು ಯಾವುದೇ ವ್ಯಕ್ತಿ/ಸಂಘ/ಯಾವುದೇ ಇತರೆ ಸಂಸ್ಥೆಗೆ ಆಕ್ಷೇಪಣೆಗಳು /ಸಲಹೆಗಳಿದ್ದಲ್ಲಿ, ಅವುಗಳನ್ನು ಲಿಖಿತ ರೂಪದಲ್ಲಿ ಸಹಿಯೊಂದಿಗೆ ಉಪ ಪೊಲೀಸ್ ಆಯುಕ್ತರು (ಆಡಳಿತ), ಪೊಲೀಸ್ ಆಯುಕ್ತರ ಕಚೇರಿ, ನಂ.1, ಇನ್ಫೆಂಟರಿ ರಸ್ತೆ, ಬೆಂಗಳೂರು–560001 ಇವರಿಗೆ ಈ ಸೂಚನೆ ಹೊರಡಿಸಿದ ದಿನಾಂಕ ದಿಂದ 15 ದಿನಗಳೊಳಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದು. 15 ದಿನಗಳ ನಂತರ, ಅರ್ಜಿಯನ್ನು ಪರಿಗಣಿಸುವ ಸಂಬಂಧ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಆಸ್ತಿಯ ವಿವರ
(SCHEDULE OF THE PROPERTY)

ಪೂರ್ವಕ್ಕೆ : ಡಾ. ಪುನೀತ್ ಕುಮಾರ್ ಸರ್ವೀಸ್ ರಸ್ತೆ, ಪಶ್ಚಿಮಕ್ಕೆ : ತುಳಸಿ ಥಿಯೇಟರ್ ಮುಖ್ಯ ರಸ್ತೆ ಉತ್ತರಕ್ಕೆ : ಇನೋವೇಟಿವ್ ಮಲ್ಟಿಪ್ಲೆಕ್ಸ್ ದಕ್ಷಿಣಕ್ಕೆ : ರಾಡಿಸನ್ ಬ್ಲೂ ಹೋಟೆಲ್.

ಸಹಿ/– ಪೊಲೀಸ್ ಆಯುಕ್ತರು
ಬೆಂಗಳೂರು ನಗರ
ಸಹಿ/– ಹೈಬೂ ಸ್ಟ್ರೀಟ್ ಪ್ರೈವೇಟ್
ಬೆಂಗಳೂರು ನಗರ
ಬೆಂಗಳೂರು ದಿ: 12.06.2026

UBI Services Ltd
We Dream For You
UBI Services Limited, 504-506, 5th Floor, Centrum, Wagle Estate, MIDC, Thane (West), Maharashtra-400604

TENDER NOTICE

The company invites sealed offers for Office Premises required on Lease Rental Basis at Bengaluru, Karnataka as detailed in RFP. Please visit our website **www.ubisl.co.in** RFP forms can be downloaded from the website- Navigate to the 'Tender' page through the Quick Links section at the bottom in website.

RFP Issue Date : 13-06-2026
Pre-Bid Meeting : 18-06-2026
Last Date for receipt of RFPs : 27-06-2026 (6:00 PM)

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

REAL ESTATE SELLING

Sites

Anekal

KHB Sites Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner Sites Call: 70260 13388

Anjanapura

WANTED BDA & BDA Approved Sites Anjanapura, Banashankari 6th Stage, JP-Nagar 8th/ 9th Phase, Kanakapura Road, NPKL, SMV Layout ANY MEASUREMENT CONTACT: 9845298419

WANTED BDA & BDA Approved Sites Anjanapura, Banashankari 6th Stage, Jp-Nagar 8th/ 9th Phase, Kanakapura Road, NPKL, SMV Layout ANY MEASUREMENT CONTACT: 9845298419

ANJANAPURA 6TH Block, 40x60 East 80 Feet Road, Commercial Property for Sale. Contact: 9483748768/ 9880448478.

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

"BUYING AND Selling of Residency/ Commercial/ Industrial Properties in Bangalore only genuine Buyers/ Sellers Call: 9845286505"

BDA AUCTION CORNER SITE 50x80 S/W Corner 40ft Road BANASHANKARI 6th Stage 4th B`Block. Contact`Owner: 9980041072

COMMERCIAL BANASHANKRI 6th Stage 1st Block 6600 Sft West Facing 13,000/-sft 30x40 East 2 Crores. 98456-09477

BANASHANKARI 6TH stage. 50x80. Commercial 100 Feet Road. And 40x60. Corners Sites For Sale. -9916817739

SILK WEAVES EXPO
dastkari haat
INDIA'S BIGGEST SILK EXPO SILK MAHOTSAV
EXHIBITION-CUM-SALE
Silks - Linens - Cotton - Wedding Ethnics
Wedding & Summer Edition
UPTO 60% OFF!
LAST 3 DAYS



11 - 16 June
11 am to 9 pm
Premachandra Hall
NEAR ASHOKA PILLAR, JAYANAGAR 1ST BLOCK, BENGALURU 560011
Contact 9541975990 FREE ENTRY AND PARKING

BANASHANKARI 6TH Stage 11th Block, 40x60 Site Sale, Close to 80 Feet Road, 9972338060/ 9880448478.

Hennur

HENNUR 20X45 West Facing B ekatha Site sale HIREMATH LAYOUT, KOTHANUR Rs. 6000/- Fixed. 9945033366

Jakkur

30X40 BDA site for sale Arkhavathi Layout north facing jakkur 7th block very good location contact 9945866245, 9743322555.

J P Nagar

CORNER RESIDENTIAL SITE FOR SALE
Kothanur Dinne Main Road, RBI Layout, Guru Raghavendra Nagar, JP Nagar 7th Phase, Bengaluru
Area: 8,238 Sq. Ft.
East Facing, Both Sides 25 Feet Road.
Only Genuine Buyers
Brokers Excuse
Contact + 91 9741792187

Kempegowda Layout

DIRECT OWNER BDA 30x40 Site SALE KEMPEGOWDA LAYOUT 5th Block near Metro- Challagatta. M:-9845146279/ 9632966556

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar 9945119449

BDA SITE for Sale at Kempegowda Layout, 3rd Block, F Sector, 30x40 North and Anjanapura 30x40 and 40x60 South Facing Mob: 9901549488

BDA SITE for Sale at Kempegowda Layout, 3rd Block, F Sector, 30x40 North Mob: 9901549488

Magadi Road

SITE 5717 Sqft For Sale Magadi Main Road 30km Rs. 2000/- Per Sqft. 9342552428 Chandrashekar

Nelamangala

BYRASHETTYHALLI VILLAGE. Aiswarya County. BMRDA. 40X60. East facing site for sale. loan available. Owner. 9620117773

Sahakarnagar

50X80 COMMERCIAL Site Near CBI Ganganagar, Also40x60 Sahakaranagar Residential SiteFor Immediate Sale. 9164565566

Vishweshwariah Layout

SITE FOR SALE 50x80 West Facing Residential 8th Block. 50x80 6th Block Commercial Vishveshwaraiya Layout 8105688602.

VISHWESHWARAIAH LAYOUT 7th Block 20x30 East facing BDA site sale, near to KA41-RTO. 7829404659

Yelahanka

SITE FOR Sale Yelahanka Byalakere, Shivaram Karanth Badavane, 100ft Road, 60x80 Commercial Corner Site, East North South 3side Road BDA Katha: 9945694783/ 7975780825

Mysore

MYSORE KHB KENCHALGUD 30X40 SITE. SOUTH FACING, 43 LAKHS OWNER CONTACT: 8105683396/ 9606866368

Agricultural Land Converted

Anjanapura

BDA SITE FOR SALE, IN ANJANAPURA 10TH BLOCK. 40X60 EAST FACING. EXCELLENT LOCATION CONTACT: 7975829784

Agricultural Land

Mysore Road

LAND FOR SALE 30 Acres. from Mysore 50 Kms Direct registration only Contact : 9739627282

Hosur

HOSUR AGRICULTURAL Land for sale 1.5acre 320x200feet 500meters from STRR Bagalur 3crores. Contact: 9945033366

Commercial Building

Majestic And Around

SALE COMMERCIAL LAND/ SHOP 840 Sqft (80×10.6ft) 56/1, 3rd Main Road NT Pet, Blr-02. Wholesale Hub Buyers: 8777591526

Malleshwaram

FULLY FURNISHED 16,000sft. A/C Showroom For RENT/SALE On Prime Busy Commercial Area, 8th Cross, Malleshwaram. 9845358544/ 9448477419

Commerical

Vishweshwariah Layout

26X80 VISHWESHWARAIAH Layout, Commercial BDA Site, 3rd Block North, 80ft Ullal Main Road 22,000/- Psqft Negotiable: 9845793121

Yeshwanthpur

FOR SALE: Premium 4500SFT fully-furnished office`space with OC`pre-leased to`150`year old Switzerland Company fetching 3.2L.monthly rental`income in`Yeshwanthpur Price:15k/sft. Call:9916055055

Flat

Jigani

DLF MAIDEN HEIGHTS



2 BHK FLAT SALE
937 SQFT. 1st Floor, Fully Furnished, Stilt Parking, Club House, Swimming Pool, etc. Near JIGANI. **Call : 9840286535, 9952916455.**

Banashankari

KATHRIGUPPE EAST, GH RESIDENCY, 3BHK FLATS For Sale, Ready to Move. 9000/ SFT. 80507-27159/ 96065-03064

Nagarabhavi

FLATS FOR-SALE @ Nagarabhavi/ Chandra Layout 2 & 3 BHK Ready to Move In Good Location Call:9538472420 9845066608

Whitefield

GOPALAN ATLANTIS, WHITEFIELD Semi furnished 3 BHK for SALE| 1,755 sq.ft.| High Floor| North- East entrance, Good ventilation, sunlight. 1330 carpet. Large car park. Single owner. Immaculate. Rarely available in this configuration. 3 sunset- view balconies| Custom pooja unit Vaastu compliant| Walk-in wardrobe| Modular kitchen Clubhouse, Gym, Pool, Tennis, Metro– all close Contact: +91 9880413134/ 6362718455

NARGUND COLLEGE OF PHARMACY
S.E.T's Nargund College of Pharmacy, Bangalore, Since 1992
Dattatreyanagar, Hosakerehalli,BSK-3rd Stage ,Bengaluru-560085.



APPLY NOW – LIMITED SEATS!

ADMISSION NOW OPEN

ACADEMIC YEAR 2026 2027

COURSES WE OFFER
- Diploma in Pharmacy
- Bachelors in Pharmacy
- Master of Pharmacy
- Pharm D
- Ph. D



WHY US
- Modern Labs & Advanced Research Facilities
- Expert Faculty with Industry Partnerships
- 100% Placement & Internship Support
- Merit-Based Scholarships Available
- Practical Learning | Career-Ready Training

SCAN FOR REGISTRATION

AFFLIATIONS & RECOGNITIONS

Contact Us
7019425622 www.nargund.edu.in nargundcop@gmail.co

Farm House/ Land/ Resorts

Mysore Road

2 ACRES COMMERCIAL BUILDING with Farm Land Sale. BANGALORE-MYSORE Highway, Attached Service Road 9535868695

House

Basaveshwaranagar

GROUND + 3 Floors west 1450 sft. All 3 BHK north house sale. 5,65,00,000 Negotiable. Or available for lease ground 2/ 3 BHK 25,00,000/ 35,00,000. First 3 BHK 45,00,000, Third 3 BHK 42,00,000 Negotiable. Lift provision made. Contact:- 9845596542.

Vijayanagar

BDA 20X25 Ground First Floor House East Facing, RPC Layout, Vijayanagar, Rs. 1.25Cr Contact: 9739957911

Residential/ Commercial

Old Madras Road

FOR SALE A KHATA OMR MAIN ROAD FACING SHOWROOM/ COMMERCIAL PROPERTY. SUITABLE FOR OFFICE/INSTITUTE/BPO/CLINIC CONTACT 9948661379

REAL ESTATE BUYING

Sites

Vishweshwariah Layout

BUYING/ SELLING 20x30,30x40,40x60 50x80 BDA sites VISHVESHWARAIAH LAYOUT,BSK 6th-stage KEMPEGOWDA- LAYOUT.Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

House

FOR RENT-JAKKUR- Exclusive Independent Luxury House *Premium location *Spacious 3-bedroom *Large living spaceships *Ideal for families and corporate guest house. Contact FEROZE'S: 9845018800

JOB OPPORTUNITIES

Wanted

REQUIRED ACCOUNTANT with experience in TallyPrime / Tally ERP. Knowledge of GST. 1-3 years experience. B.Com preferred. Salary negotiable. Contact: 6361231869

SOCIAL SERVICES

Old Age Home

SUKHSHANTHI LUXURY Retirement Home, near Sarjapura Bangalore Rs. 22,575/- monthly Rs. 1,500 per day furnished accommodation. 3 Meals, 24X7 Nurse, Ambulance. Call: 9341289357

JOB
To Place your Classified Ads Contact:
9886213331

PERSONAL

Announcements

CORRIGENDUM

Reference our advertisement published in this newspaper 07 June 2026, captioned **"APS COLLEGE OF ENGINEERING"** in Prajavani & Deccan Herald News Paper. Kindly note that the contact phone no. mistakely published +91 94484 52808 Instead of that consider this no. **+91 94484 52508.**

Change of Name

MY SON, Siddarth Skandan, residing at #311, Sri Lorven Castle, 5th Main, 7th Cross, Malleshpalya, Bengaluru-560075, shall henceforth be known as Siddarth Skandan Ganesan, vide affidavit dated 03 June 2026 sworn before Notary A. R. Muneer Ahmed, Bangalore. – Ganesan Kandasamy (Father).

CHANGE OF NAME

I, **SUMITHRA KAVALOOR** W/o. Manohar. M.Mangalore, R/at Basaveshwara Nilaya, 1st floor, 9th 'A' Cross, Sevanthi Road, Ashokanagar, P.O. Kuvempunagar, Tumkur-572103, have changed my name to **SUMITHRA** vide affidavit dated 10.06.2026 before Notary Sri, S.I. Balaguru, Bengaluru-84.

DH Classifieds More value, more impact — **REAL ESTATE** — ಪ್ರಜಾವಾಣಿ

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY - ON SATURDAY + SUNDAY

@ 2481/-*
FOR 15 WORDS



www.dhclassifieds.com BOOK NOW

Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164

*Conditions apply

DH Classifieds More value, more impact — ಪ್ರಜಾವಾಣಿ — **RECRUITMENT**



BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY

@ 825/-* PER SQCM
SINGLE / DOUBLE / MULTIPLE COLUMN

For more details contact:
+91 9845114560
+91 9900428036
+91 9731810277
+91 9886213331
080- 45557163/164

www.dhclassifieds.com
BOOK NOW

*Conditions apply

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331